prajavani.net prajavani | ಮಂಗಳವಾರ, ಮಾರ್ಚ್ 3, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 62 | ಪುಟ 14 | www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ಸೆನ್ಸೆಕ್ಸ್ 80,238 | ನಿಫ್ಟಿ 24,865 | $/₹ 91.49 | ಚಿನ್ನ (Std. 10g) ₹1,74,900 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,03,800 (ಬೆಂಗಳೂರು)

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಉಲ್ಬಣ

ದಾಳಿಗೆ ಬಲ ತುಂಬಿದ ಇಸ್ರೇಲ್, ಅಮೆರಿಕ • ಇರಾನ್‌ನಲ್ಲಿ 555ಕ್ಕೂ ಅಧಿಕ ಸಾವು • 131 ನಗರಗಳು ಗುರಿ

ದುಬೈ (ಎಪಿ/ಎಎಫ್‌ಪಿ): ಅಮೆರಿಕ ಹಾಗೂ ಇಸ್ರೇಲ್ ಸೇನೆಗಳು ಇರಾನ್ ಮೇಲಿನ ಸೇನಾ ಕಾರ್ಯಾಚರಣೆಯನ್ನು ತೀವ್ರಗೊಳಿಸಿದ್ದು, ಹಲವು ತಾಣಗಳನ್ನು ಗುರಿಯಾಗಿಸಿ ಸೋಮವಾರ ಬಾಂಬ್ ಹಾಗೂ ಕ್ಷಿಪಣಿ ದಾಳಿ ನಡೆಸಿವೆ. ಇರಾನ್ ಕೂಡಾ ಪ್ರತೀಕಾರದ ದಾಳಿ ಮುಂದುವರಿಸಿರುವುದರಿಂದ ಪಶ್ಚಿಮ ಏಷ್ಯಾದಲ್ಲಿ ಉದ್ವಿಗ್ನ ಸ್ಥಿತಿ ಮತ್ತಷ್ಟು ವಿಷಮಗೊಂಡಿದೆ.

ಇರಾನ್‌ನ ಕ್ಷಿಪಣಿ ವ್ಯವಸ್ಥೆಗಳ ಮೇಲೆ ಭಾರಿ ಪ್ರಮಾಣದಲ್ಲಿ ಬಾಂಬ್ ದಾಳಿ ನಡೆದಿದೆ. ಸೋಮವಾರ ಬೆಳಿಗ್ಗೆಯಿಂದಲೇ ರಾಜಧಾನಿ ಟೆಹರಾನ್ ನಾದ್ಯಂತ ಸ್ಫೋಟದ ಸದ್ದು ಕೇಳಿಬಂದಿದೆ. ಅಮೆರಿಕ- ಇಸ್ರೇಲ್ ಸೇನೆಯು ಇರಾನ್‌ನ ಪ್ರಮುಖ ಸೇನಾ ನೆಲೆಗಳು, ಸರ್ಕಾರಿ ಕಟ್ಟಡಗಳು ಮತ್ತು ಗುಪ್ತಚರ ಸಂಸ್ಥೆಯ ಕೇಂದ್ರಗಳನ್ನು ಗುರಿಯಾಗಿಸಿವೆ.

‘ದಾಳಿ ಆರಂಭವಾದಾಗಿನಿಂದ ಇದುವರೆಗೆ 555 ಮಂದಿ ಬಲಿಯಾಗಿದ್ದಾರೆ. ದೇಶದ 131 ನಗರಗಳು ದಾಳಿಗೆ ಗುರಿಯಾಗಿವೆ’ ಎಂದು ಇರಾನ್‌ನ ರೆಡ್ ಕ್ರೆಸೆಂಟ್ ಸಂಸ್ಥೆ ಹೇಳಿದೆ.

ಮತ್ತೊಂದೆಡೆ ಇರಾನ್, ಕೊಲ್ಲಿ ರಾಷ್ಟ್ರಗಳಲ್ಲಿನ ಅಮೆರಿಕದ ಸೇನಾ ನೆಲೆಗಳನ್ನು ಗುರಿಯಾಗಿಸಿ ಕ್ಷಿಪಣಿ ದಾಳಿ ಮುಂದುವರಿಸಿದೆ. ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಹತ್ಯೆಗೆ ತಿರುಗೇಟು ನೀಡುವುದಾಗಿ ಇರಾನ್ ಭಾನುವಾರ ಎಚ್ಚರಿಸಿತ್ತು.

ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರ ನಿವಾಸ ಸೇರಿದಂತೆ ಟೆಲ್ ಅವೀವ್, ಹೈಫಾ ಮತ್ತು ಪೂರ್ವ ಜೆರುಸಲೇಂನ ಹಲವು ಗುರಿಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ಸ್ ಕೋರ್ (ಐಆರ್‌ಜಿಸಿ) ತಿಳಿಸಿದೆ. ಸೋಮವಾರ ಬೆಳಿಗ್ಗೆ ಜೆರುಸಲೇಂನಲ್ಲಿ ಹಲವು ಬಾರಿ ಸ್ಫೋಟದ ಸದ್ದು ಕೇಳಿಸಿದೆ.

▶7



ಇಸ್ರೇಲ್ ಮತ್ತು ಅಮೆರಿಕದ ವಿರುದ್ಧ ದೀರ್ಘಾವಧಿಯ ಯುದ್ಧ ನಡೆಸಲು ಇರಾನ್ ಸಿದ್ಧತೆ ಮಾಡಿಕೊಂಡಿದೆ. ಶತ್ರುಗಳಿಗೆ ಪಾಠ ಕಲಿಸಲಿದೆ

ಅಲಿ ಲಾರೀಜಾನಿ, ಇರಾನ್‌ನ ಸೆಕ್ಯುರಿಟಿ ಕೌನ್ಸಿಲ್ ಮುಖ್ಯಸ್ಥ

ಇರಾನ್ ಮೇಲಿನ ಸೇನಾ ಕಾರ್ಯಾಚರಣೆ ತಕ್ಷಣ ನಿಲ್ಲಲ್ಲ. ನಾಲ್ಕರಿಂದ ಐದು ವಾರಗಳವರೆಗೆ ಮುಂದುವರಿಯುವ ಸಾಧ್ಯತೆ ಇದೆ

ಡೊನಾಲ್ಡ್ ಟ್ರಂಪ್, ಅಮೆರಿಕ ಅಧ್ಯಕ್ಷ



ಖಮೇನಿ ಪತ್ನಿ ಸಾವು

ಟೆಹರಾನ್: ಅಮೆರಿಕ–ಇಸ್ರೇಲ್ ದಾಳಿಯಲ್ಲಿ ಹತ್ಯೆಯಾದ ಇರಾನ್‌ನ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಪತ್ನಿ ಮೃತಪಟ್ಟಿದ್ದಾರೆ ಎಂದು ಇರಾನ್ ಮಾಧ್ಯಮಗಳು ವರದಿ ಮಾಡಿವೆ.

‘ಶನಿವಾರದ ದಾಳಿಯ ಸಂದರ್ಭದಲ್ಲಿ ಗಾಯಗೊಂಡು, ಕೋಮಾದಲ್ಲಿದ್ದ 79 ವರ್ಷದ ಮನ್ಸೂರಾ ಖೊಜಸ್ತೆ ಅವರು ಸೋಮವಾರ ನಿಧನರಾದರು’ ಎಂದು ತಸ್ನಿಮ್ ಸುದ್ದಿ ಸಂಸ್ಥೆ ತಿಳಿಸಿದೆ.



ಲೆಬನಾನ್ ರಾಜಧಾನಿ ಬೈರೂತ್‌ನಲ್ಲಿ ಹಿಜ್ಬುಲ್ಲಾ ಬಂಡುಕೋರರ ತಾಣಗಳನ್ನು ಗುರಿಯಾಗಿಸಿ ಇಸ್ರೇಲ್ ಸೋಮವಾರ ನಡೆಸಿದ ದಾಳಿಯಲ್ಲಿ ಬೆಂಕಿ ಹಾಗೂ ದಟ್ಟ ಹೊಗೆ ಎದ್ದಿರುವ ದೃಶ್ಯ —ಎಎಫ್‌ಪಿ ಚಿತ್ರ

ದಿನದ ಬೆಳವಣಿಗೆ...

- ಇರಾನ್‌ನ ಎರಡು ಯುದ್ಧ ವಿಮಾನಗಳನ್ನು ಹೊಡೆದುರುಳಿಸಿರುವುದಾಗಿ ಕತಾರ್ ಹೇಳಿಕೆ
- ಇರಾನ್ ದಾಳಿಗೆ ಅಮೆರಿಕದ ಮತ್ತೊಬ್ಬ ಯೋಧ ಸಾವು; ಮೃತಪಟ್ಟ ಅಮೆರಿಕದ ಯೋಧರ ಸಂಖ್ಯೆ ನಾಲ್ಕಕ್ಕೆ ಏರಿಕೆ
- ಕೊಲ್ಲಿ ರಾಷ್ಟ್ರಗಳಲ್ಲಿ ಇದುವರೆಗೆ ಐದು ಬಲಿ
- ಸೌದಿ ಅರೇಬಿಯಾದ ರಾಸ್ ತನೂರದಲ್ಲಿರುವ ತೈಲ ಸಂಸ್ಕರಣಾ ಘಟಕದ ಮೇಲೆ ಇರಾನ್ ದಾಳಿ; ಘಟಕದ ಕಾರ್ಯಾಚರಣೆ ಸ್ಥಗಿತ
- ಇರಾನ್‌ನಲ್ಲಿ ತನ್ನ ಒಬ್ಬ ಪ್ರಜೆ ಮೃತಪಟ್ಟಿರುವುದನ್ನು ಖಚಿತಪಡಿಸಿದ ಚೀನಾ
- ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಸೌದಿ ದೊರೆಯ ಜೊತೆಗೆ ದೂರವಾಣಿ ಮಾತುಕತೆ ನಡೆಸಿದರು
- ತನ್ನ ಸೇನಾ ನೆಲೆಗಳನ್ನು ಬಳಸಿಕೊಳ್ಳಲು ಅಮೆರಿಕಕ್ಕೆ ಅನುಮತಿ ನೀಡಿದ ಬ್ರಿಟನ್
- ಸೋಮವಾರ ಸಂಜೆಯಿಂದ ‘ಸೀಮಿತ’ ಕಾರ್ಯಾಚರಣೆ ಆರಂಭಿಸಿದ ದುಬೈ ವಿಮಾನ ನಿಲ್ದಾಣ
- ಹೊರ್ಮುಜ್ ಜಲಸಂಧಿಯತ್ತ ಹೊರಟ ಮೂರು ಹಡಗುಗಳ ಮೇಲೆ ಇರಾನ್ ದಾಳಿ

ಅಮೆರಿಕದ 3 ಯುದ್ಧ ವಿಮಾನ ಹೊಡೆದುರುಳಿಸಿದ ಕುವೈತ್

ಕುವೈತ್ ಸಿಟಿ: ಕುವೈತ್ ವಾಯು ರಕ್ಷಣಾ ವ್ಯವಸ್ಥೆಯು ಭಾನುವಾರ ರಾತ್ರಿ ಅಮೆರಿಕದ ಮೂರು ಯುದ್ಧ ವಿಮಾನಗಳನ್ನು ಪ್ರಮಾದವಶಾತ್ ಹೊಡೆದುರುಳಿಸಿದೆ ಎಂದು ಅಮೆರಿಕ ಸೇನೆ ತಿಳಿಸಿದೆ.

‘ಆಪರೇಷನ್ ಎಪಿಕ್ ಫ್ಯೂರಿ’ ಕಾರ್ಯಾಚರಣೆಯಲ್ಲಿ ಪಾಲ್ಗೊಂಡ ಮೂರು ‘ಎಫ್–15ಇ’ ಯುದ್ಧ ವಿಮಾನಗಳು ಕುವೈತ್‌ನಲ್ಲಿ ಪತನಗೊಂಡವು. ಕುವೈತ್‌ನ ವಾಯು ರಕ್ಷಣಾ ವ್ಯವಸ್ಥೆಯು ತಪ್ಪಾಗಿ ಈ ವಿಮಾನಗಳನ್ನು ಹೊಡೆದುರುಳಿಸಿದೆ. ಪೈಲಟ್ ಸೇರಿದಂತೆ ಎಲ್ಲ ಆರು ಸಿಬ್ಬಂದಿ ಜಿಗಿದು ಪಾರಾಗಿದ್ದು, ಸುರಕ್ಷಿತವಾಗಿದ್ದಾರೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.



‘ಈ ಪ್ರಮಾದವನ್ನು ಕುವೈತ್ ಒಪ್ಪಿಕೊಂಡಿದೆ. ಕುವೈತ್ ಭದ್ರತಾ ಪಡೆಗಳ ಪ್ರಯತ್ನಗಳು ಮತ್ತು ಈ ಕಾರ್ಯಾಚರಣೆಯಲ್ಲಿ ಅವರ ಬೆಂಬಲಕ್ಕೆ ನಾವು ಕೃತಜ್ಞರಾಗಿರುತ್ತೇವೆ’ ಎಂದು ಹೇಳಿದೆ.

ಮಾತುಕತೆ ಇಲ್ಲ: ಇರಾನ್

‘ಅಮೆರಿಕದ ಜತೆ ನಾವು ಮಾತುಕತೆ ನಡೆಸುವುದಿಲ್ಲ’ ಎಂದು ಇರಾನ್‌ನ ಸುಪ್ರೀಂ ನ್ಯಾಷನಲ್ ಸೆಕ್ಯುರಿಟಿ ಕೌನ್ಸಿಲ್ ಮುಖ್ಯಸ್ಥ ಅಲಿ ಲಾರೀಜಾನಿ ಸೋಮವಾರ ಸ್ಪಷ್ಟಪಡಿಸಿದ್ದಾರೆ. ಇರಾನ್ ಆಡಳಿತವು ಮಾತುಕತೆ ಪ್ರಾರಂಭಿಸಲು ಪ್ರಯತ್ನಿಸಿದೆ ಎಂಬ ಮಾಧ್ಯಮ ವರದಿಗಳನ್ನು ಅವರು ಅಲ್ಲಗಳೆದರು.

‘ಇರಾನ್‌ನ ಹೊಸ ನಾಯಕತ್ವದೊಂದಿಗೆ ಸಂವಾದಕ್ಕೆ ಮುಕ್ತನಾಗಿದ್ದೇನೆ. ಅವರು (ಇರಾನ್) ಮಾತುಕತೆ ನಡೆಸಲು ಬಯಸಿದ್ದಾರೆ. ನಾನು ಕೂಡಾ ಮಾತನಾಡಲು ಒಪ್ಪಿಕೊಂಡಿದ್ದೇನೆ’ ಎಂದು ಟ್ರಂಪ್ ಭಾನುವಾರ ಹೇಳಿದ್ದರು.

ಅಮೆರಿಕ ರಾಯಭಾರ ಕಚೇರಿ ಗುರಿ

ಕುವೈತ್‌ನಲ್ಲಿರುವ ಅಮೆರಿಕ ರಾಯಭಾರ ಕಚೇರಿ ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ ಎಂದು ವರದಿಯಾಗಿದೆ. ಕಚೇರಿಯ ಆವರಣದಲ್ಲಿ ಸೋಮವಾರ ದಟ್ಟ ಹೊಗೆ ಎದ್ದಿರುವುದಾಗಿ ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಇದರ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ. ದಾಳಿಯಿಂದ ಹಾನಿಯಾಗಿರುವುದರ ಬಗ್ಗೆ ಕುವೈತ್‌ನಲ್ಲಿರುವ ರಾಯಭಾರ ಕಚೇರಿ ಯಾವುದೇ ಹೇಳಿಕೆ ನೀಡಿಲ್ಲ. ಆದರೆ, ಕಚೇರಿಯಿಂದ ದೂರವಿರುವಂತೆ ಜನರಿಗೆ ಎಚ್ಚರಿಕೆ ಕೊಟ್ಟಿದೆ.

‘ಜಲದಾಹ’ದ ಭೀತಿ

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ ಬೇಸಿಗೆಯ ತೀವ್ರತೆ ದಿನೇ ದಿನೇ ಹೆಚ್ಚುತ್ತಿದ್ದು, ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವದ ಭೀತಿ ಎದುರಾಗಿದೆ.

ಸದ್ಯ 36 ತಾಲ್ಲೂಕುಗಳ 102 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಕಾಣಿಸಿಕೊಂಡಿದೆ. ಈ ಪೈಕಿ, 23 ಗ್ರಾಮಗಳಿಗೆ ಟ್ಯಾಂಕರ್‌ಗಳ ಮೂಲಕ, 79 ಗ್ರಾಮಗಳಿಗೆ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದಲ್ಲಿ ಪಡೆದು ಕುಡಿಯುವ ನೀರು ಪೂರೈಸಲಾಗುತ್ತಿದೆ.

ತುಮಕೂರು, ರಾಮನಗರ, ಬಳ್ಳಾರಿ, ಬೆಂಗಳೂರು ನಗರ, ಚಿಕ್ಕಬಳ್ಳಾಪುರ, ಧಾರವಾಡ ಜಿಲ್ಲೆಗಳ ಕೆಲವು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಕೊರತೆ ಹೆಚ್ಚು ಕಾಣಿಸಿಕೊಂಡಿದೆ. ತುಮಕೂರಿನಲ್ಲಿ ಅತಿ ಹೆಚ್ಚು 34 ಗ್ರಾಮ ಪಂಚಾಯಿತಿಗಳಲ್ಲಿ ಜಲ ದಾಹ ಎದುರಾಗಿದೆ.

ಮುಂಬರುವ ಬೇಸಿಗೆಯಲ್ಲಿ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗದಂತೆ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದಲ್ಲಿ ಕಟ್ಟುನಿಟ್ಟಿನ ಮೇಲ್ವಿಚಾರಣೆ ಮಾಡಲು, ತುರ್ತು ಕಾಮಗಾರಿಗಳ ಶೀಘ್ರ ಅನುಷ್ಠಾನ, ಸಂಬಂಧಿಸಿದ ಇಲಾಖೆಗಳ ಜೊತೆ ಸಮನ್ವಯ ಸಾಧಿಸಿ ಕಾರ್ಯತಂತ್ರ ರೂಪಿಸಲು ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಮುಂದಾಗಿದೆ.

ಹೊಸದಾಗಿ ಕೊಳವೆ ಬಾವಿ ಕೊರೆದು ಪಂಪ್ ಸಹಿತ ಪೈಪ್ ಲೈನ್ ಅಳವಡಿಕೆ, ಟ್ಯಾಂಕರ್ ಮೂಲಕ ನೀರು ಪೂರೈಕೆ, ಖಾಸಗಿ ಕೊಳವೆ ಬಾವಿ ಬಾಡಿಗೆಗೆ ಪಡೆದು ನೀರು ಸರಬರಾಜು, ಒಣಗಲಾರಂಭಿಸಿರುವ ಕೊಳವೆ ಬಾವಿಗಳನ್ನು ಮರು ಕೊರೆಯುವುದು ಸೇರಿದಂತೆ ವಿವಿಧ ತುರ್ತು ಕಾಮಗಾರಿಗಳನ್ನು ಕೈಗೊಳ್ಳಲು ಇಲಾಖೆ ಉದ್ದೇಶಿಸಿದೆ. ಪ್ರಸ್ತುತ 28 ಜಿಲ್ಲೆಗಳಿಂದ (ಚಿಕ್ಕೋಡಿ ಸೇರಿ) ಒಟ್ಟು 6,321 ಕಾಮಗಾರಿಗಳಿಗೆ ಅಂದಾಜು ₹206.89 ಕೋಟಿ ಅನುದಾನ ಕೋರಿ ಪ್ರಸ್ತಾವಗಳು ಸಲ್ಲಿಕೆ ಆಗಿವೆ. ಚಾಮರಾಜನಗರ, ದಕ್ಷಿಣ ಕನ್ನಡ, ಮೈಸೂರು, ತುಮಕೂರು ಜಿಲ್ಲೆಗಳಿಂದ ತುರ್ತು ಕಾಮಗಾರಿಗಾಗಿ ಯಾವುದೇ ಪ್ರಸ್ತಾವ ಬಂದಿಲ್ಲ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

▶8

ಬರ ಪರಿಸ್ಥಿತಿ ಏನೇನು ಕ್ರಮ?

- ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಆದ್ಯತೆ
- ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆಗೆ ಪಡೆಯಲು ತೀರ್ಮಾನ
- ಅಗತ್ಯವಿದ್ದರೆ ಟ್ಯಾಂಕರ್‌ಗಳ ಮೂಲಕ ನೀರು ಪೂರೈಕೆ
- ಅನಿವಾರ್ಯವಾದರೆ ಭೂ ವಿಜ್ಞಾನಿಯ ವರದಿ ಆಧರಿಸಿ ಹೊಸ ಕೊಳವೆ ಬಾವಿ ಕೊರೆಯುವುದು

‘ಪೆಟ್ರೋಲ್, ಡೀಸೆಲ್ ದರ ಸದ್ಯಕ್ಕೆ ಏರಿಕೆ ಇಲ್ಲ’

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರವು ಶೇ 9ರಷ್ಟು ಹೆಚ್ಚಳ ಆಗಿದ್ದರೂ ದೇಶಿ ಮಾರುಕಟ್ಟೆಯಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಸದ್ಯಕ್ಕೆ ಜಾಸ್ತಿ ಆಗಲಿಕ್ಕಿಲ್ಲ ಎಂದು ಮೂಲಗಳು ತಿಳಿಸಿವೆ.



ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ದರವು ಕಡಿಮೆ ಇದ್ದಾಗ ಕೇಂದ್ರ ಸರ್ಕಾರವು ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ತುಸು ಹೆಚ್ಚಿನ ಪ್ರಮಾಣದಲ್ಲಿ ಲಾಭ ಮಾಡಿಕೊಳ್ಳಲು ಅವಕಾಶ ಕಲ್ಪಿಸಿದೆ. ಹೀಗಾಗಿ, ಈಗ ಕಚ್ಚಾ ತೈಲದ ಬೆಲೆ ಹೆಚ್ಚಾಗಿದ್ದರೂ ಅದನ್ನು ಗ್ರಾಹಕರಿಗೆ ವರ್ಗಾವಣೆ ಮಾಡಲು ಸರ್ಕಾರ ಅವಕಾಶ ಕೊಡಲಿಕ್ಕಿಲ್ಲ ಎಂದು ಮೂಲವೊಂದು ಹೇಳಿದೆ.

2022ರ ಏಪ್ರಿಲ್‌ನಿಂದ ಪೆಟ್ರೋಲ್, ಡೀಸೆಲ್ ಬೆಲೆಯು ದೇಶದಲ್ಲಿ ಬದಲಾವಣೆ ಆಗಿಲ್ಲ.

▶12

‘ನಕಲಿ ತೀರ್ಪು ಆಧರಿಸಿ ತೀರ್ಮಾನ ದುರ್ನಡತೆಗೆ ಸಮ’

ನವದೆಹಲಿ (ಪಿಟಿಐ): ಕೃತಕ ಬುದ್ಧಿಮತ್ತೆಯ (ಎಐ) ಸಹಾಯದಿಂದ ಸೃಷ್ಟಿಸಿದ ನಕಲಿ ತೀರ್ಪುಗಳನ್ನು ಆಧರಿಸಿ ವಿಚಾರಣಾ ನ್ಯಾಯಾಲಯಗಳು ನೀಡುವ ತೀರ್ಪು ಲೋಪವಷ್ಟೇ ಅಲ್ಲ, ಅದನ್ನು ದುರ್ನಡತೆ ಎಂದು ಪರಿಗಣಿಸಬೇಕಾಗುತ್ತದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.



ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಅಲೋಕ್ ಆರಾಧೆ ಅವರಿದ್ದ ಪೀಠವು ಈ ಸಂಬಂಧ ಅಟಾರ್ನಿ ಜನರಲ್ ಆರ್. ವೆಂಕಟರಮಣಿ, ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಮತ್ತು ಭಾರತೀಯ ವಕೀಲರ ಸಂಘಕ್ಕೆ (ಬಿಸಿಐ) ನೋಟಿಸ್ ಜಾರಿ ಮಾಡಿದೆ.

ಈ ವಿಷಯದಲ್ಲಿ ಸಹಾಯ ಮಾಡಲು ಹಿರಿಯ ವಕೀಲ ಶ್ಯಾಮ್ ದಿವಾನ್ ಅವರನ್ನು ನೇಮಿಸಿದೆ.

‘ಎಐ ಮೂಲಕ ಸೃಷ್ಟಿಸಿದ ಅಸ್ತಿತ್ವದಲ್ಲೇ ಇಲ್ಲದ ಅಥವಾ ನಕಲಿ ತೀರ್ಪುಗಳನ್ನು ವಿಚಾರಣಾ ನ್ಯಾಯಾಲಯಗಳು ಪರಿಗಣಿಸುತ್ತಿರುವುದನ್ನು ನಾವು ಗಮನಿಸಿದ್ದೇವೆ. ಇದು ನ್ಯಾಯಾಂಗ ಪ್ರಕ್ರಿಯೆಯ ವಿಶ್ವಾಸಾರ್ಹತೆ ಮೇಲೆ ನೇರ ಪರಿಣಾಮ ಬೀರುತ್ತದೆ. ಇದರ ಪರಿಣಾಮಗಳು ಮತ್ತು ಹೊಣೆಗಾರಿಕೆಯನ್ನು ಪರಿಶೀಲಿಸಲು ನಾವು ಬಯಸುತ್ತೇವೆ’ ಎಂದು ಪೀಠವು ಫೆ.27ರಂದು ನೀಡಿರುವ ಆದೇಶದಲ್ಲಿ ತಿಳಿಸಿದೆ.

‘ಇಂತಹ ಅಸ್ತಿತ್ವದಲ್ಲಿ ಇಲ್ಲದ ಅಥವಾ ನಕಲಿ ತೀರ್ಪುಗಳ ಆಧಾರದ ಮೇಲೆ ತೆಗೆದುಕೊಳ್ಳುವ ನಿರ್ಧಾರವು ಕೇವಲ ನಿರ್ಧಾರ ತೆಗೆದುಕೊಳ್ಳುವಲ್ಲಿನ ದೋಷವಷ್ಟೇ ಅಲ್ಲ, ಬದಲಿಗೆ, ಇದು ದುರ್ನಡತೆಯಾಗುತ್ತದೆ’ ಎಂದು ಹೇಳಿದೆ.

▶13

ಮಹಿಳೆಯರ ದೇಗುಲ ಪ್ರವೇಶ: ಟಿಡಿಬಿ ವಿರೋಧ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಶಬರಿಮಲೆ ಅಯ್ಯಪ್ಪ ಸ್ವಾಮಿ ದೇವಸ್ಥಾನಕ್ಕೆ 10ರಿಂದ 50 ವರ್ಷದ ಒಳಗಿನ ಮಹಿಳೆಯರಿಗೆ ಪ್ರವೇಶ ಕಲ್ಪಿಸುವುದನ್ನು ವಿರೋಧಿಸಿ ದೇವಸ್ಥಾನದ ಆಡಳಿತ ಮಂಡಳಿ ನಿರ್ಧಾರ ಕೈಗೊಂಡಿದೆ.

‘ದೇವಾಲಯಗಳು, ಅದರ ನಂಬಿಕೆ ಹಾಗೂ ಪದ್ಧತಿಗಳನ್ನು ರಕ್ಷಿಸಲು ಮಂಡಳಿಯು ಬದ್ಧವಾಗಿದೆ’ ಎಂದು ತಿರುವಾಂಕೂರು ದೇವಸ್ವಂ ಮಂಡಳಿಯ (ಟಿಡಿಬಿ) ಅಧ್ಯಕ್ಷ ಕೆ. ಜಯಕುಮಾರ್ ತಿಳಿಸಿದ್ದಾರೆ.

‘10ರಿಂದ 50 ವರ್ಷದ ಒಳಗಿನ ಮಹಿಳೆಯರ ಪ್ರವೇಶ ನಿಷೇಧವನ್ನು ಮುಂದುವರಿಸಬೇಕು ಎಂದು ಸೋಮವಾರ ನಡೆದ ಸಭೆಯಲ್ಲಿ ನಿರ್ಣಯ ಅಂಗೀಕರಿಸಲಾಗಿದೆ. ಮಂಡಳಿಯು ತನ್ನ ಈ ನಿಲುವನ್ನು ಸುಪ್ರೀಂ ಕೋರ್ಟ್‌ಗೆ ತಿಳಿಸಲಿದೆ’ ಎಂದು ಹೇಳಿದ್ದಾರೆ.

ಋತುಸ್ರಾವ ಆಗುವ ವಯಸ್ಸಿನ ಮಹಿಳೆಯರಿಗೆ ಕೂಡ ಶಬರಿಮಲೆ ದೇವಸ್ಥಾನ ಪ್ರವೇಶಿಸುವ ಹಕ್ಕಿದೆ ಎಂದು ಸುಪ್ರೀಂ ಕೋರ್ಟ್ 2018ರ ಸೆಪ್ಟೆಂಬರ್ ನಲ್ಲಿ ತೀರ್ಪು ನೀಡಿತ್ತು.

▶13

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಹವಾಮಾನ ಮುನ್ಸೂಚನೆ: ನಗರದಲ್ಲಿ ಶುಭ್ರ ಆಕಾಶ ಇರಲಿದೆ

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

ನಿತ್ಯ 520 ಟನ್ ಆರ್‌ಡಿಎಫ್ ಸಂಗ್ರಹ

ಕಳೆದ ಅಕ್ಟೋಬರ್‌ನಿಂದ ಶೇ 50ರಷ್ಟು ಸಂಗ್ರಹ ಹೆಚ್ಚಳ: ಕರೀಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಪ್ರತಿನಿತ್ಯ 520 ಟನ್ ಕಡಿಮೆ ಮೌಲ್ಯದ ಪ್ಲಾಸ್ಟಿಕ್ (ಆರ್‌ಡಿಎಫ್) ಸಂಗ್ರಹಿಸಲಾಗುತ್ತಿದ್ದು, ಇದರಲ್ಲಿ ಒಟ್ಟಾರೆ ಆರ್‌ಡಿಎಫ್ ಅನ್ನು ಸಿಮೆಂಟ್ ಕಾರ್ಖಾನೆಗಳಿಗೆ ರವಾನಿಸಲಾಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಸಿಇಒ ಕರೀಗೌಡ ತಿಳಿಸಿದರು.

2025ರ ಅಕ್ಟೋಬರ್ 9ರಿಂದ 2026ರ ಫೆಬ್ರುವರಿ 26ರವರೆಗೆ ಒಟ್ಟು 19,470 ಟನ್ ಆರ್‌ಡಿಎಫ್ ಸಂಗ್ರಹಿಸಲಾಗಿದೆ. ಈ ಅವಧಿಯಲ್ಲಿ ಸಿಮೆಂಟ್ ಕಾರ್ಖಾನೆ ದಾಲ್ಮಿಯಾ ಸಿಮೆಂಟ್‌ಗೆ 18,625 ಟನ್ ಆರ್‌ಡಿಎಫ್ ರವಾನಿಸಲಾಗಿದೆ. ಸುಮಾರು ₹1.8 ಕೋಟಿ ಲಾಭ ಬರಲಿದೆ ಎಂದು ಪತ್ರಿಕಾಗೋಷ್ಠಿಯಲ್ಲಿ ಸೋಮವಾರ ಮಾಹಿತಿ ನೀಡಿದರು.

ನಗರದಲ್ಲಿ ಪ್ರತಿನಿತ್ಯ ಸರಾಸರಿ 6,000 ಟನ್ ಘನತ್ಯಾಜ್ಯ ಉತ್ಪತ್ತಿ ಆಗುತ್ತಿದೆ. ಅದರಲ್ಲಿ ಸುಮಾರು 520 ಟನ್ ಆರ್‌ಡಿಎಫ್ ಸಂಗ್ರಹಿಸಲಾಗುತ್ತಿದ್ದು, ಈ ಪ್ರಮಾಣವನ್ನು 1,000 ಟನ್‌ಗೆ ಹೆಚ್ಚಿಸುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಸಾರ್ವಜನಿಕ ಜಾಗೃತಿಗಾಗಿ ಕೈಗೊಂಡ ಮಾಹಿತಿ, ಶಿಕ್ಷಣ ಮತ್ತು ಸಂವಹನ (ಐಇಸಿ) ಕಾರ್ಯಕ್ರಮಗಳ ಪರಿಣಾಮವಾಗಿ ಮೂಲದಲ್ಲಿಯೇ ತ್ಯಾಜ್ಯ ವಿಂಗಡಣೆಯ ಪ್ರಮಾಣದಲ್ಲಿ ಏರಿಕೆಯಾಗಿದೆ. ಇದರೊಂದಿಗೆ, ಆರ್‌ಡಿಎಫ್ ಸಂಗ್ರಹಣೆಯಲ್ಲಿಯೂ ಮಹತ್ತರ ಪ್ರಗತಿ ಸಾಧಿಸಲಾಗಿದೆ. ಪ್ಲಾಸ್ಟಿಕ್ ವಿಂಗಡಣೆ ಹೆಚ್ಚಿದಂತೆ ಭೂಭರ್ತಿಗೆ ರವಾನೆಯಾಗುವ ತ್ಯಾಜ್ಯದ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತಿದೆ. ಇದು ಘನತ್ಯಾಜ್ಯ ನಿರ್ವಹಣೆಯಲ್ಲಿ ಕೈಗೊಂಡ ದಿಟ್ಟ ಕ್ರಮಗಳ ಫಲವಾಗಿದೆ ಎಂದು ಹೇಳಿದರು.

2025ರ ಅಕ್ಟೋಬರ್‌ನಿಂದ ಮೊದಲು ಆರ್‌ಡಿಎಫ್ ಸಂಗ್ರಹ ಸುಮಾರು ಶೇ10ರಷ್ಟಿತ್ತು. ಆ ನಂತರ ಜಾರಿಗೆ ತಂದ ಜಾಗೃತಿ ಕಾರ್ಯಕ್ರಮಗಳು ಹಾಗೂ ಕಟ್ಟುನಿಟ್ಟಿನ ಕ್ರಮಗಳ ಫಲವಾಗಿ ಆರ್‌ಡಿಎಫ್ ಸಂಗ್ರಹ ಪ್ರಮಾಣ ಈಗ ಶೇ50ಕ್ಕೂ ಹೆಚ್ಚಾಗಿದೆ ಎಂದರು.

ದಾಲ್ಮಿಯ ಸಿಮೆಂಟ್ ಘಟಕಕ್ಕೆ ಆರ್‌ಡಿಎಫ್ ರವಾನಿಸಲಾಗಿದೆ. ಅವರು ವಿಸ್ತೃತ ಉತ್ಪಾದಕರ ಜವಾಬ್ದಾರಿ (ಇಪಿಆರ್) ಕ್ರೆಡಿಟ್‌ಗಳನ್ನು ಬಿಎಸ್‌ಎಂಡಬ್ಲ್ಯುಎಂಎಲ್‌ಗೆ ನೀಡುತ್ತಾರೆ. ಇವುಗಳ ವಹಿವಾಟಿನಿಂದ ಕಂಪನಿ ಆರ್ಥಿಕವಾಗಿ ಬಲವರ್ಧನೆ ಆಗಲಿದ್ದು, ಘನತ್ಯಾಜ್ಯ ನಿರ್ವಹಣೆಗೆ ನೆರವಾಗಲಿದೆ ಎಂದು ಹೇಳಿದರು.

2025ರ ಡಿಸೆಂಬರ್‌ನಿಂದ 2026 ಜನವರಿವರೆಗೆ 3,600 ಇಪಿಆರ್ ಕ್ರೆಡಿಟ್‌ಗಳನ್ನು ಪಡೆದುಕೊಳ್ಳಲಾಗಿದೆ. ಇವುಗಳನ್ನು ಉತ್ಪಾದಕರು, ಆಮದುದಾರರು ಹಾಗೂ ಬ್ರ್ಯಾಂಡ್ ಮಾಲೀಕರಿಗೆ (ಪಿಐಬಿಒ), ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣಾ ನಿಯಮಗಳು-2024ರ ಅನ್ವಯ ಮಾರಾಟ ಮಾಡಿದರೆ, ₹1.80 ಕೋಟಿವರೆಗೆ ಆದಾಯ ಬರಲಿದೆ ಎಂದು ಮಾಹಿತಿ ನೀಡಿದರು.

ಜಿಬಿಎ ವ್ಯಾಪ್ತಿಯಲ್ಲಿ ರಸ್ತೆಬದಿ ಕಸ ಬಿಸಾಡುವ ಹಾಗೂ ಕಸ ವಿಂಗಡಿಸದೆ ನೀಡುವವರಿಂದ ಪ್ರತಿ ತಿಂಗಳು ಸರಾಸರಿ ₹60 ಲಕ್ಷ ದಂಡ ಸಂಗ್ರಹಿಸಲಾಗುತ್ತಿದೆ. ಈ ಹಣದಿಂದ ಪ್ರತಿ ವಿಧಾನಸಭಾ ಕ್ಷೇತ್ರಕ್ಕೊಂದು ಟ್ರ್ಯಾಕ್ಟರ್ ಖರೀದಿಸಲಾಗಿದೆ. ಟ್ರ್ಯಾಕ್ಟರ್‌ಗಳ ಮೂಲಕ ಬಲ್ಕ್ ವೇಸ್ಟ್ ತೆರವುಗೊಳಿಸಲಾಗುತ್ತಿದ್ದು, ಮೂರು ತಿಂಗಳ ಅವಧಿಯಲ್ಲಿ 6,000 ಮೆಟ್ರಿಕ್ ಟನ್‌ಕ್ಕಿಂತ ಹೆಚ್ಚು ಬಲ್ಕ್ ವೇಸ್ಟ್ ಸಂಗ್ರಹಿಸಲಾಗಿದೆ ಎಂದರು.

ಮುಖ್ಯಾಂಶಗಳು

- ನಿತ್ಯ 1,000 ಟನ್ ಆರ್‌ಡಿಎಫ್ ಸಂಗ್ರಹದ ಗುರಿ
- ಸಿಮೆಂಟ್ ಕಾರ್ಖಾನೆಗೆ ಆರ್‌ಡಿಎಫ್ ರವಾನೆ
- ಇಪಿಆರ್‌ನಿಂದ ಬಿಎಸ್‌ಡಬ್ಲ್ಯು ಎಂಎಲ್‌ಗೆ ₹1.8 ಕೋಟಿ

'ಸ್ವಚ್ಛ ಸರ್ವೇಕ್ಷಣ್' ರಾಯಭಾರಿಗಳು

ಜಿಬಿಎ ವ್ಯಾಪ್ತಿಯಲ್ಲಿ 'ಸ್ವಚ್ಛ ಸರ್ವೇಕ್ಷಣ್' ಅಭಿಯಾನದ ಅಂಗವಾಗಿ ನಾಗರಿಕರಲ್ಲಿ ಸ್ವಚ್ಛತೆ ಕುರಿತು ಜಾಗೃತಿ ಮೂಡಿಸಲು ಪದ್ಮಶ್ರೀ ಪುರಸ್ಕೃತರಾದ ಮಂಜಮ್ಮ ಜೋಗತಿ, ಚಲನಚಿತ್ರ ನಟ ಅನಿರುದ್ಧ ಜತಕರ ಹಾಗೂ ಸಾಮಾಜಿಕ ಕಾರ್ಯಕರ್ತ ಅರುಣ್ ಪೈ ಅವರನ್ನು ರಾಯಭಾರಿಗಳನ್ನಾಗಿ ನೇಮಿಸಲಾಗಿತ್ತು.

ಈ ಸಂಬಂಧ ಟೌನ್‌ಹಾಲ್‌ನಲ್ಲಿ ಮಾರ್ಚ್ 9ರಂದು ವಿಶೇಷ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ರಾಯಭಾರಿಗಳ ಮೂಲಕ ನಗರದಲ್ಲಿ ಸ್ವಚ್ಛತೆ ಕಾಪಾಡುವ ಕುರಿತು ಜನಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುತ್ತದೆ ಎಂದು ಕರೀಗೌಡ ತಿಳಿಸಿದರು.


ಕರೀಗೌಡ

2 ಕಡೆ ತಲಾ 100 ಎಕರೆ ಭೂಸ್ವಾಧೀನ

ಸಮಗ್ರ ಘನತ್ಯಾಜ್ಯ ನಿರ್ವಹಣೆ ಯೋಜನೆಗೆ ಎರಡು ಕಡೆ ತಲಾ 100 ಎಕರೆ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ಬಿಎಸ್‌ಡಬ್ಲ್ಯುಎಂಎಲ್ ಸಿಇಒ ಕರೀಗೌಡ ತಿಳಿಸಿದರು.

ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲ ಹೋಬಳಿಯ ಕುಂಟನಹಳ್ಳಿ ಗ್ರಾಮದಲ್ಲಿರುವ ಟೆರ್ರಾಫಾರ್ಮ್ ಪ್ರದೇಶದ ಜೊತೆಗೆ ಸರ್ಕಾರದ ಆದೇಶದಂತೆ ಎಕರೆಗೆ ₹1.57 ಕೋಟಿ ನೀಡಿ, 30 ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಎಂದರು.

ಬೆಂಗಳೂರು ದಕ್ಷಿಣ ವ್ಯಾಪ್ತಿಯಲ್ಲಿ ನೈಸ್ ರಸ್ತೆ ಸಮೀಪದ ಗೊಲ್ಲಹಳ್ಳಿಯಲ್ಲಿ ಸರ್ಕಾರಿ ಜಾಗವನ್ನು ಬಿಎಸ್‌ಡಬ್ಲ್ಯು ಎಂಎಲ್ ವಶಕ್ಕೆ ಪಡೆದಿದೆ. ಟೆಂಡರ್ ಪ್ರಕ್ರಿಯೆ ಅಂತಿಮ ಹಂತದಲ್ಲಿದ್ದು, ಈ ಎರಡೂ ಕಡೆ ಘನ ತ್ಯಾಜ್ಯ ಸಂಸ್ಕರಣೆಯ ಪ್ರಕ್ರಿಯೆಗಳು ಆರಂಭವಾಗಲಿವೆ. ಇದರಿಂದ ತ್ಯಾಜ್ಯ ವಿಲೇವಾರಿಯ ಬಹುತೇಕ ಸಮಸ್ಯೆ ಬಗೆಹರಿಯಲಿದೆ ಎಂದು ಕರೀಗೌಡ ಹೇಳಿದರು.

ಜಿಬಿಎ ಯಾವುದೇ ಪ್ರದೇಶದಲ್ಲಿ ಕಸದ ಸಮಸ್ಯೆ ಇದ್ದರೆ, ಸಹಾಯ 2.0 ತಂತ್ರಾಂಶ, ಜಿಬಿಎ ಸಹಾಯವಾಣಿ ಸಂಖ್ಯೆ 1533 ಅಥವಾ ವಾಟ್ಸ್‌ಆ್ಯಪ್ ಸಂಖ್ಯೆ 94481 97197ಕ್ಕೆ ಸಂದೇಶ ಕಳುಹಿಸಬಹುದು ಎಂದರು.

ಸುದ್ದಿ 2 ನಿಮಿಷ

ಜಿಬಿಎ ಚುನಾವಣೆ: ಜೆಡಿಎಸ್ ಸಮಿತಿ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ ಐದು ನಗರ ಪಾಲಿಕೆಗಳ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸಲು ಮುಂದಾಗಿರುವ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ. ದೇವೇಗೌಡ ಅವರು, ಶಾಸಕಾಂಗ ಪಕ್ಷದ ನಾಯಕ ಸಿ.ಬಿ.ಸುರೇಶ್ ಬಾಬು ಅಧ್ಯಕ್ಷತೆಯಲ್ಲಿ ಉನ್ನತಮಟ್ಟದ ಸಮಿತಿ ರಚಿಸಿದ್ದಾರೆ.

ಜೆಡಿಎಸ್ ಯುವ ಘಟಕದ ರಾಜ್ಯ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ, ಪಕ್ಷದ ಪ್ರಮುಖರ ಸಮಿತಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಟಿ.ಎ.ಶರವಣ, ಟಿ.ಎನ್. ಜವರಾಯಿಗೌಡ, ವಿಧಾನ ಪರಿಷತ್‌ನ ಮಾಜಿ ಸದಸ್ಯ ಕೆ.ಎ.ತಿಪ್ಪೇಸ್ವಾಮಿ ಅವರು ಸದಸ್ಯರಾಗಿ, ಪಕ್ಷದ ನಗರ ಘಟಕದ ಅಧ್ಯಕ್ಷ ಎಚ್‌.ಎಂ.ರಮೇಶ ಗೌಡ ಸಂಚಾಲಕರಾಗಿರುತ್ತಾರೆ.

ಜಿಬಿಎ ಚುನಾವಣೆಗೆ ಅಗತ್ಯ ಕಾರ್ಯತಂತ್ರ ರೂಪಿಸಲು ಸರಣಿ ಸಭೆಗಳನ್ನು ಆಯೋಜಿಸುವುದು, ಅಭ್ಯರ್ಥಿಗಳನ್ನು ಗುರುತಿಸುವುದನ್ನು ಸಮಿತಿ ಮಾಡಬೇಕು ಎಂದಿದ್ದಾರೆ.

ಗ್ರೇಟರ್ ಬೆಂಗಳೂರು ವ್ಯಾಪ್ತಿಯ ಐದು ವಿಭಾಗಗಳ ಜೆಡಿಎಸ್ ಅಧ್ಯಕ್ಷರನ್ನು ಸಭೆಗಳಿಗೆ ಆಹ್ವಾನಿಸಬೇಕು. ಕಾಲ ಕಾಲಕ್ಕೆ ಉನ್ನತಮಟ್ಟದ ಸಮಿತಿ ನಡೆಸುವ ಸಭೆಗಳ ಮಾಹಿತಿಯನ್ನು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಅವರ ಗಮನಕ್ಕೆ ತರಬೇಕು ಎಂದು ದೇವೇಗೌಡ ಅವರು ಸೂಚಿಸಿದ್ದಾರೆ.



ಬಾಣಸವಾಡಿ: ಸಂಚಾರ ನಿರ್ಬಂಧ

ಬೆಂಗಳೂರು: ಬಾಣಸವಾಡಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಬಾಣಸವಾಡಿ ಮುಖ್ಯರಸ್ತೆಯ ಅಗ್ನಿಶಾಮಕ ಠಾಣೆಯ ಬಳಿ ಬಿಬಿಎಂಪಿ ವತಿಯಿಂದ ನೀರುಗಾಲುವೆ ಸೇತುವೆ ಮರು ನಿರ್ಮಾಣ ಕಾಮಗಾರಿ ಕೈಗೊಳ್ಳಲಾಗಿದ್ದು, ಮಾರ್ಚ್ 3ರಿಂದ 90 ದಿನ ಈ ಮಾರ್ಗದಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿದೆ. ವಾಹನ ಸವಾರರು ಪರ್ಯಾಯ ಮಾರ್ಗದಲ್ಲಿ ಸಂಚರಿಸುವಂತೆ ಸೂಚನೆ ನೀಡಲಾಗಿದೆ.

ವಾಹನ ಸಂಚಾರ ನಿರ್ಬಂಧ: ಬಾಣಸವಾಡಿ ಮುಖ್ಯರಸ್ತೆ (ಅಗ್ನಿಶಾಮಕ ಠಾಣೆಯ ಬಳಿ) ವೇಮಣ್ಣ ಸರ್ಕಲ್ ಕಡೆಯಿಂದ ಉತ್ತಮ್ ಸಾಗರ್ ಜಂಕ್ಷನ್ ಕಡೆಗೆ ಹೋಗುವ ಎಲ್ಲ ಮಾದರಿಯ ವಾಹನಗಳ ಸಂಚಾರವನ್ನು ತಾತ್ಕಾಲಿಕವಾಗಿ ನಿರ್ಬಂಧಿಸಲಾಗಿದೆ.

ಪರ್ಯಾಯ ಮಾರ್ಗ: ವೇಮಣ್ಣ ವೃತ್ತದ ಕಡೆಯಿಂದ ಉತ್ತಮ್ ಸಾಗರ್ ಜಂಕ್ಷನ್ ಕಡೆಗೆ ಹೋಗುವ ವಾಹನ ಸವಾರರು, ಚಾಲಕರು ಅಗ್ನಿಶಾಮಕ ಠಾಣೆಯ ಬಳಿ ಬಲಕ್ಕೆ ತಿರುವು ಪಡೆದುಕೊಳ್ಳಬೇಕು (ಈ ರಸ್ತೆಯು ಏಕಮುಖ ಸಂಚಾರ ರಸ್ತೆಯಾಗಿದ್ದು, ತಾತ್ಕಾಲಿಕವಾಗಿ ದ್ವಿಮುಖ ಸಂಚಾರ ರಸ್ತೆಯನ್ನಾಗಿ ಮಾರ್ಪಾಡು ಮಾಡಲಾಗಿದೆ). ಎರಡನೇ ಕ್ರಾಸ್ ಬಳಿ ಎಡಕ್ಕೆ ತಿರುವು ಪಡೆದು ಉತ್ತಮ್ ಸಾಗರ್ ಜಂಕ್ಷನ್ ಕಡೆಗೆ ಸಂಚರಿಸಬಹುದಾಗಿದೆ.

ವಾಹನ ನಿಲುಗಡೆ ನಿರ್ಬಂಧ: ಬಾಣಸವಾಡಿ ಮುಖ್ಯರಸ್ತೆಯ ವೇಮಣ್ಣ ಸರ್ಕಲ್‌ನಿಂದ ಉತ್ತಮ್ ಸಾಗರ್ ಜಂಕ್ಷನ್‌ವರೆಗೆ.

ರಸ್ತೆ ಬದಿಯ ಗಿಡಗಳ ನಿರ್ವಹಣೆಗೆ ಆದೇಶ

ಬೆಂಗಳೂರು: ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಯ 5 ನಗರ ಪಾಲಿಕೆಯ ರಸ್ತೆಗಳ ಬದಿ ಹಾಗೂ ವಿಭಜಕಗಳಲ್ಲಿರುವ ಗಿಡಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡಬೇಕು ಎಂದು ನಗರಾಭಿವೃದ್ಧಿ ಇಲಾಖೆ ಆದೇಶ ಹೊರಡಿಸಿದೆ.

ಅವಕಾಶವಿರುವ ಕಡೆ ಹೊಸದಾಗಿ ಗಿಡ, ಮರಗಳನ್ನು ಬೆಳೆಸಬೇಕು. ಕಸವನ್ನು ತೆಗೆದು ಸ್ವಚ್ಛಗೊಳಿಸಬೇಕು. ಈ ಬಗ್ಗೆ ಜಿಬಿಎ ಮುಖ್ಯ ಆಯುಕ್ತರು ಹಾಗೂ ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ನಿಯಮಿತವಾಗಿ ಸಭೆ ನಡೆಸಿ, ಪರಿಶೀಲನೆ ನಡೆಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಗಾರ್ಡನ್ ಸಿಟಿ ವಿ.ವಿ ವಾರ್ಷಿಕೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರದಲ್ಲಿ 35 ವರ್ಷಗಳ ಹಿಂದೆ ಸ್ಥಾಪನೆಯಾಗಿರುವ ಗಾರ್ಡನ್ ಸಿಟಿ ವಿಶ್ವವಿದ್ಯಾಲಯವು ಹಲವು ಸವಾಲುಗಳನ್ನು ಎದುರಿಸಿ ಗಟ್ಟಿಯಾಗಿ ನೆಲೆಯೂರಿದೆ' ಎಂದು –ಕುಲಾಧಿಪತಿ ವಿ.ಜಿ.ಜೋಸೆಫ್ ತಿಳಿಸಿದರು.

'ಇಗ್ನೈಟ್ 35: ಎ ಇಯರ್ ಆಫ್ ಐಡಿಯಾಸ್' ಶೀರ್ಷಿಕೆಯಡಿ ವಿಶ್ವವಿದ್ಯಾಲಯದ 35ನೇ ವಾರ್ಷಿಕೋತ್ಸವದ ಅಂಗವಾಗಿ ನಡೆದ ಹಲವು ಚಟುವಟಿಕೆಗಳು ಹಾಗೂ ಲಾಂಛನ ಅನಾವರಣ ಸಮಾರಂಭದಲ್ಲಿ ಅವರು ಮಾತನಾಡಿದರು.

'ನಾಲ್ಕೂವರೆ ದಶಕದಿಂದ ಶಿಕ್ಷಣ ಕ್ಷೇತ್ರದಲ್ಲಿ ನಾನು ಕೆಲಸ ಮಾಡುತ್ತಿರುವೆ. ಗಾರ್ಡನ್ ಸಿಟಿ ವಿಶ್ವವಿದ್ಯಾಲಯ ಸಣ್ಣದಾಗಿ ಆರಂಭಗೊಂಡಿತು. ಅರ್ಹ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಾ ಬಂದಿದ್ದು, ಅದನ್ನು ಮುಂದುವರಿಸಲಿದೆ' ಎಂದರು.

'35ನೇ ವರ್ಷದ ನೆನಪಿನಲ್ಲಿ 35 ಸಾವಿರ ಸಸಿಗಳನ್ನು ನೆಟ್ಟು ಹಸಿರೀಕರಣಕ್ಕೆ ಒತ್ತು ನೀಡಲಾಗುತ್ತಿದೆ' ಎಂದು ಹೇಳಿದರು. ಜಾದೂಗಾರ ಗೋಪಿನಾಥ್ ಮುತುಕಾಡ್ ಮಾತನಾಡಿದರು.

ಕುಲಪತಿ ಎಂ. ರಾಮಚಂದ್ರ ಗೌಡ ಮಾತನಾಡಿ, '1992ರ ಫೆಬ್ರುವರಿ 27ರಂದು ಆರಂಭವಾದ ಗಾರ್ಡನ್ ಸಿಟಿ ಶಿಕ್ಷಣ ಸಂಸ್ಥೆ, ಮೂರೂವರೆ ದಶಕಗಳಿಗೂ ಹೆಚ್ಚು ಕಾಲ ಶಿಕ್ಷಣ ಕ್ಷೇತ್ರಕ್ಕೆ ನೀಡಿರುವ ಕೊಡುಗೆಯನ್ನು ಸ್ಮರಿಸಲು ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ' ಎಂದರು.



ಗಾರ್ಡನ್ ಸಿಟಿ ವಿಶ್ವವಿದ್ಯಾಲಯದ 35ನೇ ವಾರ್ಷಿಕೋತ್ಸವದ ಲಾಂಛನ ಬಿಡುಗಡೆ ಮಾಡಲಾಯಿತು. ಕುಲಾಧಿಪತಿ ಡಾ.ವಿ.ಜಿ.ಜೋಸೆಫ್, ಜಾದೂಗಾರ ಗೋಪಿನಾಥ್ ಮುತುಕಾಡ್, ಕುಲಪತಿ ರಾಮಚಂದ್ರಗೌಡ ಉಪಸ್ಥಿತರಿದ್ದರು

ವೃತ್ತಿ ಮಾರ್ಗದರ್ಶನ ಪುಸ್ತಕಗಳ ವಿತರಣೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನದ ಪುಸ್ತಕಗಳನ್ನು ಉಚಿತವಾಗಿ ವಿತರಿಸಲಾಗುವುದು ಎಂದು ಬಾಲ್ಕ್ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಎ.ಎನ್. ನಟರಾಜ್‌ಗೌಡ ಹೇಳಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿಶೇಷವಾಗಿ ರಚಿಸಿರುವ ವೃತ್ತಿ ಮಾರ್ಗದರ್ಶನದ 25 ಸಾವಿರ ಪುಸ್ತಕಗಳನ್ನು ಉಚಿತವಾಗಿ ವಿತರಿಸಲಾಗುತ್ತಿದೆ' ಎಂದು ವಿವರಿಸಿದರು.

'ಸುಂಕದಕಟ್ಟೆ, ರಾಜಾಜಿನಗರ, ಮಲ್ಲೇಶ್ವರ, ಬಸವನಗುಡಿ, ಜಯನಗರ, ಟೋಲ್‌ಗೇಟ್, ಉಲ್ಲಾಳು ರಸ್ತೆ, ಕೆಂಗೇರಿ ಉಪನಗರ, ಕೋಣನಕುಂಟೆ ಕ್ರಾಸ್, ಕೇಂಬ್ರಿಡ್ಜ್ ಲೇಔಟ್, ನೆಲಮಂಗಲ, ಯಲಹಂಕ, ದೇವನಹಳ್ಳಿಯಲ್ಲಿ ಇರುವ ಬಾಲ್ಕ್ ಸಂಸ್ಥೆಯ ಶಾಖೆಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ಶಾಲಾ–ಕಾಲೇಜುಗಳು ನೀಡಿರುವ ಗುರುತಿನ ಚೀಟಿ ತೋರಿಸಿ ಪುಸ್ತಕಗಳನ್ನು ಪಡೆದುಕೊಳ್ಳಬಹುದು' ಎಂದು ತಿಳಿಸಿದರು.

'ವಿದ್ಯಾರ್ಥಿಗಳ ಕೌಶಲ ಅಭಿವೃದ್ಧಿಯ ನೆರವಿಗಾಗಿ ಸ್ಕಾಲರ್‌ಶಿಪ್ ಆಪ್ಟಿಟ್ಯೂಡ್ ಟೆಸ್ಟ್ (ಎಸ್‌ಎಟಿ) ನಡೆಸಲಾಗುತ್ತಿದೆ. ಮಾರ್ಚ್ 22ರಂದು ದ್ವಿತೀಯ ಪಿಯು ವಿದ್ಯಾರ್ಥಿಗಳಿಗೆ ಹಾಗೂ ಏಪ್ರಿಲ್ 5ರಂದು ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳಿಗೆ ಟೆಸ್ಟ್ ನಡೆಸಲಾಗುವುದು' ಎಂದರು. ಮಾಹಿತಿಗೆ: 88844 98884 ಸಂಪರ್ಕಿಸಬಹುದು

₹45 ಕೋಟಿ ಮೌಲ್ಯದ ಬಿಡಿಎ ಸ್ವತ್ತು ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಕಾರ್ಯಾಚರಣೆ ನಡೆಸಿ, ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಮಲ್ಲತ್ತಹಳ್ಳಿ ಗ್ರಾಮದ ಸರ್ವೆ ಸಂಖ್ಯೆ 49/2ರಲ್ಲಿ ₹45 ಕೋಟಿ ಮೌಲ್ಯದ ಸ್ವತ್ತು ವಶಪಡಿಸಿಕೊಂಡಿತು.

ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್, ಕಟ್ಟಡಗಳನ್ನು ಜೆಸಿಬಿ ಯಂತ್ರದ ಮೂಲಕ ತೆರವುಗೊಳಿಸಿ, 35 ಗುಂಟೆ ಜಾಗವನ್ನು ವಶಕ್ಕೆ ಪಡೆದುಕೊಳ್ಳಲಾಯಿತು. ಜಾಗದ ಸುತ್ತಲೂ ಬೇಲಿ ಹಾಕಿ ರಕ್ಷಣೆ ಮಾಡಲಾಗಿದೆ.

'ಆಸ್ತಿ ಖರೀದಿಸುವ ಮೊದಲು ಸಂಬಂಧಿತ ದಾಖಲೆಗಳ ಸಮಗ್ರ ಪರಿಶೀಲನೆ ನಡೆಸಬೇಕು. ಅನುಮೋದಿತ ಬಡಾವಣೆಗಳಲ್ಲಿ ಮಾತ್ರ ನಿವೇಶನಗಳನ್ನು ಖರೀದಿಸಬೇಕು. ಕಾನೂನುಬದ್ಧ ಅನುಮತಿ ಹಾಗೂ ಸಂಬಂಧಿತ ಪ್ರಾಧಿಕಾರಗಳಿಂದ ದೃಢೀಕರಣ ಪಡೆಯುವುದು ಅಗತ್ಯ' ಎಂದು ನಾಗರಿಕರಿಗೆ ಬಿಡಿಎ ತಿಳಿಸಿದೆ.

ಪೊಲೀಸ್ ಇಲಾಖೆಯ ಸಹಕಾರದೊಂದಿಗೆ ಬಿಡಿಎ ಕಾರ್ಯಪಡೆಯ ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದರು.


ಮಲ್ಲತ್ತಹಳ್ಳಿಯಲ್ಲಿ ಅಕ್ರಮ ಶೆಡ್ ತೆರವು ಮಾಡಲಾಯಿತು

ನಗರದಲ್ಲಿ ಇಂದು

ಡಾ. ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ ಹೆಸರಿನ ರಸ್ತೆಯ ನಾಮಫಲಕ ಅನಾವರಣ: ಎಸ್‌. ಟಿ. ಸೋಮಶೇಖರ್, ಎಂ. ಪ್ರಕಾಶಮೂರ್ತಿ, ನಾಗರಿಕ ಗೌರವ ಸ್ವೀಕರಿಸುವವರು: ನರಹಳ್ಳಿ ಬಾಲಸುಬ್ರಹ್ಮಣ್ಯ, ಅಧ್ಯಕ್ಷತೆ: ಎಚ್‌.ಎಸ್. ಸುಧೀಂದ್ರಕುಮಾರ್, ಆಯೋಜನೆ: ಕನ್ನಡ ಸಾಹಿತ್ಯ ಪರಿಷತ್ತು ಯಶವಂತಪುರ ವಿಧಾನಸಭಾ ಕ್ಷೇತ್ರ, ಸ್ಥಳ: ಗಣಪತಿ ದೇವಸ್ಥಾನದ ಹಿಂಭಾಗ, ಕಲ್ಯಾಣ ಗೃಹನಿರ್ಮಾಣ ಸಹಕಾರ ಸಂಘದ ಬಡಾವಣೆ, ಭುವನೇಶ್ವರಿನಗರ, ಬೆಳಿಗ್ಗೆ 10.30

ಸುವರ್ಣ ಮಹೋತ್ಸವ ಸಮಾರೋಪ: ಅತಿಥಿಗಳು: ಪುರುಷೋತ್ತಮ ಬಿಳಿಮಲೆ, ಎಚ್‌. ಎಸ್‌. ರಾಘವೇಂದ್ರ ರಾವ್, ಅಧ್ಯಕ್ಷತೆ: ಜೋಸೆಫ್ ಸಿ.ಸಿ., ಗೌರವ ಸ್ವೀಕರಿಸುವವರು: ಅನಿಲ್ ಜೋಸೆಫ್ ಪಿಂಟೊ, ಆಯೋಜನೆ ಮತ್ತು ಸ್ಥಳ: ಕ್ರೈಸ್ಟ್ ಡೀಮ್ಡ್ ಟು ಬಿ ಯೂನಿವರ್ಸಿಟಿಯ ಕನ್ನಡ ಸಂಘ , ಹೊಸೂರು ರಸ್ತೆ, ಮಧ್ಯಾಹ್ನ 3


ಪುರುಷೋತ್ತಮ ಬಿಳಿಮಲೆ

ಕಾಮಣ್ಣನ ಹಬ್ಬದ ಆಚರಣೆ: 'ಮನ್ಮಥನಿಗೆ ಪುಷ್ಪಬಾಣ ಅಥವಾ ಮನ್ಮಥನಿಂದ ಶಿವನ ತಪೋಭಂಗ, ಆಯೋಜನೆ, ಸ್ಥಳ: ಕಾಮಣ್ಣನ ಗುಡಿ ಸೇವಾ ಸಮಿತಿ ಟ್ರಸ್ಟ್, ಅರಳೇಪೇಟೆ, ಸಂಜೆ 6.30ರಿಂದ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

ಚಿಟಿಕೆ ಸುದ್ದಿ

ಪಾಸ್‌ಪೋರ್ಟ್ ಕಚೇರಿಗೆ ಬಾಂಬ್ ಬೆದರಿಕೆ

ಬೆಂಗಳೂರು: ಕೋರಮಂಗಲದಲ್ಲಿ ಇರುವ ಪಾಸ್‌ಪೋರ್ಟ್ ಪ್ರಾದೇಶಿಕ ಕಚೇರಿಗೆ ಹುಸಿ ಬಾಂಬ್ ಬೆದರಿಕೆಯ ಇ-ಮೇಲ್ ಬಂದಿದ್ದು, ಕೆಲ ಕಾಲ ಆತಂಕ ಸೃಷ್ಟಿಯಾಗಿತ್ತು.

ತಕ್ಷಣವೇ ಸ್ಥಳಕ್ಕೆ ಧಾವಿಸಿದ ಪೊಲೀಸರು ಮತ್ತು ಬಾಂಬ್ ನಿಷ್ಕ್ರಿಯ ದಳವು ತಪಾಸಣೆ ನಡೆಸಿ, ಇದೊಂದು ಹುಸಿ ಬೆದರಿಕೆ ಎಂದು ದೃಢಪಡಿಸಿದರು.

‘ಕಚೇರಿಯಲ್ಲಿ ಸ್ಫೋಟಕ ವಸ್ತುಗಳನ್ನು ಇಡಲಾಗಿದೆ. ಅದು ಕೆಲವೇ ಹೊತ್ತಿನಲ್ಲಿ ಸ್ಫೋಟಗೊಳ್ಳಲಿದೆ’ ಎಂಬುದಾಗಿ ಇ-ಮೇಲ್‌ನಲ್ಲಿ ಉಲ್ಲೇಖಿಸಲಾಗಿತ್ತು. ಸ್ಥಳಕ್ಕೆ ಬಂದ ಬಾಂಬ್ ತಪಾಸಣೆ ಹಾಗೂ ನಿಷ್ಕ್ರಿಯ ದಳ, ಶ್ವಾನದಳದ ಸಿಬ್ಬಂದಿ ಕಚೇರಿಯಲ್ಲಿ ಹುಡುಕಾಟ ನಡೆಸಿದರು. ಯಾವುದೇ ಸ್ಫೋಟಕ ವಸ್ತುಗಳು ಪತ್ತೆಯಾಗಿಲ್ಲ. ಪರಿಶೀಲನಾ ಕಾರ್ಯ ಪೂರ್ಣವಾದ ಮೇಲೆ ಪಾಸ್‌ಪೋರ್ಟ್ ಪ್ರಕ್ರಿಯೆಯನ್ನು ಮರುಪ್ರಾರಂಭಿಸಲಾಯಿತು’ ಎಂದು ಮೂಲಗಳು ತಿಳಿಸಿವೆ.

ರೈಲ್ವೆ ಹಳಿ ಮೇಲೆ ಮೃತದೇಹ ಪತ್ತೆ: ಕೊಲೆಯ ಶಂಕೆ

ಪೀಣ್ಯ ದಾಸರಹಳ್ಳಿ: ಉತ್ತರ ಸೋಲ ದೇವನಹಳ್ಳಿ ರೈಲ್ವೆ ಹಳಿ ಮೇಲೆ 40 ವರ್ಷ ಅಂದಾಜಿನ ಪುರುಷನ ಮೃತದೇಹ ಪತ್ತೆಯಾಗಿದ್ದು, ಕೊಲೆಯ ಶಂಕೆಯ ವ್ಯಕ್ತವಾಗಿದೆ.

ಮೃತದೇಹವು ಛಿದ್ರಗೊಂಡಿದೆ. ಮೃತದೇಹದ ಗುರುತು ಪತ್ತೆಯಾಗಿಲ್ಲ.

‘ರಾತ್ರಿ ವೇಳೆ ರೈಲ್ವೆ ಹಳಿ ದಾಟುವ ಸಂದರ್ಭದಲ್ಲಿ ದುರ್ಘಟನೆ ಸಂಭವಿಸಿರಬಹುದು ಅಥವಾ ಯಾರೋ ದುಷ್ಕರ್ಮಿಗಳು ಕೊಲೆ ಮಾಡಿ ಮೃತದೇಹವನ್ನು ತಂದು ರೈಲ್ವೆ ಹಳಿಯ ಮೇಲೆ ಎಸೆದು ಹೋಗಿರಬಹುದು. ಎಲ್ಲಾ ಆಯಾಮದಲ್ಲಿಯೂ ತನಿಖೆ ನಡೆಸಲಾಗುತ್ತಿದೆ’ ಎಂದು ರೈಲ್ವೆ ಪೊಲೀಸರು ಹೇಳಿದರು.

‘ಕೆಲವು ಭಾಗದ ಸಿ.ಸಿ.ಟಿ.ವಿ. ಕ್ಯಾಮೆರಾಗಳ ಪರಿಶೀಲನೆ ನಡೆಸಲಾಗಿದೆ. ಆದರೆ, ಯಾವುದೇ ಸುಳಿವು ಲಭಿಸಿಲ್ಲ’ ಎಂದು ಪೊಲೀಸರು ಹೇಳಿದರು. ಸ್ಥಳಕ್ಕೆ ಯಶವಂತಪುರ ರೈಲ್ವೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಪದಾಧಿಕಾರಿಗಳ ಆಯ್ಕೆ

ಬೆಂಗಳೂರು: ಇನ್‌ಸ್ಟಿಟ್ಯೂಟ್ ಆಫ್ ಅಕೌಂಟೆಂಟ್ಸ್ ಆಫ್ ಇಂಡಿಯಾ(ಐಸಿಎಐ) ದಕ್ಷಿಣ ಭಾರತ ಪ್ರಾದೇಶಿಕ ಮಂಡಳಿಯ ಬೆಂಗಳೂರು ಶಾಖೆಗೆ 2026-27ನೇ ಸಾಲಿನ ಪದಾಧಿಕಾರಿಗಳು ಹಾಗೂ ವ್ಯವಸ್ಥಾಪನಾ ಸಮಿತಿ ಸದಸ್ಯರನ್ನು ನೇಮಕ ಮಾಡಲಾಗಿದೆ.

ಕವಿತಾ ಪರಮೇಶ್(ಅಧ್ಯಕ್ಷೆ), ತುಪ್ಪದ್ ವಿರೂಪಾಕ್ಷಪ್ಪ ಮುಪ್ಪಣ್ಣ (ಉಪಾಧ್ಯಕ್ಷ), ಶ್ರೀಪಾದ್ ನಾರಾಯಣ ಹುಲ್ಗೊಲ್ (ಕಾರ್ಯದರ್ಶಿ), ನಿಶ್ಚಲ್ ರೇಣಿಗುಂಟ್ಲ ಬದ್ರಿನಾಥ್ (ಖಜಾಂಚಿ), ಗರ್ಗ್ ವಿನೋದ್ (ಸಿಕಾಸಾ ಅಧ್ಯಕ್ಷ), ಶ್ರೀರಕ್ಷಾ ಕೆ.ಎನ್(ನಾಮನಿರ್ದೇಶಿತ ಸದಸ್ಯೆ), ಮಂಜುನಾಥ ಹಲ್ಲೂರು ಮಹಾಂತಪ್ಪ (ಪೂರ್ವಾಧ್ಯಕ್ಷ), ಚಂದ್ರ ಪ್ರಕಾಶ್ ಜೈನ್.ಟಿ.ಜಿ.ಟಿ, ರಾಘವೇಂದ್ರ ಹೆಗಡೆ (ವ್ಯವಸ್ಥಾಪನಾ ಸಮಿತಿ ಸದಸ್ಯರು).

ನಿವೃತ್ತ ನೌಕರರಿಗೆ ಸೂಚನೆ

ಬೆಂಗಳೂರು: ಬೆಂಗಳೂರು ಜಲಮಂಡಳಿ ನಿವೃತ್ತ ನೌಕರರು ಹಾಗೂ ಕುಟುಂಬ ಪಿಂಚಣಿದಾರರು ಜೀವಿತ ಪ್ರಮಾಣಪತ್ರಕ್ಕೆ ಸಹಿ ಮಾಡಲು ಅವಕಾಶ ನೀಡಲಾಗಿದೆ.

ಮಾ.5ರಿಂದ ಮಾ.20ರವರೆಗೆ ಮಂಡಳಿಯ ಕಾವೇರಿ ಭವನದಲ್ಲಿರುವ ಲೆಕ್ಕಾಧಿಕಾರಿ ಶಾಖೆಯ ಕಚೇರಿಯಲ್ಲಿ ಇದಕ್ಕೆ ಅವಕಾಶ ನೀಡಲಾಗಿದೆ ಎಂದು ಮಂಡಳಿ ನಿವೃತ್ತ ನೌಕರರ ಸಂಘದ ಪ್ರಧಾನ ಕಾರ್ಯದರ್ಶಿ ರುದ್ರೇಗೌಡ ತಿಳಿಸಿದ್ದಾರೆ. ಮಾಹಿತಿಗೆ 9845444010

ಕಿರುತೆರೆ ನಟಿ ಸೇರಿ ಮೂವರ ಸೆರೆ

ಬಾಗಲಗುಂಟೆ ಠಾಣಾ ವ್ಯಾಪ್ತಿಯ ವಿಜಯಲಕ್ಷ್ಮಿ ಬಡಾವಣೆಯಲ್ಲಿ ಕೊಲೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಬಾಗಲಗುಂಟೆ ಠಾಣಾ ವ್ಯಾಪ್ತಿಯ ವಿಜಯಲಕ್ಷ್ಮಿ ಬಡಾವಣೆಯ ಮೋಹನ್ ಕೃಷ್ಣರಾವ್(45) ಅವರ ಸಾವಿನ ಪ್ರಕರಣಕ್ಕೆ ಹೊಸ ತಿರುವು ಸಿಕ್ಕಿದ್ದು, ಪ್ರಿಯಕರನೊಂದಿಗೆ ಸೇರಿ ತನ್ನ ಮಾಜಿ ಪ್ರಿಯಕರನನ್ನು ಕಿರುತೆರೆ ನಟಿಯೊಬ್ಬರು ಕೊಲೆ ಮಾಡಿರುವುದು ಪೊಲೀಸರ ತನಿಖೆಯಲ್ಲಿ ಬಯಲಾಗಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಕಿರುತೆರೆ ನಟಿ, ಶಿವಮೊಗ್ಗದ ಬಿಂದು, ಮಂಜುನಾಥ್ ನಗರದ ನಿವಾಸಿ ವಿನಯ್ ಹಾಗೂ ಅಂದ್ರಹಳ್ಳಿಯ ಧನುಷ್ ಅವರನ್ನು ಪೊಲೀಸರು ಬಂಧಿಸಿದ್ದಾರೆ. ಬಿಂದುಅವರಹೊಸಪ್ರಿಯಕರವಿನಯ್.

ಅನುಮಾನಾಸ್ಪದ ಸಾವು ಎಂಬ ಶಂಕೆಯ ಮೇಲೆ ತನಿಖೆ ಆರಂಭವಾಗಿತ್ತು. ಈ ವೇಳೆ ಪೊಲೀಸರಿಗೆ ಮಹತ್ವದ ಸುಳಿವು ಸಿಕ್ಕಿತ್ತು. ಅದನ್ನು ಆಧರಿಸಿ ಮೂವರನ್ನೂ ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಕೊಲೆಯ ರಹಸ್ಯ ಬಯಲಾಯಿತು ಎಂದು ಮೂಲಗಳು ಹೇಳಿವೆ.

ಮೋಹನ್ ಕೃಷ್ಣ ರಾವ್ ಸಣ್ಣಪುಟ್ಟ ಫೈನಾನ್ಸ್ ವ್ಯವಹಾರ ನಡೆಸುತ್ತಿದ್ದರು. ಅವರಿಗೆ ಮದುವೆಯೂ ಆಗಿತ್ತು. ಪತ್ನಿಯಿಂದ ದೂರವಾಗಿ ಒಬ್ಬರೇ ವಾಸವಾಗಿದ್ದರು. ಈ ನಡುವೆ ಬಿಂದು ಪರಿಚಯವಾಗಿತ್ತು. ಬಿಂದು ಅವರಿಗೂ ಮದುವೆಯಾಗಿತ್ತು. ಪತಿಯನ್ನು ಬಿಟ್ಟು ಪ್ರತ್ಯೇಕವಾಗಿ ನೆಲಸಿದ್ದರು. ನಂತರದಲ್ಲಿ ಮೋಹನ್ ಕೃಷ್ಣ ರಾವ್ ಹಾಗೂ ಬಿಂದು ನಡುವೆ ಪರಿಚಯವು ಸ್ನೇಹಕ್ಕೆ ತಿರುಗಿತ್ತು. ಆ ಸ್ನೇಹ ಮುಂದುವರಿಸಿದ್ದ ಇಬ್ಬರೂ, ಬಾಗಲಗುಂಟೆ ಪೊಲೀಸ್ ಠಾಣೆ ವ್ಯಾಪ್ತಿಯ ಮಂಜುನಾಥನಗರದ ವಿಜಯಲಕ್ಷ್ಮಿ ಬಡಾವಣೆಯ ನಿವಾಸಿ ನಟರಾಜ್ ಎಂಬುವವರ ಮನೆಯನ್ನು ಬಾಡಿಗೆಗೆ ಪಡೆದು ಸಹಜೀವನ ನಡೆಸುತ್ತಿದ್ದರು ಎಂದು ಪೊಲೀಸರು ಹೇಳಿದರು.

‘ಒಂದೇ ತಿಂಗಳಿಗೆ ಮನೆ ಖಾಲಿ ಮಾಡುವುದಾಗಿ ಮೋಹನ್ ಕೃಷ್ಣ ರಾವ್ ಹಾಗೂ ಬಿಂದು ಹೇಳಿದ್ದರು. ಹೀಗಾಗಿ ಮನೆಯ ಮಾಲೀಕರು ಕರಾರುಪತ್ರ ಮಾಡಿಕೊಟ್ಟಿರಲಿಲ್ಲ’ ಎಂದು ಮೂಲಗಳು ಹೇಳಿವೆ.

‘ಮನೆ ಬಳಿ ಬಂದಾಗಲೆಲ್ಲ ಬಾಗಿಲು ಹಾಕಿರುತ್ತಿತ್ತು. ಮಾರ್ಚ್ 1ರಂದು ಮನೆಯೊಳಗಿಂದ ದುರ್ವಾಸನೆ ಬರುತ್ತಿದ್ದರಿಂದ ಪರಿಶೀಲನೆ ನಡೆಸಿದಾಗ, ಮೋಹನ್ ಕೃಷ್ಣ ಅವರ ಶವ ಕೊಳೆತ ಸ್ಥಿತಿಯಲ್ಲಿ ಪತ್ತೆಯಾಗಿತ್ತು. ತಕ್ಷಣ ಸ್ಥಳೀಯರು ಬಾಗಲಗುಂಟೆ ಠಾಣೆ ಪೊಲೀಸರಿಗೆ ಮಾಹಿತಿ ನೀಡಿದ್ದರು’ ಎಂದು ಮೂಲಗಳು ಹೇಳಿವೆ.

‘ಮೋಹನ್ ಕೃಷ್ಣ ಅವರ ಜೊತೆಯಲ್ಲಿದ್ದಾಗಲೇ ಚಾಲಕ ವಿನಯ್ ಹಾಗೂ ಬಿಂದು ಪ್ರೀತಿಸುತ್ತಿದ್ದರು. ವಿನಯ್ ಸಹ ಮದುವೆ ಆಗುವುದಾಗಿ ಭರವಸೆ ನೀಡಿದ್ದರು. ಮದುವೆಗೆ ಮೋಹನ್ ಅವರು ಅಡ್ಡಿ ಆಗುತ್ತಾರೆಂದು ಭಾವಿಸಿದ್ದ ಇಬ್ಬರೂ ಕೊಲೆಗೆ ಸಂಚು ರೂಪಿಸಿದ್ದರು’ ಎಂದು ಮೂಲಗಳು ಹೇಳಿವೆ.

‘ಫೆ.18ರಂದು ರಾತ್ರಿ ಮೋಹನ್ ಕೃಷ್ಣ, ಬಿಂದು, ಹೊಸ ಪ್ರಿಯಕರ ವಿನಯ್ ಹಾಗೂ ಧನುಷ್ ಎಲ್ಲರೂ ಸೇರಿ ಪಾರ್ಟಿ ಮಾಡಿದ್ದರು. ಈ ವೇಳೆ ಕುಡಿದ ಮತ್ತಿನಲ್ಲಿ ಗಲಾಟೆ ಆರಂಭವಾಗಿತ್ತು. ಆಗ ಅಲ್ಲೇ ಇದ್ದ ವಿನಯ್ ಕೋಪಗೊಂಡು ತನ್ನ ಬಳಿಯಿದ್ದ ಚಾಕುವಿನಿಂದ ಮೋಹನ್ ಕೃಷ್ಣಗೆ ಇರಿದಿದ್ದರು. ಆತ ಜೋರಾಗಿ ಕಿರುಚಾಡಲು ಆರಂಭಿಸಿದಾಗ ಮೂವರೂ ಆರೋಪಿಗಳು ಸೇರಿ ಮುಖಕ್ಕೆ ಮತ್ತು ಮೂಗಿಗೆ ಟೇಪ್ ಸುತ್ತಿ ಉಸಿರುಗಟ್ಟಿಸಿದ್ದರು. ಬಳಿಕ ಮನೆಯ ಬಾಗಿಲು ಹಾಕಿಕೊಂಡು ಪರಾರಿ ಆಗಿದ್ದರು’ ಎಂದು ಪೊಲೀಸರು ತಿಳಿಸಿದರು.

‘ಭಜರಂಗಿ’, ‘ಕಾಲಭೈರವ’ ಸಿನಿಮಾಗಳಲ್ಲೂ ಸಣ್ಣಪುಟ್ಟ ಪಾತ್ರಗಳಲ್ಲಿ ಬಿಂದು ಅವರು ನಟಿಸಿದ್ದರು.

ವಿವಿಧ ಸ್ಥಳದಲ್ಲಿ ಆರೋಪಿಗಳ ಸುತ್ತಾಟ

ಕೊಲೆ ಪ್ರಕರಣದಲ್ಲಿ ಪೊಲೀಸರಿಗೆ ಸಿಗಬಾರದೆಂದು ಮೂವರೂ ಆರೋಪಿಗಳು ವಿವಿಧೆಡೆ ಸುತ್ತಾಟ ನಡೆಸಿದ್ದರು. ಬಿಂದು ಹಾಗೂ ವಿನಯ್ ಒಟ್ಟಿಗೆ ಪ್ರವಾಸದ ಹೆಸರಿನಲ್ಲಿ ಕೆ.ಆರ್.ನಗರ, ಧರ್ಮಸ್ಥಳ ಸೇರಿ ವಿವಿಧ ಸ್ಥಳಗಳಿಗೆ ಹೋಗಿದ್ದರು ಎಂದು ಪೊಲೀಸರು ಹೇಳಿದರು.

‘ಮನೆಯಲ್ಲಿ ಬಿಂದು ಇರುವುದನ್ನು ಅಕ್ಕಪಕ್ಕದ ಮನೆಯವರು ಗಮನಿಸಿದ್ದರು. ಬಿಂದು ಅವರ ಮೊಬೈಲ್ ಸಂಖ್ಯೆ ಪಡೆದು ಲೊಕೇಶನ್ ಪರಿಶೀಲನೆಗೆ ಒಳಪಡಿಸಲಾಯಿತು. ಬಿಂದು ಹಾಗೂ ವಿನಯ್ ಸಂಪರ್ಕದಲ್ಲಿ ಇರುವುದು ಪತ್ತೆ ಆಯಿತು. ಬಳಿಕ ಅವರಿದ್ದ ಸ್ಥಳಕ್ಕೆ ವಿಶೇಷ ಪೊಲೀಸ್ ತಂಡ ತೆರಳಿ ಬಂಧಿಸಿತು’ ಎಂದು ಪೊಲೀಸರು ಹೇಳಿದರು.


ಮೋಹನ್ ಕೃಷ್ಣರಾವ್


ವಿನಯ್


ಬಿಂದು


ಧನುಷ್

ಅತ್ಯಾಚಾರ ಆರೋಪ: ಆಸ್ಪತ್ರೆ ನಿರ್ದೇಶಕನ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆಸ್ಪತ್ರೆಯಲ್ಲಿ ಕೆಲಸ ಮಾಡುವ ಮಹಿಳಾ ಉದ್ಯೋಗಿ ಮೇಲೆ ಅತ್ಯಾಚಾರ ಎಸಗಿದ ಆರೋಪದಡಿ ಜಯನಗರದಲ್ಲಿ ಇರುವ ಆಸ್ಪತ್ರೆಯೊಂದರ ಕಾರ್ಯಕಾರಿ ನಿರ್ದೇಶಕರ ವಿರುದ್ಧ ಸಿದ್ದಾಪುರ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಸಂತ್ರಸ್ತೆ ನೀಡಿದ ದೂರಿನ ಮೇರೆಗೆ ತ್ರಿವಿಕ್ರಂ ರಾವ್ ಅವರ ವಿರುದ್ಧ ಎಫ್‌ಐಆರ್ ದಾಖಲು ಮಾಡಿಕೊಂಡು ತನಿಖೆ ನಡೆಸಲಾಗುತ್ತಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಮೂರು ದಿನಗಳ ಹಿಂದೆ ಸಂತ್ರಸ್ತೆ ನೀಡಿದ ದೂರಿನ ಮೇಲೆ ಪ್ರಕರಣ ದಾಖಲು ಮಾಡಲಾಗಿದೆ. ದೂರು ನೀಡಿದ ಮಹಿಳೆ ಅದೇ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದರು. ಸಭೆ ಹಾಗೂ ವೃತ್ತಿ ಸಂಬಂಧ ಚರ್ಚೆ ನಡೆಸುವುದಾಗಿ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಲಾಗಿದೆ’ ಎಂದು ದೂರು ನೀಡಲಾಗಿದೆ.

‘ದೂರಿನ ಮೇರೆಗೆ ಆರೋಪಿ ವಿರುದ್ಧ ಅತ್ಯಾಚಾರ ಆರೋಪದಡಿ ಪ್ರಕರಣ ದಾಖಲು ಮಾಡಲಾಗಿದೆ. ತ್ರಿವಿಕ್ರಂ ರಾವ್ ಅವರು ತಲೆಮರೆಸಿಕೊಂಡಿದ್ದು, ಹುಡುಕಾಟ ನಡೆಸಲಾಗುತ್ತಿದೆ’ ಎಂದು ಪೊಲೀಸರು ಹೇಳಿದರು.

ಪ್ರತ್ಯೇಕ ಅಪಘಾತ: ಸಹಾಯಕ ವ್ಯವಸ್ಥಾಪಕ, ಲಾರಿ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾದನಾಯಕನಹಳ್ಳಿ ಹಾಗೂ ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಸಂಭವಿಸಿದ ಪ್ರತ್ಯೇಕ ಅಪಘಾತ ಪ್ರಕರಣಗಳಲ್ಲಿ ಖಾಸಗಿ ಕಂಪನಿಯ ಸಹಾಯಕ ವ್ಯವಸ್ಥಾಪಕ ಹಾಗೂ ಲಾರಿ ಚಾಲಕ ಮೃತಪಟ್ಟಿದ್ದಾರೆ.

ದೇವನಹಳ್ಳಿ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಬಳ್ಳಾರಿ ರಸ್ತೆಯಲ್ಲಿ ಸಂಭವಿಸಿದ ಅಪಘಾತದಲ್ಲಿ ಕಂಪನಿಯೊಂದರ ಸಹಾಯಕ ವ್ಯವಸ್ಥಾಪಕ, ಉತ್ತರ ಪ್ರದೇಶದ ಆರ್ಯನ್ ಸಿನ್ಹಾ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಆರ್ಯನ್ ಸಿನ್ಹಾ ಅವರು ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದಾಗ ಹಂಪ್ಸ್ ಗಮನಿಸದೇ ಚಲಾಯಿಸಿದ್ದರಿಂದ ನಿಯಂತ್ರಣ ತಪ್ಪಿ ಉರುಳಿ ಬಿದ್ದಿದ್ದರು. ಗಂಭೀರವಾಗಿ ಗಾಯಗೊಂಡಿದ್ದ ಅವರು ಮೃತಪಟ್ಟಿದ್ದಾರೆ ಎಂದು ಸಂಚಾರ ಪೊಲೀಸರು ಹೇಳಿದರು.

ಬಿಟಿಎಂ ಲೇಔಟ್‌ನಲ್ಲಿ ನೆಲಸಿದ್ದರು. ಮಡಿವಾಳದ ಖಾಸಗಿ ಕಂಪನಿಯೊಂದರಲ್ಲಿ ಆರ್ಯನ್ ಅವರು ಸಹಾಯಕ ವ್ಯವಸ್ಥಾಪಕರಾಗಿ ಕೆಲಸ ಮಾಡುತ್ತಿದ್ದರು. ಭಾನುವಾರ ರಾತ್ರಿ 8.30ರಲ್ಲಿ ದ್ವಿಚಕ್ರ ವಾಹನದಲ್ಲಿ ಬೆಂಗಳೂರು-ಬಳ್ಳಾರಿ ರಾಷ್ಟ್ರೀಯ ಹೆದ್ದಾರಿ ಮೂಲಕ ಚಿಕ್ಕಬಳ್ಳಾಪುರದ ಕಡೆಗೆ ತೆರಳುತ್ತಿದ್ದರು. ಕೋಟೆ ಕ್ರಾಸ್ ಬಳಿ ಅಪಘಾತ ಸಂಭವಿಸಿದೆ ಎಂದು ಸಂಚಾರ ಪೊಲೀಸರು ಹೇಳಿದರು.

ದೇವನಹಳ್ಳಿ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ತುಮಕೂರು ರಸ್ತೆಯ ಅಗರ್‌ವಾಲ್ ಹೋಟೆಲ್ ಬಳಿ ರಸ್ತೆ ದಾಟುತ್ತಿದ್ದ ವ್ಯಕ್ತಿಗೆ ಬಸ್ ಡಿಕ್ಕಿ ಹೊಡೆದ ಪರಿಣಾಮ ಅವರು ಮೃತಪಟ್ಟಿದ್ದಾರೆ. ವಿಜಯಪುರದ ಇಸ್ಮಾಯಿಲ್ (54)ಮೃತಪಟ್ಟವರು. ಅವರು ಲಾರಿ ಚಾಲಕರಾಗಿ ಕೆಲಸ ಮಾಡುತ್ತಿದ್ದರು.

ಇಸ್ಮಾಯಿಲ್ ಅವರು ಮೂರು ದಿನಗಳ ಹಿಂದಷ್ಟೇ ನಗರಕ್ಕೆ ಬಂದಿದ್ದರು. ಭಾನುವಾರ ರಾತ್ರಿ 10 ಗಂಟೆಯ ಸುಮಾರಿಗೆ ಹೆದ್ದಾರಿ ದಾಟುವಾಗ ವೇಗವಾಗಿ ಬಂದ ಬಸ್ ಡಿಕ್ಕಿ ಹೊಡೆದಿದೆ. ಡಿಕ್ಕಿಯ ರಭಸಕ್ಕೆ ಗಂಭೀರವಾಗಿ ಗಾಯಗೊಂಡಿದ್ದ ಅವರನ್ನು ಆಸ್ಪತ್ರೆಗೆ ಸೇರಿಸಲು ಕರೆದೊಯ್ಯಲಾಗುತ್ತಿತ್ತು. ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ ಎಂದು ಪೊಲೀಸರು ಹೇಳಿದರು.

ಮಾದನಾಯಕನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮುನಿರತ್ನ ಪ್ರಕರಣ: ‘ಬಿ’ ರಿಪೋರ್ಟ್ ತಿರಸ್ಕೃತ

ಪ್ರಜಾವಾಣಿ ವಾರ್ತೆ


ಮುನಿರತ್ನ

ಬೆಂಗಳೂರು: ಜೆಡಿಎಸ್ ಮುಖಂಡ ಲಗ್ಗೆರೆ ನಾರಾಯಣಸ್ವಾಮಿ ಅವರನ್ನು ಹನಿಟ್ರ್ಯಾಪ್ ಮಾಡಿಸಲು ಸಂಚು ರೂಪಿಸಿದ್ದಾರೆ ಎಂದು ಆರೋಪಿಸಿದ ಪ್ರಕರಣದಲ್ಲಿ ರಾಜರಾಜೇಶ್ವರಿ ನಗರ ಕ್ಷೇತ್ರದ ಶಾಸಕ ಮುನಿರತ್ನ ವಿರುದ್ಧದ ದೂರಿನಲ್ಲಿ ಸಾಕ್ಷಿ ಕೊರತೆ ಇದೆ ಎಂದು ಸಲ್ಲಿಸಲಾದ ‘ಬಿ’ ರಿಪೋರ್ಟ್ ಅನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತಿರಸ್ಕರಿಸಿದೆ.

ಈ ಸಂಬಂಧ ಸಿಐಡಿ ಪೊಲೀಸರು ನೀಡಿದ್ದ ‘ಬಿ’ ರಿಪೋರ್ಟ್ ಪ್ರಶ್ನಿಸಿ ಲಗ್ಗೆರೆ ನಾರಾಯಣಸ್ವಾಮಿ ಸಲ್ಲಿಸಿದ್ದ ಪ್ರತಿಭಟನಾ ಅರ್ಜಿಯನ್ನು, ‘ಶಾಸಕರು-ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ಮ್ಯಾಜಿಸ್ಟ್ರೇಟ್ ನ್ಯಾಯಾಲಯದ ನ್ಯಾಯಾಧೀಶ ಕೆ.ಎನ್.ಶಿವಕುಮಾರ್ ಪುರಸ್ಕರಿಸಿ, ಈ ಕುರಿತು ಆದೇಶಿಸಿದ್ದಾರೆ.

ವಿಚಾರಣೆ ವೇಳೆ ದೂರುದಾರರ ಪರ ಹಿರಿಯ ವಕೀಲ ಸಿ.ಎಚ್.ಹನುಮಂತರಾಯ ಅವರು, ‘ಲಗ್ಗೆರೆ ನಾರಾಯಣ ಸ್ವಾಮಿ ಮತ್ತು ಅವರ ಪತ್ನಿಯ ಖಾಸಗಿ ಕ್ಷಣಗಳ ವಿಡಿಯೊ ಚಿತ್ರೀಕರಿಸಿ ನನಗೆ ನೀಡಬೇಕು ಅದಕ್ಕೆ ₹50 ಲಕ್ಷ ನೀಡುತ್ತೇನೆ ಎಂದು ಮುನಿರತ್ನ, ಪವರ್ ಟಿ.ವಿ ನಿರ್ದೇಶಕ ಹಾಗೂ ವರದಿಗಾರನಿಗೆ ಸೂಚಿಸಿದ್ದರು. ಈ ಕುರಿತಾದ ಮಾತುಕತೆಯ ಸಂಭಾಷಣೆಯನ್ನು ಸಂಗ್ರಹಿಸಿ ಸಾಕ್ಷಿ ನೀಡಲಾಗಿದೆ’ ಎಂದು ನ್ಯಾಯಾಲಯಕ್ಕೆ ವಿವರಿಸಿದ್ದರು.

ಆದರೆ, ‘ಪೊಲೀಸರು ದೋಷಾರೋಪ ಪಟ್ಟಿ ಸಲ್ಲಿಸುವ ಬದಲಿಗೆ ಬಿ ರಿಪೋರ್ಟ್ ಸಲ್ಲಿಸಿದ್ದಾರೆ. ಸಾಕ್ಷಿಗಳ ಹೇಳಿಕೆ ನಂಬಲು ಅರ್ಹವಿಲ್ಲ ಎಂದು ಹೇಳಿರುವುದು ಪೊಲೀಸರ ವ್ಯಾಪ್ತಿ ಮೀರಿದ ದೋಷಪೂರಿತ ಅಭಿಪ್ರಾಯ. ಹಾಗಾಗಿ, ಬಿ ರಿಪೋರ್ಟ್ ತಿರಸ್ಕರಿಸಬೇಕು’ ಎಂದು ಮನವಿ ಮಾಡಿದ್ದರು.

ಈ ವಾದಾಂಶ ಮನ್ನಿಸಿರುವ ನ್ಯಾಯಾಧೀಶರು, ‘ಪ್ರಕರಣಕ್ಕೆ ಸಂಬಂಧಿಸಿದಂತೆ ಮುಂದುವರಿದ ತನಿಖೆ ಕೈಗೊಳ್ಳಬೇಕು’ ಎಂದು ಎಸ್‌ಐಟಿಗೆ ನಿರ್ದೇಶಿಸಿ ವಿಚಾರಣೆಯನ್ನು ಇದೇ 30ಕ್ಕೆ ಮುಂದೂಡಿದ್ದಾರೆ.

ಪ್ರಕರಣವೇನು?: ಮುನಿರತ್ನ ಅವರು ತಮ್ಮ ವಿರುದ್ಧ ಹನಿಟ್ರ್ಯಾಪ್ ನಡೆಸಲು ಸಂಚು ರೂಪಿಸಿದ್ದಾರೆ ಎಂದು ಆರೋಪಿಸಿದ್ದ ನಾರಾಯಣಸ್ವಾಮಿ ನಂದಿನಿ ಲೇಔಟ್ ಠಾಣೆಗೆ ದೂರು ನೀಡಿದ್ದರು.

‘ನನ್ನ ಮತ್ತು ನನ್ನ ಪತ್ನಿ ಮಂಜುಳಾ ಎನ್. ಸ್ವಾಮಿಯ (ಬಿಬಿಎಂಪಿ ಮಾಜಿ ಸದಸ್ಯೆ) ರಾಜಕೀಯ ತೇಜೋವಧೆಗೆ ಸಂಚು ರೂಪಿಸಿದ್ದಲ್ಲದೇ, ನನ್ನ ಪತ್ನಿಯ ಕೊಲೆಗೆ ಸುಪಾರಿ ನೀಡಿದ್ದಾರೆ’ ಎಂದು ಆರೋಪಿಸಿದ್ದರು.

ದೂರು ಆಧರಿಸಿ, ನಂದಿನಿ ಲೇ ಔಟ್ ಠಾಣೆಯ ಪೊಲೀಸರು ಭಾರತೀಯ ದಂಡ ಸಂಹಿತೆಯ ವಿವಿಧ ಕಲಂಗಳಡಿ ಎಫ್‌ಐಆರ್ ದಾಖಲಿಸಿದ್ದರು. ತನಿಖಾಧಿಕಾರಿಗಳು ನ್ಯಾಯಾಲಯಕ್ಕೆ ಬಿ ರಿಪೋರ್ಟ್ ಸಲ್ಲಿಸಿದ್ದರು.

ವಕೀಲರಿಂದ ₹70 ಲಕ್ಷ ದೋಚಿದ ವಂಚಕರು

ಬೆಂಗಳೂರು: ಹೂಡಿಕೆಯ ಹಣಕ್ಕೆ ಹೆಚ್ಚಿನ ಲಾಭ ನೀಡಲಾಗುವುದು ಎಂದು ಸೈಬರ್ ವಂಚಕರು ಆಮಿಷವೊಡ್ಡಿ ವಕೀಲರೊಬ್ಬರಿಂದ ₹70 ಲಕ್ಷ ದೋಚಿದ್ದಾರೆ. ಈ ಸಂಬಂಧ ಪಶ್ಚಿಮ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ವಿಜಯನಗರದ 43 ವರ್ಷದ ನಿವಾಸಿ, ವಕೀಲ ಹಣ ಕಳೆದುಕೊಂಡಿದ್ದಾರೆ. ಅವರು ನೀಡಿದ ದೂರು ಆಧರಿಸಿ ಮಾಹಿತಿ ತಂತ್ರಜ್ಞಾನ ಕಾಯ್ದೆಯ ಸೆಕ್ಷನ್ 66(ಡಿ) ಹಾಗೂ ಭಾರತೀಯ ನ್ಯಾಯ ಸಂಹಿತೆ (ಬಿಎನ್‌ಎಸ್) ಸೆಕ್ಷನ್ 318(4) ಹಾಗೂ 319(2) ಅಡಿ ಪ್ರಕರಣ ದಾಖಲಿಸಿಕೊಂಡು ಸೈಬರ್ ವಂಚಕರ ಪತ್ತೆಗೆ ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಅಪರಿಚಿತ ಮೊಬೈಲ್ ಸಂಖ್ಯೆಯಿಂದ ವಕೀಲರ ವಾಟ್ಸ್‌ಆ್ಯಪ್ ಸಂಖ್ಯೆಗೆ ಹೂಡಿಕೆ ಸಂಬಂಧ ಸಂದೇಶವೊಂದು ಬಂದಿತ್ತು. ಅದಾದ ಕೆಲವೇ ಕ್ಷಣಗಳಲ್ಲಿ ಕರೆ ಮಾಡಿದ್ದ ವಂಚಕರು, ವಕೀಲರ ಜತೆಗೆ ಚರ್ಚಿಸಿದ್ದರು. ಬಳಿಕ ಎಸ್‌ಬಿಐ ಸೆಕ್ಯೂರಿಟಿಸ್ ಡಿಸ್ಕಷನ್ ಎನ್ನುವ ಗ್ರೂಪ್‌ಗೆ ಸೇರಿಸಿದ್ದರು. ಆ ಗ್ರೂಪ್‌ನಲ್ಲಿದ್ದ ಮಥೈ ಕುಂಜುಮೊನ್, ಸೋನಾಲ್ ಭಗತ್, ಕೀರ್ತನಾ, ಅರವಿಂದ್, ಮಣಿಕ್‌ಪ್ರಭಾ ಅವರು ಎಸ್‌ಬಿಐ ಸೆಕ್ಯೂರಿಟಿಸ್ ಬಗ್ಗೆ ಮಾಹಿತಿ ತಿಳಿಸಿದ್ದರು. ಸ್ಕ್ರೀನ್‌ಶಾಟ್ ಹಾಕಿ ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ಮಾಡಿದರೆ, ತಿಂಗಳಿಗೆ ಶೇ 200ರಷ್ಟು ಲಾಭ ಪಡೆಯಬಹುದು ಎಂದು ನಂಬಿಸಿದ್ದರು. ಬಳಿಕ ಲಿಂಕ್ ಕಳುಹಿಸಿ ಎಸ್‌ಬಿಐ ಸೆಕ್ಯೂರಿಟಿಸ್ ಎನ್ನುವ ಆ್ಯಪ್ ಇನ್‌ಸ್ಟಾಲ್ ಮಾಡಿಸಿದ್ದರು. ಅವರ ಮಾತು ನಂಬಿದ್ದ ವಕೀಲರು, ಆರಂಭದಲ್ಲಿ ₹10 ಸಾವಿರ ಹೂಡಿಕೆ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ವಕೀಲರು ತಮ್ಮ ಏಳು ಬ್ಯಾಂಕ್ ಖಾತೆಗಳಿಂದ ಸೈಬರ್ ವಂಚಕರು ನೀಡಿದ ಬೇರೆ ಬೇರೆ ಬ್ಯಾಂಕ್‌ನ 18 ಖಾತೆಗಳಿಗೆ 2025ರ ನವೆಂಬರ್ 24ರಿಂದ 2025ರ ಡಿಸೆಂಬರ್ 29ರ ವರೆಗೆ ಹಂತಹಂತವಾಗಿ ₹77.82 ಲಕ್ಷ ವರ್ಗಾವಣೆ ಮಾಡಿದ್ದರು. ಅದಾದ ಮೇಲೆ ಹೂಡಿಕೆ ಮಾಡಿದ ಹಣ ಹಾಗೂ ಲಾಭಾಂಶವನ್ನು ಮೋಸ ಮಾಡಲಾಗಿದೆ’ ಎಂದು ಪೊಲೀಸರು ಹೇಳಿದರು.

ಇರಾನ್ ಮೇಲಿನ ದಾಳಿಗೆ ಎಡಪಕ್ಷಗಳ ಖಂಡನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಮೆರಿಕ ಮತ್ತು ಇಸ್ರೇಲ್ ಜಂಟಿಯಾಗಿ ಇರಾನ್ ಮೇಲೆ ನಡೆಸುತ್ತಿರುವ ದಾಳಿಯನ್ನು ಖಂಡಿಸಿರುವ ವಿವಿಧ ಎಡಪಕ್ಷಗಳು, ಇದು ಅಮೆರಿಕದ ಸಾಮ್ರಾಜ್ಯಶಾಹಿ, ದುರಹಂಕಾರದ ಪರಾಕಾಷ್ಠೆ ಎಂದು ಟೀಕಿಸಿವೆ.

ದಾಳಿ ನಡೆಸಿ ಖಮೇನಿ ಅವರನ್ನು ಹತ್ಯೆ ಮಾಡಿರುವುದು, ಆಸ್ಪತ್ರೆಗಳ ಮೇಲೆ ಬಾಂಬ್ ದಾಳಿ ನಡೆಸುತ್ತಿರುವುದು, ಶಾಲೆಗಳ ಮೇಲೆ ಬಾಂಬ್‌ಗಳನ್ನು ಹಾಕಿ ಮಕ್ಕಳನ್ನು ಕೊಲ್ಲುತ್ತಿರುವುದು ಅಮಾನವೀಯ. ಇರಾನ್ ದೇಶದ ಸಾರ್ವಭೌಮತ್ವ, ವಿಶ್ವಸಂಸ್ಥೆಯ ನಿಯಮಗಳು ಮತ್ತು ಎಲ್ಲ ಅಂತರ ರಾಷ್ಟ್ರೀಯ ಒಪ್ಪಂದಗಳ ಘೋರ ಉಲ್ಲಂಘನೆಯಾಗಿದೆ ಎಂದು ಸಿಪಿಎಂ ಕಾರ್ಯದರ್ಶಿ ಪ್ರಕಾಶ್ ಕೆ., ಸಿಪಿಐ ಕಾರ್ಯದರ್ಶಿ ಸಾತಿ ಸುಂದರೇಶ್, ಸಿಪಿಐ (ಎಂಎಲ್) ಕಾರ್ಯದರ್ಶಿ ಕ್ಲಿಫ್ಟನ್ ರೊಜಾರಿಯೋ, ಎಸ್‌ಯುಸಿಐ (ಸಿ) ಕಾರ್ಯದರ್ಶಿ ಉಮಾ ಕೆ., ಎಐಎಫ್‌ಬಿ ಕಾರ್ಯದರ್ಶಿ ಜಿ.ಆರ್. ಶಿವಶಂಕರ್ ಆಗ್ರಹಿಸಿದ್ದಾರೆ.

ಇರಾನ್ ಮೇಲಿನ ದಾಳಿಯ ನಿಜವಾದ ಗುರಿ ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ಸ್ವಾಧೀನಪಡಿಸಿಕೊಳ್ಳುವುದಾಗಿದೆ ಎಂದು ತಿಳಿಸಿದ್ದಾರೆ.

ಮಾನವ ಹತ್ಯಾಕಾಂಡ ನಡೆಸುತ್ತಿರುವ ಇಸ್ರೇಲ್‌ಗೆ ಪ್ರಧಾನಿ ನರೇಂದ್ರ ಮೋದಿ ಇತ್ತೀಚೆಗೆ ಭೇಟಿ ನೀಡಿ ಬೆಂಬಲ ಘೋಷಿಸಿದ್ದಾರೆ. ಈ ಪ್ರವಾಸ ಮುಗಿದ ಎರಡು ದಿನಗಳಲ್ಲೇ ಈ ದಾಳಿ ನಡೆದಿದೆ. ಇರಾನ್ ಮೇಲೆ ನಡೆದ ದಾಳಿಯನ್ನು ಭಾರತ ತೀವ್ರವಾಗಿ ಖಂಡಿಸಬೇಕು. ಇಸ್ರೇಲ್ ಮತ್ತು ಅಮೆರಿಕ ಕುರಿತು ತನ್ನ ನಿಲುವನ್ನು ಬದಲಾಯಿಸಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

‘ಜಾಗೃತ ನಾಗರಿಕರು-ಕರ್ನಾಟಕ’ ಟೀಕೆ

ಅಮೆರಿಕ ಮತ್ತು ಇಸ್ರೇಲ್ ಏಕಪಕ್ಷೀಯವಾಗಿ ಇರಾನ್ ಮೇಲೆ ನಡೆಸಿರುವ ಬಾಂಬ್ ಮತ್ತು ಕ್ಷಿಪಣಿ ದಾಳಿಯನ್ನು ‘ಜಾಗೃತ ನಾಗರಿಕರು-ಕರ್ನಾಟಕ’ ಖಂಡಿಸಿದೆ.

ಇರಾನ್‌ನ ಸಾರ್ವಭೌಮತ್ವ ಮತ್ತು ಸ್ವಾತಂತ್ರ್ಯದ ಮೇಲೆ ನಡೆದ ದಾಳಿ ಇದು ಎಂದು ‘ಜಾಗೃತ ನಾಗರಿಕರು ಕರ್ನಾಟಕ’ದ ಕೆ.ಮರುಳ ಸಿದ್ದಪ್ಪ, ಜಿ. ರಾಮಕೃಷ್ಣ, ವಿಜಯಾ, ಎಸ್.ಜಿ. ಸಿದ್ದರಾಮಯ್ಯ, ವಿಮಲಾ ಕೆ.ಎಸ್., ಬಿ. ಶ್ರೀಪಾದ ಭಟ್, ಬಂಜಗೆರೆ ಜಯಪ್ರಕಾಶ್, ಟಿ. ಸುರೇಂದ್ರ ರಾವ್, ವಸುಂಧರಾ ಭೂಪತಿ, ಎನ್. ಗಾಯತ್ರಿ, ಮಾವಳ್ಳಿ ಶಂಕರ್, ಜಾಣಗೆರೆ ವೆಂಕಟರಾಮಯ್ಯ, ರುದ್ರಪ್ಪ ಹನಗವಾಡಿ, ಮೀನಾಕ್ಷಿ ಬಾಳಿ, ಇಂದಿರಾ ಕೃಷ್ಣಪ್ಪ, ವಾಸುದೇವ ಉಚ್ಚಿಲ, ಎನ್.ಕೆ. ವಸಂತರಾಜ್, ಬಿ.ಆರ್. ಮಂಜುನಾಥ್, ಎಚ್.ಜಿ. ಜಯಲಕ್ಷ್ಮಿ ಟೀಕಿಸಿದ್ದಾರೆ.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ಇಸ್ರೇಲ್ ಪ್ರಧಾನಿ ನೆತನ್ಯಾಹು ಹೇಳಿಕೆ ಅನಾಗರಿಕತೆ ಮತ್ತು ಸಾಮ್ರಾಜ್ಯಶಾಹಿ ಧೋರಣೆಯ ಪ್ರತೀಕ. ಅಮೆರಿಕ ಮತ್ತು ಇರಾನ್ ಮಧ್ಯೆ ಶಾಂತಿ ಮಾತುಕತೆ ನಡೆಯುತ್ತಿರುವಾಗ ನಡೆಸಿದ ಇವರಿಬ್ಬರ ಈ ಪುಂಡಾಟಿಕೆ ಜಾಗತಿಕವಾಗಿ ತೀವ್ರವಾದ ಸಂಘರ್ಷ ಸೃಷ್ಟಿಸಿದೆ ಎಂದು ಹೇಳಿದ್ದಾರೆ.

ಇರಾನ್ ಮೇಲಿನ ದಾಳಿಯನ್ನು ಖಂಡಿಸಬೇಕು ಮತ್ತು ಯುದ್ಧವನ್ನು ತಕ್ಷಣವೇ ನಿಲ್ಲಿಸಬೇಕೆಂದು ಭಾರತ ಸರ್ಕಾರ ಆಗ್ರಹಿಸಬೇಕು ಎಂದು ಕೋರಿದ್ದಾರೆ.

ಬೆಂಗಳೂರಿಗೆ ವಾಪಸಾದ ಶಾಸಕ ಶ್ರೀನಿವಾಸ್

ಬೆಂಗಳೂರು: ದುಬೈನಲ್ಲಿ ಸಿಲುಕಿದ್ದ ಪುಲಕೇಶಿ ನಗರ ಶಾಸಕ ಎ.ಸಿ.ಶ್ರೀನಿವಾಸ್ ಅವರು ಸೋಮವಾರ ಒಮಾನ್ ಮೂಲಕ ಬೆಂಗಳೂರಿಗೆ ವಾಪಸಾಗಿದ್ದಾರೆ.

ದುಬೈನಿಂದ ಮಸ್ಕತ್‌ಗೆ ಕಾರಿನಲ್ಲಿ ಆರು ಗಂಟೆ ಪ್ರಯಾಣ ಮಾಡಿ ಅಲ್ಲಿಂದ ವಿಮಾನದಲ್ಲಿ ಬೆಂಗಳೂರಿಗೆ ಬಂದಿದ್ದಾರೆ. ಶ್ರೀನಿವಾಸ್ ಅವರು ದುಬೈಗೆ ಹೋಗಿದ್ದರು. ವಿಮಾನಗಳ ಸಂಚಾರ ರದ್ದಾದ ಕಾರಣ ಅಲ್ಲಿಯೇ ಇದ್ದರು.

ಬಿಜೆಪಿಗೆ ನೇಮಕ

ಬೆಂಗಳೂರು: ಬೆಂಗಳೂರು ದಕ್ಷಿಣ ಜಿಲ್ಲಾ ಬಿಜೆಪಿ ಎಸ್ಸಿ ಮೋರ್ಚಾ ಅಧ್ಯಕ್ಷರನ್ನಾಗಿ ಗುರುಪ್ರಸಾದ್ ಮುನಿಕೃಷ್ಣ ಅವರನ್ನು ನೇಮಕ ಮಾಡಲಾಗಿದೆ ಎಂದು ಅಧ್ಯಕ್ಷ ಸಿ.ಕೆ. ರಾಮಮೂರ್ತಿ ತಿಳಿಸಿದ್ದಾರೆ.


ಗುರುಪ್ರಸಾದ್ ಮುನಿಕೃಷ್ಣ

ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ಸೌಮ್ಯ ತಿಪ್ಪೇಸ್ವಾಮಿ, ಹಿಂದುಳಿದ ವರ್ಗಗಳ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ಪಿ.ರಾಜು(ದಿನ್ನೂರು), ಸಿ.ಎನ್.ಚಂದ್ರಶೇಖರ್, ರೈತ ಮೋರ್ಚಾ ಪ್ರಧಾನ ಕಾರ್ಯದರ್ಶಿಯಾಗಿ ವೆಂಕಟೇಶರೆಡ್ಡಿ, ಕೆ.ರವಿ ಅವರನ್ನು ನೇಮಕ ಮಾಡಲಾಗಿದೆ.

‘ಹೆಚ್ಚಿನ ಅನುದಾನಕ್ಕೆ ಮನವಿ’

ಪ್ರಜಾವಾಣಿ ವಾರ್ತೆ

ನೆಲಮಂಗಲ: ವೀರಶೈವ ಅಭಿವೃದ್ಧಿ ನಿಗಮಕ್ಕೆ ಈಗಾಗಲೇ ₹720 ಕೋಟಿ ಒದಗಿಸಿದ್ದು, ಇನ್ನೂ ಹೆಚ್ಚಿನ ಅನುದಾನಕ್ಕೆ ಮುಖ್ಯಮಂತ್ರಿಯವರಲ್ಲಿ ಮನವಿ ಮಾಡಲಾಗುವುದು ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದರು.

ಬಸವೇಶ್ವರ ಯುವಕ ಸಮಿತಿ ಹಮ್ಮಿಕೊಂಡಿದ್ದ ರೇಣುಕಾಚಾರ್ಯರ ಜಯಂತ್ಯುತ್ಸವ ಹಾಗೂ ಪಂಚಾಚಾರ್ಯರ ಯುಗಮಾನೋತ್ಸವದಲ್ಲಿ ಅವರು ಮಾತನಾಡಿದರು.

‘ಬೆಂಗಳೂರಿನಲ್ಲಿ ಮಹಿಳಾ ವಿದ್ಯಾರ್ಥಿನಿಲಯವನ್ನು ಎರಡು ವರ್ಷದ ಒಳಗಾಗಿ ನಿರ್ಮಿಸಲಾಗುವುದು. ರೇಣುಕಾಚಾರ್ಯರು ಮಾನವ ಧರ್ಮಕ್ಕೆ ಜಯವಾಗಲಿ ಎಂದರೆ ಬಸವಾದಿ ಪ್ರಮಥರು ವಚನ ಕ್ರಾಂತಿಯ ಮೂಲಕ ಸಕಲ ಜೀವಾತ್ಮರಿಗೆ ಲೇಸನ್ನೇ ಬಯಸಿದರು. ಇಂತಹ ಸಮಾಜ ಕವಲು ದಾರಿಯಲ್ಲಿದೆ. ಯಾವುದೇ ಶಕ್ತಿ ವೀರಶೈವ ಲಿಂಗಾಯತರನ್ನು ವಿಘಟಿಸಲು ಸಾಧ್ಯವಿಲ್ಲ, ಸಂಘಟನೆಯಲ್ಲಿ ಬಲವಿದೆ’ ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷರೂ ಆಗಿರುವ ಈಶ್ವರ ಖಂಡ್ರೆ ಹೇಳಿದರು.


ಶಾಸಕ ಎನ್.ಶ್ರೀನಿವಾಸ್ ಮಾತನಾಡಿ, ‘ನೆಲಮಂಗಲದಲ್ಲಿ ಒಟ್ಟು ಎಂಟು ಲಿಂಗಾಯತ ಮಠಗಳಿದ್ದು, ಬಸವಣ್ಣ ದೇವರ ಮಠ ಹಾಗೂ ಹೊನ್ನಮ್ಮಗವಿ ಮಠಕ್ಕೆ ತಲಾ ₹1.5 ಕೋಟಿ, ಮೇಲಣಗವಿ ಮಠಕ್ಕೆ ₹50 ಲಕ್ಷ ಸೇರಿದಂತೆ ಎಲ್ಲ ಮಠಗಳಿಗೆ ಶಾಸಕರ ಅನುದಾನದಲ್ಲಿ ಮೂಲಸೌಕರ್ಯಗಳನ್ನು ಒದಗಿಸಿದ್ದೇನೆ’ ಎಂದರು.

ಉಜ್ಜಯಿನಿ ಸಿದ್ದಲಿಂಗ ಶಿವಾಚಾರ್ಯ ಭಗವತ್ಪಾದರು ಆಶೀರ್ವಚನ ನೀಡಿ, ಇಷ್ಟಲಿಂಗ ದೀಕ್ಷೆಯ ಸಂಸ್ಕಾರ ಆದ ನಂತರ ಒಳಪಂಗಡಗಳನ್ನು ಮರೆತು ಸಮಷ್ಟಿ ಪ್ರಜ್ಞೆ ಮೆರೆಯಬೇಕು ಎಂದರು.

ನೊಣವಿನಕೆರೆ ಕಾಡಸಿದ್ದೇಶ್ವರ ಮಠದ ಕರಿವೃಷಭ ಶ್ರೀಗಳು, ಮೇಲಣಗವಿ, ಮಹಂತಿನ ಮಠ, ಮಾಗಡಿ ಜಡೆದೇವರ ಮಠದ ಶ್ರೀಗಳು ಆಶೀರ್ವದಿಸಿದರು.

ಉಜ್ಜಯಿನಿ ಶ್ರೀಗಳ ಅಡ್ಡ ಪಲ್ಲಕ್ಕಿ ಉತ್ಸವ, ಮಹಾಶಿವಪೂಜೆ, ವೀರಗಾಸೆ ನಂದಿಧ್ವಜ ಮಂಗಳವಾದ್ಯಗಳ ಸಮೇತ ರೇಣುಕಾಚಾರ್ಯರ ಮಂಗಳ ಮೂರ್ತಿ ಮೆರವಣಿಗೆ, ಸಾರೋಟು ಉತ್ಸವ, ಧರ್ಮಜಾಗೃತಿ ಉತ್ಸವಗಳು ನಡೆದವು.

ಬಸವೇಶ್ವರ ಯುವಕ ಸಮಿತಿಯ ಅಧ್ಯಕ್ಷ ಎನ್.ಎಸ್.ಗಣೇಶ್, ಪದಾಧಿಕಾರಿಗಳಾದ ಪೈಲ್ವಾನ್ ಚನ್ನಬಸವರಾಜು, ಎನ್.ಜಿ. ರುದ್ರಮೂರ್ತಿ, ಎನ್.ಎಸ್.ನಟರಾಜು, ಎನ್.ಬಿ.ದಯಾಶಂಕರ್, ಎನ್.ಆರ್. ಜಗದೀಶ್, ಎನ್.ಜಿ.ಶಿವಶಂಕರ್, ಎನ್.ಪಿ.ಸಂಜಯ್, ಎಸ್.ಎನ್.ಕಾರ್ತಿಕ್, ಎನ್.ಎಂ.ಮಹೇಶ್, ಎನ್.ಎಸ್. ಚಂದ್ರಶೇಖರ್, ಎನ್.ಜೆ.ದೀಪಕ್ ಉಸ್ತುವಾರಿ ವಹಿಸಿದ್ದರು.


ರೇಣುಕಾಚಾರ್ಯರ ಜಯಂತ್ಯುತ್ಸವದಲ್ಲಿ ರೇಣುಕಾಚಾರ್ಯರ ಭಾವಚಿತ್ರ ಅನಾವರಣಗೊಳಿಸಲಾಯಿತು. ಉಜ್ಜಯಿನಿ ಸಿದ್ದಲಿಂಗ ಭಗವತ್ಪಾದರು, ಎನ್.ಎಸ್.ಗಣೇಶ್, ಚನ್ನಬಸವರಾಜು, ಕೆ.ಪಿ.ಬೃಂಗೇಶ್, ಎನ್.ಎಸ್.ನಟರಾಜು, ಎನ್.ಆರ್.ಜಗದೀಶ್, ಎನ್.ಎಸ್.ಚಂದ್ರಶೇಖರ್, ಎನ್.ಬಿ.ದಯಾಶಂಕರ್ ಉಪಸ್ಥಿತರಿದ್ದರು

ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ

‘ದಲಿತ, ಹಿಂದುಳಿದ ಮಠಗಳಿಗೆ ಒಂದೆಡೆ ಭೂಮಿ’

ಪ್ರಜಾವಾಣಿ ವಾರ್ತೆಪ್ರಜಾವಾಣಿ ವಾರ್ತೆ


ಯಲಹಂಕ: ‘ಧರ್ಮ ಸಂರಕ್ಷಣೆ ಮತ್ತು ಸಾಮಾಜಿಕ ಪ್ರಗತಿಗಾಗಿ ರಾಜ್ಯದ 22 ದಲಿತ ಹಾಗೂ ಹಿಂದುಳಿದ ಮಠಗಳಿಗೆ ಒಂದೇ ಕಡೆ ಭೂಮಿ ನೀಡಿರುವುದು ರಾಜ್ಯದಲ್ಲೇ ಪ್ರಥಮ. ಇದಕ್ಕೆ ಸಹಕರಿಸಿರುವ ಶಾಸಕ ವಿಶ್ವನಾಥ್ ಅವರಿಗೆ ದೇವರು ಅಧಿಕಾರ ಪ್ರಾಪ್ತಿಯ ಸೌಭಾಗ್ಯ ನೀಡಲಿ’ ಎಂದು ಚಿತ್ರದುರ್ಗದ ಮಾದಾರ ಚನ್ನಯ್ಯ ಗುರುಪೀಠದ ಮಾದಾರ ಚೆನ್ನಯ್ಯ ಸ್ವಾಮೀಜಿ ಹಾರೈಸಿದರು.

ಕ್ಷೇತ್ರದ ದಾಸನಪುರ ಹೋಬಳಿಯ ರಾವುತ್ತನಹಳ್ಳಿ ಗ್ರಾಮದಲ್ಲಿ ಹಿಂದುಳಿದ ಹಾಗೂ ದಲಿತ ಸಮುದಾಯಗಳ 22 ಮಠಗಳಿಗೆ ಭೂಮಿ ನೀಡಿರುವ ಕಾರಣಕ್ಕೆ ಮಠಾಧೀಶರು ಎಸ್. ಆರ್.ವಿಶ್ವನಾಥ್ ಅವರ ನಿವಾಸಕ್ಕೆ ಸೋಮವಾರ ಭೇಟಿನೀಡಿ, ಅವರ ಕುಟುಂಬ ವರ್ಗದವರನ್ನು ಆಶೀರ್ವದಿಸಿದರು.

‘ಹಿಂದುಳಿದ ಹಾಗೂ ದಲಿತ ಸಮುದಾಯಗಳ 22 ಮಠಾಧೀಶರಿಗೆ ಯಲಹಂಕ ಕ್ಷೇತ್ರದಲ್ಲಿ ಒಂದೇ ಕಡೆಯಲ್ಲಿ ಜಾಗ ನೀಡಿರುವುದು ಸಂತೋಷ ತಂದಿದೆ. ಮಠಮಾನ್ಯಗಳ ಸೇವೆಯಿಂದ ರಾಜ್ಯದಲ್ಲಿ ಶೈಕ್ಷಣಿಕ, ಸಾಮಾಜಿಕ ಹಾಗೂ ದಾಸೋಹದಂತಹ ಕಾರ್ಯಕ್ರಮಗಳು ನಡೆಯುತ್ತಿವೆ. ವಿಶೇಷವಾಗಿ ಶಿಕ್ಷಣ ಕ್ಷೇತ್ರದ ಬೆಳವಣಿಗೆಯಲ್ಲಿ ಮಠಗಳ ಪಾತ್ರ ಪ್ರಸಂಶಾರ್ಹ’ ಎಂದು ವಿಶ್ವನಾಥ್ ಹೇಳಿದರು.

ಭೋವಿ ಗುರುಪೀಠದ ಸಿದ್ದರಾಮೇಶ್ವರ ಸ್ವಾಮೀಜಿ ಮಾತನಾಡಿ, ‘ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ, ಹಿಂದುಳಿದ-ದಲಿತ ಮಠಾಧಿಪತಿಗಳ ಒಕ್ಕೂಟಕ್ಕೆ ಭೂದಾನ ಮಾಡಿದೆ. ಈ ಕಾರ್ಯಕ್ಕೆ ಪ್ರೇರಣೆಯಾಗಿ ನಿಂತು, ಕ್ಷೇತ್ರದ ಮುಖಂಡರೊಂದಿಗೆ ಚರ್ಚಿಸಿ, ವಿವಾದರಹಿತ ಭೂಮಿಯನ್ನು ಹುಡುಕಿ ಮಠಗಳಿಗೆ ನೀಡುವಲ್ಲಿ ಶ್ರಮಿಸಿದ ಶಾಸಕರ ಕಾಳಜಿ ಶ್ಲಾಘನೀಯ’ ಎಂದು ಹೇಳಿದರು.

ಸಿಂಗನಾಯಕನಹಳ್ಳಿ ಆರ್.ಎಸ್. ಎಸ್.ಎನ್ ಬ್ಯಾಂಕಿನ ಅಧ್ಯಕ್ಷೆ ವಾಣಿಶ್ರೀ ವಿಶ್ವನಾಥ್, ವಿಶ್ವವಾಣಿ ಫೌಂಡೇಶನ್ ನಿರ್ದೇಶಕ ಅಲೋಕ್ ವಿಶ್ವನಾಥ್, ಪಲ್ಲವಿ ಅಲೋಕ್ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ವಿವಿಧ ಸಮುದಾಯಗಳ ನಾಯಕರು ಉಪಸ್ಥಿತರಿದ್ದರು.


ವಿವಿಧ ಮಠಾಧೀಶರು ಎಸ್.ಆರ್.ವಿಶ್ವನಾಥ್ ಅವರ ಕುಟುಂಬವರ್ಗದವರನ್ನು ಆಶೀರ್ವದಿಸಿದರು

ಮಾಲ್ ಅನುಭವ ನೀಡುವ ನಂದಿನಿ ಶಾಪಿ

ನಗರದಲ್ಲಿ ಜಾಗ ನೀಡುವಂತೆ ಬಿಡಿಎ, ಜಿಬಿಎಗೆ ಕೆಎಂಎಫ್ ಮನವಿ

● ಹೊಸ ರೂಪ, ವಿಸ್ತರಣೆಗೆ ಒತ್ತು

● ಉಮೇಶ ಭಟ್ಟ ಪಿ.ಎಚ್.

ಬ್ರ್ಯಾಂಡ್ ಬೆಂಗಳೂರು

ಬೆಂಗಳೂರು: ಕರ್ನಾಟಕ ಹಾಲು ಮಹಾಮಂಡಳವು ನಂದಿನಿ ಉತ್ಪನ್ನಗಳನ್ನು ಜನರಿಗೆ ತಲುಪಿಸಿ, ಇನ್ನಷ್ಟು ಹತ್ತಿರವಾಗಲು ಹೊಸ ಮಾರ್ಗಗಳನ್ನು ಕಂಡುಕೊಳ್ಳುತ್ತಿದೆ. ಅದರಲ್ಲೂ ಬೆಂಗಳೂರು ನಗರದಲ್ಲಿ ವಹಿವಾಟು ವಿಸ್ತರಣೆಗೆ ನಂದಿನಿ ಶಾಪಿಗಳನ್ನು ಹೆಚ್ಚಿಸುತ್ತಿದೆ.

ಈಗಾಗಲೇ ಮದರ್‌ಡೇರಿ ಆರಂಭಿಸಿದ್ದ ಶಾಪಿಗಳಿಗೆ ಕೆಎಂಎಫ್ ಹೊಸ ರೂಪ ನೀಡಿ ಗ್ರಾಹಕಸ್ನೇಹಿಯಾಗಿಸುವ ಜತೆಗೆ ಹೊಸದಾಗಿ ಶಾಪಿಗಳನ್ನು ತೆರೆಯಲು ಜಾಗಗಳನ್ನು ಗುರುತಿಸುತ್ತಿದೆ.

‘ಗೋವಿನಿಂದ ಗ್ರಾಹಕರವರೆಗೆ’ ಎನ್ನುವ ಘೋಷವಾಕ್ಯ, ಸಹಕಾರ ತತ್ವದಡಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ಹಾಲು ಮಹಾಮಂಡಳ (ಕೆಎಂಎಫ್) ಬಗೆಬಗೆಯ ಉತ್ಪನ್ನಗಳು ಜನರಿಗೆ ಲಭ್ಯವಾಗುವಂತೆ ನೋಡಿಕೊಳ್ಳುವ ಜತೆಗೆ ಜನರಿಗೆ ಉದ್ಯೋಗ ನೀಡುವುದಕ್ಕೂ ಒತ್ತು ನೀಡುತ್ತಿದೆ.

ನಂದಿನಿ ಉತ್ಪನ್ನಗಳನ್ನು ಮೊದಲು ಬಲ್ಕ್ ವೆಂಡಿಂಗ್ ಬೂತ್‌ಗಳಲ್ಲಿ ಮಾರಾಟ ಮಾಡಲಾಗುತ್ತಿತ್ತು. ಆ ನಂತರ ಅವುಗಳಿಗೆ ಪಾರ್ಲರ್‌ಗಳ ರೂಪ ನೀಡಲಾಯಿತು. ಬಳಿಕ ಪ್ರಾಂಚೈಸಿ ನೀಡಿ ಮಾರಾಟವನ್ನು ವಿಸ್ತರಣೆ ಮಾಡಲಾಯಿತು.

ಹೊಸ ಕಾಲಘಟ್ಟಕ್ಕೆ ಅನುಗುಣವಾಗಿ ಶಾಪಿಗಳನ್ನು ಶುರು ಮಾಡಿ ಅವುಗಳನ್ನು ಜನಾಕರ್ಷಕ ಕೇಂದ್ರಗಳಾಗಿ ರೂಪಿಸಲಾಗಿದೆ. ಕೆಲವು ಕಡೆ ಪಾರ್ಲರ್‌ಗಳೇ ಶಾಪಿಗಳ ರೂಪ ಪಡೆದುಕೊಂಡರೆ, ಹಲವು ಕಡೆ ಹೊಸದಾಗಿ ಶಾಪಿಗಳನ್ನು ಆರಂಭಿಸಲು ಕೆಎಂಎಫ್ ಅನುಮತಿ ನೀಡುತ್ತಿದೆ.

ನಗರದಲ್ಲಿ ಬಮೂಲ್ ಜತೆಗೆ ಕೆಎಂಎಫ್‌ನ ಮದರ್‌ಡೇರಿ, ಕೋಲಾರ, ಚಿಕ್ಕಬಳ್ಳಾಪುರ, ಮಂಡ್ಯ ಹಾಗೂ ತುಮಕೂರು ಹಾಲು ಒಕ್ಕೂಟಗಳು ವಹಿವಾಟು ನಡೆಸುತ್ತಿವೆ. ಆರು ಘಟಕಗಳು ಪಾರ್ಲರ್, ಪ್ರಾಂಚೈಸಿ ಘಟಕಗಳನ್ನು ಹೊಂದಿವೆ. ಆದರೆ 130 ಶಾಪಿಗಳನ್ನು ಮಾತ್ರ ಮದರ್‌ಡೇರಿ ನಿರ್ವಹಣೆ ಮಾಡುತ್ತಿದೆ.




ಈಗಿರುವ ನಂದಿನಿ ಶಾಪಿಗಳ ಆಧುನೀಕರಣಕ್ಕೂ ಒತ್ತು ನೀಡಿದ್ದೇವೆ. ಬಿಡಿಎ, ಜಿಬಿಎ ಜಾಗ ನೀಡಿದರೆ ಇನ್ನಷ್ಟು ಕಡೆ ಶಾಪಿಗಳು ಬರಲಿವೆ. ಜಾಗ ನೀಡುವಂತೆ ಮುಖ್ಯಮಂತ್ರಿ ಕೂಡ ಸೂಚನೆ ನೀಡಿದ್ದಾರೆ

ಬಿ.ಶಿವಸ್ವಾಮಿ, ವ್ಯವಸ್ಥಾಪಕ ನಿರ್ದೇಶಕ, ಕೆಎಂಎಫ್.

ಹೇಗಿವೆ ಶಾಪಿಗಳು?: ನಗರದ ವಿಲ್ಸನ್ ಗಾರ್ಡನ್, ಎಂ.ಜಿ. ರಸ್ತೆ, ಹೆಬ್ಬಾಳ, ರಾಜಾಜಿನಗರ ಸೇರಿದಂತೆ ಹಲವು ಭಾಗಗಳಲ್ಲಿ ನಂದಿನಿ ಶಾಪಿಗಳಿವೆ. ವಿಶಾಲವಾದ ಜಾಗ ಇರುವ ಕಡೆಗಳಲ್ಲಿ ಪಾರ್ಕಿಂಗ್ ಸೇರಿ ಅಗತ್ಯ ಸೌಲಭ್ಯಗಳನ್ನು ಶಾಪಿಗಳ ಆವರಣದಲ್ಲಿಯೇ ನೀಡಲಾಗಿದೆ.

ಸಣ್ಣ ಜಾಗ ಇರುವ ಕಡೆ ನಂದಿನಿ ಉತ್ಪನ್ನಗಳ ಮಾರಾಟಕ್ಕೆ ವ್ಯವಸ್ಥೆ ಮಾಡಲಾಗಿದೆ. ಇಡೀ ಮಳಿಗೆ ಗ್ರಾಹಕರನ್ನು ಆಕರ್ಷಿಸುವ ರೀತಿ ಅಂದಗಾಣಿಸುವಂತೆ ರೂಪಿಸಲಾಗುತ್ತದೆ. ನಂದಿನಿ ಉತ್ಪನ್ನಗಳ ಚಿತ್ರಗಳು ಶಾಪಿಯಲ್ಲಿ ಗಮನಸೆಳೆಯಲಿವೆ. ಶಾಪಿಯ ಒಳ ಹೊಕ್ಕರೆ ಮಾಲ್ ರೀತಿಯಲ್ಲಿಯೇ ಕಾಣುತ್ತದೆ.



ಕೆಲವು ಪ್ರದೇಶಗಳಲ್ಲಿ ದಿನಕ್ಕೆ ಒಂದು ಶಾಪಿಯಲ್ಲಿ ₹1.50 ಲಕ್ಷದವರೆಗೂ, ಕೆಲವೆಡೆ ₹50 ಸಾವಿರಕ್ಕೂ ಅಧಿಕ ವಹಿವಾಟು ನಡೆಯುತ್ತದೆ. ನಂದಿನಿ ಶಾಪಿ ಆರಂಭಕ್ಕೆ ₹5 ಲಕ್ಷದಿಂದ ₹7 ಲಕ್ಷದವರೆಗೂ ಸಹಾಯಧನವನ್ನು ಕೆಎಂಎಫ್ ನೀಡಲಿದೆ.

ಹೊಸ ಶಾಪಿ: ಈಗಾಗಲೇ ಇರುವ ಶಾಪಿಗಳ ನಿರ್ವಹಣೆ ಹಾಗೂ ಮಾರಾಟಕ್ಕೆ ಒತ್ತು ನೀಡುವ ಜತೆಗೆ ಹೊಸದಾಗಿ ಈ ವರ್ಷದಲ್ಲಿಯೇ 70 ಶಾಪಿಗಳನ್ನು ತೆರೆದು, ಒಟ್ಟು 200ರ ಗಡಿ ತಲುಪುವ ಗುರಿಯನ್ನು ಕೆಎಂಎಫ್ ಹೊಂದಿದೆ. ಇವುಗಳಿಗೆ ಮಿನಿ ಮಾಲ್‌ಗಳ ರೂಪ ನೀಡುವ ಉದ್ದೇಶ ಹೊಂದಲಾಗಿದೆ.

ಇದಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಪತ್ರ ಬರೆದು ಸಿಎ ನಿವೇಶನ ಇಲ್ಲವೇ ಸ್ಥಳೀಯವಾಗಿ ಲಭ್ಯ ಇರುವ ಜಾಗವನ್ನು ನಂದಿನಿ ಶಾಪಿಗೆ ನೀಡುವಂತೆ ಕೋರಲಾಗಿದೆ.

‘ನಂದಿನಿ ಉತ್ಪನ್ನಗಳ ಮೇಲೆ ಜನರಿಗೆ ವಿಶ್ವಾಸವಿದೆ. ಗ್ರಾಹಕಸ್ನೇಹಿ ಶಾಪಿಗಳೊಂದಿಗೆ ಇನ್ನಷ್ಟು ಜನರನ್ನು ಆಕರ್ಷಿಸಲು ಕೆಎಂಎಫ್ ಪ್ರಯತ್ನಿಸುತ್ತಿದೆ. ಈ ವರ್ಷದಲ್ಲಿ ಹೊಸ ಶಾಪಿಗಳನ್ನು ಆರಂಭಿಸಲು ಜಾಗ ಗುರುತಿಸುವ ಪ್ರಕ್ರಿಯೆ ನಡೆದಿದೆ’ ಎಂದು ಮಾರುಕಟ್ಟೆ ನಿರ್ದೇಶಕ ಎಂ.ಎಸ್. ಸತೀಶ್ ಕುಮಾರ್ ತಿಳಿಸಿದರು.

ಬ್ರ್ಯಾಂಡ್ ವಿಸ್ತರಣೆಗೆ ಒತ್ತು: ನಂದಿನಿ ಉತ್ಪನ್ನಗಳನ್ನು 53 ವರ್ಷದಿಂದ ತಲುಪಿಸುವ ಮೂಲಕ ಕೆಎಂಎಫ್ ಜನರಿಗೆ ಹತ್ತಿರವಾಗಿದೆ. ಮೊದಲೆಲ್ಲ ಹಾಲು, ಮೊಸರು, ತುಪ್ಪದಂತಹ ಉತ್ಪನ್ನಗಳು ಮಾತ್ರ ಸಿಗುತ್ತಿದ್ದವು. ಒಂದು ದಶಕದ ಈಚೆಗೆ ಉತ್ಪನ್ನಗಳ ಸಂಖ್ಯೆ 200ರ ಗಡಿ ತಲುಪಿದೆ. ಹೊರ ರಾಜ್ಯ, ದೇಶಗಳಿಗೂ ಸೇವೆ ವಿಸ್ತರಿಸಿದೆ.

ಹಾಲಿನ ಪುಡಿ, ಮೈಸೂರು ಪಾಕ್, ಕೇಕ್‌ಗಳು, ಐಸ್‌ಕ್ರೀಂಗಳ ಸಹಿತ ವಿವಿಧ ಸ್ವಾದದ ಉತ್ಪನ್ನಗಳಿಂದ ‘ನಂದಿನಿ’ ಜನರಿಗೆ ತಲುಪಿ ಸಹಕಾರ ವಲಯದ ಪ್ರಮುಖ ಬ್ರ್ಯಾಂಡ್ ಆಗಿ ಹೊರಹೊಮ್ಮಿದೆ.

‘ನಂದಿನಿ ಉತ್ಪನ್ನಗಳು ನವದೆಹಲಿ, ಮುಂಬೈ, ಚೆನ್ನೈ, ಪುಣೆ ಸಹಿತ ಪ್ರಮುಖ ನಗರಗಳಲ್ಲದೇ, ಹೊರ ದೇಶಗಳಲ್ಲೂ ಲಭ್ಯವಾಗುವಂತೆ ನೋಡಿಕೊಂಡಿದ್ದೇವೆ. ಈ ಬ್ರ್ಯಾಂಡ್ ಅನ್ನು ಜನರಿಗೆ ಸುಲಭವಾಗಿ ತಲುಪಿಸಲು, ಜನ ನಂದಿನಿ ಮಳಿಗೆಗಳಿಗೆ ಬರಲೆಂದೇ ಹೊಸ ಮಾರ್ಗಗಳನ್ನು ಕಂಡುಕೊಳ್ಳಲಾಗುತ್ತಿದೆ’ ಎಂದು ಮಾರುಕಟ್ಟೆ ನಿರ್ದೇಶಕ ಎಂ.ರಘುನಂದನ್ ಹೇಳಿದರು.



ನಂದಿನಿ ಕೆಫೆ ಮೂ — ಪ್ರಜಾವಾಣಿ ಚಿತ್ರ

ಇನ್ನಷ್ಟು ‘ಕೆಫೆ ಮೂ’

ಶಾಪಿಗಳಿಗಿಂತಲೂ ಹೈಟೆಕ್ ಆಗಿರುವ ನಂದಿನಿ ಕೆಫೆ ಮೂ ಆರಂಭಕ್ಕೂ ಕೆಎಂಎಫ್ ಒತ್ತು ನೀಡಿದೆ.

ರೇವಾ ವಿಶ್ವವಿದ್ಯಾಲಯ, ಚಾಲುಕ್ಯ ವಿಶ್ವವಿದ್ಯಾಲಯ, ಕೆಂಪೇಗೌಡ ವಿಮಾನ ನಿಲ್ದಾಣದ ಟರ್ಮಿನಲ್ 2ನಲ್ಲಿ ಕೆಫೆ ಮೂ ಇದೆ. ಇನ್ನೂ ಎರಡು ಕಡೆ ಸದ್ಯದಲ್ಲೇ ಕೆಫೆ ಮೂ ಆರಂಭಿಸಲು ತಯಾರಿಯೂ ನಡೆಯುತ್ತಿದೆ.

‘ಇಲ್ಲಿ ನಂದಿನಿ ಉತ್ಪನ್ನಗಳ ಖರೀದಿ ಮಾತ್ರವಲ್ಲದೇ ಕುಳಿತು ಸೇವಿಸುವ ವ್ಯವಸ್ಥೆಯೂ ಇರಲಿದೆ. ಕಾಫಿ, ಪಿಜ್ಜಾ, ಸ್ಯಾಂಡ್‌ವಿಚ್, ಐಸ್‌ಕ್ರೀಂ ಸ್ಕೂಪ್ ಕೂಡ ಸಿಗಲಿದೆ. ಕೇರಳದಲ್ಲಿ ‘ಕೆಫೆ ಮೂ’ಗೆ ಬೇಡಿಕೆ ಇದ್ದು, ಹಲವು ಕಾರ್ಯನಿರ್ವಹಿಸುತ್ತಿದೆ. ಬೆಂಗಳೂರಿನಲ್ಲಿ ನಿರೀಕ್ಷಿತ ಪ್ರತಿಕ್ರಿಯೆ ಸಿಗದೇ ಇರುವುದರಿಂದ ನಿಧಾನವಾಗಿ ವಿಸ್ತರಿಸುತ್ತಿದ್ದೇವೆ’ ಎಂದು ಅಧಿಕಾರಿಗಳು ತಿಳಿಸಿದರು.

ಸುದ್ದಿ 2 ನಿಮಿಷ

6ರಿಂದ ಬಜೆಟ್ ಅಧಿವೇಶನ ಬಿಜೆಪಿ ನಾಯಕರ ಸಭೆ

ಬೆಂಗಳೂರು: ಇದೇ 6ರಿಂದ ಆರಂಭವಾಗುವ ಬಜೆಟ್ ಅಧಿವೇಶನದಲ್ಲಿ ಉಭಯ ಸದನಗಳಲ್ಲಿ ಪ್ರಸ್ತಾಪಿಸಬೇಕಾದ ವಿಷಯಗಳ ಕುರಿತು ವಿರೋಧ ಪಕ್ಷಗಳ ನಾಯಕರಾದ ಆರ್.ಅಶೋಕ, ಛಲವಾದಿ ನಾರಾಯಣಸ್ವಾಮಿ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸಭೆ ಸೇರಿ ಚರ್ಚೆ ನಡೆಸಿದರು.

ಪ್ರಮುಖ ಇಲಾಖೆಗಳ ವೈಫಲ್ಯಗಳನ್ನು ಸದನದಲ್ಲಿ ಪ್ರಸ್ತಾಪಿಸಬೇಕು. ಪ್ರತಿಯೊಂದು ವಿಷಯದ ಬಗ್ಗೆ ಆಳವಾಗಿ ಅಧ್ಯಯನ ನಡೆಸಿ ವಿಷಯವನ್ನು ಪ್ರಸ್ತಾಪಿಸಬೇಕು ಎಂದು ತೀರ್ಮಾನಿಸಲಾಯಿತು.

ಜನ ಸಾಮಾನ್ಯರು ಎದುರಿಸುತ್ತಿರುವ ತೊಂದರೆಗಳು, ಆರ್ಥಿಕ ಹೊರೆಯಾಗುವ ಸರ್ಕಾರದ ನಿರ್ಧಾರಗಳ ಬಗ್ಗೆ ಆಯ್ದ ನಾಯಕರು ಪ್ರಸ್ತಾಪಿಸಬೇಕು. ಕಳೆದ ಅಧಿವೇಶನದಲ್ಲಿ ನಿರ್ವಹಿಸಿದ ರೀತಿಯಲ್ಲೇ ಪೂರಕ ದಾಖಲೆಗಳನ್ನು ಮುಂದಿಟ್ಟು ವ್ಯವಸ್ಥಿತವಾಗಿ ಸರ್ಕಾರದ ವೈಫಲ್ಯವನ್ನು ಪ್ರಸ್ತಾಪಿಸಬೇಕು ಎಂದು ಸಲಹೆಗಳು ಬಂದವು. ಶಾಸಕರಾದ ಡಾ.ಸಿ.ಎನ್. ಅಶ್ವತ್ಥನಾರಾಯಣ, ಎಸ್.ಆರ್.ವಿಶ್ವನಾಥ್ ಸಭೆಯಲ್ಲಿ ಇದ್ದರು.

ಬಿಸಿಯೂಟ ತಯಾರಕರ ಪ್ರತಿಭಟನೆ



ಬೆಂಗಳೂರು: ಕನಿಷ್ಠ ವೇತನ ಜಾರಿಗೊಳಿಸಿ, ಕೆಲಸ ಕಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಅಕ್ಷರ ದಾಸೋಹ ಬಿಸಿಯೂಟ ತಯಾರಕರ ಫೆಡರೇಷನ್ (ಎಐಟಿಯುಸಿ) ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿತು.

ರಾಜ್ಯದಾದ್ಯಂತ ಶಾಲೆಗಳಲ್ಲಿ ಒಟ್ಟು 1 ಲಕ್ಷ 16 ಸಾವಿರ ಬಿಸಿಯೂಟ ತಯಾರಕರಿದ್ದಾರೆ. ಮುಖ್ಯ ಅಡುಗೆಯವರಿಗೆ ತಿಂಗಳಿಗೆ ₹4,700, ಸಹಾಯಕ ಅಡುಗೆಯವರಿಗೆ ₹4,600 ವೇತನ ನೀಡುತ್ತಿದೆ. ಈ ವೇತನದಲ್ಲಿ ಜೀವನ ನಡೆಸುವುದು ಕಷ್ಟವಾಗಿದೆ ಎಂದು ಪ್ರತಿಭಟನಕಾರರು ಅಳಲು ತೋಡಿಕೊಂಡರು.

ಬಿಸಿಯೂಟ ತಯಾರಕರನ್ನು ಸ್ಕೀಮ್ ವರ್ಕರ್ಸ್ ಎನ್ನುವುದನ್ನು ಬದಲಾಯಿಸಿ ಕಾರ್ಮಿಕರೆಂದು ಪರಿಗಣಿಸಬೇಕು, ₹10 ಲಕ್ಷ ಮರಣ ಪರಿಹಾರ ನೀಡಬೇಕು ಹಾಗೂ ಆಸ್ಪತ್ರೆಯ ಚಿಕಿತ್ಸಾ ವೆಚ್ಚವನ್ನು ₹50 ಸಾವಿರದಿಂದ ₹1 ಲಕ್ಷಕ್ಕೆ ಹೆಚ್ಚಿಸಬೇಕು ಎಂದು ಆಗ್ರಹಿಸಿದರು.

ಪ್ರತಿಭಟನೆಯಲ್ಲಿ ಫೆಡರೇಷನ್ ಅಧ್ಯಕ್ಷ ಆವರಗೆರೆ ಚಂದ್ರು, ಪ್ರಧಾನ ಕಾರ್ಯದರ್ಶಿ ಜಿ.ಜಿ.ಅಕ್ಕಮ್ಮ, ಉಪ ಪ್ರಧಾನ ಕಾರ್ಯದರ್ಶಿ ಪುಷ್ಪಾ, ಬೆಳಗೆರೆ ರುದ್ರಮ್ಮ ಭಾಗವಹಿಸಿದ್ದರು.

ಮಧ್ಯಪ್ರವೇಶಕ್ಕೆ ಸುಪ್ರೀಂ ಕೋರ್ಟ್ ನಕಾರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ನಕಲಿ ದಾಖಲೆ ಸೃಷ್ಟಿಸಿ 13 ಎಕರೆ ಭೂಕಬಳಿಕೆ ವಿರುದ್ಧ ಎಫ್‌ಐಆರ್
- ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ

ನವದೆಹಲಿ: ಬೆಂಗಳೂರಿನಲ್ಲಿ ನಕಲಿ ದಾಖಲೆ ಸೃಷ್ಟಿಸಿ ಅಂದಾಜು ₹100 ಕೋಟಿ ಮೌಲ್ಯದ 13 ಎಕರೆ ಭೂಕಬಳಿಕೆಗೆ ಯತ್ನಿಸಿದವರ ವಿರುದ್ಧ ಎಫ್‌ಐಆರ್ ದಾಖಲಿಸಿದ ಪ್ರಕರಣದಲ್ಲಿ ಮಧ್ಯಪ್ರವೇಶಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ.



ಅವಲಹಳ್ಳಿ ಪೊಲೀಸರು ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಲು ನಿರಾಕರಿಸಿದ ಹೈಕೋರ್ಟ್ ಆದೇಶ ಪ್ರಶ್ನಿಸಿ ವೆಂಕಟರಾಮ ನಾಯ್ಡು ಕೋಲ ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯನ್ನು ನ್ಯಾಯಮೂರ್ತಿಗಳಾದ ದೀಪಂಕರ್ ದತ್ತ ಹಾಗೂ ಸತೀಶ್ ಚಂದ್ರ ಶರ್ಮಾ ಪೀಠ ವಜಾಗೊಳಿಸಿದೆ.

ಸಿವಿಲ್ ಮೊಕದ್ದಮೆಗಳು ಬಾಕಿ ಇದ್ದ ಮಾತ್ರಕ್ಕೆ ಗಂಭೀರ ಅಪರಾಧಗಳ ತನಿಖೆಗೆ ಅಡ್ಡಿಯಾಗುವುದಿಲ್ಲ ಎಂದು ಸ್ಪಷ್ಟಪಡಿಸಿದ್ದ ಹೈಕೋರ್ಟ್, ಎಫ್‌ಐಆರ್ ರದ್ದುಪಡಿಸಲು ನಿರಾಕರಿಸಿತ್ತು.

ಜಮೀನಿನ ಮೂಲ ಮಾಲೀಕರಾದ ಆರ್. ರಾಧಾ (ಜಿಪಿಎ ಪಡೆದಿರುವ ವೆಂಕಟಪ್ಪ ಕೆ. ದೂರುದಾರರು) ಅವರ ಪತಿ ಎಸ್. ಕೃಷ್ಣನ್ ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಬಂಡಾಪುರ ಗ್ರಾಮದ 3 ವಿವಿಧ ಸರ್ವೆ ನಂಬರ್‌ಗಳಲ್ಲಿ 13 ಎಕರೆ 29 ಗುಂಟೆಗಳನ್ನು 1978ರಲ್ಲಿ ಖರೀದಿಸಿದ್ದರು. ಕೃಷ್ಣನ್ 1986ರಲ್ಲಿ ಮೃತಪಟ್ಟಿದ್ದರು. ಎಲ್ಲ ಆಸ್ತಿಗಳಿಗೆ ಪತ್ನಿ ರಾಧಾ ಉತ್ತರಾಧಿಕಾರಿಯಾಗಿದ್ದರು. ಪತಿಯ ಮರಣದ ನಂತರ ತಮಿಳುನಾಡಿನ ತವರು ಮನೆಗೆ ತೆರಳಿದ್ದ ರಾಧಾ ಆಗಾಗ ಬೆಂಗಳೂರಿನಲ್ಲಿರುವ ಜಮೀನುಗಳಿಗೆ ಭೇಟಿ ನೀಡುತ್ತಿದ್ದರು.

ಈ ನಡುವೆ, ಕೆಲವು ಆರೋಪಿಗಳು ನಕಲಿ ದಾಖಲೆ ಸೃಷ್ಟಿಸಿ ಜಮೀನು ಲಪಟಾಯಿಸಲು ಯತ್ನಿಸಿದ್ದರು. ನಾಲ್ವರು ಸಬ್ ರಿಜಿಸ್ಟ್ರಾರ್ ಕಚೇರಿಗೆ ತೆರಳಿ ರಾಧಾ ಹೆಸರಿನಲ್ಲಿ ಸಹಿ ಹಾಕಿದ್ದರು. ವೆಂಕಟಪ್ಪ ಅವರು ಆವಲಹಳ್ಳಿ ಠಾಣೆಯಲ್ಲಿ ದೂರು ನೀಡಿದ್ದರು. ಸತ್ವ ಗ್ರೂಪ್‌ನ ಪಾಲುದಾರ ಅಶ್ವಿನ್ ಸಂಚೆಟಿ, ಬಸವೇಶ್ವರ ನಗರದ ನಿವಾಸಿ ರಾಧಾ, ಲೋಕ ಸುಂದರ್, ಧ್ರುವ ಕುಮಾರ್, ಮೀನಾಕ್ಷಿ, ಲಾವಣ್ಯ, ಡಾಲರ್ಸ್ ಕಾಲೊನಿಯ ನಿವಾಸಿ ರಾಧಾ, ವೆಂಕಟರಾಮ ನಾಯ್ಡು ಕೋಲ, ಶಿವರುದ್ರಪ್ಪ, ಶ್ರೀನಿವಾಸ್ ಆರ್. ಅಲಕಟ್ಟಿ, ಲಿಂಗರಾಜ್, ಮಧುಸೂದನ್ ಮತ್ತು ಮುನೇಂದ್ರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ‘ಅಶ್ವಿನ್ ಸಂಚೆಟಿ ಹಾಗೂ ಸತ್ವ ಗ್ರೂಪ್ ವಿರುದ್ಧ ದೂರುದಾರರು ಮಾಡಿರುವ ಆರೋಪಗಳಿಗೂ, ವಾಸ್ತವ ಸ್ಥಿತಿಗೂ ವ್ಯತ್ಯಾಸವಿದೆ. ನಮ್ಮ ಬಳಿ ದಾಖಲೆಗಳಿವೆ’ ಎಂದು ಸತ್ವ ಗ್ರೂಪ್ ಸ್ಪಷ್ಟಪಡಿಸಿತ್ತು.

ಬಡ ರೈತರ ಭೂಮಿ ಹಗಲು ದರೋಡೆ: ಕಿಡಿ

ಅಧಿಕಾರಿಗಳ ವರ್ತನೆಗೆ ಚಾಟಿ: ಡಿನೋಟಿಫೈ ಆದೇಶ ಎತ್ತಿಹಿಡಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಪೂರ್ವ ತಾಲ್ಲೂಕಿನ ವರ್ತೂರು ಹೋಬಳಿಯ ದೇವರ ಬೀಸನ ಹಳ್ಳಿಯಲ್ಲಿ ಸಾಫ್ಟ್‌ವೇರ್ ಕಂಪನಿಯೊಂದಕ್ಕೆ ನೀಡಲಾಗಿದ್ದ 36 ಗುಂಟೆ ಜಮೀನಿನ ಅಧಿಸೂಚನೆಯನ್ನು ಡಿ-ನೋಟಿಫೈ ಮಾಡಿದ್ದ ಸರ್ಕಾರದ ಆದೇಶವನ್ನು ಹೈಕೋರ್ಟ್ ಈಗ ಎತ್ತಿಹಿಡಿದಿದೆ.

ಈ ಸಂಬಂಧ ಮೂಲ ಭೂ ಮಾಲೀಕ ದಿವಂಗತ ಪಟೇಲ್ ಜೇತಲಾಲ್ ರಾಮ್‌ಜಿ ಅವರ ವಾರಸುದಾರರು ಸಲ್ಲಿಸಿದ್ದ ಮೇಲ್ಮನವಿಯನ್ನು ನ್ಯಾಯಮೂರ್ತಿ ಡಿ.ಕೆ. ಸಿಂಗ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಪುರಸ್ಕರಿಸಿದೆ.

ಏಕಸದಸ್ಯ ನ್ಯಾಯಪೀಠದ ಆದೇಶವನ್ನು ರದ್ದುಗೊಳಿಸಿರುವ ವಿಭಾಗೀಯ ನ್ಯಾಯಪೀಠ ‘ರಿಟ್ ಅರ್ಜಿ ಸಲ್ಲಿಸಿದ್ದ ರಾಯಲ್ ಫ್ರಾಗ್ರೆನ್ಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿಯು, ಕ್ಯಾನ್ಸರ್‌ನಂತಹ ಮಾರಕ ಕಾಯಿಲೆಗೆ ಕಾರಣವಾಗಬಹುದಾದ ಗುಟ್ಕಾ ತಯಾರಿಕೆಯಲ್ಲಿ ತೊಡಗಿರುವ ಕಂಪನಿ ಎಂಬುದು ಆಘಾತಕಾರಿ ವಿಚಾರ’ ಎಂದು ಕಳವಳ ವ್ಯಕ್ತಪಡಿಸಿದೆ.

ಅಂತೆಯೇ, ‘ಇದು ಬಡ ರೈತರ ಭೂಮಿಯಲ್ಲಿ ಅಧಿಕಾರಿಗಳು ಭೂ ಹಿತಾಸಕ್ತಿಗಳ ಪರವಾಗಿ ನಡೆಸಿದ ಹಗಲು ದರೋಡೆಯಂತಿದೆ. ಸರಿಯಾದ ಕಾನೂನು ಪ್ರಕ್ರಿಯೆ ಪಾಲನೆ ಮಾಡದೆ ಯಾವುದೇ ವ್ಯಕ್ತಿಯ ಆಸ್ತಿಯನ್ನು ಅವರಿಂದ ವಂಚಿತಗೊಳಿಸಲು ಆಗುವುದಿಲ್ಲ. ಸಾರ್ವಜನಿಕ ಉದ್ದೇಶಕ್ಕಾಗಿ ಮಾತ್ರವೇ ಆಸ್ತಿಯನ್ನು ಸ್ವಾಧೀನಕ್ಕೆ ಪಡೆಯಬಹುದು’ ಎಂದು ಸ್ಪಷ್ಟಪಡಿಸಿದೆ.

ಮಳೆನೀರು ಕಾಲುವೆ ಒತ್ತುವರಿ ತೆರವಿಗೆ ಆದೇಶ

ಕನಕಪುರ ರಸ್ತೆ ಗುಬ್ಬಲಾಳ ಬಳಿಯ ಮಳೆ ನೀರು ಕಾಲುವೆಯನ್ನು ‘ಮಂತ್ರಿ ಟ್ರ್ಯಾಂಕ್ವಿಲ್ ಅಪಾರ್ಟ್‌ಮೆಂಟ್’ ಮತ್ತು ‘ರಾಯಲ್ ಪಾಮ್ ಅಪಾರ್ಟ್‌ಮೆಂಟ್’ಗಳು ಒತ್ತುವರಿ ಮಾಡಿರುವುದು ತಜ್ಞರ ಸಮಿತಿ ವರದಿಯಿಂದ ದೃಢಪಟ್ಟಿದ್ದು, 15 ದಿನಗಳ ಒಳಗಾಗಿ ಒತ್ತುವರಿ ತೆರವುಗೊಳಿಸಬೇಕು ಅಥವಾ ಮಳೆ ನೀರು ಸುಬ್ರಹ್ಮಣ್ಯಪುರ ಕೆರೆಗೆ ಸರಾಗವಾಗಿ ಹರಿದು ಹೋಗಲು ಪರ್ಯಾಯ ವ್ಯವಸ್ಥೆ ಮಾಡಬೇಕು ಎಂದು ಹೈಕೋರ್ಟ್ ಜಿಬಿಎಗೆ (ಗ್ರೇಟರ್ ಬೆಂಗಳೂರು ಪ್ರಾಧಿಕಾರ) ನಿರ್ದೇಶಿಸಿದೆ.

ಈ ಸಂಬಂಧ ಸಲ್ಲಿಸಲಾಗಿದ್ದ ಎರಡು ಪ್ರತ್ಯೇಕ ಅರ್ಜಿಗಳ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆರ್. ನಟರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಸರ್ಕಾರ ರಚಿಸಿದ ತಜ್ಞರ ಸಮಿತಿಯು ಮಳೆ ನೀರು ಚರಂಡಿಗಳ ಒತ್ತುವರಿಯನ್ನು ದೃಢಪಡಿಸಿ ವರದಿ ನೀಡಿದೆ. ಹಾಗಾಗಿ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಗುಬ್ಬಲಾಳ ಗ್ರಾಮದಲ್ಲಿ ಎರಡು ಅಪಾರ್ಟ್‌ಮೆಂಟ್ ಸಂಕೀರ್ಣಗಳಿರುವ ಭೂಮಿಯನ್ನು ಮರು ಪರಿಶೀಲನೆ ಮಾಡಬೇಕು.

ಅರ್ಜಿದಾರರು ಮಳೆ ನೀರು ಕಾಲುವೆಗಳಿಗೆ ಪರ್ಯಾಯ ಜೋಡಣೆಯನ್ನು ಒದಗಿಸಿದರೆ, ಜಿಬಿಎ ಅದನ್ನು ಪರಿಶೀಲಿಸಬೇಕು ಮತ್ತು ಪಕ್ಕದ ಜಮೀನಿನ ಮಾಲೀಕರಿಗೆ ತೊಂದರೆಯಾಗದಂತೆ ಸುಬ್ರಹ್ಮಣ್ಯಪುರ ಕೆರೆಗೆ ನೀರು ಸರಾಗವಾಗಿ ಹರಿಯುವುದನ್ನು ಖಚಿತಪಡಿಸಿಕೊಳ್ಳಬೇಕು’ ಎಂದು ನ್ಯಾಯಪೀಠ ಆದೇಶಿಸಿದೆ.

ಅರ್ಜಿದಾರರು ಹದಿನೈದು ದಿನಗಳಲ್ಲಿ ಪರ್ಯಾಯ ಜಾಗವನ್ನು ಪ್ರಸ್ತಾಪಿಸಲು ವಿಫಲವಾದರೆ, ತಜ್ಞರ ಸಮಿತಿಯ ವರದಿ ಪ್ರಕಾರ ಜಿಬಿಎ ಒತ್ತುವರಿ ತೆರವುಗೊಳಿಸಿ ಮಳೆ ನೀರು ಕಾಲುವೆಗಳನ್ನು ಪುನರ್ ಸ್ಥಾಪಿಸಬೇಕು’ ಎಂದು ನ್ಯಾಯಪೀಠ ವಿವರಿಸಿದೆ.

‘ಮಳೆ ನೀರು ಪುನರ್ ಸ್ಥಾಪನೆ ಹೆಸರಿನಲ್ಲಿ ಪಾಲಿಕೆ ಒತ್ತುವರಿ ತೆರವುಗೊಳಿಸದಂತೆ 2019ರಲ್ಲಿ ನಾವು ಸಲ್ಲಿಸಿರುವ ಮನವಿಯನ್ನು ಪರಿಗಣಿಸಲು ನಿರ್ದೇಶಿಸಬೇಕು’ ಎಂದು ರಾಯಲ್ ಪಾಮ್ಸ್ ನಿವಾಸಿಗಳ ಕಲ್ಯಾಣ ಸಂಘ ಹಾಗೂ 2014ರಲ್ಲಿ ಈ ಹಿಂದಿನ ಬಿಬಿಎಂಪಿ ನೀಡಿದ್ದ ನೋಟಿಸ್ ಪ್ರಶ್ನಿಸಿ ಮಂತ್ರಿ ಟ್ರ್ಯಾಂಕ್ವಿಲ್ ಅಪಾರ್ಟ್‌ಮೆಂಟ್ ಮಾಲೀಕರ ಸಂಘ ಮತ್ತು ಮಂತ್ರಿ ಡೆವಲಪರ್ಸ್ ಪ್ರೈವೇಟ್ ಲಿಮಿಟೆಡ್ ಜೊತೆಗೂಡಿ ಈ ಅರ್ಜಿ ಸಲ್ಲಿಸಿದ್ದವು.

‘ಕೆಐಎಡಿಬಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಸಿಇಒ) ರಾಜ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗೆ ಸಲ್ಲಿಸಿರುವ ವರದಿಯನ್ನು ಗಮನಿಸಿದಾಗ, ಕ್ಷೇತ್ರ ಪರಿಣತಿ ಇಲ್ಲದ ಕಂಪನಿಗಳಿಗೆ ಭೂಮಿ ನೀಡುತ್ತಿರುವುದನ್ನು ಸ್ಥಳೀಯ ರೈತರು ವಿರೋಧಿಸುತ್ತಿದ್ದ ಕಾರಣ ನೈಜ ಸಾಫ್ಟ್‌ವೇರ್ ಕಂಪನಿಯಾದ ಇನ್ಫೋಸಿಸ್ ನಂತಹವರಿಗೂ ಭೂಮಿ ಹಂಚಿಕೆ ಮಾಡಲು ಸಾಧ್ಯವಾಗಲಿಲ್ಲ ಎಂಬುದು ಗಮನಾರ್ಹ’ ಎಂದು ಆದೇಶದಲ್ಲಿ ಉಲ್ಲೇಖಿಸಲಾಗಿದೆ.

ಪ್ರಕರಣವೇನು?: ವಿವಾದಿತ ಜಮೀನನ್ನು ಸಾಫ್ಟ್‌ವೇರ್ ಪಾರ್ಕ್ ಸ್ಥಾಪಿಸಲು ನವದೆಹಲಿಯ, ‘ರಾಯಲ್ ಫ್ರಾಗ್ರೆನ್ಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿ’ಗೆ ಕೆಐಎಡಿಬಿ (ಕರ್ನಾಟಕ ಪ್ರದೇಶ ಕೈಗಾರಿಕಾ ಅಭಿವೃದ್ಧಿ ಮಂಡಳಿ) ಮುಖಾಂತರ ಹಂಚಿಕೆ ಮಾಡಲಾಗಿತ್ತು.

ತದನಂತರ ಸರ್ಕಾರ ಪರಿಶೀಲನೆ ನಡೆಸಿದಾಗ, ‘ರಾಯಲ್ ಫ್ರಾಗ್ರೆನ್ಸಸ್ ಪ್ರೈವೇಟ್ ಲಿಮಿಟೆಡ್ ಕಂಪನಿ’ ಸಾಫ್ಟ್‌ವೇರ್ ಉತ್ಪಾದನೆ ಅಥವಾ ಕಂಪ್ಯೂಟರ್ ಸಂಬಂಧಿತ ಉತ್ಪಾದನಾ ಕ್ಷೇತ್ರದಲ್ಲಿ ಯಾವುದೇ ಅನುಭವ ಹೊಂದಿಲ್ಲ. ಆದರೂ, ಜಮೀನು ಮಂಜೂರು ಮಾಡಲಾಗಿದೆ ಎಂಬ ವರದಿಯ ಆಧಾರದ ಮೇಲೆ, 2009ರಲ್ಲಿ 36 ಗುಂಟೆ ಜಮೀನಿನ ಅಧಿಸೂಚನೆಯನ್ನು ಡಿ-ನೋಟಿಫೈ ಮಾಡಿತ್ತು.

ಇದನ್ನು ಪ್ರಶ್ನಿಸಿ ಕಂಪನಿ ಹೈಕೋರ್ಟ್ ಮೆಟ್ಟಿಲೇರಿತ್ತು. ಅರ್ಜಿ ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ಕಂಪನಿ ಅರ್ಜಿಯನ್ನು ಪುರಸ್ಕರಿಸಿ ಡಿ-ನೋಟಿಫಿಕೇಶನ್ ಆದೇಶವನ್ನು 2013ರಲ್ಲಿ ರದ್ದುಗೊಳಿಸಿತ್ತು. ಏಕಸದಸ್ಯ ನ್ಯಾಯಪೀಠದ ಆದೇಶವನ್ನು ಪ್ರಶ್ನಿಸಿ ಜಮೀನಿನ ಮೂಲ ಮಾಲೀಕರಾದ ದಿವಂಗತ ಪಟೇಲ್ ಜೇತಲಾಲ್ ರಾಮ್ ಅವರ ಕುಟುಂಬದ ಸದಸ್ಯರು ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿದ್ದರು.



ಎಚ್‌.ಸಿ. ಮಹದೇವಪ್ಪ ಅವರು ಅಧಿಕಾರಿಗಳು ಹಾಗೂ ವಿಶ್ವವಿದ್ಯಾಲಯದ ಕುಲಪತಿಗಳೊಂದಿಗೆ ಚರ್ಚೆ ನಡೆಸಿದರು

ವಿಶ್ವವಿದ್ಯಾಲಯದ ಘಟಕವಾರು ಮೀಸಲಾತಿ: ವಿಸ್ತೃತ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಭಾಗವಾರು ನಿಗದಿ ಮಾಡುವ ಮೀಸಲಾತಿ ಹಾಗೂ ಘಟಕವಾರು ನಿಗದಿ ಮಾಡುವ ಮೀಸಲಾತಿ ನಡುವೆ ಇರುವ ವ್ಯತ್ಯಾಸ ಮತ್ತು ಯಾವ ಕ್ರಮ ಅನುಸರಿಸಿದರೆ ಪರಿಶಿಷ್ಟ ವರ್ಗದ ಯುವಕ–ಯುವತಿಯರಿಗೆ ಅನುಕೂಲವಾಗುತ್ತದೆ ಎಂಬುದರ ಬಗ್ಗೆ ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ಅವರು ಅಧಿಕಾರಿಗಳು ಹಾಗೂ ವಿಶ್ವವಿದ್ಯಾಲಯದ ಕುಲಪತಿಗಳೊಂದಿಗೆ ಚರ್ಚೆ ನಡೆಸಿದರು.

ವಿಶ್ವವಿದ್ಯಾಲಯ, ಶೈಕ್ಷಣಿಕ ಸಂಸ್ಥೆಗಳ ಬೋಧಕ ಸಿಬ್ಬಂದಿ ನೇಮಕಾತಿಯಲ್ಲಿ ವಿಷಯವಾರು ಮೀಸಲಾತಿ ಅಥವಾ ವಿಶ್ವವಿದ್ಯಾಲಯ, ಶೈಕ್ಷಣಿಕ ಸಂಸ್ಥೆಗಳನ್ನು ಒಂದು ಘಟಕ ಎಂದು ಪರಿಗಣಿಸಿ ಮೀಸಲಾತಿ ಅನ್ವಯಿಸಬೇಕೇ ಎಂಬುದರ ಬಗ್ಗೆ ಚರ್ಚೆಗಳಾದವು.

ಒಳ ಮೀಸಲಾತಿಯನ್ನು ಒಳಗೊಂಡಂತೆ ಮಾಡಲಾಗುವ ನೇಮಕಾತಿ ವಿಷಯಕ್ಕೆ ಸಂಬಂಧಿಸಿದಂತೆ ಉಂಟಾಗಿರುವ ಗೊಂದಲಗಳನ್ನು ನಿವಾರಿಸಿ ಎಲ್ಲರಿಗೂ ನ್ಯಾಯಬದ್ಧ ಅವಕಾಶಗಳನ್ನು ನೀಡುವ ಉದ್ದೇಶದಿಂದ ನಡೆಸಿದ ಸಭೆಯು ಹೆಚ್ಚು ಉಪಯುಕ್ತವಾಗಿದೆ ಎಂದು ಸಚಿವರು ತಿಳಿಸಿದರು.

ನೇಮಕಾತಿ ವಿಷಯಕ್ಕೆ ಸಂಬಂಧಿಸಿದಂತೆ ಶೋಷಿತ ಸಮುದಾಯದ ಯಾರಿಗೂ ಅನ್ಯಾಯವಾಗಬಾರದು. ಉದ್ಯೋಗಾವಕಾಶ ನೀಡುವಾಗ ಪರಿಶಿಷ್ಟ ಜಾತಿ ಸಮುದಾಯದ ಎಲ್ಲ ಜಾತಿಗಳಿಗೆ ಸಮಾನ ಅವಕಾಶಗಳನ್ನು ಒದಗಿಸಲು ಯಾವ ನೀತಿ ಅನುಸರಿಸಬಹುದು ಎಂಬ ಬಗ್ಗೆಯೂ ಸಚಿವರು ಚರ್ಚಿಸಿದರು.

ಸರ್ಕಾರದ ವಿವಿಧ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು ಹಾಗೂ ಆಯುಕ್ತರು, ರಾಜ್ಯದ ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು ಭಾಗವಹಿಸಿದ್ದರು.

ಭುವನೇಶ್ವರ: ವಿಶ್ವ ಬೀಚ್ ವಾಲಿಬಾಲ್ ಟೂರ್ನಿ ನಾಳೆಯಿಂದ

ಭುವನೇಶ್ವರ: ವಿಶ್ವ ಬೀಚ್ ವಾಲಿಬಾಲ್ ಟೂರ್ನಿಯು ಇಲ್ಲಿನ ಕಳಿಂಗ ಇನ್‌ಸ್ಟಿಟ್ಯೂಟ್ ಆಫ್ ಇಂಡಸ್ಟ್ರಿಯಲ್ ಟೆಕ್ನಾಲಜಿ (ಕೆಐಐಟಿ) ವಿಶ್ವವಿದ್ಯಾಲಯದಲ್ಲಿ ಬುಧವಾರ ಆರಂಭವಾಗಲಿದೆ.

ವಿಶ್ವದ 52 ದೇಶಗಳ 82 ತಂಡಗಳು ಟೂರ್ನಿಯಲ್ಲಿ ಭಾಗವಹಿಸುತ್ತಿವೆ. ಒಲಿಂಪಿಕ್ ಚಿನ್ನದ ಪದಕ ವಿಜೇತರು ಸೇರಿ 306 ಆಟಗಾರರು ಕಣಕ್ಕಿಳಿಯಲಿದ್ದಾರೆ. ಭಾರತದ ವಿಶ್ವವಿದ್ಯಾಲಯವೊಂದು ಈ ಟೂರ್ನಿಯನ್ನು ಆಯೋಜಿಸುತ್ತಿರುವುದು ಇದೇ ಮೊದಲು ಎಂದು ಕೆಐಐಟಿ ಸಂಸ್ಥಾಪಕ ಅಚ್ಯುತ ಸಮಂತ ತಿಳಿಸಿದರು.

ಅರ್ಹತಾ ಸುತ್ತಿನ ನಂತರ ಗುಂಪು ಹಂತ ಒಳಗೊಂಡ ಮುಖ್ಯ ಡ್ರಾ ಇರುತ್ತದೆ. ಅಗ್ರ ತಂಡಗಳು 16ರ ಸುತ್ತಿನಲ್ಲಿ ಆಡಲಿವೆ. ಫೈನಲ್ ಪಂದ್ಯ ಮಾರ್ಚ್ 8ರಂದು ನಡೆಯಲಿದೆ ಎಂದು ಅವರು ಹೇಳಿದರು.

ಸಕಲ ಸಿದ್ಧತೆ: ಪಂದ್ಯಗಳು ಕೆಐಐಟಿ ಕ್ಯಾಂಪಸ್‌ನ ದ್ಯುತಿ ಚಂದ್ ಅಥ್ಲೆಟಿಕ್ ಕ್ರೀಡಾಂಗಣದಲ್ಲಿ ನಡೆಯಲಿದ್ದು, ಸಕಲ ಸಿದ್ಧತೆ ಮಾಡಿಕೊಳ್ಳಲಾಗಿದೆ. ಅಂತರರಾಷ್ಟ್ರೀಯ ಮಟ್ಟದ ಬೀಚ್ ವಾಲಿಬಾಲ್ ಅಂಕಣಗಳನ್ನು ನಿರ್ಮಿಸಲಾಗಿದೆ ಎಂದು ಸಮಂತ ಅವರು ಮಾಹಿತಿ ನೀಡಿದರು.

ವಂಡರ್‌ಲಾ: ನಾಳೆ ಹೋಳಿ ಸಂಭ್ರಮ

ಬೆಂಗಳೂರು: ಬೆಂಗಳೂರು ಹೊರವಲಯದಲ್ಲಿ ಇರುವ ವಂಡರ್‌ಲಾದಲ್ಲಿ ಮಾ. 4ರಂದು ವರ್ಣರಂಜಿತ ಮತ್ತು ಸಂಗೀತದೊಂದಿಗೆ ಹೋಳಿ ಹಬ್ಬವನ್ನು ಆಚರಿಸಲಾಗುತ್ತಿದೆ ಎಂದು ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್‌ನ ಮುಖ್ಯ ಕಾರ್ಯಾಚರಣೆ ಅಧಿಕಾರಿ ಧೀರನ್ ಚೌಧರಿ ತಿಳಿಸಿದ್ದಾರೆ.

‘ಹೋಳಿ ಹಬ್ಬದ ಅಂಗವಾಗಿ ವಂಡರ್‌ಲಾಗೆ ಭೇಟಿ ನೀಡುವವರು ಆನ್‌ಲೈನ್ ಮೂಲಕ ಟಿಕೆಟ್ ಕಾಯ್ದಿರಿಸಿದರೆ ಶೇ30ರಷ್ಟು ರಿಯಾಯಿತಿ ಸಿಗಲಿದೆ. ಹೋಳಿ ಹಬ್ಬದ ಸಂಭ್ರಮಾಚರಣೆಯಲ್ಲಿ ಡಿಜೆಯನ್ನೊಳಗೊಂಡ ಸಂಗೀತ, ಸಾವಯವ ಬಣ್ಣದ ಆಟ, ಮೋಜಿನ ಫೋಮ್ ಪಾರ್ಟಿ, ಉದ್ಯಾನದಾದ್ಯಂತ ಹಬ್ಬದ ಅಲಂಕಾರಗಳು ಮತ್ತು ಹಬ್ಬದ ಉತ್ಸಾಹವನ್ನು ಪ್ರತಿಬಿಂಬಿಸುವ ಆಹಾರ ಮತ್ತು ಪಾನೀಯಗಳ ವ್ಯವಸ್ಥೆ ಇರಲಿದೆ’ ಎಂದು ತಿಳಿಸಿದ್ದಾರೆ.

ಆನ್‌ಲೈನ್ https://bookings.wonderla.com/ ವೆಬ್‌ಸೈಟ್‌ನಲ್ಲಿ ಟಿಕೆಟ್ ಬುಕ್ ಮಾಡಬಹುದು. ಮಾಹಿತಿಗೆ: 80372 30333, 99455 57777 ಸಂಪರ್ಕಿಸಬಹುದು.

'ಒಳ ಮೀಸಲಾತಿ: ಚರ್ಚಿಸಿ, ನಿರ್ಧರಿಸಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ ಸರ್ಕಾರ ಖಾಲಿ ಹುದ್ದೆಗಳಿಗೆ ನೇಮಕ ಮಾಡುವ ಸಂದರ್ಭದಲ್ಲಿ ಒಳ ಮೀಸಲಾತಿ ಪರಿಗಣನೆಗೆ ಎಲ್ಲ ಸಮುದಾಯದ ಜೊತೆ ಚರ್ಚೆ ಮಾಡಿ, ವಿಶ್ವಾಸಕ್ಕೆ ತೆಗೆದುಕೊಂಡು ನೇಮಕ ಮಾಡಬೇಕು' ಎಂದು ಬಿಜೆಪಿ ಸಂಸದ ಬಸವರಾಜ ಬೊಮ್ಮಾಯಿ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯಪಾಲರು ಒಳ ಮೀಸಲಾತಿಗೆ ಅಂಕಿತ ಹಾಕಿ ಆದೇಶ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ರಾಜ್ಯ ಸರ್ಕಾರ ಭರ್ತಿ ಮಾಡಬೇಕಿರುವ ನೇಮಕಾತಿಗೆ ಯಾವ ರೀತಿ ಪಾಲನೆ ಮಾಡಬೇಕು ಎನ್ನುವ ಬಗ್ಗೆ ಸ್ಪಷ್ಟನೆ ಬೇಕಿದೆ. ಆದರೆ, ಸರ್ಕಾರ ಗೊಂದಲಕ್ಕೆ ಸಿಲುಕಿದೆ' ಎಂದರು.

'ಹಿಂದಿನ ನಿಯಮ ಆಧರಿಸಿ ನೇಮಕ'

ಒಳ ಮೀಸಲಾತಿ– ಕೋರ್ಟ್‌ನಲ್ಲಿ ಇತ್ಯರ್ಥವಾಗಬೇಕು: ಸತೀಶ ಜಾರಕಿಹೊಳಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿದರಷ್ಟೇ ಗೊಂದಲಕ್ಕೆ ತೆರೆ
- ನಾಯಕತ್ವ ಗೊಂದಲ: ಹೈಕಮಾಂಡ್ ಶೀಘ್ರ ನಿರ್ಧರಿಸಲಿ

ಹರಿಹರ (ದಾವಣಗೆರೆ): 'ಒಳಮೀಸಲಾತಿ ವಿಚಾರ ಕೋರ್ಟ್‌ನಲ್ಲಿ ಇತ್ಯರ್ಥವಾಗದೆ ಏನೂ ಮಾಡಲಾಗದು. ಅಲ್ಲಿಯವರೆಗೆ ಕಾಯುವುದರಲ್ಲೂ ಅರ್ಥವಿಲ್ಲ' ಎಂದು ಲೋಕೋಪಯೋಗಿ ಸಚಿವ ಸತೀಶ ಜಾರಕಿಹೊಳಿ ಅವರು ಇಲ್ಲಿ ಅಭಿಪ್ರಾಯಪಟ್ಟರು.

'ಪರಿಶಿಷ್ಟ ಜಾತಿಯಲ್ಲಿ ಒಳಮೀಸಲಾತಿ ಜಾರಿ ನಂತರವೇ 56,000 ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಬೇಕೆಂಬ ಆಗ್ರಹವಿದೆ. ವಿಷಯ ಕೋರ್ಟ್‌ನಲ್ಲಿ ಇರುವ ಕಾರಣ ಈಗ ಹಳೆ ಮೀಸಲಾತಿಯನ್ನೇ ಮುಂದುವರಿಸಲು ನಿರ್ಧರಿಸಿದ್ದೇವೆ' ಎಂದು ಅವರು ಹೇಳಿದರು.


ಸತೀಶ ಜಾರಕಿಹೊಳಿ

ಇಲ್ಲಿನ ರಾಜನಹಳ್ಳಿಯ ಮಹರ್ಷಿ ವಾಲ್ಮೀಕಿ ಗುರುಪೀಠಕ್ಕೆ ಸೋಮವಾರ ಭೇಟಿ ನೀಡಿ ಪ್ರಸನ್ನಾನಂದ ಸ್ವಾಮೀಜಿಯ ಆರೋಗ್ಯ ವಿಚಾರಿಸಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದರು.

'ಪ್ರತಿ ವರ್ಷ 5,000ದಿಂದ 10,000 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆ ನಡೆಯುತ್ತದೆ. ಸದ್ಯಕ್ಕೆ ಪರಿಶಿಷ್ಟ ಜಾತಿಗೆ ಶೇ 15, ಪರಿಶಿಷ್ಟ ಪಂಗಡಕ್ಕೆ ಶೇ 3ರ ಮೀಸಲಾತಿಯನ್ನೇ ಮುಂದುವರಿಸುತ್ತೇವೆ' ಎಂದರು.

'ಪರಿಶಿಷ್ಟ ಜಾತಿ ಮತ್ತು ಪಂಗಡಕ್ಕೆ ಹೆಚ್ಚಿಸಿರುವ ಮೀಸಲಾತಿ ಪ್ರಮಾಣವನ್ನು ಕೇಂದ್ರ ಸರ್ಕಾರವು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸಿದರೆ ಮಾತ್ರ ಎಲ್ಲಾ ಗೊಂದಲಗಳೂ ಬಗೆಹರಿಯುತ್ತವೆ' ಎಂದರು.

'ಅಧಿಕಾರ ಹಂಚಿಕೆ ವಿಚಾರವಾಗಿ ಸೃಷ್ಟಿಯಾಗಿರುವ ಗೊಂದಲಗಳು ಬಗೆಹರಿಯಬೇಕೆಂಬುದು ಎಲ್ಲರ ಆಗ್ರಹ. ಪಕ್ಷದ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಈ ಕುರಿತು ಸಭೆ ನಡೆಸಲಿದ್ದಾರೆ' ಎಂದು ತಿಳಿಸಿದರು.

'ಅಧಿಕಾರ ಹಂಚಿಕೆ ಗೊಂದಲ ಬಗೆಹರಿಯಬೇಕು. ಇಲ್ಲವಾದರೆ ಕಾರ್ಯಕರ್ತರು, ಶಾಸಕರು, ಅಧಿಕಾರಿಗಳಲ್ಲೂ ಗೊಂದಲ ಉಂಟಾಗಲಿದೆ. ಹೈಕಮಾಂಡ್ ಶೀಘ್ರವೇ ನಿರ್ಧಾರ ಕೈಗೊಳ್ಳಬೇಕು' ಎಂದರು.

'ರತಿ–ಮನ್ಮಥ'ರ ನಗಿಸಿದರೆ ₹13 ಲಕ್ಷ

ರಾಣೆಬೆನ್ನೂರು: ಹೋಳಿ ಹಬ್ಬದ ಆಚರಣೆಯ ಅಂಗವಾಗಿ ಇಲ್ಲಿಯ ಜೀವಂತ ರತಿ–ಮನ್ಮಥರ ಆಚರಣೆಯು 66ನೇ ವರ್ಷ ಪೂರ್ಣಗೊಳಿಸಿದ್ದು, ಈ ಬಾರಿ 67ನೇ ವರ್ಷಾಚರಣೆಗೆ ಸಿದ್ಧತೆ ನಡೆದಿದೆ.

ನಗರದ ದೊಡ್ಡಪೇಟೆಯ ರಾಮಲಿಂಗೇಶ್ವರ ದೇವಸ್ಥಾನದ ಎದುರು ರಾಮಲಿಂಗೇಶ್ವರ ಸೇವಾ ಸಮಿತಿ ಮತ್ತು ಶಕ್ತಿ ಯುವಕ ಸಂಘದ (ಜೆ.ಪಿ.ಸಿ.ಜೆಡ್) ಆಶ್ರಯದಲ್ಲಿ ಪ್ರತಿ ವರ್ಷ ಈ ಆಚರಣೆ ಹಮ್ಮಿಕೊಳ್ಳಲಾಗುತ್ತಿದೆ.

ಮಾರ್ಚ್ 3ರಂದು ಸಂಜೆ 7 ಗಂಟೆಗೆ ಜೀವಂತ ರತಿ–ಮನ್ಮಥರು ವೇದಿಕೆಯಲ್ಲಿ ಕೂರುವರು.


ಜೀವಂತ ರತಿ ಮನ್ಮಥರಾದ ಗದಿಗೆಪ್ಪ ರೊಡ್ಡನವರ ಹಾಗೂ ಕುಮಾರ ಹಡಪದ

'ಇವರಿಬ್ಬರನ್ನು ನಗಿಸಿದವರಿಗೆ ಈ ಬಾರಿ ₹13 ಲಕ್ಷ ಮೊತ್ತದ ನಗದು ಬಹುಮಾನವಿದೆ.

ಕಾಮಣ್ಣನ ವೇಷದಲ್ಲಿ 47 ವರ್ಷದ, ಆಟೊ ಚಾಲಕ ಗದಿಗೆಪ್ಪ ರೊಡ್ಡನವರ (47), ರತಿ ವೇಷದಲ್ಲಿ 38 ವರ್ಷದ, ಕುಮಾರ ಹಡಪದ (38) ಇರುತ್ತಾರೆ. ಇವರನ್ನು ನಗಿಸಲು ವರ್ಷಗಳಿಂದ ಪ್ರಯತ್ನ ನಡೆದಿದೆ. ಆದರೆ, ಇವರಿಬ್ಬರೂ ನಕ್ಕಿಲ್ಲ. 'ಬಿ.ಎಸ್.ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದ ವೇಳೆ ವಿಧಾನಸೌಧದಲ್ಲಿ ಪ್ರದರ್ಶನ ನೀಡಿದ್ದೆವು. ನಗಿಸಲು ಯತ್ನಿಸಿ ಹಲವರು ವಿಫಲರಾಗಿದ್ದಾರೆ. ಈ ಬಾರಿ ನಗಿಸಿದವರಿಗೆ ಸಮಿತಿಯಿಂದ ₹13 ಲಕ್ಷ ಬಹುಮಾನವಿದೆ. ಸಂಜೆ 7 ರಿಂದ ರಾತ್ರಿ 12 ಗಂಟೆಯವರೆಗೆ ಪ್ರದರ್ಶನ ಇರಲಿದೆ' ಎಂದು ಗದಿಗೆಪ್ಪ ಮತ್ತು ಕುಮಾರ ತಿಳಿಸಿದರು.

ಪಕ್ಷಗಳಿಗೆ ಪ್ರತಿಷ್ಠೆಯಾದ ರಥದ ಬಟ್ಟೆ

ಪ್ರಜಾವಾಣಿ ವಾರ್ತೆ

ಹೊಳೆನರಸೀಪುರ (ಹಾಸನ ಜಿಲ್ಲೆ): ಇಲ್ಲಿನ ಲಕ್ಷ್ಮೀನರಸಿಂಹಸ್ವಾಮಿ ರಥೋತ್ಸವ ಮಂಗಳವಾರ (ಮಾರ್ಚ್ 3) ನಡೆಯಲಿದ್ದು, ರಥಕ್ಕೆ ಬಟ್ಟೆ ಹಾಕುವ ವಿಚಾರವು ಕಾಂಗ್ರೆಸ್–ಜೆಡಿಎಸ್‌ಗೆ ಪ್ರತಿಷ್ಠೆ ಪ್ರಶ್ನೆಯಾಗಿ ಪರಿಣಮಿಸಿದೆ. ಇದರಿಂದಾಗಿ ರಥೋತ್ಸವ ನಡೆಸಲು ತಾಲ್ಲೂಕು ಆಡಳಿತಕ್ಕೆ ಸಂಕಷ್ಟ ಎದುರಾಗಿದೆ.

ಈ ಬಾರಿ ಮಂಗಳವಾರ ಗ್ರಹಣ ಇರುವುದರಿಂದ ಹೊಸಬಟ್ಟೆ ಹಾಕುವುದು ಬೇಡ ಎಂದು ಶಾಸಕ ಎಚ್‌.ಡಿ. ರೇವಣ್ಣ ನೇತೃತ್ವದ ಸಭೆಯಲ್ಲಿ ನಿರ್ಧಾರವಾಗಿತ್ತು.

ಆದರೆ, ಸೋಮವಾರ ರಥಕ್ಕೆ ಕಾಂಗ್ರೆಸ್ ಮುಖಂಡರು ಹೊಸಬಟ್ಟೆ ಹಾಕಲು ಯತ್ನಿಸಿದರು. ಜೆಡಿಎಸ್‌ನವರು ಅದನ್ನು ತಡೆದು, ಹಳೆಯ ಬಟ್ಟೆ ಹಾಕಿದರು. ಮಧ್ಯಪ್ರವೇಶಿಸಿದ ಉಪ ವಿಭಾಗಾಧಿಕಾರಿ ಜಗದೀಶ್ ಗಂಗಣ್ಣವರ, 'ಜಿಲ್ಲಾಧಿಕಾರಿ ಸೂಚನೆಯಂತೆ ಈ ಬಾರಿ ರಥಕ್ಕೆ ಕೇವಲ ಹೂವಿನ ಅಲಂಕಾರ ಮಾಡಲಾಗುವುದು' ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಉಭಯ ಬಣಗಳು, ತಮ್ಮ ವಾದಕ್ಕೆ ಅಂಟಿಕೊಂಡಿವೆ. ಇತ್ತ ದೇಗುಲಕ್ಕೆ ಬಂದಿದ್ದ ಶಾಸಕ ಎಚ್‌.ಡಿ. ರೇವಣ್ಣ, ಅಧಿಕಾರಿಗಳ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು. 'ಜಿಲ್ಲಾಧಿಕಾರಿ, ಉಪ ವಿಭಾಗಾಧಿಕಾರಿ, ತಹಶೀಲ್ದಾರ್ ವಿರುದ್ಧ ಹಕ್ಕುಚ್ಯುತಿ ಮಂಡಿಸುವೆ' ಎಂದು ಎಚ್ಚರಿಕೆ ನೀಡಿದರು.


ಹೊಳೆನರಸೀಪುರದ ಲಕ್ಷ್ಮಿನರಸಿಂಹ ಸ್ವಾಮಿ ರಥಕ್ಕೆ ಹಳೆಯ ಬಟ್ಟೆ ಹಾಕಲಾಗಿತ್ತು

ನಂತರ ಸ್ಥಳಕ್ಕೆ ಬಂದ ಸಂಸದ ಶ್ರೇಯಸ್ ಪಟೇಲ್, 'ಜಿಲ್ಲಾಧಿಕಾರಿ ಸೂಚನೆಯಂತೆ ಹೂವಿನ ಅಲಂಕಾರದಲ್ಲಿ ರಥೋತ್ಸವ ನಡೆಸಬೇಕು' ಎಂದು ಉಪ ವಿಭಾಗಾಧಿಕಾರಿಗೆ ಸೂಚಿಸಿದರು.

'ಶಾಸಕರು–ಸಂಸದರು ಒಮ್ಮತದ ತೀರ್ಮಾನಕ್ಕೆ ಬಂದು, ರಥೋತ್ಸವ ನಡೆಸಲು ಅವಕಾಶ ಮಾಡಿಕೊಡಬೇಕು' ಎಂದು ಉಪವಿಭಾಗಾಧಿಕಾರಿ ಕೋರಿದರು. ಸಂಜೆಯ ವೇಳೆಗೆ ಬಿಗಿ ಪೊಲೀಸ್ ಬಂದೋಬಸ್ತ್‌ನಲ್ಲಿ ರಥಕ್ಕೆ ಹಾಕಿದ್ದ ಹಳೆಯ ಬಟ್ಟೆಗಳನ್ನು ತೆಗೆಯಲಾಗಿದ್ದು, ಹೂವಿನ ಅಲಂಕಾರ ಮಾಡಲಾಯಿತು. 'ಹೂವಿನ ಅಲಂಕಾರದಲ್ಲೇ ಬಿಗಿ ಭದ್ರತೆಯಲ್ಲಿ ರಥೋತ್ಸವ ನಡೆಯಲಿದೆ' ಎಂದು ಅಧಿಕಾರಿಗಳು ತಿಳಿಸಿದರು.

'ಸರ್ಕಾರಿ ಕ್ಷೌರದ ಅಂಗಡಿ ತೆರೆದವರ ವಿರುದ್ಧ ಕ್ರಮ ಜರುಗಿಸಿ'

ಪ್ರಜಾವಾಣಿ ವಾರ್ತೆ

ಗದಗ: 'ಜಿಲ್ಲೆಯ ಮುಂಡರಗಿ ತಾಲ್ಲೂಕಿನ ಶಿಂಗಟಾಲೂರುನಲ್ಲಿ ಸರ್ಕಾರಿ ಸಲೂನ್ ತೆರೆದು, ಅಸ್ಪೃಶ್ಯತೆ ಜೀವಂತವಾಗಿಡುವ ಕೆಲಸ ಮಾಡಿದ ಅಲ್ಲಿನ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಹಾಗೂ ತಹಶೀಲ್ದಾರ್ ವಿರುದ್ಧ ಜಿಲ್ಲಾಡಳಿತ ಕಾನೂನು ಕ್ರಮ ಜರುಗಿಸಬೇಕು' ಎಂದು ಸಾಹಿತಿ ಬಸವರಾಜ ಸೂಳಿಭಾವಿ ಆಗ್ರಹಿಸಿದರು.

'ಮೇಲ್ನೋಟಕ್ಕೆ ಇದು ಕ್ರಾಂತಿಕಾರಕ ಅನ್ನಿಸಿದರೂ ಆಳದಲ್ಲಿ ಅಸ್ಪೃಶ್ಯತೆ ಜೀವಂತ ಇಡುವ ಯತ್ನವಾಗಿದೆ' ಎಂದು ಎಂದು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

'ಹಡಪದ ಸಮಾಜದವರು ಪರಿಶಿಷ್ಟರಿಗೆ ಕ್ಷೌರ ಮಾಡುತ್ತಿರಲಿಲ್ಲ. ಸಮಸ್ಯೆ ಬಗೆಹರಿಸಲು ಅಧಿಕಾರಿಗಳು ಬೇರೆ ಊರಿನಿಂದ ಒಬ್ಬರನ್ನು ಕರೆತಂದು ಸಲೂನ್ ತೆರೆದಿದ್ದಾರೆ. ಅದಕ್ಕೆ ಅಭಿನಂದನೆ. ಆದರೆ, ಅಸ್ಪೃಶ್ಯತೆ ಆಚರಿಸಿದ ಜನರ ವಿರುದ್ಧ ಜಿಲ್ಲಾಡಳಿತದ ಕ್ರಮವೇನು? ಎಂದು ಪ್ರಶ್ನಿಸಿದರು.

'ಅಸ್ಪೃಶ್ಯತೆ ಆಚರಣೆ ಮಾಡುವ ಜನರಿಗೆ ಕಾನೂನಾತ್ಮಕ ರಕ್ಷಣೆ ಕೊಟ್ಟಿರುವ ಅಧಿಕಾರಿಗಳ ಮೇಲೆ ಜಿಲ್ಲಾಡಳಿತ ತಕ್ಷಣವೇ ಕ್ರಮ ಕೈಗೊಳ್ಳಬೇಕು. ಅವರ ಮೇಲೆ ಪ್ರಕರಣ ದಾಖಲಿಸಬೇಕು' ಎಂದು ಒತ್ತಾಯಿಸಿದರು.

'ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಎಸ್‌ಸಿ, ಎಸ್‌ಟಿ ದೌರ್ಜನ್ಯ ತಡೆ ಸಮಿತಿ ಸಭೆಗಳು ನಡೆಯುತ್ತವೆ. ಆದರೆ, ಈ ಸಭೆಗಳಲ್ಲಿ ಯಾರೇ ಒಬ್ಬ ಜನಪ್ರತಿನಿಧಿಯೂ ಈವರೆಗೆ ಭಾಗವಹಿಸಿಲ್ಲ. ಸಭೆಯಲ್ಲಿ ಪಾಲ್ಗೊಳ್ಳದೇ ಅಸ್ಪೃಶ್ಯತೆಯನ್ನು ಜೀವಂತಿಕೆ ಇಟ್ಟಿರುವ ಶಾಸಕರ ವಿರುದ್ಧವೂ ಕ್ರಮ ಜರುಗಿಸಬೇಕು' ಎಂದು ಆಗ್ರಹಿಸಿದರು.

ವರ್ಗಾವಣೆ ಭ್ರಷ್ಟಾಚಾರ: ಡಿಜಿಪಿಗೆ ಪತ್ರ

ಪ್ರಜಾವಾಣಿ ವಾರ್ತೆ

ಮಂಡ್ಯ: 'ಪೊಲೀಸ್ ಇಲಾಖೆಯ ವರ್ಗಾವಣೆಯಲ್ಲಿ ವ್ಯಾಪಕ ಭ್ರಷ್ಟಾಚಾರ ಮತ್ತು ರಾಜಕೀಯ ಹಸ್ತಕ್ಷೇಪ ಇದೆ ಎಂಬ ಆರೋಪಗಳಿಂದಾಗಿ ಡಿಜಿಟಲ್ ಕೌನ್ಸೆಲಿಂಗ್ ವಿಧಾನ ಅನುಸರಿಸಬೇಕು' ಎಂದು ಮಂಡ್ಯ ಲೋಕಾಯುಕ್ತ ಇನ್‌ಸ್ಪೆಕ್ಟರ್ ಬ್ಯಾಟರಾಯಗೌಡ ಅವರು ಪೊಲೀಸ್ ಮಹಾನಿರ್ದೇಶಕರಿಗೆ (ಡಿಜಿಪಿ) ಪತ್ರ ಬರೆದಿದ್ದಾರೆ.


'ಪೊಲೀಸ್ ಸಿಬ್ಬಂದಿ ಮಂಡಳಿ' (ಪಿಇಬಿ) ರಚಿಸಿ ವರ್ಗಾವಣೆ ಮಾಡಲಾಗುತ್ತಿದೆ. ಡಿವೈಎಸ್ಪಿ, ಪಿಐ, ಪಿಎಸ್‌ಐ ದರ್ಜೆಯ ಪೊಲೀಸ್ ಅಧಿಕಾರಿಗಳು ಆಯಕಟ್ಟಿನ ಸ್ಥಳಗಳಿಗೆ ವರ್ಗಾವಣೆ ಹೊಂದಲು ಲಕ್ಷಾಂತರ, ಕೋಟ್ಯಂತರ ರೂಪಾಯಿ ಲಂಚ ನೀಡುತ್ತಿದ್ದಾರೆ. ಖರ್ಚು ಮಾಡಿದ ಹಣ ಸಂಪಾದನೆ ಸಲುವಾಗಿ ಅಕ್ರಮ ಚಟುವಟಿಕೆಗಳ ಜೊತೆಗೆ ಸಾರ್ವಜನಿಕರಿಂದ ಹಣ ಸುಲಿಗೆ ಮಾಡುತ್ತಿದ್ದಾರೆ ಎಂದು ಜನಪ್ರತಿನಿಧಿಗಳು ವಿಧಾನಸಭೆ ಮತ್ತು ವಿಧಾನಪರಿಷತ್‌ನಲ್ಲಿ ನೇರವಾಗಿ ಆರೋಪ ಮಾಡಿದ್ದಾರೆ' ಎಂದಿದ್ದಾರೆ.

'ಒಂದು ಪೊಲೀಸ್ ಠಾಣೆ, ವೃತ್ತ, ಉಪವಿಭಾಗಕ್ಕೆ ಒಂದಕ್ಕಿಂತ ಹೆಚ್ಚು ವರ್ಗಾವಣೆ ಕೋರಿಕೆ ಅರ್ಜಿಗಳು ಸಲ್ಲಿಕೆಯಾದರೆ, ಸೇವಾ ಹಿರಿತನ ಪರಿಗಣಿಸಿ, ವರ್ಗಾವಣೆ ಮಾಡಬೇಕು. ಕರ್ತವ್ಯಲೋಪದ ಮೇಲೆ, ಕ್ರಿಮಿನಲ್ ಪ್ರಕರಣಗಳ ಸಂಬಂಧ ಅಮಾನತು ಗೊಂಡರೆ ವಿಚಾರಣೆ ಮುಗಿಯುವವರೆಗೆ ಕಡ್ಡಾಯವಾಗಿ ಕಾರ್ಯ ನಿರ್ವಾಹಕೇತರ (ನಾನ್ ಎಕ್ಸಿಕ್ಯೂಟಿವ್) ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುವಂತೆ ನಿಯಮ ತರಬೇಕು' ಎಂದು ಕೋರಿದ್ದಾರೆ.

'ಒಂದು ಕಾರ್ಯನಿರ್ವಾಹಕ, ಕಾರ್ಯನಿರ್ವಾಹಕೇತರ ಹುದ್ದೆಯ ಗರಿಷ್ಠ ಅವಧಿಯನ್ನು 2 ವರ್ಷಕ್ಕೆ ಸೀಮಿತಗೊಳಿಸಬೇಕು. ಒಬ್ಬ ಅಧಿಕಾರಿ ತನ್ನ ಸೇವಾವಧಿಯಲ್ಲಿ ಮೂರನೇ ಒಂದು ಭಾಗ ಕಡ್ಡಾಯವಾಗಿ ಕಾರ್ಯ ನಿರ್ವಾಹಕೇತರ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸಬೇಕು. ಬೆಂಗಳೂರು ನಗರ ಮತ್ತು ಇತರ ಕಮಿಷನರೇಟ್ ಪೊಲೀಸ್ ಠಾಣೆಗಳಲ್ಲಿ ಗರಿಷ್ಠ 6 ವರ್ಷ ಕರ್ತವ್ಯ ನಿರ್ವಹಿಸುವಂತೆ ನಿಯಮ ರೂಪಿಸಬೇಕು' ಎಂದು ಮನವಿ ಮಾಡಿದ್ದಾರೆ.



'ಸಿ' ಮತ್ತು 'ಇ' ವಿಟಮಿನ್‌ಗಳು ಹೇರಳವಾಗಿರುವ ಅವಕಾಡೊಗಳ ಸೇವನೆಯಿಂದ ಚರ್ಮದಲ್ಲಿ ಕೊಲಾಜೆನ್ ಉತ್ಪಾದನೆ ಹೆಚ್ಚಾಗುತ್ತದೆ. ಚರ್ಮ ಕಾಂತಿಯಿಂದ ಕೂಡಿರಲು ಕೊಲಾಜೆನ್ ಬಹಳ ಮುಖ್ಯ.



ಕಾಫಿ- ಚಹಾಗಳ ರುಚಿಗೆ ಕೆಡದಿರಲಿ ಆರೋಗ್ಯ

• ಡಾ. ಕುಶ್ವಂತ್ ಕೋಳಿಬೈಲು

ವಿವಿಧ ಪ್ರದೇಶಗಳಲ್ಲಿ ಜನರು ತಮ್ಮ ಅಭಿರುಚಿ ಮತ್ತು ತಮ್ಮ ಆಹಾರ ಸಂಸ್ಕೃತಿಗೆ ಅನುಗುಣವಾಗಿ ವಿವಿಧ ಬಗೆಯ ಲಘು ಪಾನೀಯವನ್ನು ಸೇವಿಸುತ್ತಾರೆ. ಕಾಫಿ, ಚಹಾ ಮತ್ತು ಹಣ್ಣಿನ ರಸಗಳನ್ನು ಆಯಾ ಹವಾಮಾನಕ್ಕೆ ಅನುಗುಣವಾಗಿ ಬಳಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಇವುಗಳ ಅತಿಯಾದ ಸೇವನೆಯಿಂದಾಗಿ ಆರೋಗ್ಯದಲ್ಲಿ ವ್ಯತ್ಯಾಸಗಳು ಕಂಡುಬರಬಹುದು.

ಐತಿಹಾಸಿಕವಾಗಿ ಭಾರತದಲ್ಲಿ ಜನರು ಚಹಾ ಮತ್ತು ಕಾಫಿಯನ್ನು ಸೇವಿಸುವ ಅಭ್ಯಾಸವನ್ನು ಶುರು ಹಚ್ಚಿಕೊಂಡಿದ್ದು ಕಳೆದ ಶತಮಾನದಿಂದ. ಚಹಾ ಮತ್ತು ಕಾಫಿಯನ್ನು ಭಾರತದಲ್ಲಿ ಬೆಳೆಸಲು ಉತ್ತೇಜಿಸಿದರ ಹಿಂದೆ ಮತ್ತು ಅದರ ಸೇವನೆಯನ್ನು ಭಾರತೀಯರಲ್ಲಿ ಹೆಚ್ಚು ಜನಪ್ರಿಯಗೊಳಿಸಿದರ ಹಿಂದೆ ಬ್ರಿಟಿಷರ ಪಾತ್ರವಿದೆ. ಈಗಿನ ದಿನಗಳಲ್ಲಿ ಶೇಕಡ ಎಂಬತ್ತರಷ್ಟು ಭಾರತೀಯರು ನಿತ್ಯ ಚಹಾ, ಕಾಫಿ ಅಥವಾ ಒಂದಿಲ್ಲೊಂದು ಪಾನೀಯವನ್ನು ಸೇವಿಸುವವರಾಗಿದ್ದಾರೆ ಮತ್ತು ಚಹಾ ಉತ್ತರ ಭಾರತದ ಜನರ ಅಡುಗೆ ಮನೆಯ ಅವಿಭಾಜ್ಯ ಅಂಗವಾಗಿದೆ. ಕಾಫಿ ದಕ್ಷಿಣ ಭಾರತದಲ್ಲಿ ಮತ್ತು ನಗರ ಪ್ರದೇಶಗಳಲ್ಲಿ ಹೆಚ್ಚು ಜನಮನ್ನಣೆ ಪಡೆದುಕೊಂಡಿದೆ.

ಐತಿಹಾಸಿಕವಾಗಿ ಭಾರತೀಯರು ಮೊಸರು, ಮಜ್ಜಿಗೆ, ಲಸ್ಸಿ, ಶರಬತ್ತುಗಳಂತಹ ಪಾನೀಯವನ್ನು ಸೇವಿಸುತ್ತಾ ಬಂದವರಾಗಿದ್ದಾರೆ. ಕಳೆದ ಒಂದು ಶತಮಾನದಲ್ಲಿ ಚಹಾ ಮತ್ತು ಕಾಫಿಯ ಬಳಕೆ ಹೆಚ್ಚುತ್ತಾ ಹೋಗುವ ಜೊತೆಗೆ ಅದರ ಅತಿಯಾದ ಬಳಕೆಯಿಂದ ಸಮಸ್ಯೆಗಳೂ ಕಾಣಿಸಿಕೊಳ್ಳತೊಡಗಿವೆ.

ಚಹಾ ಮತ್ತು ಕಾಫಿಯ ಸೇವನೆಯು ನಮ್ಮ ಆರೋಗ್ಯದ ಮೇಲೆ ಯಾವ ರೀತಿಯ ಪರಿಣಾಮವನ್ನು ಉಂಟುಮಾಡುತ್ತದೆ ಎಂಬ ವಿಚಾರದ ಬಗ್ಗೆ ನಮಗೆ ಸೂಕ್ತ ಮಾಹಿತಿ ಇರಬೇಕಾಗುತ್ತದೆ. ಚಹಾ ಅಥವಾ ಕಾಫಿ ಕುಡಿದ ತಕ್ಷಣ ನಮ್ಮ ಶರೀರದಲ್ಲಿ ಉತ್ತೇಜನ ಮತ್ತು ಚೈತನ್ಯ ಬರಲು ಅದರಲ್ಲಿರುವ ಕೆಫೀನಿನ ಅಂಶವು ಕಾರಣವಾಗಿರುತ್ತದೆ. ಚಹಾಕ್ಕೆ ಹೋಲಿಸಿದರೆ ಕಾಫಿಯಲ್ಲಿ ದುಪ್ಪಟ್ಟು ಪ್ರಮಾಣದಲ್ಲಿ ಕೆಫೀನಿನ ಅಂಶವು ಇರುತ್ತದೆ. ಇದರ ಜೊತೆಗೆ ದೇಹಕ್ಕೆ ಉಪಯುಕ್ತವಾಗುವ ಇತರೆ ಆ್ಯಂಟಿ ಆಕ್ಸಿಡೆಂಟ್ಸ್ (antioxidants) ಚಹಾ ಮತ್ತು ಕಾಫಿಯಲ್ಲಿ ಕಂಡುಬರುತ್ತದೆ.

ಕೆಫೀನ್ (Caffeine) ನಮ್ಮ ದೇಹದ ಮೇಲೆ, ವಿಶೇಷವಾಗಿ ನರಮಂಡಲದ ಮೇಲೆ ಉತ್ತೇಜಕವಾಗಿ (Stimulant) ಕಾರ್ಯನಿರ್ವಹಿಸುತ್ತದೆ. ಇದು ಚಹಾ, ಕಾಫಿ ಮತ್ತು ಕೋಕೋ ಬೀಜಗಳಲ್ಲಿ ನೈಸರ್ಗಿಕವಾಗಿ ಕಂಡುಬರುತ್ತದೆ. ಕೆಫೀನ್ ಅಂಶವು ಎಡಿನೊಸಿನ್ (adenosine) ಎಂಬ ರಾಸಾಯನಿಕದ ಪರಿಣಾಮವನ್ನು ತಡೆಯುವ ಮೂಲಕ ನಿದ್ರೆಯನ್ನು ಹೋಗಲಾಡಿಸುತ್ತದೆ. ನಿದ್ದೆ ಬಂದಾಗ ಕಾಫಿ ಮತ್ತು ಚಹಾ ಸೇವಿಸುವುದರಿಂದ ಜಡತ್ವ ಮಾಯವಾಗಿ ಚೈತನ್ಯ ಮೂಡುವುದು ಇದೇ ಕಾರಣದಿಂದಾಗಿದೆ. ನಿದ್ರಾಹೀನತೆಯಿಂದ ಬಳಲುವವರು ಸಂಜೆಯ ಬಳಿಕ ಕಾಫಿ ಮತ್ತು ಚಹಾ ಸೇವಿಸಬಾರದು ಎಂಬ ಸಲಹೆಯ ಹಿಂದೆಯೂ ಇದೇ ತರ್ಕವಿದೆ.

ಅತಿಯಾದ ಕೆಫೀನ್ ಸೇವನೆಯು ಹೃದಯದ ಬಡಿತವನ್ನು ಹೆಚ್ಚಿಸುತ್ತದೆ ಮತ್ತು ತಾತ್ಕಾಲಿಕವಾಗಿ ರಕ್ತದೊತ್ತಡವನ್ನು ಹೆಚ್ಚಿಸಬಹುದು. ಅತಿಯಾದ ಕೆಫೀನ್ ಅಂಶವು ಹೊಟ್ಟೆಯಲ್ಲಿ ಆಮ್ಲದ ಉತ್ಪಾದನೆಯನ್ನು ಹೆಚ್ಚಿಸುವ ಕಾರಣದಿಂದ ಇದು ಅಸಿಡಿಟಿ ಅಥವಾ ಎದೆಯುರಿಗೆ ಕಾರಣವಾಗಬಹುದು. ಕೆಫೀನ್ ದೇಹದ ಚಯಾಪಚಯ ಕ್ರಿಯೆಯನ್ನು ವೇಗವಾಗಿಸುತ್ತದೆ. ಈ ಕಾರಣದಿಂದಾಗಿ ಇದು ತೂಕವನ್ನು ಕಡಿಮೆ ಮಾಡಬಹುದು. ದಿನಕ್ಕೆ ಮೂರು ನಾಲ್ಕು ಕಪ್ ಕಾಫಿ ಅಥವಾ ಚಹಾ ಸೇವನೆಯಿಂದ ಆರೋಗ್ಯಕ್ಕೆ ತೊಂದರೆಯಾಗುವುದಿಲ್ಲ. ಸುಮಾರು ನಾನೂರು ಮಿಲಿಗ್ರಾಮಿನಷ್ಟು ಕೆಫೀನನ್ನು ದೇಹವು ಯಾವುದೇ ದುಷ್ಪರಿಣಾಮಗಳಿಲ್ಲದೆ ಸಹಿಸಿಕೊಳ್ಳಬಲ್ಲದು.

ಕಾಫಿ ಮತ್ತು ಚಹಾಗಳಿಗೆ ಹಾಲು, ಸಕ್ಕರೆ/ ಬೆಲ್ಲ ಬೆರೆಸದೆ ಹಾಗೇ ಕುಡಿಯುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು

ಕಾಫಿ ಮತ್ತು ಚಹಾದ ಸೇವನೆಯ ಪ್ರಮಾಣವು ಅಗತ್ಯಕ್ಕಿಂತ ಹೆಚ್ಚಾದಲ್ಲಿ ಅವು ಹಲವು ಸಮಸ್ಯೆಗಳನ್ನು ಉಂಟು ಮಾಡುತ್ತವೆ. ಚಹಾ ಮತ್ತು ಕಾಫಿಗೆ ಸಕ್ಕರೆ ಅಥವಾ ಬೆಲ್ಲ ಬೆರೆಸಿ ಅದನ್ನು ಸಿಹಿಯಾಗಿಸಿ ಕುಡಿಯುವುದು ದೇಹಕ್ಕೆ ಹಾನಿಕಾರಕವಾಗಿದೆ. ಕಾಫಿ ಮತ್ತು ಚಹಾಗಳಿಗೆ ಹಾಲು ಅಥವಾ ಸಕ್ಕರೆ/ಬೆಲ್ಲ ಬಳಸದೆ ಕುಡಿಯುವುದು ಆರೋಗ್ಯ ದೃಷ್ಟಿಯಿಂದ ಉತ್ತಮವಾಗಿರುತ್ತದೆ.


ಸಕ್ಕರೆಗಿಂತ ಬೆಲ್ಲ ಉತ್ತಮವೆಂಬ ಭ್ರಮೆಯು ಹೆಚ್ಚು ಪ್ರಚಲಿತದಲ್ಲಿದೆ. ಆದರೆ ವಾಸ್ತವವಾಗಿ ಹೆಚ್ಚು ಗ್ಲೈಸೆಮಿಕ್ ಇಂಡೆಕ್ಸ್ ಹೊಂದಿರುವ ಬೆಲ್ಲವು ರಕ್ತದಲ್ಲಿರುವ ಸಕ್ಕರೆಯ ಪ್ರಮಾಣವನ್ನು ಸಕ್ಕರೆಗಿಂತ ವೇಗವಾಗಿ ಹೆಚ್ಚು ಮಾಡಬಲ್ಲದು. ಕಾಫಿ ಅಥವಾ ಚಹಾದಲ್ಲಿರುವ ಕೆಫೀನಿನ ಮತ್ತು ಆ್ಯಂಟಿ ಆಕ್ಸಿಡೆಂಟ್‌ಗಳಿಂದ ಲಾಭದಾಯಕ ಅಂಶಗಳನ್ನು ಪಡೆಯಲು ಹಾಲು ಮತ್ತು ಸಕ್ಕರೆ /ಬೆಲ್ಲ ಬೆರೆಸದ ಕಾಫಿ ಮತ್ತು ಚಹಾ ಸೇವಿಸುವುದು ಉತ್ತಮ.

ಹಣ್ಣುಗಳಲ್ಲಿ ದೇಹಕ್ಕೆ ಅಗತ್ಯವಾಗಿರುವ ಹಲವಾರು ಖನಿಜಾಂಶ ಮತ್ತು ವಿಟಮಿನ್‌ಗಳು ಇರುತ್ತವೆ. ಅದಕ್ಕಿಂತಲೂ ಮುಖ್ಯವಾಗಿ ಹಣ್ಣಿನಲ್ಲಿರುವ ನಾರಿನ ಅಂಶವು ದೇಹದಲ್ಲಿನ ಜೀರ್ಣಕ್ರಿಯೆಗೆ ಮತ್ತು ಸಕ್ಕರೆ ಹಾಗೂ ಕೊಬ್ಬಿನ ಅಂಶದ ನಿಯಂತ್ರಣಕ್ಕೆ ಸಹಾಯಕಾರಿಯಾಗಿರುತ್ತದೆ.

ನಮ್ಮ ದೇಶದಲ್ಲಿ ಹಣ್ಣಿನ ರಸದ ಸೇವನೆಯೂ ಹೆಚ್ಚು ಚಾಲ್ತಿಯಲ್ಲಿದೆ. ಹಣ್ಣಿನ ರಸವನ್ನು ಕುಡಿಯುವುದಕ್ಕಿಂತ ಇಡೀ ಹಣ್ಣನ್ನು ಸೇವಿಸುವುದು ಹೆಚ್ಚು ಉಪಯುಕ್ತವಾಗಿದೆ. ಇದರಿಂದಾಗಿ ದೇಹದಲ್ಲಿ ಸಕ್ಕರೆಯ ಪ್ರಮಾಣವು ಒಮ್ಮೆಗೆ ಏರುವುದಿಲ್ಲ ಮತ್ತು ನಾರಿನ ಅಂಶವು ಹೆಚ್ಚು ದೇಹಕ್ಕೆ ದೊರಕುತ್ತದೆ. ನಾರಿನ ಅಂಶವು ನಮ್ಮ ಆಹಾರದ ಭಾಗವಾದರೆ ಚಯಾಪಚಯ ಕ್ರಿಯೆ ಉತ್ತಮಗೊಳ್ಳುತ್ತದೆ.

ಹಣ್ಣಿನ ರಸಕ್ಕೆ ಸಕ್ಕರೆ ಬೆರೆಸುವುದು ಮತ್ತು ಸಕ್ಕರೆಯನ್ನು ಸೇರಿಸಿರುವ ಕಾರ್ಬೋನೇಟೆಡ್ (ಸೋಡಾ) ಪಾನೀಯಗಳನ್ನು ಬಳಸುವುದು ಬಹಳ ಅಪಾಯಕಾರಿಯಾಗಿದೆ. ಅದರ ಜಾಹೀರಾತುಗಳಲ್ಲಿ ಬರುವ ತಾರೆಯರು ಮತ್ತು ಕ್ರೀಡಾಪಟುಗಳು ಅಪ್ಪಿತಪ್ಪಿಯೂ ಅಂತಹ ಪಾನೀಯವನ್ನು ಸೇವಿಸದ ಕಾರಣದಿಂದ ಅವರು ತೆರೆಯ ಮೇಲೆ ಅಂದವಾಗಿ ಕಾಣುತ್ತಾರೆ.

ಬೇಸಿಗೆಯ ಸಮಯದಲ್ಲಿ ದೇಹಕ್ಕೆ ನೀರಿನ ಅವಶ್ಯಕತೆ ಸ್ವಲ್ಪ ಹೆಚ್ಚಾಗಿರುತ್ತದೆ. ದೇಹವು ನಿರ್ಜಲೀಕರಣವಾಗದಂತೆ ತಡೆಯಲು ದಿನಕ್ಕೆ ಎರಡು ಮೂರು ಲೀಟರಿನಷ್ಟು ನೀರು ಕುಡಿಯುವ ಅಗತ್ಯ ಇರುತ್ತದೆ. ಕಾಫಿ, ಚಹಾ ಮುಂತಾದ ಪಾನೀಯಗಳನ್ನು ಇತಿಮಿತಿಯಲ್ಲಿ ಸೇವಿಸುವುದು ಆರೋಗ್ಯದ ದೃಷ್ಟಿಯಿಂದ ಲಾಭದಾಯಕ ಅಭ್ಯಾಸವಾಗಿದೆ. ಸಕ್ಕರೆ ಮಿಶ್ರಿತ ಕಾರ್ಬೋನೇಟೆಡ್ ಪಾನೀಯಗಳಿಂದ ದೂರವಿರುವುದು ಉತ್ತಮ.



• ರಘು ವಿ.

ನಂಬಿಕೆಯೇ ಬದುಕಿನ ಬುನಾದಿ

ಇಂದಿನ ಯಾಂತ್ರಿಕ ಜೀವನದಲ್ಲಿ, ಮನುಷ್ಯ ಸಂಬಂಧಗಳು ದಿನೇ ದಿನೇ ಸಂಕೀರ್ಣವಾಗುತ್ತಿವೆ. ಒಂದು ಕಾಲದಲ್ಲಿ ನೆರೆಹೊರೆಯವರ ಮನೆ ಬಾಗಿಲಿಗೆ ಬೀಗ ಹಾಕದಿದ್ದ ಕಾಲವಿತ್ತು. ಇಂದು ಅಪಾರ್ಟ್ಮೆಂಟ್‌ಗಳಲ್ಲಿ ಪಕ್ಕದ ಮನೆಯವರನ್ನೇ ಗುರುತು ಹಿಡಿಯಲಾಗದ ಸ್ಥಿತಿ ಬಂದಿದೆ. ಇದಕ್ಕೆಲ್ಲಾ ಮೂಲ ಕಾರಣ ನಮ್ಮ ನಡುವೆ ಬೆಳೆಯುತ್ತಿರುವ ಅಪನಂಬಿಕೆ ಮತ್ತು ಕುಸಿಯುತ್ತಿರುವ ವಿಶ್ವಾಸ. ಮಾನವ ಸಂಬಂಧಗಳನ್ನು ಬೆಸೆಯುವ ಪ್ರಮುಖ ಸೇತುವೆ ಎಂದರೆ ನಂಬಿಕೆ ಮತ್ತು ವಿಶ್ವಾಸ. ಅದು ಇದ್ದರೆ ಸಂಬಂಧ ಗಟ್ಟಿ; ಇಲ್ಲದಿದ್ದರೆ ಬರೀ ಹೊಡೆದಾಟ, ಅನುಮಾನ ಮತ್ತು ಒಂಟಿತನ.

ವಿಶ್ವಾಸ ಎಂದರೇನು?

ವಿಶ್ವಾಸ ಎಂದರೆ ಒಬ್ಬರ ಮೇಲೆ ಇನ್ನೊಬ್ಬರಿಗಿರುವ ನಂಬಿಕೆ. ನಮ್ಮ ನೋವು-ನಲಿವುಗಳನ್ನು ಹಂಚಿಕೊಳ್ಳಲು ಒಬ್ಬರು ಇದ್ದಾರೆ ಎಂಬ ಭರವಸೆ. ನಮ್ಮ ಬೆನ್ನಿಗೆ ಒತ್ತಾಸೆಯಾಗಿ ಯಾರೋ ನಿಂತಿದ್ದಾರೆಂಬ ಧೈರ್ಯ. ಡಿ.ವಿ.ಜಿ. ಅವರು ತಮ್ಮ 'ಮಂಕುತಿಮ್ಮನ ಕಗ್ಗ'ದಲ್ಲಿ ಹೇಳುವಂತೆ ನಿಜವಾದ ಸುಖವೆಂಬುದು ಬಾಹ್ಯ ವಸ್ತುಗಳಲ್ಲಿಲ್ಲ, ಆದರೆ ಅದು ಆತ್ಮದ ಗುಣ. 'ಮೌನದೊಳೊ ಮಾತಿನೊಳೊ ಹಾಸ್ಯದೊಳೊ ಹಾಡಿನೊಳೊ ಮಾನವಂ ಪ್ರಣಯದೊಳೊ ವೀರ ವಿಜಯದೊಳೊ ಏನೋ ಎಂತೋ ಸಮಾಧಾನಗಳನರಸುತಿಹ ನಾನಂದವಾತ್ಮಗುಣ ಮಂಕುತಿಮ್ಮ'; ಅಂದರೆ, ಮೌನ, ಮಾತು, ಹಾಸ್ಯ, ಪ್ರೀತಿ, ವಿಜಯಗಳ ಮೂಲಕ ಮನುಷ್ಯನು ಸಮಾಧಾನವನ್ನು ಹುಡುಕುತ್ತಾನೆ, ಆದರೆ ನಿಜವಾದ ಆನಂದವು ಆತ್ಮದ ಗುಣ. ಇದೇ ರೀತಿ, ಇತರರಲ್ಲಿ ನಾವು ಹುಡುಕುವ ವಿಶ್ವಾಸವೂ ಒಂದು ಆಂತರಿಕ ಭದ್ರತೆಯ ಭಾವನೆಯಾಗಿದೆ.

ವಿಶ್ವಾಸವು ಕೇವಲ ವ್ಯಕ್ತಿಗಳ ನಡುವೆ ಮಾತ್ರವಲ್ಲ, ಕುಟುಂಬ, ಸಮಾಜ ಮತ್ತು ರಾಷ್ಟ್ರದ ನಡುವೆಯೂ ಇರಬೇಕಾದ ಅನಿವಾರ್ಯ ಗುಣ. ತಂದೆ-ತಾಯಿ ಮತ್ತು ಮಕ್ಕಳ ನಡುವಿನ ವಿಶ್ವಾಸವೇ ಮನೆಯನ್ನು ಸ್ವರ್ಗವಾಗಿಸುತ್ತದೆ. ಗಂಡ-ಹೆಂಡತಿಯರ ನಡುವಿನ ನಂಬಿಕೆಯೇ ದಾಂಪತ್ಯವನ್ನು ಗಟ್ಟಿಯಾಗಿಸುತ್ತದೆ. ಸ್ನೇಹಿತರ ನಡುವಿನ ಪ್ರಾಮಾಣಿಕತೆಯೇ ಸ್ನೇಹಕ್ಕೆ ಬೆಲೆ ತರುತ್ತದೆ.

ವಿಶ್ವಾಸ ನಶಿಸುತ್ತಿರುವುದೇಕೆ?

ತಂತ್ರಜ್ಞಾನ ನಮ್ಮನ್ನು ಜೋಡಿಸಿದೆ, ಆದರೆ ಮನಸ್ಸುಗಳನ್ನು ಬೇರ್ಪಡಿಸಿದೆ. ಮೊಬೈಲ್‌ನಲ್ಲಿ ನೂರಾರು ದೂರವಾಣಿ ಸಂಖ್ಯೆಗಳಿವೆ. ಆದರೆ ನೋವಾದಾಗ ಮಾತನಾಡಲು ಒಬ್ಬ ಆಪ್ತ ಸ್ನೇಹಿತನಿಲ್ಲ! ಸ್ಪರ್ಧೆಯ ಈ ಯುಗದಲ್ಲಿ, ತಾವು ಬೆಳೆಯಲು ಯಾರನ್ನಾದರೂ ಹಿಂದಕ್ಕೆ ತಳ್ಳಬೇಕು ಎಂಬ ಮನೋಭಾವ ಬೆಳೆದಿದೆ. ಇದರಿಂದ ವ್ಯಕ್ತಿಗಳ ನಡುವೆ ಅಪನಂಬಿಕೆಯ ಬೇರು ಆಳವಾಗುತ್ತಿದೆ. ಸಣ್ಣ ಸಣ್ಣ ಸ್ವಾರ್ಥಗಳು, ಅಭದ್ರತೆ ಮತ್ತು ಅಸೂಯೆ ನಮ್ಮ ನಡುವಿನ ಪಾವಿತ್ರ್ಯತೆಯನ್ನು ಕಸಿದುಕೊಳ್ಳುತ್ತಿವೆ. ಸಮಾಜ ತತ್ವಜ್ಞಾನಿ ಚಾರ್ಲ್ಸ್ ಹಾರ್ಟ್ಶೋರ್ನ್ ಅವರ ಮಾತಿನಂತೆ, 'ವಿಶ್ವಾಸವೆಂಬುದು ಸಾಮಾನ್ಯವಾಗಿ ನಂಬಿಕೆಯೇ. ಇದರ ಅರ್ಥ, ನಮ್ಮ ಪಾಲಿನ ಕೆಲಸವನ್ನು ನಾವು ಮಾಡುವುದು ಮತ್ತು ಉಳಿದ ಭಾಗವನ್ನು ವ್ಯವಸ್ಥೆಯು ಪೂರೈಸುತ್ತದೆ ಎಂಬ ಆತ್ಮವಿಶ್ವಾಸ ಹೊಂದಿರುವುದು' ವ್ಯಕ್ತಿಯಲ್ಲಿ ವಿಶ್ವಾಸವೇ ಕುಸಿದಾಗ, ಸಮಾಜದ ವ್ಯವಸ್ಥೆಯೇ ಕುಸಿಯಲಾರಂಭಿಸುತ್ತದೆ.

ವಿಶ್ವಾಸದ ಅಗತ್ಯವೇನು?

ವಿಶ್ವಾಸವಿಲ್ಲದ ಸಮಾಜದಲ್ಲಿ ಯಾರಿಗೂ ಯಾರ ಮೇಲೂ ನಂಬಿಕೆ ಇರುವುದಿಲ್ಲ. ವ್ಯಾಪಾರ ವಹಿವಾಟು ಸ್ಥಗಿತವಾಗುತ್ತದೆ. ನ್ಯಾಯಾಲಯಗಳಲ್ಲಿ ಮಾತ್ರ ಪ್ರಕರಣಗಳು ಹೆಚ್ಚಾಗುತ್ತವೆ. ಮನೆಗಳು ಕಾರಾಗೃಹವಾಗುತ್ತವೆ. ಮಾನಸಿಕ ಒತ್ತಡ, ಖಿನ್ನತೆ ಹೆಚ್ಚಾಗುತ್ತದೆ. ಆದರೆ ವಿಶ್ವಾಸವಿದ್ದಾಗ, ಸಮಾಜದಲ್ಲಿ ಸಹಕಾರ ಮತ್ತು ಸಹಬಾಳ್ವೆ ಬೆಳೆಯುತ್ತದೆ. ಜನರು ಒಬ್ಬರಿಗೊಬ್ಬರು ನೆರವಾಗುತ್ತಾರೆ. ಆರ್ಥಿಕ ಪ್ರಗತಿ ಸಾಧ್ಯವಾಗುತ್ತದೆ. ಏಕೆಂದರೆ ವಿಶ್ವಾಸವೇ ವ್ಯವಹಾರದ ಮೂಲಾಧಾರ. ಬಿಬಿಸಿಯ 'ಥಾಟ್ ಫಾರ್ ದಿ ಡೇ' ಕಾರ್ಯಕ್ರಮದಲ್ಲಿ ರೆವರೆಂಡ್ ಡಾ. ಸ್ಯಾಮ್ ವೆಲ್ಸ್ ಅವರು, 'ನಂಬಿಕೆ ಕಳೆದುಕೊಳ್ಳುವುದು ತುಂಬಾ ಸುಲಭ; ಅದನ್ನು ಮರಳಿ ಪಡೆಯುವುದು ತುಂಬಾ ಕಷ್ಟ' ಎಂದಿದ್ದಾರೆ. ಆದ್ದರಿಂದ ಒಮ್ಮೆ ಕಳೆದುಕೊಂಡ ವಿಶ್ವಾಸವನ್ನು ಮರಳಿ ಪಡೆಯುವುದು ಅತ್ಯಂತ ಕಠಿಣ ಸಾಧನೆ.

ವಿಶ್ವಾಸವನ್ನು ಕಾಪಾಡಿಕೊಳ್ಳುವುದು ಹೇಗೆ?

ನಂಬಿಕೆ ಕಟ್ಟುವುದು ತುಂಬಾ ಕಷ್ಟ, ಕೆಡವುವುದು ಬಹಳ ಸುಲಭ. ಅದನ್ನು ಕಾಪಾಡಿಕೊಳ್ಳಲು ನಮ್ಮಿಂದಾಗುವ ಪ್ರಯತ್ನಗಳು ಇಂತಿವೆ:

ಪ್ರಾಮಾಣಿಕತೆ: ಸಂಬಂಧದಲ್ಲಿ ಪ್ರಾಮಾಣಿಕತೆ ಮುಖ್ಯ. ಸುಳ್ಳು ಹೇಳುವುದು, ಮೋಸ ಮಾಡುವುದು ವಿಶ್ವಾಸವನ್ನು ಕೂಡಲೇ ಮುರಿಯುತ್ತದೆ. ನಮ್ಮ ಮಾತು ಮತ್ತು ಕೃತಿಯ ನಡುವಿನಲ್ಲಿ ಅಂತರವಿಲ್ಲದಂತೆ ನೋಡಿಕೊಳ್ಳಬೇಕು.

ಗೌಪ್ಯತೆ ಕಾಪಾಡುವುದು: ನಮ್ಮಲ್ಲಿ ನಂಬಿ ಹೇಳಿದ ಮಾತುಗಳನ್ನು ಇತರರ ಮುಂದೆ ಹೇಳಬಾರದು. ಇತರರ ವೈಯಕ್ತಿಕ ವಿಷಯಗಳನ್ನು ಗೌರವಿಸಬೇಕು.

ಸಮಯಪ್ರಜ್ಞೆ: ಸಮಯಕ್ಕೆ ಸರಿಯಾಗಿ ಕೆಲಸ ಮಾಡುವುದು, ಕೊಟ್ಟ ಮಾತನ್ನು ಉಳಿಸಿಕೊಳ್ಳುವುದು ಕೂಡ ವಿಶ್ವಾಸವನ್ನು ಹೆಚ್ಚಿಸುತ್ತದೆ. ತಡಮಾಡುವುದು, ನಿರ್ಲಕ್ಷ್ಯ ಮಾಡುವುದು ಅಪನಂಬಿಕೆಗೆ ಕಾರಣವಾಗುತ್ತದೆ.

ಸಹಾನುಭೂತಿ: ಇತರರ ತೊಂದರೆ-ನೋವುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬೇಕು. ಬೆಂಬಲ ಬೇಕಾದಾಗ ಜೊತೆ ನಿಲ್ಲಬೇಕು. ಇದರಿಂದ ಭಾವನಾತ್ಮಕ ಬಾಂಧವ್ಯ ಬೆಳೆಯುತ್ತದೆ.

ಕ್ಷಮಿಸುವ ಗುಣ: ತಪ್ಪುಗಳು ಆಗುತ್ತಲೇ ಇರುತ್ತವೆ. ಆದರೆ ಅವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಸೇಡು ತೀರಿಸಿಕೊಳ್ಳುವುದು ಬೇಡ. ಕ್ಷಮಿಸುವ ಮನೋಭಾವ ಬೆಳೆಸಿಕೊಂಡರೆ ಸಂಬಂಧಗಳು ಮತ್ತಷ್ಟು ಗಟ್ಟಿಯಾಗುತ್ತವೆ.

ಮನುಷ್ಯತ್ವವೇ ಮೂಲ

ಮನುಷ್ಯಜೀವನ ಸಾಗರದಲ್ಲಿ ಸಂಬಂಧಗಳೇ ದೋಣಿ. ಆ ದೋಣಿಗೆ ವಿಶ್ವಾಸವೇ ಚುಕ್ಕಾಣಿ.

ನಮ್ಮ ಸುತ್ತಮುತ್ತಲಿನವರನ್ನು ಅನುಮಾನದ ಕಣ್ಣಿನಿಂದ ನೋಡುವ ಬದಲು, ಅವರಲ್ಲಿ ಒಳ್ಳೆಯದನ್ನು ಕಾಣಲು ಪ್ರಯತ್ನಿಸೋಣ. ಸಣ್ಣ ಸಣ್ಣ ಸಹಾಯಗಳ ಮೂಲಕ, ಮುಗುಳ್ನಗೆಯ ಮೂಲಕ, ಪ್ರೀತಿಯ ಮಾತಿನ ಮೂಲಕ ಮತ್ತೆ ಆ ವಿಶ್ವಾಸದ ಸೇತುವೆಯನ್ನು ಕಟ್ಟೋಣ. ಏಕೆಂದರೆ, ನಂಬಿಕೆಯೇ ಬದುಕಿನ ಬುನಾದಿ; ಅದನ್ನು ಕಾಪಾಡುವುದೇ ನಿಜವಾದ ಮಾನವೀಯತೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಗಣಿತ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

18) $P(x) = x^2 + 4x + 4$ ನ್ನು $g(x) = x + 2$ರಿಂದ ಭಾಗಿಸಿ ಭಾಗಾಕಾರದ ಅಲ್ಗಾರಿದ್ಮಂ ಅನ್ನು ತಾಳೆ ನೋಡಿ.

ಉತ್ತರ :- $p(x) = x^2 + 4x + 4$; $g(x) = x + 2$

$$x + 2)\ x^2 + 4x + 4\ (x + 2$$
$$x^2 + 2x$$
$$(-)\quad(-)$$
$$2x + 4$$
$$2x + 4$$
$$(-)\quad(-)$$
$$00$$

$p(x) = [g(x) \times q(x)] + r(x)$

$x^2 + 4x + 4 = (x + 2)(x + 2) + 0$

$x^2 + 4x + 4 = x + 4x + 4$

ಭಾಗಾಕಾರದ ಅಲ್ಗಾರಿಧಂ ಅನ್ನು ತಾಳೆ ನೋಡಿದೆ

19) ಒಂದು ಸಂಸ್ಥೆಯು ಆರಂಭದ ವರ್ಷದಲ್ಲಿ 400 ಉದ್ಯೋಗಿಗಳನ್ನು ನೇಮಿಸಿಕೊಂಡಿತು ಮತ್ತು ಪ್ರತಿ ವರ್ಷವು ಉದ್ಯೋಗಿಗಳ ಸಂಖ್ಯೆಯನ್ನು 35 ಹೆಚ್ಚಿಸಿತು. ಯಾವ ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿರುತ್ತದೆ.

ಉತ್ತರ:– ಮೊದಲ ವರ್ಷ 400 ಜನಗಳನ್ನು ನೇಮಿಸಿತು. ಒಂದೊಂದು ವರ್ಷವು 35 ಉದ್ಯೋಗಿಗಳ ಹೆಚ್ಚಳವಾಗಿದೆ. ಇದು ಸಮಾಂತರ ಶ್ರೇಢಿಯಲ್ಲಿದೆ.

$\therefore 400, 435, \ldots\ldots 785$

$a = 400,\ d = 35\quad n = ?$

$T_n = a + (n-1)d$

$785 = 400 + (n-1)35$

$785 = 400 + 35n - 35$

$785 = 365 + 35n$

$35n = 785 - 365$

$35n = 420$

$n = \frac{420}{35},\ n = 12$

$\therefore$ 12 ವರ್ಷದಲ್ಲಿ ಸಂಸ್ಥೆಯಲ್ಲಿನ ಉದ್ಯೋಗಿಗಳ ಸಂಖ್ಯೆಯು 785 ಆಗಿದೆ.

20) ಕೆಳಗಿನ ದತ್ತಾಂಶಗಳಿಗೆ ಸರಾಸರಿಯನ್ನು ಕಂಡುಹಿಡಿಯಿರಿ

ವರ್ಗಾಂತರ	ಆವೃತ್ತಿ
2 — 6	2
7 — 11	4
12 — 16	5
17 — 21	3
22 — 26	1

ಉತ್ತರ:–

ವರ್ಗಾಂತರ	ಆವೃತ್ತಿ (f_i)	ಮಧ್ಯ ಬಿಂದು x_i	$x_i f_i$
2 — 6	2	4	08
7 — 11	4	9	36
12 — 16	5	14	70
17 — 21	3	19	57
22 — 26	1	24	24
	$\Sigma f_i = 15$		$\Sigma f_i x_i = 195$

ಸರಾಸರಿ $\overline{x} = \frac{\sum f_i x_i}{\sum f_i} = \frac{195}{15}$

ಸರಾಸರಿ $(\overline{x}) = 13$

21) (1, 6) ಮತ್ತು (4, 3) ಬಿಂದುಗಳನ್ನು ಸೇರಿಸುವ ರೇಖಾಖಂಡವನ್ನು 1 2 ಅನುಪಾತದಲ್ಲಿ ಆಂತರಿಕವಾಗಿ ವಿಭಾಗಿಸುವ ಬಿಂದುವಿನ ನಿರ್ದೇಶಾಂಕಗಳನ್ನು ಕಂಡುಹಿಡಿಯಿರಿ.

ಉತ್ತರ:–

$(1, 6) = (x_1, y_1),\quad (4, 3) = (x_2, y_2),\quad m_1 : m_2 = 1 : 2,\quad P(x, y) = ?$

$$P(x, y) = \left(\frac{m_1x_2 + m_2x_1}{m_1 + m_2}, \frac{m_1y_2 + m_2y_1}{m_1 + m_2}\right)$$

$$P(x, y) = \left(\frac{1(4) + 2(1)}{1 + 2}, \frac{1(3) + 2(6)}{1 + 2}\right)$$

$$= \left(\frac{4 + 2}{3}, \frac{3 + 12}{3}\right)$$

$$= \left(\frac{6}{3}, \frac{15}{3}\right) = (2, 5)$$

$\therefore P(x, y) = (2, 5)$

22) ಒಂದು ಕ್ರೀಡಾಂಗಣದ ಸುತ್ತಲೂ ವೃತ್ತಾಕಾರದ ಮಾರ್ಗವಿದೆ ಸೋನಿಯಾಳು ಆ ಕ್ರೀಡಾಂಗಣದ ಒಂದು ಸುತ್ತನ್ನು ಪೂರ್ಣಗೊಳಿಸಲು 18 ನಿಮಿಷಗಳನ್ನು ತೆಗೆದುಕೊಂಡರೆ, ರವಿಯು ಅದೇ ಸುತ್ತನ್ನು ಪೂರ್ಣಗೊಳಿಸಲು 12 ನಿಮಿಷಗಳನ್ನು ತೆಗೆದುಕೊಳ್ಳುತ್ತಾನೆ, ಒಂದೊಮ್ಮೆ ಅವರಿಬ್ಬರೂ ಒಂದೇ ಬಿಂದುವಿನಿಂದ ಏಕಕಾಲದಲ್ಲಿ ಆರಂಭಿಸಿ, ಏಕಮುಖವಾಗಿ ಚಲಿಸಿದರೆ, ಎಷ್ಟು ನಿಮಿಷಗಳ ನಂತರ ಅವರು ಪುನಃ ಆರಂಭಿಕ ಬಿಂದುವಿನಲ್ಲಿ ಸಂಧಿಸುತ್ತಾರೆ?

ಉತ್ತರ:– ಸೋನಿಯಾಳಿಗೆ ಕ್ರೀಡಾಂಗಣ 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ = 18 ನಿಮಿಷ


ರವಿ ಅದೇ ಕ್ರೀಡಾಂಗಣವನ್ನು 1 ಸುತ್ತು ಪೂರ್ಣಗೊಳಿಸಲು ತೆಗೆದುಕೊಳ್ಳುವ ಸಮಯ= 12 ನಿಮಿಷ

ಏಕಕಾಲದಲ್ಲಿ ಚಲಿಸಿದರೆ ಅವರು ಸಂಧಿಸುವ ಸಮಯ = ?

LCM(18,12) = 2×3×3×2×1=36

ಅವರಿಬ್ಬರೂ 36 ನಿಮಿಷಗಳ ತರುವಾಯ ಒಂದು ಸ್ಥಳದಲ್ಲಿ ಸಂಧಿಸುತ್ತಾರೆ

23) ಚಿತ್ರದಲ್ಲಿ, $\tan P$ ಮತ್ತು $\cos R$ ಬೆಲೆಗಳನ್ನು ಕಂಡುಹಿಡಿಯಿರಿ.



ಉತ್ತರ:–ಲಂಬಕೋನ ತ್ರಿಭುಜದಲ್ಲಿ ವಿಕರ್ಣ PQ=13 ಸೆಂ.ಮೀ

QR=5 ಸೆಂ.ಮೀ QP=12 ಸೆಂ.ಮೀ

$\tan P = \frac{\text{ಅಭಿಮುಖ}}{\text{ಪಾರ್ಶ್ವ}} = \frac{5}{12}$

$\cos R = \frac{\text{ಪಾರ್ಶ್ವ}}{\text{ವಿಕರ್ಣ}} = \frac{5}{13}$

ಪಿಯುಸಿ/ಸಿಇಟಿ ಪರೀಕ್ಷೆ

ಎಸ್ಸೆಸ್ಸೆಲ್ಸಿ ಸಮಾಜ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

PHYSICS


1) The ratio of molar specific heats of oxygen is:

(A) 1.4 (B) 1.67
(C) 1.33 (D) 1.28

Ans:- (A) 1.4

Expln:- For a diatomic gas like oxygen, the ratio of molar specific heats (γ) is approximately 1.4, reflecting its degrees of freedom and molecular structure.

2) A wooden block of mass M lies on a rough floor. Another wooden block of the same mass is hanging from the point O through strings as shown in the figure. To achieve equilibrium, the co-efficient of static friction between the block on the floor with the floor itself is



(A) $\mu = \theta$ cot (B) $\mu = \theta$ sin
(C) $\mu = \theta$ tan (D) $\mu = \theta$cos

Ans. A

Solution:

$T\sin\theta = Mg$ .....(i)

$T\cos\theta = \mu Mg$ .....(ii)

(ii) – (i) given

$\mu = \frac{\cos\theta}{\sin\theta} = \cot\theta$

3) If the rms current in a 50 Hz ac circuit is 5 A, the value of the current 1/300 seconds after its value becomes zero is

a) $5\sqrt{2}$ A b) $5\sqrt{\frac{3}{2}}$ A
c) 5/6 A d) $\frac{5}{\sqrt{2}}$ A


Ans:-b

4) The polarizing angle of glass is 57^0. A ray of light which is incident at this angle will have an angle of refraction as

(A) 33^0 (B) 38^0
(C) 25^0 (D) 43^0

Ans: (A) 33^0

Soln:



From Brewster's law

$\theta p + r = 90^0$

$r = 90^0 - \theta p$

$\therefore r = 90^0 - 57^0 = 33^0$.

5) For a particle executing simple harmonic motion (SHM), at its mean position

(A) Velocity is zero and acceleration is maximum
(B) Velocity is maximum and acceleration is zero
(C) Both velocity and acceleration are maximum
(D) Both velocity and acceleration are zero

Ans:-(B) Velocity is maximum and acceleration is zero

Expln:- At the mean position in SHM, the velocity is maximum due to maximal kinetic energy, while acceleration is zero as the restoring force is minimal.

6) Three polaroid sheets P_1, P_2 and P_3 are kept parallel to each other such that the angle between pass axes of P_1 and P_2 is 45^0 and that between P_2 and P_3 is 45^0. If unpolarised beam of light of intensity 128 Wm^{-2} is incident on P_1. What is the intensity of light coming out of P_3?

A) 64Wm^{-2} B) 128 Wm^{-2}
C) 0 D) 16 Wm^{-2}

Ans: d

Expln:-

We have unpolarised beam's intensity $I_0 = 128 w/m^2$

Using Malu's law we have $I = I_0 \cos^2\theta$

When beam passed from the first polaroid, $I = I_0/2$

Again, as the angle between p_1 and p_2 is 45^0, beam intensity when it will pass p_2 would be $I_1 = I_0/2 \cos^2 45^0 = I_0/4$

And, also the angle between p_2 and p_3 is 45^0, beam intensity when it will come out of p_3 will be $I_2 = I_0/4 \cos^2 45^0 = I_0/8 = 128/8 = 16 w/m^2$

7) A train is approaching towards a platform with a speed of 10 m s^{-1} while blowing a whistle of frequency 340 Hz. what is the frequency of whistle heard by a stationary observe on the platform? Given speed of sound = 340 m s^{-1}.

A) 340 Hz B) 330 Hz
C) 360 Hz D) 350 Hz

Ans. D

Soln: Here,

Speed of train, $v_T = 10$ m s^{-1}

Speed of sound, $v = 340$ m s^{-1}

Frequency of whistle, $\upsilon = 340$ Hz

The frequency of whistle heard by the stationary Observe on the platform is

$$\upsilon' = \upsilon\left(\frac{v}{v - v_T}\right) = 340\left(\frac{340}{340 - 10}\right)$$

$$= 340\left(\frac{340}{340 - 10}\right) = 350 \text{ Hz}$$

8) An alternating current generator has an internal resistance Rg and an internal reactance Xg. It is used to supply power to a passive load consisting of a resistance Rg and a reactance X_L. For maximum power to be delivered from the generator to the load, the value of X_L is equal to

A) zero B) Xg
C) –Xg D) Rg

Ans:-c

ಆತ್ಮವಿಶ್ವಾಸ ತುಂಬಿದ ಒಕ್ಕೂಟಗಳು

ದುಬೈನಲ್ಲಿ ಸಿಲುಕಿರುವ ಕನ್ನಡಿಗರ ಸುರಕ್ಷತೆಗೆ ಆದ್ಯತೆ ನೀಡಿದ ಸಂಘ- ಸಂಸ್ಥೆಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದುಬೈನಲ್ಲಿ ಸಿಲುಕಿರುವ ಕನ್ನಡಿಗರ ಸುರಕ್ಷತೆಗೆ ಆದ್ಯತೆ ನೀಡಿರುವ ಅಲ್ಲಿನ ಕನ್ನಡ ಒಕ್ಕೂಟಗಳು ಸೋಮವಾರ ತಂಡಗಳಾಗಿ ತೆರಳಿ ಆತ್ಮವಿಶ್ವಾಸ ತುಂಬಿವೆ.

ಅಮೆರಿಕವು ಇರಾನ್ ಮೇಲೆ ದಾಳಿ ಮಾಡಿದ ನಂತರ ದುಬೈನಲ್ಲೂ ಶನಿವಾರ, ಭಾನುವಾರ ಕ್ಷಿಪಣಿ ದಾಳಿ ಕಂಡು ಬಂದರೂ ಸೋಮವಾರ ಶಾಂತಿಯುತ ವಾತಾವರಣವಿತ್ತು. ವಿಮಾನ ಸೇವೆ ಪುನರಾರಂಭ ಆಗಬಹುದು ಎನ್ನುವ ನಿರೀಕ್ಷೆಯಲ್ಲಿ ಪ್ರವಾಸಿಗರು ಇದ್ದರು.

ಆದರೆ, ವಿಮಾನ ಸಂಚಾರಕ್ಕೆ ಅವಕಾಶ ಸಿಗದೇ ಇದ್ದುದರಿಂದ ಅಲ್ಲಿನ ಹೋಟೆಲ್‌ಗಳಲ್ಲಿ ತಂಗಿರುವ ಪ್ರವಾಸಿಗರನ್ನು ದುಬೈ ಕನ್ನಡಿಗರ ಕೂಟ ಸಹಿತ ನಾನಾ ಸಂಘಟನೆಗಳವರು ಭೇಟಿ ಮಾಡಿ ಮಾತುಕತೆ ನಡೆಸಿದರು.

ಕೂಟದ ಅಧ್ಯಕ್ಷ ಅರುಣ್ ಕುಮಾರ್ ಹಾಗೂ ಅವರ ತಂಡವು, ಬಳ್ಳಾರಿ, ದಾವಣಗೆರೆ ಮತ್ತು ಶಿವಮೊಗ್ಗ ಜಿಲ್ಲೆಗಳಿಂದ ಬಂದಿರುವ ಸುಮಾರು 50 ಮಂದಿ ಪ್ರವಾಸಿಗರಿಗೆ ವಸತಿ, ಆಹಾರ ವ್ಯವಸ್ಥೆ ಹಾಗೂ ಇತರ ಅಗತ್ಯ ನೆರವು ಒದಗಿಸಿತು.

ಪ್ರವಾಸಕ್ಕೆ ಬಂದು ಅಲ್ಲಿ ಸಿಲುಕಿರುವ ಬೆಂಗಳೂರಿನ ಉದ್ಯಮಿ ಮಾಧವ್ ಸಿರಾನ್, ದುಬೈನಲ್ಲಿರುವ ಬೆಂಗಳೂರು ಟೆಕ್ಕಿ ಅಶ್ವಿತ್ ಕೂಡ ಊಹೋಪೋಹಕ್ಕೆ ನೆರವಾದರು.

'ದುಬೈನಲ್ಲಿ ಸಂಪೂರ್ಣ ಸುರಕ್ಷತೆಯಿದ್ದು, ಭಯ ಪಡುವ ಅಗತ್ಯವಿಲ್ಲ. ಕುಟುಂಬದವರೊಂದಿಗೆ ಸಂಪರ್ಕದಲ್ಲಿರಿ. ಭಾರತದ ರಾಯಭಾರ ಕಚೇರಿ ನೀಡುವ ಸೂಚನೆಗಳ ಜತೆಗೆ ಸ್ಥಳೀಯ ಆಡಳಿತದಿಂದ ಬರುವ ಸೂಚನೆ ಪಾಲಿಸಿ' ಎಂದು ಮನವರಿಕೆ ಮಾಡಿದರು.

'ಯುಎಇಯಲ್ಲಿ ಪರಿಸ್ಥಿತಿ ಸ್ವಲ್ಪ ಉದ್ವಿಗ್ನವಾಗಿದೆ. ಪರಿಸ್ಥಿತಿ ಸಹಜಸ್ಥಿತಿಗೆ ಮರಳಿದ ನಂತರ ಎಲ್ಲ ಪ್ರವಾಸಿಗರನ್ನು ಸುರಕ್ಷಿತವಾಗಿ ಕರ್ನಾಟಕಕ್ಕೆ ಕಳುಹಿಸಲು ಕನ್ನಡಿಗರ ಕೂಟ ಜವಾಬ್ದಾರಿ ತೆಗೆದುಕೊಳ್ಳಲಿದೆ. ಯುಎಇ ಸರ್ಕಾರವು ಅಗತ್ಯ ಸಹಕಾರ ನೀಡುತ್ತಿದೆ' ಎಂದು ಕನ್ನಡಿಗರ ಕೂಟದ ಅಧ್ಯಕ್ಷ ಅರುಣ್ ಕುಮಾರ್ ತಿಳಿಸಿದರು.



ದುಬೈನಲ್ಲಿ ಸಿಲುಕಿರುವ ಕನ್ನಡಿಗ ಪ್ರವಾಸಿಗರನ್ನು ಕನ್ನಡ ಒಕ್ಕೂಟದ ಅರುಣ್ ಕುಮಾರ್, ಮಾಧವ್ ಸಿರಾನ್, ಅಶ್ವಿತ್ ಸಹಿತ ಹಲವರು ಭೇಟಿ ಮಾಡಿದರು.


ಉದ್ಯಮಿ ರೊನಾಲ್ಡ್ ಕೊಲಾಸೊ ಸಹಾಯಹಸ್ತ

ದುಬೈನಲ್ಲಿ ನೆಲೆಸಿರುವ ಬೆಂಗಳೂರಿನ ಉದ್ಯಮಿ ರೊನಾಲ್ಡ್ ಕೊಲಾಸೊ ಅವರ ನೇತೃತ್ವದ 'ಕನ್ನಡಿಗಾಸ್ ಹೆಲ್ಪ್‌ಲೈನ್' ತಂಡವು ಸಂಕಷ್ಟಕ್ಕೆ ಸಿಲುಕಿರುವವರಿಗೆ ಸಹಾಯಹಸ್ತ ಚಾಚಿದೆ.

ದುಬೈ ಕನ್ನಡಪರ ಸಂಘಟನೆಗಳೊಂದಿಗೆ ಕೊಲಾಸೊ ಆನ್‌ಲೈನ್‌ನಲ್ಲಿ ಸಭೆ ನಡೆಸಿ ಮಾಹಿತಿ ಪಡೆದುಕೊಂಡರು.

'ದುಬೈನಲ್ಲಿ ಸಿಲುಕಿರುವ ಕನ್ನಡಿಗ ಪ್ರವಾಸಿಗರ ತುರ್ತು ವ್ಯವಸ್ಥೆಗಳಿಗೆ ಆರ್ಥಿಕ ನೆರವು ಒದಗಿಸಲು ಸಿದ್ಧನಿದ್ದೇನೆ. ಸರ್ಕಾರವೂ ಪರಿಹಾರ ಪ್ರಕಟಿಸುವುದು ಒಳ್ಳೆಯದು' ಎಂದು ಅವರು ಸಲಹೆ ನೀಡಿದರು.

ಕರ್ನಾಟಕ ಸರ್ಕಾರದ ಅನಿವಾಸಿ ಭಾರತೀಯ ಸಮಿತಿಯ ಉಪಾಧ್ಯಕ್ಷರಾದ ಆರತಿ ಕೃಷ್ಣ, ಕೊಲಾಸೊ ಅವರ ನಿವಾಸದಲ್ಲಿ ಆಶ್ರಯ ಪಡೆದಿರುವ ವಿಧಾನ ಪರಿಷತ್ ಸದಸ್ಯ ಎಸ್.ಎಲ್.ಬೋಜೇಗೌಡ, ಕನ್ನಡಿಗಾಸ್ ಹೆಲ್ಪ್‌ಲೈನ್ ಸಂಯೋಜಕ ಹಿದಾಯತ್ ಅಡ್ಡೂರು, ಕರ್ನಾಟಕ ಎನ್‌ಆರ್‌ಐ ಫೋರಂ ಅಧ್ಯಕ್ಷ ಪ್ರವೀಣ್ ಶೆಟ್ಟಿ, ದುಬೈ ಕರ್ನಾಟಕ ಸಂಘದ ಅಧ್ಯಕ್ಷ ಶಶಿಧರ ನಾಗರಾಜಪ್ಪ ಸಹಿತ ಹಲವರು ಮಾತನಾಡಿದರು.



ರೊನಾಲ್ಡ್ ಕೊಲಾಸೊ

ವಿಮಾನವೇರಿ ಬಂದ ಪೌರಕಾರ್ಮಿಕರಿಗೆ ಸನ್ಮಾನ

ಸೊರಬದ ಪ್ರತಿಭಾವಂತರನ್ನು ಸತ್ಕರಿಸಿದ ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗ ಜಿಲ್ಲೆಯ ಸೊರಬ ಪುರಸಭೆ, ಆನವಟ್ಟಿ ಪಟ್ಟಣ ಪಂಚಾಯಿತಿಯ 40 ಪೌರಕಾರ್ಮಿಕರು ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದ 120 ವಿದ್ಯಾರ್ಥಿಗಳನ್ನು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಸೋಮವಾರ ಸನ್ಮಾನಿಸಿದರು.

ತಮ್ಮ ಜನ್ಮದಿನದ ಅಂಗವಾಗಿ ಬೆಂಗಳೂರಿನಲ್ಲಿ ಆಯೋಜಿಸಿದ್ದ ಕಾರ್ಯಕ್ರಮಕ್ಕೆ ಬರುವವರಿಗೆ ಶಿವಮೊಗ್ಗದಿಂದ ವಿಮಾನ ಪ್ರಯಾಣದ ಸೌಲಭ್ಯ ಕಲ್ಪಿಸಲಾಗಿತ್ತು. ಅವರಲ್ಲಿ ಬಹುತೇಕ ಎಲ್ಲರೂ ಇದೇ ಮೊದಲ ಬಾರಿ ವಿಮಾನ ಹತ್ತಿದರು. ವಿದ್ಯಾರ್ಥಿಗಳ ಜತೆಗೆ ಅವರ ಪೋಷಕರಿಗೂ ವಿಮಾನಯಾನದ ಅನುಭವ ಸಿಕ್ಕಿತು.

ಒಂದು ಸರ್ತಿ ತಲಾ ಎಂಟು ಪೌರ ಕಾರ್ಮಿಕರನ್ನು ಸತ್ಕರಿಸಿದ ಮಧು ಬಂಗಾರಪ್ಪ, ನಂತರ ವಿದ್ಯಾರ್ಥಿಗಳು ಹಾಗೂ ಅವರ ಪೋಷಕರನ್ನು ಸನ್ಮಾನಿಸಿದರು. ತಮ್ಮ ತವರು ಕ್ಷೇತ್ರದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಿದರು. ಸನ್ಮಾನದ ನಂತರ ಪ್ರತಿಯೊಂದು ತಂಡದವರ ಜತೆ ಕುಳಿತು ಫೋಟೊ ಕ್ಲಿಕ್ಕಿಸಿಕೊಂಡು ಸಂತಸಪಟ್ಟರು.

'ಆನವಟ್ಟಿ ಪಟ್ಟಣ ಪಂಚಾಯಿತಿ ಕಾರ್ಯ ಹಲವು ವರ್ಷಗಳಿಂದ ಸ್ವಚ್ಛತಾ ಕಾರ್ಯ ಮಾಡುತ್ತಿದ್ದೇನೆ. ಸ್ಥಳೀಯವಾಗಿ ಕೆಲ ಸಂಘಟನೆಗಳು ಗುರುತಿಸಿ, ಸನ್ಮಾನಿಸಿದ್ದವು. ಬೆಂಗಳೂರು ನೋಡಿದ್ದು ಇದೇ ಮೊದಲು. ಅದರಲ್ಲೂ ವಿಮಾನ ಹತ್ತುತ್ತೇನೆ ಎನ್ನುವ ಕನಸೂ ಇರಲಿಲ್ಲ. ವಿಮಾನದಲ್ಲಿ ಪ್ರಯಾಣ ಮಾಡಿದ್ದನ್ನು ನಂಬಲೂ ಆಗುತ್ತಿಲ್ಲ. ನನ್ನಂಥ 40 ಪೌರಕಾರ್ಮಿಕರಿಗೆ ವಿಮಾನಯಾನ ಮಾಡಿದ್ದು ಜೀವನದಲ್ಲೇ ಮರೆಯಲು ಸಾಧ್ಯವಿಲ್ಲ' ಎಂದು ಪೌರಕಾರ್ಮಿಕರಾದ ರೇಖಾ ಆನಂದ ಭಾವುಕರಾದರು.

'ಎಲ್ಲರೂ ಬೆಂಗಳೂರಿನಲ್ಲಿ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿದೆ. ಜತೆಗೆ ನೆಹರೂ ತಾರಾಲಯ, ವಿಧಾನಸೌಧಕ್ಕೆ ಭೇಟಿ ನೀಡುತ್ತಿದ್ದೇವೆ. ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಪಡೆದಿದ್ದಕ್ಕೆ ಸಚಿವ ಮಧು ಬಂಗಾರಪ್ಪ ಅವರು ಇಷ್ಟೆಲ್ಲ ಮಾಡಿದ್ದಾರೆ. ಇದು ನನಗೆ ಸ್ಫೂರ್ತಿಯಾಗಿದೆ. ಮುಂದೆ ಇನ್ನಷ್ಟು ಚೆನ್ನಾಗಿ ಓದಿ ಉನ್ನತ ಸಾಧನೆ ಮಾಡುವೆ' ಎಂದು ಆನವಟ್ಟಿ ಕೆಪಿಎಸ್ ಶಾಲೆಯ ವಿದ್ಯಾರ್ಥಿನಿ ಸಂಜನಾ ವಿಜೇಂದ್ರ ಶೆಟ್ಟಿ ಖುಷಿಪಟ್ಟರು.



ಬೆಂಗಳೂರಿನಲ್ಲಿ ಸೋಮವಾರ ನಡೆದ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸೊರಬ ತಾಲ್ಲೂಕಿನ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಸನ್ಮಾನಿಸಿದರು ಪ್ರಜಾವಾಣಿ ಚಿತ್ರ



ಆದಿಚುಂಚನಗಿರಿ ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ನಡೆದ 'ಸರ್ವಧರ್ಮ ಸಮ್ಮೇಳನ'ವನ್ನು ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ವಿವಿಧ ಧರ್ಮಗುರುಗಳು ಉದ್ಘಾಟಿಸಿದರು

'ಒಳಿತು ಬಯಸುವುದೇ ನಿಜ ಧರ್ಮ'

ಪ್ರಜಾವಾಣಿ ವಾರ್ತೆ

ನಾಗಮಂಗಲ (ಮಂಡ್ಯ ಜಿಲ್ಲೆ): 'ಎಲ್ಲರಿಗೂ ಒಳಿತು ಬಯಸುವುದೇ ನಿಜವಾದ ಧರ್ಮ' ಎಂದು ಮಂಗಳೂರಿನ ರಾಜ್ಯ ಸುನ್ನಿ ಯುವಜನ ಸಂಘದ ಪ್ರಧಾನ ಕಾರ್ಯದರ್ಶಿ ಕೆ.ಎಂ. ಅಬೂಬಕರ್ ಸಿದ್ದೀಕ್ ಮೊಂಟುಗೋಳಿ ಹೇಳಿದರು.

ತಾಲ್ಲೂಕಿನ ಆದಿಚುಂಚನಗಿರಿ ಕ್ಷೇತ್ರದಲ್ಲಿ ಜಾತ್ರಾ ಮಹೋತ್ಸವದ ಅಂಗವಾಗಿ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಗವಿಪುರದ ಗೋಸಾಯಿ ಮಠದ ಪೀಠಾಧ್ಯಕ್ಷ ಮಂಜುನಾಥ ಭಾರತಿ ಸ್ವಾಮೀಜಿ ಸಾನ್ನಿಧ್ಯದಲ್ಲಿ ಸೋಮವಾರ ನಡೆದ 'ಸರ್ವಧರ್ಮ ಸಮ್ಮೇಳನ'ದಲ್ಲಿ ಅವರು ಮಾತನಾಡಿದರು.

'ಪ್ರತಿ ಧರ್ಮದವರೂ ಅವರವರ ಧರ್ಮವನ್ನು ಪಾಲಿಸಿದಾಗ ಶಾಂತಿ ಸಾಧ್ಯ. ಸಮಸ್ಯೆ ಇರುವುದು ಧರ್ಮದಲ್ಲಲ್ಲ. ಅದರ ಹೆಸರಿನಲ್ಲಿ ಜಗಳ ಮಾಡಲು ತಯಾರಿರುವವರು ಧರ್ಮ ಹೇಳಿದಂತೆ ನಡೆಯುತ್ತಿಲ್ಲ. ಹೀಗಾಗಿ ಧರ್ಮಗಳ ನಡುವೆ ಜಗಳ ನಡೆಯುತ್ತಿದೆ' ಎಂದರು.

ಹಾಸನ ಮತ್ತು ಕೊಡಗು ಜಿಲ್ಲೆಯ ಶಾಖಾ ಮಠದ ಕಾರ್ಯದರ್ಶಿ ಶಂಭೂನಾಥ ಸ್ವಾಮೀಜಿ ಅವರು, 'ಪರೋಪಕಾರಕ್ಕಾಗಿ ಈ ದೇಹ ಮೀಸಲಿರಿಸಬೇಕು. ಹಿಂದೂ ಧರ್ಮದಲ್ಲಿ ಹುಟ್ಟಿದ್ದೇವೆ. ಕೂಡಿ ಬಾಳಲು ಕಲಿಸದೇ ಇದ್ದರೆ ಅದು ಧರ್ಮವಲ್ಲ. ಅಭಾವ ಉಳ್ಳವರಾಗಿದ್ದೇವೆ. ಭಾವನೆ ಉಳ್ಳವರಾಗಬೇಕು' ಎಂದರು.

ಚಿಕ್ಕಮಗಳೂರಿನ ಸಂತ ಅಂಡ್ರಸ್ ಚರ್ಚ್ ಸಭಾಪಾಲಕ ರೆವರೆಂಡ್ ಜಾರ್ಜ್ ವಿನೋದ್ ಕುಮಾರ್ ಅವರು ಮಾತನಾಡಿ, 'ಧರ್ಮ ಅರ್ಥವಾದಾಗ ಆಚರಣೆಗೆ ಯೋಗ್ಯ. ಇಲ್ಲವಾದರೆ ಅದು ಮೌಢ್ಯದ ಆಚರಣೆಯಂತೆ ಭಾಸವಾಗುತ್ತದೆ' ಎಂದರು.

ಹುಂಚ ಶ್ರೀಹೊಂಬುಜ ಜೈನ ಮಠದ ದೇವೇಂದ್ರ ಕೀರ್ತಿ ಭಟ್ಟಾರಕ ಭಟ್ಟಾಚಾರ್ಯವರ್ಯ ಸ್ವಾಮೀಜಿ, 'ಭಾರತ ಸರ್ವ ಜನಾಂಗದ ಶಾಂತಿಯ ತೋಟ. ಎಲ್ಲ ಧರ್ಮದ ಜನರಿದ್ದಾರೆ. ನಾವೆಲ್ಲರೂ ಮನುಷ್ಯರೂ ಎಂಬುದನ್ನು ಅರಿಯಬೇಕಿದೆ' ಎಂದು ಹೇಳಿದರು.

ಬೆಂಗಳೂರು ಗಾಂಧಿ ನಗರದ ಮಹಾಬೋಧಿ ಸೊಸೈಟಿಯ ಭಿಕ್ಖು ನ್ಯಾನಾನಂದರು ಮಾತನಾಡಿ, 'ಇಂದು ಭಗವಾನ್ ಬುದ್ಧರನ್ನು ಮರೆತಿದ್ದೇವೆ. ಬುದ್ಧ ಎಂದರೆ ಜ್ಞಾನ, ಸತ್ಯ, ದಯೆ, ಕರುಣೆ, ಮೈತ್ರಿಯ ಭಾವನೆ. ದಯವೇ ಧರ್ಮದ ಮೂಲ' ಎಂದು ಪ್ರತಿಪಾದಿಸಿದರು.

ಜಾತ್ರಾ ಮಹೋತ್ಸವದ ಅಂಗವಾಗಿ ಭಾನುವಾರ ಪೀಠಾಧ್ಯಕ್ಷ ನಿರ್ಮಲಾನಂದನಾಥ ಸ್ವಾಮೀಜಿ ಅವರ ಜ್ವಾಲಾಪೀಠಾರೋಹಣ ಮತ್ತು ಸಿದ್ಧಸಿಂಹಾಸನ ಪೂಜೆ ಶ್ರದ್ಧಾ ಭಕ್ತಿಯಿಂದ ನಡೆಯಿತು.

ಹಾಲಸಾಗರ: ವ್ಯಕ್ತಿಯನ್ನು ಕೊಂದಿದ್ದ ಕರಡಿ ಹತ್ಯೆ

ಕೂಡ್ಲಿಗಿ (ವಿಜಯನಗರ ಜಿಲ್ಲೆ): ತಾಲ್ಲೂಕಿನ ಗುಡೇಕೋಟೆಯ ಹಾಲ ಸಾಗರ ಬಳಿ ಸೋಮವಾರ ಮಧ್ಯಾಹ್ನ ಮೇಕೆ ಕಾಯುತ್ತಿದ್ದ ವ್ಯಕ್ತಿಯ ಮೇಲೆ ಕರಡಿ ದಾಳಿ ಮಾಡಿ, ಸ್ಥಳದಲ್ಲೇ ಸಾಯಿಸಿದೆ.

ಇದರಿಂದ ರೊಚ್ಚಿಗೆದ್ದ ಜನರು, ಕರಡಿ ಮೇಲೆ ದೊಣ್ಣೆ ಮತ್ತು ಬಡಿಗೆಗಳಿಂದ ಹಿಗ್ಗಾಮುಗ್ಗ ಹೊಡೆದು ಕೊಂದು ಹಾಕಿದರು. ಅವರು ಹೊಡೆದು ಸಾಯಿಸುತ್ತಿರುವ ವಿಡಿಯೊ ಕ್ಯಾಮೆರಾದಲ್ಲಿ ಸೆರೆಯಾಗಿದೆ.

ಹಾಲಸಾಗರದ ಜಿ. ಓಬಯ್ಯ(45) ಕರಡಿ ದಾಳಿಯಿಂದ ಮೃತಪಟ್ಟವರು. ಅವರಿಗೆ ಪತ್ನಿ ಮತ್ತು ಇಬ್ಬರು ಪುತ್ರಿಯರು ಇದ್ದಾರೆ.

ಪಶ್ಚಿಮ ಏಷ್ಯಾದಲ್ಲಿ ಸಂಘರ್ಷ ಉಲ್ಬಣ

ಒಂದನೇ ಪುಟದಿಂದ...

ಸೇಡು ತೀರಿಸುವೆವು: 'ಅಮೆರಿಕದ ಸೈನಿಕರ ಸಾವಿಗೆ ಸೇಡು ತೀರಿಸಿ ಕೊಳ್ಳುತ್ತೇವೆ' ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಸಾಮಾಜಿಕ ಮಾಧ್ಯಮ ಖಾತೆಯಲ್ಲಿ ಪೋಸ್ಟ್ ಮಾಡಿದ ವಿಡಿಯೊದಲ್ಲಿ ಎಚ್ಚರಿಸಿದ್ದಾರೆ. 'ದುಃಖದ ವಿಷಯವೆಂದರೆ ಸಂಘರ್ಷವು ಕೊನೆಗೊಳ್ಳುವ ಮುನ್ನ ಅಮೆರಿಕದ ಇನ್ನಷ್ಟು ಯೋಧರು ಬಲಿ ಆಗಬಹುದು' ಎಂದೂ ಹೇಳಿದ್ದಾರೆ. ಇರಾನ್ ನಡೆಸಿದ ದಾಳಿಯಲ್ಲಿ ತನ್ನ ನಾಲ್ವರು ಯೋಧರು ಮೃತಪಟ್ಟಿರುವುದನ್ನು ಅಮೆರಿಕ ಸೇನೆ ದೃಢಪಡಿಸಿದೆ.

ಇರಾನ್ ಮೇಲೆ ನಡೆಸುತ್ತಿರುವ 'ನಿರಂತರ' ದಾಳಿಯನ್ನು ಇನ್ನಷ್ಟು ಹೆಚ್ಚಿಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.

ಟೆಹರಾನ್‌ನಲ್ಲಿನ ಗುರಿಗಳ ಮೇಲೆ 100 ಯುದ್ಧ ವಿಮಾನಗಳು ಏಕಕಾಲಕ್ಕೆ ದಾಳಿ ನಡೆಸಿವೆ ಎಂದು ಬ್ರಿಗೇಡಿಯರ್ ಜನರಲ್ ಎಫೀ ಡೆಫ್ರಿನ್ ಮಾಹಿತಿ ನೀಡಿದ್ದಾರೆ. ಇರಾನ್‌ನ ವಾಯುಪಡೆಗೆ ಸೇರಿದ ಕಟ್ಟಡಗಳು, ಕ್ಷಿಪಣಿ ಕಮಾಂಡ್ ಕೇಂದ್ರ ಮತ್ತು ಆಂತರಿಕ ಭದ್ರತಾ ಪಡೆಗಳನ್ನು ಗುರಿಯಾಗಿಸಿ ದಾಳಿಗಳು ನಡೆದಿವೆ.

ಬಿ-2 ಸ್ಟೆಲ್ತ್ ಬಾಂಬರ್ ಯುದ್ಧ ವಿಮಾನವು ಇರಾನ್‌ನ ಗುರಿ ನಿರ್ದೇಶಿತ ಕ್ಷಿಪಣಿ ವ್ಯವಸ್ಥೆಗಳ ಮೇಲೆ 2,000 ಪೌಂಡ್ ತೂಕದ ಬಾಂಬ್ (ಸುಮಾರು 900 ಕೆ.ಜಿ) ಹಾಕಿದೆ ಎಂದು ಅಮೆರಿಕದ ಸೇನೆ ಹೇಳಿದೆ. 'ಇರಾನ್‌ನ ಒಂಬತ್ತು ಯುದ್ಧ-ನೌಕೆಗಳನ್ನು ಮುಳುಗಿಸಲಾಗಿದೆ ಮತ್ತು ನೌಕಾಪಡೆಯ ಪ್ರಧಾನ ಕಚೇರಿಯನ್ನು ನಾಶಪಡಿಸಲಾಗಿದೆ' ಎಂದು ಟ್ರಂಪ್ ಹೇಳಿದ್ದಾರೆ.

ಇಸ್ರೇಲ್‌ನಲ್ಲಿ 11 ಸಾವು: ಇರಾನ್ ನಡೆಸಿದ ಕ್ಷಿಪಣಿ ದಾಳಿಯಲ್ಲಿ ಇಸ್ರೇಲ್‌ನಲ್ಲಿ ಮೃತಪಟ್ಟವರ ಸಂಖ್ಯೆ 11ಕ್ಕೆ ಏರಿಕೆಯಾಗಿದೆ. ಜೆರುಸಲೇಂ ಮತ್ತು ಬೈತ್ ಶೆಮ್ಶ್ ನಗರದ ಪ್ರಾರ್ಥನಾ ಮಂದಿರ ಸೇರಿದಂತೆ ಹಲವು ತಾಣಗಳನ್ನು ಗುರಿಯಾಗಿಸಿ ಇರಾನ್ ದಾಳಿ ನಡೆಸಿದೆ ಎಂದು ರಕ್ಷಣಾ ಕಾರ್ಯಾಚರಣೆ ತಂಡವು ತಿಳಿಸಿದೆ. 'ದಾಳಿಯಲ್ಲಿ ಒಟ್ಟು 28 ಮಂದಿ ಗಾಯಗೊಂಡಿದ್ದಾರೆ. 11 ಮಂದಿ ನಾಪತ್ತೆಯಾಗಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಪರಮಾಣು ಘಟಕದ ಮೇಲೆ ದಾಳಿ'

ದುಬೈ (ಎಪಿ): ಅಮೆರಿಕ ಮತ್ತು ಇಸ್ರೇಲ್‌ನ ಸೇನೆಗಳು ನಟಾನ್ಜ್‌ನಲ್ಲಿರುವ ಪರಮಾಣು ಘಟಕದ ಮೇಲೆ ದಾಳಿ ಮಾಡಿವೆ ಎಂದು ಇರಾನ್ ಸೋಮವಾರ ಆರೋಪಿಸಿದೆ.

ಅಂತರರಾಷ್ಟ್ರೀಯ ಅಣು ಶಕ್ತಿ ಸಂಸ್ಥೆಯ (ಐಎಇಎ) ಇರಾನ್‌ನ ರಾಯಭಾರಿ ರೆಜಾ ನಜಾಫಿ ಅವರು ಈ ಬಗ್ಗೆ ಅಣು ಶಕ್ತಿ ಸಂಸ್ಥೆಗೆ ಮಾಹಿತಿ ನೀಡಿದ್ದಾರೆ. 'ನಟಾನ್ಜ್‌ನಲ್ಲಿರುವ ಪರಮಾಣು ಘಟಕದ ಮೇಲೆ ಮತ್ತೆ ದಾಳಿ ನಡೆಸಲಾಗಿದೆ' ಎಂದು ಅವರು ತಿಳಿಸಿದ್ದಾರೆ. ಜೂನ್‌ನಲ್ಲಿ ನಡೆದಿದ್ದ 12 ದಿನಗಳ ಸಂಘರ್ಷದ ಸಂದರ್ಭದಲ್ಲೂ ಅಮೆರಿಕ ಮತ್ತು ಇಸ್ರೇಲ್ ಈ ಘಟಕದ ಮೇಲೆ ದಾಳಿ ನಡೆಸಿದ್ದವು.

ಆದರೆ, ಪರಮಾಣು ಘಟಕದ ಮೇಲೆ ದಾಳಿ ನಡೆದಿರುವ ಯಾವುದೇ ಕುರುಹು ಕಂಡುಬಂದಿಲ್ಲ ಎಂದು ಐಎಇಎ ತಿಳಿಸಿದೆ. 'ಯಾವುದೇ ಪರಮಾಣು ಘಟಕ ಹಾನಿಗೊಳಗಾಗಿರುವ ಬಗ್ಗೆ ಖಚಿತ ಮಾಹಿತಿ ಇಲ್ಲ' ಎಂದು ಐಎಇಎ ಮುಖ್ಯಸ್ಥ ರಫೇಲ್ ಗ್ರಾಸಿ ಅವರು ಆಡಳಿತ ಮಂಡಳಿಯ ಸಭೆಯಲ್ಲಿ ಹೇಳಿದ್ದಾರೆ.

ಚಿಟಿಕೆ ಸುದ್ದಿ

ಕೆಎಎಸ್ ಮುಖ್ಯ ಪರೀಕ್ಷೆ ಫಲಿತಾಂಶ ಪ್ರಕಟ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ ಗ್ರೂಪ್ 'ಎ' ಮತ್ತು ಗ್ರೂಪ್ 'ಬಿ' ವೃಂದದ 384 ಹುದ್ದೆಗಳಿಗೆ ನೇಮಕಾತಿಗೆ ನಡೆದ ಮುಖ್ಯ ಪರೀಕ್ಷೆಯಿಂದ 1:3 ಅನುಪಾತದಲ್ಲಿ ವ್ಯಕ್ತಿತ್ವ ಪರೀಕ್ಷೆಗೆ (ಸಂದರ್ಶನ) ಅರ್ಹತೆ ಪಡೆದ ಅಭ್ಯರ್ಥಿಗಳ ಪಟ್ಟಿಯನ್ನು ಕೆಪಿಎಸ್‌ಸಿ ಸೋಮವಾರ ಪ್ರಕಟಿಸಿದೆ.

ಮುಖ್ಯ ಪರೀಕ್ಷೆಯು 2025ರ ಮೇ 3, 5, 7 ಮತ್ತು 9ರಂದು ನಡೆದಿತ್ತು.

ಈ ಹುದ್ದೆಗಳ ನೇಮಕಾತಿಯ ಪೂರ್ವಭಾವಿ ಪರೀಕ್ಷೆಯಲ್ಲಿ ಅರ್ಹತೆ ಪಡೆಯದೆ, ಹೈಕೋರ್ಟ್ ಮತ್ತು ಕರ್ನಾಟಕ ಆಡಳಿತ ನ್ಯಾಯಮಂಡಳಿ ಮೆಟ್ಟಿಲೇರಿ ಷರತ್ತುಬದ್ಧ ಅನುಮತಿ ಪಡೆದು ಮುಖ್ಯ ಪರೀಕ್ಷೆ ಬರೆದ 300ಕ್ಕೂ ಹೆಚ್ಚು ಅಭ್ಯರ್ಥಿಗಳಲ್ಲಿ 6 ಮಂದಿ ವ್ಯಕ್ತಿತ್ವ ಪರೀಕ್ಷೆಗೆ ಆಯ್ಕೆಯಾಗಿದ್ದಾರೆ ಎಂದು ಕೆಪಿಎಸ್‌ಸಿ ಮೂಲಗಳು ತಿಳಿಸಿವೆ.

ಡಿ. 29ರಂದು ಈ ಹುದ್ದೆಗಳ ನೇಮಕಾತಿಗೆ ಪೂರ್ವಭಾವಿ ಪರೀಕ್ಷೆ ನಡೆದಿತ್ತು. ಆದರೆ, ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ್ದ ಪ್ರಶ್ನೆ ಮತ್ತು ಉತ್ತರಗಳಲ್ಲಿ ಲೋಪದ ಕಾರಣಕ್ಕೆ ಮತ್ತೆ ಪೂರ್ವಭಾವಿ ಪರೀಕ್ಷೆ ನಡೆಸಬೇಕು ಎಂದು ಅಭ್ಯರ್ಥಿಗಳು ಕೋರ್ಟ್ ಮೆಟ್ಟಿಲೇರಿದ್ದರು. ಮುಖ್ಯ ಪರೀಕ್ಷೆ ಬರೆಯಲು ಅವಕಾಶ ನೀಡಿದ್ದ ಕೋರ್ಟ್, ಅರ್ಜಿಯನ್ನು ಮುಂದಿನ ದಿನಗಳಲ್ಲಿ ಪರಿಗಣಿಸುವುದಾಗಿ ತಿಳಿಸಿತ್ತು.

ಉತ್ತರ ಕರ್ನಾಟಕ ತಾಪಮಾನ ಹೆಚ್ಚಳ

ಬೆಂಗಳೂರು: ಮಾರ್ಚ್ ಮೊದಲ ವಾರದಲ್ಲಿಯೇ ಉತ್ತರ ಕರ್ನಾಟಕದ ಕೆಲವು ಜಿಲ್ಲೆಗಳ ಉಷ್ಣಾಂಶದಲ್ಲಿ ಏರಿಕೆಯಾಗಿದೆ.

ಕಲಬುರಗಿಯಲ್ಲಿ ಸೋಮವಾರ 36.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ. ಕಳೆದ 24 ಗಂಟೆಯಲ್ಲಿ ಧಾರವಾಡದಲ್ಲಿ ಉಷ್ಣಾಂಶದಲ್ಲಿ ಗಣನೀಯ ಏರಿಕೆ ಕಂಡು ಬಂದಿದೆ. ಇಲ್ಲಿ ಗರಿಷ್ಠ ಉಷ್ಣಾಂಶ 33.6 ಡಿಗ್ರಿ ಸೆಲ್ಸಿಯಸ್ ದಾಖಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.



ರಾಯಚೂರಿನಲ್ಲಿ 36 ಡಿಗ್ರಿ ಸೆಲ್ಸಿಯಸ್, ಕೊಪ್ಪಳದಲ್ಲಿ 35.4, ಗದಗದಲ್ಲಿ 35.2, ವಿಜಯಪುರದಲ್ಲಿ 35.1 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲಾಗಿದೆ.

ಬೆಂಗಳೂರಿನಲ್ಲಿ ಮುಂದಿನ 48 ಗಂಟೆ ಕಾಲ ಮೋಡ ಕವಿದ ವಾತಾವರಣ ಇರಲಿದ್ದು, ಗರಿಷ್ಠ 32, ಕನಿಷ್ಠ 20 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ಇರಲಿದೆ ಎಂದು ಮುನ್ಸೂಚನೆ ನೀಡಲಾಗಿದೆ.

ಮಸೀದಿ ಬಳಿ ಬಾಂಬ್ ಸ್ಫೋಟ ಬೆದರಿಕೆ: ಎಫ್ಐಆರ್

ಮಂಗಳೂರು: 'ಸಪೋರ್ಟ್ ಮಾಡಿ ಬ್ರೋ. ಉಳ್ಳಾಲ ಮಸೀದಿ ಹತ್ತಿರ ಬಾಂಬ್ ಬ್ಲಾಸ್ಟ್ ಮಾಡುತ್ತೇನೆ' ಎಂದು ಇನ್‌ಸ್ಟಾಗ್ರಾಂನಲ್ಲಿ ಬರೆದುಕೊಂಡಿದ್ದ ವ್ಯಕ್ತಿ ವಿರುದ್ಧ ಉಳ್ಳಾಲ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಫೇಸ್‌ಬುಕ್‌ನಲ್ಲಿ ಬೇರೊಬ್ಬರು ಹಂಚಿಕೊಂಡ ಪೋಸ್ಟ್‌ಗೆ 'ಶಂಕರ್11916' ಎಂಬ ಖಾತೆಯನ್ನು ಬಳಸಿ ಈ ರೀತಿ ಕಮೆಂಟ್ ಮಾಡಲಾಗಿದೆ. ಮೊಹಮ್ಮದ್ ರಿಯಾಜ್ ಕಡಂಬು ಅವರು ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಮಾಹಿತಿ ಹಂಚಿಕೊಂಡು, 'ಆರೋಪಿಯನ್ನು ಪೊಲೀಸರು ಕೂಡಲೇ ಬಂಧಿಸುತ್ತಾರೆ ಎಂದು ಭಾವಿಸುತ್ತೇನೆ' ಎಂದಿದ್ದರು.


ಪೊಲೀಸ್ ಕಮಿಷನರ್ ಸುಧೀರ್ ಕುಮಾರ್ ರೆಡ್ಡಿ, 'ಮಸೀದಿ ಬಳಿ ಬಾಂಬ್ ಸ್ಫೋಟಿಸುತ್ತೇನೆ ಎಂಬ ಸಂದೇಶ ಹಂಚಿಕೊಂಡಿದ್ದು ಅಪರಾಧ. ಆರೋಪಿಯನ್ನು ಶೀಘ್ರವೇ ಬಂಧಿಸುತ್ತೇವೆ' ಎಂದು ತಿಳಿಸಿದ್ದಾರೆ.

ಶ್ರೀನಿವಾಸ್ ಕಪ್ಪಣ್ಣ, ಭಾರಿಘಾಟ್‌ರಿಗೆ ಪ್ರಶಸ್ತಿ

ಮಂಡ್ಯ: ಕರ್ನಾಟಕ ಸಂಘದಿಂದ ನೀಡುವ 2ನೇ ವರ್ಷದ 'ಪ್ರೊ.ಬಿ. ಜಯಪ್ರಕಾಶಗೌಡ ಪ್ರಶಸ್ತಿ–2026'ಕ್ಕೆ ರಂಗ ಸಂಘಟಕ ಶ್ರೀನಿವಾಸ್ ಜಿ. ಕಪ್ಪಣ್ಣ ಹಾಗೂ ರಂಗಕರ್ಮಿ ಶಶಿಧರ ಭಾರಿಘಾಟ್ ಆಯ್ಕೆಯಾಗಿದ್ದಾರೆ.



ಶಶಿಧರ



ಶ್ರೀನಿವಾಸ್

ಪ್ರಶಸ್ತಿಯು ತಲಾ ₹50ಸಾವಿರ ಹಾಗೂ ಫಲಕ ಒಳಗೊಂಡಿದೆ. ಮಾರ್ಚ್ 6ರಂದು ಸಂಜೆ 5.30ಕ್ಕೆ ನಗರದ ಕೆ.ವಿ. ಶಂಕರಗೌಡ ಶತಮಾನೋತ್ಸವ ಭವನದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರದಾನ ಮಾಡಲಾಗುವುದು.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಮತ್ತು ಕೊಮ್ಮೇರಹಳ್ಳಿ ವಿಶ್ವಮಾನವ ಕ್ಷೇತ್ರದ ಪುರುಷೋತ್ತಮಾನಂದನಾಥ ಸ್ವಾಮೀಜಿ ಸಾನ್ನಿಧ್ಯ ವಹಿಸುವರು.

'1.15 ಲಕ್ಷ ಅರ್ಜಿ ಅನುಮೋದನೆ'

ಇ-ಸ್ವತ್ತು ತಂತ್ರಾಂಶದಡಿ ವಿಲೇವಾರಿ ಸಚಿವ ಪ್ರಿಯಾಂಕ್ ಖರ್ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ 'ಇ-ಸ್ವತ್ತು 2.0' ತಂತ್ರಾಂಶದಡಿ ಇದುವರೆಗೆ 1,14,907 ಅರ್ಜಿಗಳನ್ನು ಅನುಮೋದಿಸಿ, ವಿಲೇವಾರಿ ಮಾಡಲಾಗಿದೆ' ಎಂದು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಇಲಾಖೆಯ ಅಧಿಕಾರಿಗಳ ಜೊತೆ ಸೋಮವಾರ ಸಭೆ ನಡೆಸಿದ ಅವರು, 'ಒಟ್ಟು 1,38,470 ಅರ್ಜಿಗಳು ಸ್ವೀಕೃತವಾಗಿದ್ದು, 23,563 ಅರ್ಜಿಗಳು ಅನುಮೋದನೆಗೆ ಬಾಕಿ ಇವೆ' ಎಂದು ಮಾಹಿತಿ ನೀಡಿದ್ದಾರೆ.

'ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿಗಳನ್ನು ಸಲ್ಲಿಸುವ ಸಂದರ್ಭದಲ್ಲಿ ಮತ್ತು ಅರ್ಜಿಗಳನ್ನು ಅನುಮೋದಿಸುವ ಸಮಯದಲ್ಲಿ ಕೆಲವು ತಾಂತ್ರಿಕ ಸಮಸ್ಯೆಗಳು ಎದುರಾಗಿದ್ದವು. ಈ ಬಗ್ಗೆ ಕಳೆದ ಜನವರಿಯಲ್ಲಿ ಕೇಂದ್ರದ ಮಾಹಿತಿ ತಂತ್ರಜ್ಞಾನ ಹಾಗೂ ಎಲೆಕ್ಟ್ರಾನಿಕ್ಸ್ ಖಾತೆಯ ಸಚಿವರಿಗೆ ಪತ್ರ ಬರೆಯಲಾಗಿತ್ತು. ಬಳಿಕ ತಂತ್ರಾಂಶದಲ್ಲಿ ಬದಲಾವಣೆ ಮಾಡಿ ಕೆಲವು ಸಮಸ್ಯೆಗಳನ್ನು ಬಗೆಹರಿಸಲಾಗಿದೆ' ಎಂದು ಅವರು ಹೇಳಿದ್ದಾರೆ.

'ಹೊಸ ಬಡಾವಣೆಗಳಿಗೆ ಅರ್ಜಿಗಳನ್ನು ಸಲ್ಲಿಸಲು ಗ್ರಾಮ ಪಂಚಾಯಿತಿ ಹಂತದಲ್ಲಿ ಅವಕಾಶ ನೀಡಲಾಗಿದೆ. ಈವರೆಗೆ 478 ಹೊಸ ಬಡಾವಣೆಗಳಿಗೆ ಅರ್ಜಿ ಸಲ್ಲಿಕೆಯಾಗಿದ್ದು, ಅವುಗಳಲ್ಲಿ 54 ಅರ್ಜಿಗಳಿಗೆ ಗ್ರಾಮ ಪಂಚಾಯಿತಿ ಹಂತದಲ್ಲಿ ಅನುಮೋದನೆ ನೀಡಲಾಗಿದೆ' ಎಂದು ಅವರು ತಿಳಿಸಿದ್ದಾರೆ.

'ಇ-ಸ್ವತ್ತು ತಂತ್ರಾಂಶದ ಸಿಟಿಜನ್ ಇಂಟರ್‌ಫೇಸ್ ಮೂಲಕ ಅರ್ಜಿ ಸಲ್ಲಿಸುವಾಗ ತಮ್ಮ ಭಾಗದಲ್ಲಿ ಚಾಲ್ತಿಯಲ್ಲಿರುವ ಸೆಂಟ್ಸ್ ಪದ್ಧತಿಯಂತೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸುವಂತೆ ದಕ್ಷಿಣ ಕನ್ನಡ ಜಿಲ್ಲೆಯ ನಿಯೋಗ ಕೋರಿತ್ತು. ಅದರಂತೆ ಗುಂಟೆ ಮತ್ತು ಸೆಂಟ್ಸ್ ಅಳತೆಯಲ್ಲಿರುವ ಭೂಮಿಯ ವಿಸ್ತೀರ್ಣವನ್ನು ಚದರ ಮೀಟರ್‌ಗೆ ಪರಿವರ್ತಿಸಿ, ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ' ಎಂದೂ ಹೇಳಿದ್ದಾರೆ.

'ಹೊಸದಾಗಿ ಅನುಮೋದನೆಗೊಂಡ ಆಸ್ತಿಗಳಿಗೆ ತಿದ್ದುಪಡಿ ಮಾಡುವ ಅವಕಾಶವನ್ನು ಹಾಗೂ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಮಾರ್ಗಸೂಚಿ ದರವನ್ನು ಇ-ಸ್ವತ್ತು ತಂತ್ರಾಂಶದೊಂದಿಗೆ ಸಂಯೋಜನೆ ಮಾಡುವ ಕಾರ್ಯವನ್ನು ಮುಂದಿನ 10 ದಿನದೊಳಗೆ ಪೂರ್ಣಗೊಳಿಸಲಾಗುವುದು. ಇ-ಸ್ವತ್ತು ತಂತ್ರಾಂಶದ ಬಳಕೆದಾರರು ಲಾಗ್ ಇನ್ ವೇಳೆ ಎದುರಿಸುವ ತಾಂತ್ರಿಕ ಸಮಸ್ಯೆಗಳನ್ನು ತ್ವರಿತವಾಗಿ ಬಗೆಹರಿಸಲಾಗುವುದು. ಹೆಚ್ಚಿನ ಮಾಹಿತಿಗೆ 9483476000 ಸಹಾಯವಾಣಿಯನ್ನು ಸಂಪರ್ಕಿಸಬಹುದು' ಎಂದೂ ಹೇಳಿದ್ದಾರೆ.

ಅಂಕಿ ಅಂಶಗಳು

1,38,470 ಒಟ್ಟು ಸ್ವೀಕೃತವಾದ ಅರ್ಜಿಗಳು

1,14,907 ವಿಲೇವಾರಿ ಆಗಿರುವ ಅರ್ಜಿಗಳು

23,563 ಬಾಕಿ ಇರುವ ಅರ್ಜಿಗಳು

ತಸ್ತೀಕ್: ₹10 ಸಾವಿರಕ್ಕೆ ಹೆಚ್ಚಿಸಲು ಅರ್ಚಕರ ಆಗ್ರಹ



ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಜರಾಯಿ ಇಲಾಖೆಯ ಅಧೀನದಲ್ಲಿರುವ 'ಸಿ' ದರ್ಜೆಯ ದೇವಸ್ಥಾನಗಳಿಗೆ ಇರುವ ತಸ್ತೀಕ್ ಅನ್ನು ₹10 ಸಾವಿರಕ್ಕೆ ಹೆಚ್ಚಿಸಬೇಕು ಎಂದು ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಅರ್ಚಕರ, ಆಗಮಿಕರ ಮತ್ತು ಉಪಾಧಿವಂತರ ಒಕ್ಕೂಟ ಆಗ್ರಹಿಸಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಒಕ್ಕೂಟದ ಅಧ್ಯಕ್ಷ ಕೆ.ಇ.ರಾಧಾಕೃಷ್ಣ, ಪ್ರಧಾನ ಕಾರ್ಯದರ್ಶಿ ಕೆ.ಎಸ್.ಎನ್. ದೀಕ್ಷಿತ್, 'ರಾಜ್ಯದಲ್ಲಿ 'ಸಿ' ದರ್ಜೆಯ 36,217 ದೇವಸ್ಥಾನಗಳಿವೆ. ಬಹುತೇಕ ಎಲ್ಲವೂ ಗ್ರಾಮೀಣ ಪ್ರದೇಶದಲ್ಲಿವೆ. ಪೂಜಾ ಸಾಮಗ್ರಿ ಸೇರಿದಂತೆ ಎಲ್ಲ ವಸ್ತುಗಳ ಬೆಲೆ ಏರಿಕೆಯಾಗಿದೆ. ಹೀಗಾಗಿ, ತಸ್ತೀಕ್ ಮೊತ್ತ ಹೆಚ್ಚಿಸಬೇಕು' ಎಂದು ಒತ್ತಾಯಿಸಿದರು.

ತಸ್ತೀಕ್ ಸದ್ಯ ₹6,000 ಇದೆ. ಇದಕ್ಕೆ ಇನ್ನೂ ₹4,000 ಸೇರಿಸಿ ನೀಡಬೇಕು. ಪೂಜಾದ್ರವ್ಯಗಳಿಗೆ ₹5,000 ನೀಡಬೇಕು. ಈ ಮೊತ್ತ ಎರಡೂ ಸೇರಿದರೆ ಸರ್ಕಾರಕ್ಕೆ ಒಂದು ತಿಂಗಳಿಗೆ ₹35 ಕೋಟಿಯಷ್ಟು ವೆಚ್ಚವಾಗುತ್ತದೆ. ದೇವಸ್ಥಾನಗಳಲ್ಲಿ ಕೆಲಸ ಮಾಡುವ ಇತರ ಉದ್ಯೋಗಿಗಳಿಗೆ ತಿಂಗಳಿಗೆ ₹5,000 ನೀಡಬೇಕು ಎಂದು ಒತ್ತಾಯಿಸಿದರು.

ದೇವಸ್ಥಾನಗಳ ಆಸ್ತಿ ಶಕ್ತಿವಂತರ ಪಾಲಾಗಿತ್ತು. ಮುಜರಾಯಿ ಸಚಿವ ರಾಮಲಿಂಗಾರೆಡ್ಡಿ ಅವರ ಮುತುವರ್ಜಿಯಿಂದಾಗಿ 15 ಸಾವಿರಕ್ಕಿಂತಲೂ ಅಧಿಕ ಆಸ್ತಿಗಳನ್ನು ಮರಳಿ ದೇವಸ್ಥಾನಗಳಿಗೆ ಒಪ್ಪಿಸಲಾಗಿದೆ. ಈಗ ವಶಪಡಿಸಿಕೊಂಡಿರುವುದಕ್ಕಿಂತಲೂ ಹೆಚ್ಚು ಆಸ್ತಿ ದೇವಸ್ಥಾನಗಳಿಗೆ ಸೇರಲು ಬಾಕಿ ಇದೆ. ಅದಕ್ಕಾಗಿ ವಿಶೇಷ ಕಾರ್ಯಪಡೆ ರಚಿಸಬೇಕು. ದೇವಸ್ಥಾನದ ಆಸ್ತಿ ರಕ್ಷಿಸಬೇಕು ಎಂದು ಹೇಳಿದರು.

ದೇವಸ್ಥಾನದ ವ್ಯವಸ್ಥಾಪನಾ ಸಮಿತಿಗಳಿಗೆ ರಾಜಕೀಯ ಪಕ್ಷಗಳ ಹಿಂಬಾಲಕರನ್ನು ನೇಮಿಸಬಾರದು. ಅಧಿಕಾರಿಗಳು, ಸಮಾಜಸೇವಕರು, ದಾನಿಗಳು, ನ್ಯಾಯಾಧೀಶರನ್ನು ನೇಮಿಸಬೇಕು. ಎ ಮತ್ತು ಬಿ ವರ್ಗದ ದೇವಸ್ಥಾನಗಳಲ್ಲಿ ಅಲ್ಲಿನ ಆದಾಯದ ಶೇ 35ರಷ್ಟನ್ನು ಆಯಾ ದೇವಸ್ಥಾನದ ಅರ್ಚಕರು, ಸಿಬ್ಬಂದಿಯ ವೇತನ, ದೇವಸ್ಥಾನದ ವೆಚ್ಚಗಳಿಗಾಗಿ ನೀಡಲಾಗುತ್ತಿದೆ. ಅದನ್ನು ಶೇ 50ಕ್ಕೆ ಏರಿಸಬೇಕು ಎಂದು ಆಗ್ರಹಿಸಿದರು. ಸುದ್ದಿಗೋಷ್ಠಿಯಲ್ಲಿ ಒಕ್ಕೂಟದ ಪದಾಧಿಕಾರಿಗಳಾದ ಶ್ಯಾಮಸುಂದರ ದೀಕ್ಷಿತ್, ಚನ್ನರಾಯ ಸ್ವಾಮಿ ಉಪಸ್ಥಿತರಿದ್ದರು.

ನಾಟಿಗೆ ಸಜ್ಜು

ಪ್ರಜಾವಾಣಿ ಚಿತ್ರ ಅನೂಪ್ ರಾಘ ಟಿ.




ಮೈಸೂರು ಜಿಲ್ಲೆಯಲ್ಲಿ ಬೇಸಿಗೆಯಲ್ಲೂ ಕಾಲುವೆಗಳ ನೀರು ಬಳಸಿಕೊಂಡು ಕೃಷಿ ಕಾರ್ಯ ಚುರುಕಾಗಿದೆ. ತಿ. ನರಸೀಪುರ ಸಮೀಪ ಗದ್ದೆಯೊಂದರಲ್ಲಿ ಸೋಮವಾರ ರೈತರು ಭತ್ತದ ಪೈರು ನಾಟಿಗೆ ಸಿದ್ಧತೆ ನಡೆಸಿದ್ದ ದೃಶ್ಯ ಕಂಡುಬಂದಿದ್ದು ಹೀಗೆ

'ಡಿಕೆಶಿ ಬಣದ ಮೇಲೆ ಗುಪ್ತಚರ ಕಣ್ಗಾವಲು'

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಅವರ ಬಣದ ಶಾಸಕರ ಚಟುವಟಿಕೆಗಳ ಮೇಲೆ ಕಣ್ಣಿಡಲು ತಮ್ಮ ಬಳಿ ಇರುವ ಗುಪ್ತಚರ ವಿಭಾಗವನ್ನು ಬಳಸಿಕೊಂಡಿದ್ದಾರೆ ಎಂದು ಆರ್. ಅಶೋಕ ಆರೋಪಿಸಿದ್ದರೆ, ದೂರವಾಣಿ ಕರೆಗಳ ಕದ್ದಾಲಿಕೆ ಮಾಡಲಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ದೂರಿದ್ದಾರೆ.

'ಶಾಸಕರು–ಸಚಿವರ ಮೇಲೆ ಗೂಢಚರ್ಯೆ'

ಮೈಸೂರು: 'ರಾಜ್ಯದಲ್ಲಿ ಎಲ್ಲ ಸರ್ಕಾರಗಳ ಅವಧಿಯಲ್ಲೂ ಫೋನ್ ಟ್ಯಾಪಿಂಗ್ (ದೂರವಾಣಿ ಕದ್ದಾಲಿಕೆ) ಇತ್ತು. ಆದರೆ, ಅವರದ್ದೇ ಶಾಸಕರು– ಸಚಿವರ ಮೇಲೆ ಗುಪ್ತಚರ ಕೆಲಸ ಮಾಡುತ್ತಿರುವುದು ಇದೇ ಮೊದಲು' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ದೂರಿದರು.



ಇಲ್ಲಿ ಸೋಮವಾರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ದೂರವಾಣಿ ಕದ್ದಾಲಿಕೆ ಹಿಂದಿನಿಂದಲೂ ನಡೆದಿದೆ. ಆದರೆ ಕೆಲವೊಮ್ಮೆ ವಿಷಯಗಳು ಹೊರ ಬಂದು ಕೆಲವರ ತಲೆ ಉರುಳಿದ್ದಿದೆ. ಈಗಿನ ಸರ್ಕಾರದಲ್ಲಿ ಅದು ಎಷ್ಟು ಜಾಸ್ತಿಯಾಗಿದೆ ಎಂದು ಅವರನ್ನೇ ಕೇಳಬೇಕು' ಎಂದರು.

'ಗುಪ್ತಚರ ವಿಭಾಗದಲ್ಲೇ ಮುಖ್ಯಮಂತ್ರಿಯದ್ದು ಒಂದು ಗುಂಪು, ಮುಖ್ಯಮಂತ್ರಿ ಆಗಬೇಕು ಎಂದುಕೊಂಡವರದ್ದು ಇನ್ನೊಂದು ಗುಂಪು ಪರಸ್ಪರ ಗೂಢಚರ್ಯೆ ನಡೆಸುತ್ತಿರುವುದು ದುರಂತ' ಎಂದು ಆರೋಪಿಸಿದರು.

ಎಸ್ಪಿ ನೇತೃತ್ವದಲ್ಲಿ ಡಿಕೆಶಿ ಮೇಲೆ ನಿಗಾ: ಅಶೋಕ

ಬೆಂಗಳೂರು: 'ಡಿ.ಕೆ.ಶಿವಕುಮಾರ್ ಮತ್ತು ಅವರ ಬಣದ ಶಾಸಕರ ಚಟುವಟಿಕೆಗಳ ಕಣ್ಗಾವಲಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಗುಪ್ತಚರ ವಿಭಾಗಕ್ಕೆ ಸೂಚನೆ ನೀಡಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಕೃತ್ಯಕ್ಕಾಗಿ ಎಸ್ಪಿ ನೇತೃತ್ವದಲ್ಲಿ ಅನಧಿಕೃತವಾಗಿ ತಂಡವೊಂದನ್ನು ರಚಿಸಿದ್ದಾರೆ ಎಂದೂ ದೂರಿದರು.



'ಸಾಮಾನ್ಯವಾಗಿ ಗುಪ್ತಚರ ವಿಭಾಗವನ್ನು ಮುಖ್ಯಮಂತ್ರಿಯವರೇ ಇಟ್ಟುಕೊಳ್ಳುತ್ತಾರೆ. ಅದನ್ನು ರಾಜ್ಯದ ಹಿತಕ್ಕಾಗಿ ಬಳಸಿಕೊಳ್ಳಬೇಕು. ಆದರೆ ಇಲ್ಲಿ ತಮ್ಮ ಕುರ್ಚಿ ಉಳಿಸಿಕೊಳ್ಳಲು ವಿರೋಧಿ ಬಣದ ಶಾಸಕರ ಚಟುವಟಿಕೆಗಳ ಮಾಹಿತಿ ಕಲೆ ಹಾಕಲು ಬಳಸುತ್ತಿದ್ದಾರೆ' ಎಂದು ಹೇಳಿದರು.

'ಶಿವಕುಮಾರ್ ಬಣದ ಶಾಸಕರು ಎಲ್ಲಿ ಊಟಕ್ಕೆ ಹೋಗುತ್ತಾರೆ, ಏನು ಮಾಡುತ್ತಾರೆ ಎಂಬುದರ ಮೇಲೆ ಕಣ್ಣಿಡುವುದಕ್ಕೆ ಗುಪ್ತಚರ ವಿಭಾಗ ಸೀಮಿತವಾಗಿದೆ. ಈ ವಿಭಾಗ ಡ್ರಗ್ಸ್ ಫ್ಯಾಕ್ಟರಿಗಳ ಮೇಲೆ ಕಣ್ಣಿಟ್ಟಿಲ್ಲ. ಕಾನೂನು ಸುವ್ಯವಸ್ಥೆ ಹದಗೆಟ್ಟಿದೆ, ಕೋಮು ಸಂಘರ್ಷ ಹೆಚ್ಚಾಗುತ್ತಿದೆ. ಅದರ ಮಾಹಿತಿ ಸಂಗ್ರಹಿಸುತ್ತಿಲ್ಲ. ಸರ್ಕಾರಕ್ಕೆ ಈ ಯಾವುದೂ ಆದ್ಯತೆ ಆಗಿಲ್ಲ. ರಾಜಕೀಯ ಪ್ರತಿಸ್ಪರ್ಧಿಗಳನ್ನು ಮೂಲೆಗುಂಪು ಮಾಡುವುದು ಸಿದ್ದರಾಮಯ್ಯ ಅವರ ಆದ್ಯತೆ' ಎಂದು ಅಶೋಕ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ರಾಜ್ಯಕ್ಕೆ 'ಜಲದಾಹ'ದ ಆತಂಕ

ಒಂದನೇ ಪುಟದಿಂದ...

ಬೇಸಿಗೆಯಲ್ಲಿ ಕುಡಿಯುವ ನೀರು ಒದಗಿಸುವ ತುರ್ತು ಕಾಮಗಾರಿಗಳಿಗಾಗಿ ಕಳೆದ ಮೂರು ವರ್ಷಗಳಲ್ಲಿ ಒಟ್ಟು ₹272.80 ಕೋಟಿ ಅನುದಾನ ಒದಗಿಸಲಾಗಿದೆ.

ಕಳೆದ 3 ವರ್ಷಗಳಲ್ಲಿ ಬರಪೀಡಿತ ಗ್ರಾಮಗಳು

ವರ್ಷ	ತಾಲ್ಲೂಕು	ಗ್ರಾ.ಪಂಗಳು	ಗ್ರಾಮಗಳು
2023-24	146	1,425	3,294
2024-25	130	1,171	2,750
2025-26	119	1,208	2,523

ಈ ಅವಧಿಯಲ್ಲಿ 11,769 ಕಾಮಗಾರಿಗಳನ್ನು ಕೈಗೊಳ್ಳಲಾಗಿದ್ದು, ಈ ಪೈಕಿ, 10,248 ಪೂರ್ಣಗೊಂಡಿದ್ದು, ₹128.09 ಕೋಟಿ ವೆಚ್ಚವಾಗಿದೆ ಎಂದೂ ಮೂಲಗಳು ತಿಳಿಸಿವೆ.

ಕುಡಿಯುವ ನೀರಿನ ಸಮಸ್ಯೆ ಉಂಟಾದರೆ ಟ್ಯಾಂಕರ್‌ಗಳ ಮೂಲಕ ಹಾಗೂ ಖಾಸಗಿ ಕೊಳವೆ ಬಾವಿಗಳನ್ನು ಬಾಡಿಗೆ ಆಧಾರದಲ್ಲಿ ಪಡೆದು ನೀರು ಒದಗಿಸಲು ಕ್ರಮವಹಿಸುತ್ತಿರುವ ಕುರಿತ ದಿನನಿತ್ಯದ ಮಾಹಿತಿ, ಮೂರು ವರ್ಷಗಳಿಂದ ಕುಡಿಯುವ ನೀರಿನ ಸಮಸ್ಯೆ ಹೊಂದಿರುವ ಗ್ರಾಮ ಪಂಚಾಯಿತಿಗಳು, ಗ್ರಾಮಗಳು, ಬರ ಪರಿಸ್ಥಿತಿಯ ಅವಧಿ, ಈ ಅವಧಿಯಲ್ಲಿ ನೀರು ಪೂರೈಕೆ ಮಾಡಲು ಕೈಗೊಂಡ ಕ್ರಮ, ಮುಂಬರುವ ಬೇಸಿಗೆ ಸಂದರ್ಭದಲ್ಲಿ ಕುಡಿಯುವ ನೀರು ಒದಗಿಸಲು ಕೈಗೊಳ್ಳಬೇಕಾದ ತುರ್ತು ಕಾಮಗಾರಿಗಳ ಕ್ರಿಯಾ ಯೋಜನೆಯನ್ನು ತಕ್ಷಣ ಸಲ್ಲಿಸಬೇಕು ಎಂದು ಎಲ್ಲ ಜಿಲ್ಲಾ ಪಂಚಾಯಿತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಸರ್ಕಾರದ ಕಾರ್ಯದರ್ಶಿ ಡಿ. ರಂದೀಪ್ ಅವರು ಈಗಾಗಲೇ ಸೂಚಿಸಿದ್ದಾರೆ.

ಶುದ್ಧ ನೀರು: ದುರಸ್ತಿಗೆ ಗರಿಷ್ಠ ₹1.5 ಲಕ್ಷ

ಜ. 23ರಂದು ಹೊರಡಿಸಿದ್ದ ಆದೇಶದಲ್ಲಿ ಪ್ರತಿ ಘಟಕದ ದುರಸ್ತಿಗೆ ₹50 ಸಾವಿರ ಒದಗಿಸಲಾಗಿತ್ತು. ಇದೀಗ, ಪ್ರತಿ ಘಟಕವನ್ನು ಗರಿಷ್ಠ ₹1.50 ಲಕ್ಷ ವೆಚ್ಚದಲ್ಲಿ ಪುನಶ್ಚೇತನಗೊಳಿಸಬೇಕೆಂದು ಸೂಚಿಸಲಾಗಿದೆ.

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯು ಫೆ. 26ರಂದು ನೀಡಿರುವ ಮಾಹಿತಿಯ ಪ್ರಕಾರ, ರಾಜ್ಯದಲ್ಲಿ ಒಟ್ಟು 19,298 ಶುದ್ಧ ನೀರಿನ ಘಟಕಗಳಿವೆ. ಅವುಗಳಲ್ಲಿ 16,117 ಮಾತ್ರ ಕಾರ್ಯಾಚರಣೆಯಲ್ಲಿವೆ. ಉಳಿದ 3,181 ಘಟಕಗಳು ದುರಸ್ತಿಯಲ್ಲಿವೆ. ಒಟ್ಟು ಘಟಕಗಳ ಪೈಕಿ, 10,590 ಅನ್ನು ಗುತ್ತಿಗೆದಾರರು ನಿರ್ವಹಿಸುತ್ತಿದ್ದು, 8,679 ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಗೊಂಡಿವೆ.


'ಶುದ್ಧ ನೀರಿನ ಘಟಕಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯ ಬಿಲ್ ಮೊತ್ತ ₹58.14 ಕೋಟಿ ಪಾವತಿಸಲು ಬಾಕಿಯಿದೆ' ಎಂದು ಇಲಾಖೆಯ ಮೂಲಗಳು ತಿಳಿಸಿವೆ.

'ಇಂಗ್ಲೆಂಡ್‌ನಲ್ಲೇ ಉಳಿದ ರಣವೀರ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧದ ಪರಿಣಾಮ ವಿಮಾನಗಳ ಹಾರಾಟ ರದ್ದಾಗಿರುವ ಕಾರಣ ಬಾಲಿವುಡ್ ನಟ ರಣವೀರ್ ಸಿಂಗ್ ಇಂಗ್ಲೆಂಡ್‌ನಲ್ಲೇ ಉಳಿದುಕೊಂಡಿದ್ದು, ಭಾರತಕ್ಕೆ ಹಿಂದಿರುಗಲಾಗುತ್ತಿಲ್ಲ' ಎಂದು ಅವರ ಪರ ವಕೀಲರು ಹೈಕೋರ್ಟ್‌ಗೆ ಅರುಹಿದರು.

ಕಾಂತಾರ ಚಾಪ್ಟರ್-1 ಚಲನಚಿತ್ರದಲ್ಲಿ, ಚಾಮುಂಡಿ ದೈವವನ್ನು ಹೆಣ್ಣು ದೆವ್ವ ಎಂದು ಕರೆದು ಅಪಹಾಸ್ಯ ಮಾಡಿದ ಕಾರಣದಿಂದ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತಂದ ಆರೋಪಕ್ಕೆ ಸಂಬಂಧಿಸಿದಂತೆ, 'ನನ್ನ ವಿರುದ್ಧದ ಖಾಸಗಿ ದೂರು ಹಾಗೂ ಹೈಗ್ರೌಂಡ್ಸ್ ಠಾಣೆ ಪೊಲೀಸರು ದಾಖಲಿಸಿರುವ ಎಫ್ಐಆರ್ ರದ್ದುಪಡಿಸಬೇಕು' ಎಂದು ಕೋರಿ ರಣವೀರ್ ಸಿಂಗ್ ಹೈಕೋರ್ಟ್‌ಗೆ ಕ್ರಿಮಿನಲ್ ಅರ್ಜಿ ಸಲ್ಲಿಸಿದ್ದಾರೆ.



ರಣವೀರ್ ಸಿಂಗ್

ಈ ಅರ್ಜಿ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠದ ಮುಂದೆ ಸೋಮವಾರ ವಿಚಾರಣೆಗೆ ಬಂದಾಗ, ಪ್ರಾಸಿಕ್ಯೂಷನ್ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ಅರ್ಜಿಗೆ ಸಂಬಂಧಿಸಿ ದಂತೆ ಸರ್ಕಾರದ ಆಕ್ಷೇಪಣೆ ತಯಾರಿದೆ. ಮುಂದಿನ 2 ದಿನಗಳಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದರು.

'ವಿಚಾರಣೆಗೆ ಹಾಜರಾಗುವಂತೆ ರಣವೀರ್ ಅವರಿಗೆ ಸೂಚಿಸಿ ಪೊಲೀಸರು ಈಗಾಗಲೇ ನೋಟಿಸ್ ಜಾರಿ ಮಾಡಿದ್ದಾರೆ' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ಪ್ರತಿಯಾಗಿ ರಣವೀರ್ ಪರ ಪದಾಂಕಿತ ಹಿರಿಯ ವಕೀಲ ಸಜನ್ ಪೂವಯ್ಯ, 'ನೋಟಿಸ್ ಸ್ವೀಕರಿಸಲಾಗಿದೆ. ರಣವೀರ್ ಸಿಂಗ್ ಸದ್ಯ ವಿದೇಶದಲ್ಲಿದ್ದಾರೆ. ಯುದ್ಧದಿಂದ ಪಶ್ಚಿಮ ಏಷ್ಯಾದ ಯಾವುದೇ ಭಾಗದಿಂದಲೂ ಅದರಲ್ಲೂ ಇಂಗ್ಲೆಂಡ್‌ನಿಂದ ಭಾರತಕ್ಕೆ ಬರಬೇಕಿರುವ ಬಹುತೇಕ ಎಲ್ಲಾ ವಿಮಾನಗಳ ಹಾರಾಟ ರದ್ದಾಗಿದೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ಪರಿಗಣಿಸಿದ ಪೀಠ ಆಕ್ಷೇಪಣೆ ಸಲ್ಲಿಸಲು ಪ್ರಾಸಿಕ್ಯೂಷನ್‌ಗೆ ಕಾಲಾವಕಾಶ ನೀಡಿ ವಿಚಾರಣೆಯನ್ನು ಇದೇ 9ಕ್ಕೆ ಮುಂದೂಡಿತು. ಅಲ್ಲಿವರೆಗೂ 'ರಣವೀರ್ ವಿರುದ್ಧ ಪೊಲೀಸರು ಆತುರದ ಕ್ರಮ ಕೈಗೊಳ್ಳಬಾರದು' ಎಂದು ಸೂಚಿಸಿ ಈ ಮೊದಲು ಹೊರಡಿಸಿದ್ದ ಮಧ್ಯಂತರ ಆದೇಶ ವಿಸ್ತರಿಸಿತು.

ಜೆಡಿಎಸ್ ರಾಷ್ಟ್ರೀಯ ಘಟಕದ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಹೇಳಿಕೆ

ಎನ್‌ಡಿಎ ಜತೆ ಮುಂದುವರಿಯಲಿರುವ ಜೆಡಿಎಸ್

ಪ್ರಜಾವಾಣಿ ವಾರ್ತೆ

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): 'ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಹಲವು ಮಿತ್ರ ಪಕ್ಷಗಳೊಂದಿಗೆ ಸೇರಿ ಜನಪರ ಆಡಳಿತ ನಡೆಸುತ್ತಿದೆ. ಜೆಡಿಎಸ್ ಪಕ್ಷವೂ ಎನ್‌ಡಿಎ ಜತೆಗೆ ಮುಂದಿನ ಚುನಾವಣೆಯನ್ನೂ ಎದುರಿಸಲಿದೆ' ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ.ದೇವೇಗೌಡ ಹೇಳಿದರು.

ಕುಕ್ಕೆ ಸುಬ್ರಹ್ಮಣ್ಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎನ್‌ಡಿಎ ಜತೆಗಿನ ನಮ್ಮ ಮೈತ್ರಿ ನಿರಾತಂಕವಾಗಿದೆ. ನರೇಂದ್ರ ಮೋದಿ ನಾಯಕನಾಗಿ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಂಡಿದ್ದಾರೆ' ಎಂದರು.

'ಜೆಡಿಎಸ್ ಸರ್ಕಾರ ಈ ಹಿಂದೆ ರಾಜ್ಯದಲ್ಲಿ ಅಧಿಕಾರದಲ್ಲಿ ಇದ್ದಾಗ ಜನಪರ ಯೋಜನೆಗಳನ್ನು ಜಾರಿಗೆ ತಂದಿತ್ತು. ಇದೀಗ ಎನ್‌ಡಿಎ ಸರ್ಕಾರದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ಸಚಿವರಾಗಿದ್ದಾರೆ' ಎಂದರು.

'ಇಂದಿನ ಯುವಜನರು ಐಟಿ, ಬಿಟಿ ಎಂದು ಉದ್ಯೋಗ ಅರಸುತ್ತ ದೂರದ ನಗರಗಳು, ಹೊರ ರಾಷ್ಟ್ರಗಳಿಗೆ ಹೋಗುವ ಬದಲು ತಮ್ಮ ಊರಿನಲ್ಲೇ ಕೃಷಿಯ ಬಗ್ಗೆ ಒಲವು ತೋರಿ ಕೃಷಿಯನ್ನು ಅಭಿವೃದ್ಧಿಪಡಿಸಿ ಹೆಚ್ಚು ಆದಾಯ ಪಡೆಯುವಂತಾಗಬೇಕು. ಈ ಸಂಬಂಧ ಕೃಷಿ ಕ್ಷೇತ್ರವನ್ನು ಅಭಿವೃದ್ಧಿ ಪಡಿಸಬೇಕು. ಯುವಕರು ರಾಜಕೀಯದಲ್ಲೂ ತೊಡಗಿಕೊಂಡು ಸಮಾಜಮುಖಿ ಕೆಲಸ ಮಾಡಲು ಅವಕಾಶಗಳು ಇವೆ' ಎಂದರು.

ದೇವೇಗೌಡ ಅವರು ಸೋಮವಾರ ಬೆಳಿಗ್ಗೆ ಕ್ಷೇತ್ರದಲ್ಲಿ ಸಂಕಲ್ಪ ನೆರವೇರಿಸಿ, ಆಶ್ಲೇಷ ಸೇವೆ ನೆರವೇರಿಸಿದರು. ಬಳಿಕ ಅಕ್ಕಿ, ಬೆಲ್ಲ, ತೆಂಗಿನಕಾಯಿಯಲ್ಲಿ ತುಲಾಭಾರ ಸೇವೆ ನೆರವೇರಿಸಿದರು.



ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್‌.ಡಿ.ದೇವೇಗೌಡ ಅವರು ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದಲ್ಲಿ ಸೋಮವಾರ ತುಲಾಭಾರ ಸೇವೆ ನೆರವೇರಿಸಿದರು

ಪ್ರಜ್ವಲ್ ಜೈಲು ಪಾಲಾಗಲು ಎಚ್‌ಡಿಕೆ ಕಾರಣ: ಶಾಸಕ ಉದಯ ಆರೋಪ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): 'ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಜೈಲು ಪಾಲಾಗಲು ಎಚ್.ಡಿ. ಕುಮಾರಸ್ವಾಮಿ ಅವರೇ ಕಾರಣ' ಎಂದು ಶಾಸಕ ಕೆ.ಎಂ.ಉದಯ ಆರೋಪಿಸಿದರು.

ಸೋಮವಾರ ಇಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿ, 'ನಿಖಿಲ್ ಅವರನ್ನು ಜನ ಮೂರು ಬಾರಿ ತಿರಸ್ಕರಿಸಿದ್ದಾರೆ. ಏನೂ ಆಗಲಿಲ್ಲವಲ್ಲ ಎಂಬ ಕಾರಣಕ್ಕೆ ಅಣ್ಣನ ಮಗ ಪ್ರಜ್ವಲ್ ಅವರನ್ನೇ ಕುಮಾರಸ್ವಾಮಿ ಜೈಲಿಗೆ ಹಾಕಿಸಿದರು' ಎಂದು ದೂರಿದರು.



ಕೆ.ಎಂ. ಉದಯ

'ಪ್ರಜ್ವಲ್ ಜನಪ್ರಿಯತೆ ಸಹಿಸದೆ ಕುಮಾರಸ್ವಾಮಿ ಚುನಾವಣಾ ವೇಳೆ ಪೆನ್‌ಡ್ರೈವ್‌ಗಳನ್ನು ಸೃಷ್ಟಿಸಿ ಜೈಲಿಗೆ ಹಾಕಿಸಿದರು. ಮಾಜಿ ಪ್ರಧಾನಿ ದೇವೇಗೌಡರು ಮನಸು ಮಾಡಿದ್ದರೆ ಹೊರಗೆ ತರಬಹುದಿತ್ತು. ಆದರೆ, ಕುಮಾರಸ್ವಾಮಿ ಕುಮ್ಮಕ್ಕಿನಿಂದ ಪ್ರಜ್ವಲ್ ಜೈಲಿನಿಂದ ಹೊರಬರಲು ಆಗುತ್ತಿಲ್ಲ' ಎಂದು ಆರೋಪಿಸಿದರು.

ನಿಧನ ವಾರ್ತೆ

ಸಿಪಿಎಂ ಮುಖಂಡ ನಿತ್ಯಾನಂದಸ್ವಾಮಿ



ಬೆಂಗಳೂರು: ಅನಾರೋಗ್ಯದಿಂದ ಬಳಲುತ್ತಿದ್ದ ಸಿಪಿಎಂ ರಾಜ್ಯ ಸಮಿತಿ ಕಾರ್ಯದರ್ಶಿ ಮಂಡಳಿಯ ಮಾಜಿ ಸದಸ್ಯ, ಕೃಷಿ ಕೂಲಿಕಾರರ ಸಂಘದ ಮಾಜಿ ಅಧ್ಯಕ್ಷರೂ ಆಗಿದ್ದ ನಿತ್ಯಾನಂದ ಸ್ವಾಮಿ (77) ಅವರು ಆಸ್ಪತ್ರೆಯಲ್ಲಿ ಸೋಮವಾರ ನಿಧನರಾದರು.

ಮಹಾಲಕ್ಷ್ಮೀ ಲೇಔಟ್‌ನಲ್ಲಿರುವ ಪಕ್ಷದ ರಾಜ್ಯ ಸಮಿತಿ ಕಚೇರಿಯಲ್ಲಿ ಮಂಗಳವಾರ ಬೆಳಿಗ್ಗೆ 10ರಿಂದ ಮಧ್ಯಾಹ್ನ 2ರವರೆಗೆ ಸಾರ್ವಜನಿಕರ ದರ್ಶನಕ್ಕೆ ಇಡಲಾಗುವುದು. ಬಳಿಕ ಪಕ್ಷದ ವತಿಯಿಂದ ಅಂತಿಮ ಗೌರವ ಸಲ್ಲಿಸಿ, ಮೃತದೇಹವನ್ನು ಕುಟುಂಬದ ಸದಸ್ಯರಿಗೆ ಹಸ್ತಾಂತರಿಸಲಾಗುತ್ತದೆ.

ಉಡುಪಿಯ ಕಲ್ಯಾಣಪುರದಲ್ಲಿ ಕ್ರಿಶ್ಚಿಯನ್ ಕುಟುಂಬದಲ್ಲಿ 1949ರಲ್ಲಿ ಜನಿಸಿದ ನಿತ್ಯಾನಂದ ಸ್ವಾಮಿ ಅವರನ್ನು ಧರ್ಮ ಪ್ರಚಾರಕ್ಕಾಗಿ 'ಹಿಂದೂ ಕ್ರಿಶ್ಚಿಯನ್' ಪಂಥದ ಸ್ವಾಮಿಯಾಗಿ ನೇಮಿಸಿ ಬೆಳಗಾವಿ ಜಿಲ್ಲೆಯ ಸವದತ್ತಿಗೆ ಕಳುಹಿಸಲಾಯಿತು. 1980ರ ಕಾಲಘಟ್ಟದಲ್ಲಿ ಸರ್ಕಾರದ ತೆರಿಗೆ ಹೇರಿಕೆ ವಿರುದ್ಧ ಮಲಪ್ರಭಾ ನೀರು ಬಳಕೆದಾರ ರೈತರು ನಡೆಸಿದ ಐತಿಹಾಸಿಕ ನರಗುಂದ, ನವಲಗುಂದದ ರೈತ ಚಳವಳಿಯ ಪ್ರಭಾವಕ್ಕೆ ಒಳಗಾದ ಅವರು ಅಂತಿಮವಾಗಿ ತನ್ನ ಧರ್ಮ ಪ್ರಚಾರಕ ಹುದ್ದೆ ತೊರೆದು ರೈತ ಕಾರ್ಮಿಕ ಚಳವಳಿಗೆ ಧುಮುಕಿದರು. ಸಂಪೂರ್ಣವಾಗಿ ಹೋರಾಟದಲ್ಲಿ ತೊಡಗಿಸಿಕೊಂಡಿದ್ದ ಅವರು ಅವಿವಾಹಿತರಾಗಿದ್ದರು.

ಸಿಪಿಎಂ ಪಕ್ಷದ ಪೂರ್ಣಾವಧಿ ಕಾರ್ಯಕರ್ತರಾದ ಅವರು ಅವಿಭಜಿತ ಧಾರವಾಡ ಜಿಲ್ಲೆಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿಯಾಗಿ ಹಲವು ದಶಕಗಳ ಕಾಲ ಹುಬ್ಬಳ್ಳಿ, ಹರಿಹರ, ಹಾನಗಲ್, ದಾಂಡೇಲಿ ಕೇಂದ್ರವಾಗಿಸಿಕೊಂಡು ಕೆಲಸ ಮಾಡಿದರು. ಸಿಐಟಿಯು ರಾಜ್ಯ ಮುಖಂಡರಾಗಿ ನೇಕಾರರು ಸೇರಿದಂತೆ ಇತರೆ ಕಾರ್ಮಿಕರನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರವಹಿಸಿದ್ದ ಅವರು, ರಾಜ್ಯ ನೇಕಾರರ ಸಮನ್ವಯ ಸಮಿತಿ ಅಧ್ಯಕ್ಷರಾಗಿ ನೇಕಾರರ ಬದುಕನ್ನು ಉತ್ತಮಪಡಿಸಲು ಹಲವು ಹೋರಾಟಗಳನ್ನು ಮುನ್ನಡೆಸಿದ್ದರು.

ಹಾನಗಲ್ ತಾಲ್ಲೂಕಿನ ಕೃಷಿ ಕೂಲಿಕಾರರನ್ನು ಸಂಘಟಿಸಿ ಭೂಮಿಯ ಹಕ್ಕಿಗಾಗಿ ಹಲವು ಹೋರಾಟಗಳನ್ನು ನಡೆಸಿದ್ದರು. ಆ ಕಾರಣಕ್ಕಾಗಿ ನೂರಾರು ಬಡವರೊಂದಿಗೆ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಒಂದು ತಿಂಗಳು ಸೆರೆವಾಸ ಅನುಭವಿಸಿದ್ದರು.

ಅಂಗನವಾಡಿ ಕಾರ್ಯಕರ್ತೆಯರು, ಸಹಾಯಕಿಯರ ಪ್ರತಿಭಟನೆ

'ಗೌರವಧನ ಹೆಚ್ಚಿಸಿ, ಗ್ರಾಚ್ಯುಟಿ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೌರವಧನ ಹೆಚ್ಚಿಸುವ ಆರನೇ ಗ್ಯಾರಂಟಿ ಹಾಗೂ 2011ರಿಂದ ನಿವೃತ್ತಿಯಾದವರಿಗೆ ಗ್ರಾಚ್ಯುಟಿ ಸೌಲಭ್ಯ ಜಾರಿಗೊಳಿಸಬೇಕು ಎಂದು ಆಗ್ರಹಿಸಿ ರಾಜ್ಯ ಅಂಗನವಾಡಿ ಕಾರ್ಯಕರ್ತೆಯರು ಮತ್ತು ಸಹಾಯಕಿಯರ ಫೆಡರೇಷನ್ (ಎಐಟಿಯುಸಿ) ನೇತೃತ್ವದಲ್ಲಿ ಸೋಮವಾರ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಯಿತು.

ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದಿದ್ದ ಸಾವಿರಾರು ಕಾರ್ಯಕರ್ತೆಯರು ಬೇಡಿಕೆಗಳನ್ನು ಈಡೇರಿಸುವಂತೆ ಸರ್ಕಾರವನ್ನು ಒತ್ತಾಯಿಸಿದರು.

ಈ ಬಾರಿಯ ಬಜೆಟ್ ಮಂಡನೆ ವೇಳೆ ಅಂಗನವಾಡಿ ಕಾರ್ಯಕರ್ತೆಯರಿಗೆ ಮಾಸಿಕ ₹15 ಸಾವಿರ ಹಾಗೂ ಸಹಾಯಕಿಯರಿಗೆ ₹10 ಸಾವಿರ ಗೌರವಧನ ನೀಡುವ, ಚುನಾವಣಾ ಪೂರ್ವದಲ್ಲಿ ಘೋಷಿಸಿದ್ದ 6ನೇ ಗ್ಯಾರಂಟಿಯ ಭರವಸೆ ಜಾರಿಗೊಳಿಸಬೇಕು. ಸುದೀರ್ಘ ಸೇವೆ ಸಲ್ಲಿಸಿ 2011ರಿಂದ ನಿವೃತ್ತರಾಗಿರುವ ವಯೋವೃದ್ಧ ಕಾರ್ಯಕರ್ತೆಯರು ಹಾಗೂ ಸಹಾಯಕರಿಗೆ ಗ್ರಾಚ್ಯುಟಿ ಜಾರಿಗೊಳಿಸಬೇಕು ಮತ್ತು ಸ್ವಯಂ ನಿವೃತ್ತಿಯಾಗಿರುವವರಿಗೂ ಗ್ರಾಚ್ಯುಟಿ ನೀಡಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.



ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಸೋಮವಾರ ಅಂಗನವಾಡಿ ಕಾರ್ಯಕರ್ತೆಯರು,ಸಹಾಯಕಿಯರು ಪ್ರತಿಭಟನೆ ನಡೆಸಿದರು–ಪ್ರಜಾವಾಣಿ ಚಿತ್ರ

ಎಐಟಿಯುಸಿ ರಾಜ್ಯ ಘಟಕದ ಅಧ್ಯಕ್ಷ ಬಿ.ಅಮ್ಜದ್ ಮಾತನಾಡಿ, 'ಅಂಗನವಾಡಿ ಕೇಂದ್ರಗಳ ಕೆಲಸಗಳ ಜವಾಬ್ದಾರಿಯೊಂದಿಗೆ ಹೆಚ್ಚುವರಿಯಾಗಿ ಬಿಎಲ್‌ಒ ಜವಾಬ್ದಾರಿ ನೀಡಬಾರದು. ಬಿಎಲ್‌ಒ ಜವಾಬ್ದಾರಿ ನಿರಾಕರಿಸುವ ಕಾರ್ಯಕರ್ತೆಯರ ವಿರುದ್ಧ ಶಿಸ್ತು ಕ್ರಮದ ಹೆಸರಿನಲ್ಲಿ ಅಮಾನತುಗೊಳಿಸುವುದನ್ನು ನಿಲ್ಲಿಸಬೇಕು. ಅಲ್ಲದೆ ಅಂಗನವಾಡಿ ಕೇಂದ್ರಗಳಲ್ಲಿಯೇ ಎಲ್.ಕೆ.ಜಿ ಮತ್ತು ಯು.ಕೆ.ಜಿ ಪ್ರಾರಂಭಿಸಿ ಅಂಗನವಾಡಿ ವ್ಯವಸ್ಥೆಯನ್ನು ಬಲವರ್ಧನೆಗೊಳಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು' ಎಂದು ಮನವಿ ಮಾಡಿದರು.

ರಾಜ್ಯ ಪ್ರಧಾನ ಕಾರ್ಯದರ್ಶಿ ಎಂ.ಜಯಮ್ಮ ಮಾತನಾಡಿ, 'ಅನಾರೋಗ್ಯಕ್ಕೆ ತುತ್ತಾಗುವ ಕಾರ್ಯಕರ್ತೆಯರಿಗೆ ಶಸ್ತ್ರಚಿಕಿತ್ಸೆ ಸೇರಿ ಎಲ್ಲ ರೀತಿಯ ಚಿಕಿತ್ಸೆಗಾಗಿ ಉಚಿತ ವೈದ್ಯಕೀಯ ಸೌಲಭ್ಯ ನೀಡಲು ಕ್ರಮ ಕೈಗೊಳ್ಳಬೇಕು. ಅನಾರೋಗ್ಯಕ್ಕೆ ಒಳಗಾದ ಅವಧಿಯನ್ನು ವೇತನ ಸಹಿತ ವೈದ್ಯಕೀಯ ರಜೆ ಎಂದು ಪರಿಗಣಿಸಬೇಕು. ಪ್ರಭಾರ ಭತ್ಯೆಯನ್ನು ಹೆಚ್ಚಿಸಬೇಕು. ಖಾಲಿ ಹುದ್ದೆಗಳನ್ನು ಶೀಘ್ರ ಭರ್ತಿ ಮಾಡಬೇಕು' ಎಂದು ಆಗ್ರಹಿಸಿದರು. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕ ಮಹೇಶ್ ಬಾಬು ಅವರು ಧರಣಿ ಸ್ಥಳಕ್ಕೆ ಬಂದು ಮನವಿ ಪತ್ರ ಸ್ವೀಕರಿಸಿದರು. ಬಳಿಕ ಸಂಘಟನೆಯ ಪದಾಧಿಕಾರಿಗಳ ನಿಯೋಗ ವಿಧಾನಸೌಧಕ್ಕೆ ತೆರಳಿ, ಮುಖ್ಯಮಂತ್ರಿ ಕಚೇರಿಗೆ ಮನವಿ ಪತ್ರ ಸಲ್ಲಿಸಿತು.

16ರಿಂದ ಮಡಿವಾಳರ ಅಹೋರಾತ್ರಿ ಧರಣಿ

ಬೆಂಗಳೂರು: ಮಡಿವಾಳ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಕೇಂದ್ರಕ್ಕೆ ಶಿಫಾರಸು ಮಾಡುವಂತೆ ಆಗ್ರಹಿಸಿ ಮಾರ್ಚ್ 16ರಿಂದ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಅಹೋರಾತ್ರಿ ಧರಣಿ ನಡೆಸಲಾಗುವುದು ಎಂದು ಕರ್ನಾಟಕ ರಾಜ್ಯ ಮಡಿವಾಳರ ಕ್ಷೇಮಾಭಿವೃದ್ಧಿ ಸಂಘ ತಿಳಿಸಿದೆ.

ಸೋಮವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಂ.ಕೆ. ಹನುಮಂತಪ್ಪ, ಪ್ರಧಾನ ಕಾರ್ಯದರ್ಶಿ ಕೆ. ಮಲ್ಲೇಶ್, 'ದೇಶದ 17 ರಾಜ್ಯಗಳಲ್ಲಿ ಹಾಗೂ ನಾಲ್ಕು ಕೇಂದ್ರಾಡಳಿತ ಪ್ರದೇಶಗಳಲ್ಲಿ ಮಡಿವಾಳ ಸಮುದಾಯವು ಪರಿಶಿಷ್ಟ ಜಾತಿ ಪಟ್ಟಿಯಲ್ಲಿ ಇದೆ. ಆದ್ದರಿಂದ ಕರ್ನಾಟಕದಲ್ಲೂ ನಮ್ಮ ಸಮುದಾಯವನ್ನು ಪರಿಶಿಷ್ಟ ಜಾತಿ ಪಟ್ಟಿಗೆ ಸೇರಿಸುವಂತೆ ಹಲವು ವರ್ಷಗಳಿಂದ ಹೋರಾಟ ನಡೆಯುತ್ತಿದೆ. ಮುಂಬರುವ ಬಜೆಟ್ ಅಧಿವೇಶನದಲ್ಲಿ ನಿರ್ಣಯ ತೆಗೆದುಕೊಂಡು, ನಮ್ಮ ಸಮುದಾಯವನ್ನು ಪರಿಶಿಷ್ಟ ಜಾತಿಗೆ ಸೇರಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಬೇಕು' ಎಂದು ಆಗ್ರಹಿಸಿದರು.

ಲೆಬನಾನ್ ಮೇಲೆ ಇಸ್ರೇಲ್ ದಾಳಿ: 31 ಸಾವು

ಹಿಜ್ಬುಲ್ಲಾ ಬಂಡುಕೋರರನ್ನು ಗುರಿಯಾಗಿಸಿ ಪ್ರತಿದಾಳಿ

• 149 ಜನರಿಗೆ ಗಾಯ • ಶಸ್ತ್ರಾಸ್ತ್ರ ಹಸ್ತಾಂತರಿಸಲು ಸೂಚನೆ

ದುಬೈ (ಎಪಿ): ಲೆಬನಾನ್ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 31 ಮಂದಿ ಮೃತಪಟ್ಟಿದ್ದು, 149 ಜನರು ಗಾಯಗೊಂಡಿದ್ದಾರೆ.

ಮೃತರಲ್ಲಿ ಮೂರನೇ ಎರಡರಷ್ಟು ಮಂದಿ ದಕ್ಷಿಣ ಲೆಬನಾನ್‌ಗೆ ಸೇರಿದವರು ಎಂದು ಆರೋಗ್ಯ ಸಚಿವಾಲಯ ಸೋಮವಾರ ತಿಳಿಸಿದೆ.

ಹಿಜ್ಬುಲ್ಲಾ ಬಂಡುಕೋರರು ನಡೆಸಿದ ದಾಳಿಗೆ ಪ್ರತೀಕಾರವಾಗಿ ಇಸ್ರೇಲ್, ಲೆಬನಾನ್ ಮೇಲೆ ಈ ವೈಮಾನಿಕ ದಾಳಿ ನಡೆಸಿದೆ.

ಪಶ್ಚಿಮ ಏಷ್ಯಾದಲ್ಲಿ ಯುದ್ಧೋನ್ಮಾದ ಮುಂದುವರಿದಿದ್ದು, ದಾಳಿ- ಪ್ರತಿದಾಳಿ ನಡೆಯುತ್ತಿದೆ. ಕುವೈತ್ ಮೇಲೂ ದಾಳಿ ನಡೆಯುತ್ತಿದೆ. 'ರಕ್ಷಣೆಗಾಗಿ ಮನೆಯೊಳಗೆ ಇರಿ. ರಾಯಭಾರ ಕಚೇರಿಗೆ ಬರಬೇಡಿ' ಎಂದು ಅಮೆರಿಕವು ಅಲ್ಲಿರುವ ತನ್ನ ಪ್ರಜೆಗಳಿಗೆ ಸೂಚಿಸಿದೆ.

ಹಿಜ್ಬುಲ್ಲಾದಿಂದ ಕಾನೂನುಬಾಹಿರ ಕೃತ್ಯ: ಹಿಜ್ಬುಲ್ಲಾದ ಮಿಲಿಟರಿ ಚಟುವಟಿಕೆಗಳನ್ನು ಕಾನೂನುಬಾಹಿರ ಕೃತ್ಯಗಳೆಂದು ಪರಿಗಣಿಸಿದ್ದು, ಸಂಘಟನೆಯು ತನ್ನಲ್ಲಿರುವ ಶಸ್ತ್ರಾಸ್ತ್ರಗಳನ್ನು ಹಸ್ತಾಂತರಿಸಬೇಕು ಎಂದು ಲೆಬನಾನ್ ಸರ್ಕಾರ ಹೇಳಿದೆ.

'ಯುದ್ಧ ಮಾಡಬೇಕೆ ಅಥವಾ ಶಾಂತಿಯ ಹಾದಿಯನ್ನು ಆಯ್ಕೆ ಮಾಡಿಕೊಳ್ಳಬೇಕೆ ಎಂಬುದನ್ನು ನಿರ್ಧರಿಸುವುದು ನಮ್ಮ ಸರ್ಕಾರ ಮಾತ್ರ. ಹಿಜ್ಬುಲ್ಲಾದ ಎಲ್ಲ ಮಿಲಿಟರಿ ಚಟುವಟಿಕೆಗಳನ್ನು ನಿಷೇಧಿಸಲಾಗಿದೆ' ಎಂದು ಲೆಬನಾನ್ ಪ್ರಧಾನಿ ನವಾಫ್ ಸಲಾಮ್ ತಿಳಿಸಿದ್ದಾರೆ.

ಬ್ರಿಟನ್ ವಾಯುನೆಲೆ ಮೇಲೆ ದಾಳಿ

ನಿಕೊಸಿಯಾ (ಎಪಿ): ಸೈಪ್ರಸ್ ದ್ವೀಪ ರಾಷ್ಟ್ರದಲ್ಲಿರುವ ಬ್ರಿಟನ್‌ನ ವಾಯು ನೆಲೆಯ ಮೇಲೆ ಸ್ವಯಂಚಾಲಿತ ಡ್ರೋನ್ ಸೋಮವಾರ ದಾಳಿ ನಡೆಸಿದೆ ಎಂದು ಅಲ್ಲಿನ ಸರ್ಕಾರ ತಿಳಿಸಿದೆ.

ದಾಳಿಯಿಂದ ಹೆಚ್ಚಿನ ಹಾನಿಯಾಗಿಲ್ಲ ಎಂದು ಸೈಪ್ರಸ್ ಸರ್ಕಾರದ ವಕ್ತಾರರು ತಿಳಿಸಿದ್ದಾರೆ. ಯಾವ ರೀತಿಯ ಡ್ರೋನ್‌ನಿಂದ ದಾಳಿ ಮಾಡಲಾಗಿದೆ ಮತ್ತು ಆ ಡ್ರೋನ್‌ಗಳು ಎಲ್ಲಿಂದ ಉಡಾವಣೆಯಾಗಿವೆ ಎಂಬುವುದನ್ನು ಅವರು ತಿಳಿಸಿಲ್ಲ.

ಇರಾನ್ ಜೊತೆಗಿನ ಇಸ್ರೇಲ್ -ಅಮೆರಿಕ ಸಂಘರ್ಷದಲ್ಲಿ ಬ್ರಿಟನ್ ಅಮೆರಿಕಕ್ಕೆ ಬೆಂಬಲ ನೀಡಲಿದೆ ಎಂದು ಅಲ್ಲಿನ ಪ್ರಧಾನಿ ಕಿಯರ್ ಸ್ಟಾರ್ಮರ್ ಹೇಳಿದ ಬೆನ್ನಲ್ಲೇ ಈ ದಾಳಿ ನಡೆದಿದೆ.

ಸ್ಥಳಾಂತರಕ್ಕೆ ಸೂಚನೆ

ಜೆರುಸಲೇಂ (ಎಎಫ್‌ಪಿ): ದಕ್ಷಿಣ ಮತ್ತು ಪೂರ್ವ ಲೆಬನಾನ್‌ನ 16 ಸ್ಥಳಗಳಲ್ಲಿರುವ ನಿವಾಸಿಗಳಿಗೆ ಸ್ಥಳಾಂತರಗೊಳ್ಳುವಂತೆ ಇಸ್ರೇಲ್ ಮಿಲಿಟರಿ ಸೂಚಿಸಿದೆ.

'ಕೆಲವು ಹಳ್ಳಿ, ಪಟ್ಟಣ ಗಳಲ್ಲಿನ ಕಟ್ಟಡಗಳನ್ನು ಹಿಜ್ಬುಲ್ಲಾ ಬಂಡುಕೋರರು ಬಳಸಿ ಕೊಳ್ಳುತ್ತಿದ್ದಾರೆ. ತುರ್ತಾಗಿ ತೆರವುಗೊಳ್ಳುವಂತೆ ಇಲ್ಲಿರುವ ನಿವಾಸಿಗಳಿಗೆ 18 ಎಚ್ಚರಿಕೆ ನೀಡಿದ್ದೇವೆ' ಎಂದು ಮಿಲಿಟರಿ ವಕ್ತಾರರು ತಿಳಿಸಿದ್ದಾರೆ.



ಹಿಜ್ಬುಲ್ಲಾದೊಂದಿಗೆ ನಂಟು ಹೊಂದಿರುವ ಅಲ್–ಕರ್ದ್ ಅಲ್–ಹಸನ್ ಹಣಕಾಸು ಸಂಸ್ಥೆಯ ಲೆಬನಾನ್ ಕಚೇರಿಯನ್ನು ಗುರಿಯಾಗಿಸಿ ಇಸ್ರೇಲ್ ಸೋಮವಾರ ದಾಳಿ ನಡೆಸಿದ ನಂತರ ದಟ್ಟ ಹೊಗೆ ಆವರಿಸಿತ್ತು –ಎಎಫ್‌ಪಿ ಚಿತ್ರ

ಭಾರತೀಯನ ಸಾವು

ದುಬೈ (ಎಪಿ): ಮಾರ್ಷಲ್ ದ್ವೀಪದ ಧ್ವಜವಿದ್ದ ತೈಲ ಟ್ಯಾಂಕರ್ ಮೇಲೆ ಬಾಂಬ್ ತುಂಬಿದ್ದ ದೋಣಿಯೊಂದು ಒಮಾನ್ ಕೊಲ್ಲಿಯಲ್ಲಿ ಸೋಮ ವಾರ ದಾಳಿ ಮಾಡಿದ್ದು, ಭಾರತೀಯ ಮೂಲದ ಸಿಬ್ಬಂದಿಯೊಬ್ಬರು ಮೃತಪಟ್ಟಿದ್ದಾರೆ.

ಎಂಕೆಡಿ ವ್ಯೋಮ್ ಟ್ಯಾಂಕರ್ ಮೇಲೆ ಮಸ್ಕತ್ ಕರಾವಳಿಯಲ್ಲಿ ದಾಳಿ ನಡೆದಿದೆ ಎಂದು ಒಮಾನ್‌ನ ಸರ್ಕಾರಿ ಸ್ವಾಮ್ಯದ ಸುದ್ದಿ ಸಂಸ್ಥೆ ವರದಿ ಮಾಡಿದೆ.

ದಾಳಿಯ ಪರಿಣಾಮವಾಗಿ ತೈಲ ಟ್ಯಾಂಕರ್‌ಗೆ ಬೆಂಕಿ ಹತ್ತಿ ಕೊಂಡು, ಸ್ಫೋಟ ಸಂಭವಿಸಿದೆ ಎಂದು ಒಮಾನ್‌ನ ಸಾಗರ ಭದ್ರತಾ ಕೇಂದ್ರ ತಿಳಿಸಿದೆ. ಇಸ್ರೇಲ್, ಅಮೆರಿಕ ನಡೆಸಿದ ದಾಳಿಗೆ ಪ್ರತೀಕಾರವಾಗಿ ಹೋರ್ಮುಜ್ ಜಲಸಂಧಿ ಮೂಲಕ ತೈಲ, ಸರಕು ಸಾಗಾಣೆಗೆ ಅವಕಾಶ ನೀಡುವುದಿಲ್ಲ ಎಂದು ಇರಾನ್ ಎಚ್ಚರಿಕೆ ನೀಡಿತ್ತು.

ಕ್ಷಿಪಣಿ ದಾಳಿ ನಡೆಸಿದ ಇರಾನ್

ದುಬೈ (ಎಪಿ): ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳ ಮೇಲೆ ಇರಾನ್ ಸೋಮವಾರ ಕ್ಷಿಪಣಿ ದಾಳಿ ನಡೆಸಿದೆ.

ಯುದ್ಧವು ಈಗ ಮಧ್ಯ ಪ್ರಾಚ್ಯದಲ್ಲಿ ಇರಾನ್ ಬೆಂಬಲಿತ ಸಶಸ್ತ್ರ ಗುಂಪುಗಳಿಗೂ ಹರಡಿದ್ದು, ಇಸ್ರೇಲ್ ಮೇಲೆ ಹಿಜ್ಬುಲ್ಲಾ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್ ಲೆಬನಾನ್‌ನಲ್ಲಿರುವ ಹಿಜ್ಬುಲ್ಲಾ ನೆಲೆಗಳ ಮೇಲೆ ದಾಳಿ ಮಾಡಿದೆ. ಅಮೆರಿಕದೊಂದಿಗೆ ಸೇರಿ ಇರಾನ್‌ನಲ್ಲಿನ ಗುರಿಗಳ ಮೇಲೆ ಭಾರಿ ದಾಳಿ ನಡೆಸಿದೆ.

ಮೂವರ ಸಾವು: ಇರಾನ್‌ನ ಪಶ್ಚಿಮ ನಗರವಾದ ಸನಂದಜ್‌ನಲ್ಲಿ ಸೋಮವಾರ ಮುಂಜಾನೆ ನಡೆದ ದಾಳಿಯಲ್ಲಿ ಮೂವರು ಮೃತಪಟ್ಟಿದ್ದಾರೆ.

'ಕುವೈತ್‌ನಲ್ಲಿ ಸೋಮವಾರ ಅಮೆರಿಕದ ಕೆಲ ಯುದ್ಧವಿಮಾನಗಳು ಪತನಗೊಂಡಿದ್ದು, ಎಲ್ಲ ಪೈಲಟ್‌ಗಳು ಅಪಾಯದಿಂದ ಪಾರಾಗಿದ್ದಾರೆ' ಎಂದು ಕುವೈತ್ ರಕ್ಷಣಾ ಸಚಿವಾಲಯ ತಿಳಿಸಿದೆ.

'ಇರಾನ್‌ನೊಂದಿಗಿನ ಯುದ್ಧ ಮುಂದುವರಿಯುವವರೆಗೆ ಮಾನವೀಯ ನೆರವು ಅಗತ್ಯವಿರುವ ಗಾಜಾಕ್ಕೆ ಹೋಗುವ ಮಾರ್ಗಗಳನ್ನು ಮುಚ್ಚಲಾಗಿದೆ' ಎಂದು ಇಸ್ರೇಲ್ ಹೇಳಿದೆ.

'ಟರ್ಕಿ ಗಡಿ ತಾತ್ಕಾಲಿಕ ಬಂದ್'

ಇರಾನ್‌ನಲ್ಲಿನ ಉದ್ವಿಗ್ನತೆಯಿಂದಾಗಿ ವಲಸೆ ಬರುವವರ ಸಂಖ್ಯೆ ಹೆಚ್ಚಾಗಬಹುದೆಂಬ ಕಾರಣದಿಂದ, 'ಅಲ್ಪಾವಧಿಯ ಪ್ರವಾಸಕ್ಕಾಗಿ ಬರುವ ಇರಾನಿಯನ್ನರಿಗೆ ನಮ್ಮ ಗಡಿಯನ್ನು ತಾತ್ಕಾಲಿಕವಾಗಿ ಮುಚ್ಚಲಾಗಿದೆ' ಎಂದು ಟರ್ಕಿಯ ವಾಣಿಜ್ಯ ಸಚಿವಾಲಯ ತಿಳಿಸಿದೆ.

ಇರಾನ್‌ನೊಂದಿಗೆ ಮಾಡಿಕೊಂಡ ಒಪ್ಪಂದದ ಪ್ರಕಾರ, ಟರ್ಕಿ ತನ್ನ ಸ್ವಂತ ನಾಗರಿಕರು ಮತ್ತು ಮೂರನೇ ದೇಶದ ಪ್ರಜೆಗಳಿಗೆ ಇರಾನ್‌ನಿಂದ ಪ್ರವೇಶಿಸಲು ಅನುಮತಿಸುತ್ತಿದೆ. ಆದರೆ, ಇರಾನಿಯನ್ನರ ಅಲ್ಪಾವಧಿಯ ಪ್ರವಾಸಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲಾಗಿದೆ.

'ಟರ್ಕಿ ಮತ್ತು ಇರಾನ್ ನಡುವಿನ ವಾಣಿಜ್ಯ ಸರಕು ಸಾಗಣೆಯು ನಿಯಂತ್ರಿತ ರೀತಿಯಲ್ಲಿ ಮುಂದುವರಿಯುತ್ತಿದೆ' ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ.



ಅಮೆರಿಕ– ಇಸ್ರೇಲ್ ಸೇನಾ ದಾಳಿಯಿಂದ ಟೆಹರಾನ್‌ನ ಗಾಂಧಿ ಆಸ್ಪತ್ರೆ ಬಳಿ ಇರುವ ಸರ್ಕಾರಿ ಸ್ವಾಮ್ಯದ ದೂರದರ್ಶನ ಕಚೇರಿಗೆ ಹಾನಿಯಾಗಿದೆ –ಎಎಫ್‌ಪಿ ಚಿತ್ರ

ಸೇನೆ ನುಗ್ಗಿಸಲು ಹಿಂಜರಿಯಲ್ಲ: ಟ್ರಂಪ್

ವಾಷಿಂಗ್ಟನ್ (ಎಎಫ್‌ಪಿ): ಇರಾನ್ ಒಳಗೆ ಅಮೆರಿಕದ ಸೇನಾಪಡೆ ಕಳುಹಿಸುವುದನ್ನು ತಳ್ಳಿಹಾಕಲು ಆಗುವುದಿಲ್ಲ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಹೇಳಿದ್ದಾರೆ. ಈ ಮೂಲಕ ಅವರು ದೊಡ್ಡ ಪ್ರಮಾಣದ ದಾಳಿಯ ಬೆದರಿಕೆ ಹಾಕಿದ್ದಾರೆ.

ಇಲ್ಲಿಯವರೆಗೆ ದಾಳಿಯು ಕ್ಷಿಪಣಿ ಮತ್ತು ವೈಮಾನಿಕ ದಾಳಿಯನ್ನು ಕೇಂದ್ರೀಕರಿಸಿತ್ತು. ಇದೀಗ ಟ್ರಂಪ್ ಅವರು ಸೇನಾ ಪಡೆ ನುಗ್ಗಿಸುವುದನ್ನು ತಳ್ಳಿಹಾಕಲಾಗದು ಎಂದಿರುವುದು, ಸಂಘರ್ಷವನ್ನು ಮತ್ತಷ್ಟು ತೀವ್ರಗೊಳಿಸುವ ಸೂಚನೆಯಂತಿದೆ ಎಂದು ವಿಶ್ಲೇಷಿಸಲಾಗುತ್ತಿದೆ.

'ಭೂಸೇನೆ ನಿಯೋಜಿಸುವ ಅಗತ್ಯ ಬರುವುದಿಲ್ಲ ಎಂದುಕೊಂಡಿದ್ದೇನೆ. ಆದರೆ ಅಗತ್ಯವಿದ್ದರೆ ಭೂಸೇನೆ ನಿಯೋಜಿಸಲು ನಾನು ಭಯಪಡುವುದಿಲ್ಲ ಮತ್ತು ಹಿಂಜರಿಯುವುದೂ ಇಲ್ಲ' ಎಂದು ಅವರು 'ನ್ಯೂಯಾರ್ಕ್ ಪೋಸ್ಟ್'ಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ. ಇನ್ನೊಂದೆಡೆ, ಸಿಎನ್‌ಎನ್‌ಗೆ ನೀಡಿದ ಸಂದರ್ಶನದಲ್ಲಿ ಟ್ರಂಪ್, 'ಇರಾನ್ ಮೇಲಿನ ದಾಳಿಯನ್ನು ಇನ್ನಷ್ಟು ತೀವ್ರಗೊಳಿಸುತ್ತೇವೆ' ಎಂದು ಹೇಳಿದ್ದಾರೆ. 'ಇಲ್ಲಿಯವರೆಗೂ ನಾವಿನ್ನೂ ದೊಡ್ಡ ಪ್ರಮಾಣದ ದಾಳಿಯನ್ನು ನಡೆಸಿಯೇ ಇಲ್ಲ. ಆದರೆ ಅದು ಶೀಘ್ರದಲ್ಲಿಯೇ ಸಂಭವಿಸಲಿದೆ' ಎಂದೂ ವಿವರಿಸಿದ್ದಾರೆ.

ಶ್ವೇತಭವನದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಟ್ರಂಪ್, 'ನಾವು ಇರಾನ್‌ನ ಕ್ಷಿಪಣಿ ಸಾಮರ್ಥ್ಯ ನಾಶಪಡಿಸುವ ಮತ್ತು ನೌಕಾಪಡೆ ನಿರ್ನಾಮ ಮಾಡುವ ಗುರಿ ಹೊಂದಿದ್ದೇವೆ. ಈಗಾಗಲೇ 10 ನೌಕಾ ಹಡಗುಗಳನ್ನು ಹೊಡೆದುರುಳಿಸಿದ್ದೇವೆ' ಎಂದಿದ್ದಾರೆ.

'ಅಲ್ಲದೆ, ಇರಾನ್ ಅಣ್ವಸ್ತ್ರ ಹೊಂದುವುದನ್ನು ತಡೆಯುವ ಮತ್ತು ಅದು ಗಡಿಯಾಚೆಗಿನ ಭಯೋತ್ಪಾದಕತೆಗೆ ಬೆಂಬಲ ನೀಡುವುದನ್ನು ತಡೆಯುವ ಗುರಿಗಳನ್ನೂ ಹೊಂದಿದ್ದೇವೆ' ಎಂದು ಅವರು ಹೇಳಿದ್ದಾರೆ.

ರಕ್ತಪಾತ ನಿಲ್ಲಿಸಿ- ಟರ್ಕಿ: ಇಸ್ತಾಂಬುಲ್ (ಎಎಫ್‌ಪಿ): ಪಶ್ಚಿಮ ಏಷ್ಯಾದಲ್ಲಿ ನಡೆಯುತ್ತಿರುವ ರಕ್ತಪಾತವನ್ನು ಕೊನೆಗೊಳಿಸಲು ಕರೆ ನೀಡಿರುವ ಟರ್ಕಿಯ ಅಧ್ಯಕ್ಷ ರೆಸೆಪ್ ತಯ್ಯಿಪ್ ಎರ್ಡೋಗನ್ ಅವರು ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವೆ ಕದನ ವಿರಾಮಕ್ಕೆ ನೆರವು ನೀಡುವುದಾಗಿ ಹೇಳಿದ್ದಾರೆ.

'ಇದು ಇರಾಕ್ ಅಲ್ಲ, ಇದಕ್ಕೆ ಅಂತ್ಯವಿದೆ'

ವಾಷಿಂಗ್ಟನ್ (ಎಪಿ): ಅಮೆರಿಕ- ಇಸ್ರೇಲ್ ಪಡೆಗಳು ಜಂಟಿಯಾಗಿ ಇರಾನ್ ಮೇಲೆ ನಡೆಸಿರುವ ಸೇನಾ ಕಾರ್ಯಾಚರಣೆಯ ಕುರಿತು ಜಾಗತಿಕ ವಲಯದಲ್ಲಿ ಕಳವಳ ವ್ಯಕ್ತವಾಗಿದೆ. ಇದರ ಬೆನ್ನಲ್ಲೇ, ಅಮೆರಿಕ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್, 'ಇದು ಇರಾಕ್ ಅಲ್ಲ, ಇದಕ್ಕೆ ಅಂತ್ಯವಿದೆ' ಎಂದು ಹೇಳಿಕೆ ನೀಡುವ ಮೂಲಕ ಸಂಘರ್ಷ ಮತ್ತಷ್ಟು ವಿಸ್ತರಣೆಯಾಗುವ ಸುಳಿವು ನೀಡಿದ್ದಾರೆ.

ಶನಿವಾರ ಇರಾನ್ ಮೇಲೆ ನಡೆದ ಸೇನಾ ದಾಳಿಯ ಕುರಿತಂತೆ ಅಮೆರಿಕ ಸೇನಾ ಪಡೆಗಳ ಮುಖ್ಯಸ್ಥ ಡಾನ್ ಕೇನ್ ಜೊತೆಗೆ ಪೀಟ್ ಹೆಗ್ಸೆತ್ ಜಂಟಿ ಪತ್ರಿಕಾಗೋಷ್ಠಿ ನಡೆಸಿ ಈ ವಿಷಯ ಸ್ಪಷ್ಟಪಡಿಸಿದ್ದಾರೆ.

ಸಂಘರ್ಷ ಆರಂಭಗೊಂಡ ಬಳಿಕ, ಡೊನಾಲ್ಡ್ ಟ್ರಂಪ್ ಅವರು ಆಯ್ದ ವರದಿಗಾರರಿಗೆ ದೂರವಾಣಿ ಮೂಲಕ ಸಂದರ್ಶನ ನೀಡಿದ್ದಾರೆ. ಇದುವರೆಗೂ ಪತ್ರಕರ್ತರ ಮುಂದೆ ಬಹಿರಂಗವಾಗಿ ಕಾಣಿಸಿಕೊಂಡಿಲ್ಲ. ಅಲ್ಲದೇ, ಹಲವು ಪ್ರಶ್ನೆಗಳಿಗೆ ಉತ್ತರಿಸಿಲ್ಲ. ಕಾರ್ಯಾಚರಣೆಯ ಕುರಿತಂತೆ ಎರಡು ವಿಡಿಯೊಗಳನ್ನು ಮಾತ್ರ ಇದುವರೆಗೆ ಬಿಡುಗಡೆಗೊಳಿಸಿದ್ದಾರೆ.

'ಇರಾನ್‌ನ ಕ್ಷಿಪಣಿ ಬೆದರಿಕೆಯನ್ನು ಮಟ್ಟಹಾಕಿದ್ದೇವೆ. ನೌಕಾಪಡೆಯನ್ನು ನಾಶಗೊಳಿಸಿ, ಅಣ್ವಸ್ತ್ರ ನಾಶಗೊಳಿಸುವ ಸ್ಪಷ್ಟವಾದ ವಿನಾಶಕಾರಿ ಹಾಗೂ ನಿಖರ ಗುರಿಯನ್ನು ಹೊಂದಿದ್ದೇವೆ' ಎಂದು ಪೀಟ್ ಹೆಗ್ಸೆತ್ ಹೇಳಿದ್ದಾರೆ.

'ಇದನ್ನು ಆಡಳಿತ ಬದಲಾವಣೆಯ ಯುದ್ಧ ಎಂದು ಕರೆಯುವುದಿಲ್ಲ, ಇದರಿಂದ ಆಡಳಿತವು ಖಂಡಿತ ವಾಗಿಯೂ ಬದಲಾವಣೆಯಾಗಲಿದೆ. ಇದರಿಂದ ಜಗತ್ತಿಗೂ ಕೂಡ ಒಳ್ಳೆಯದಾಗಲಿದೆ' ಎಂದು ತಿಳಿಸಿದ್ದಾರೆ.

'ಅವರು ಅಮೆರಿಕದ ವಿರುದ್ಧ ಯುದ್ಧ ಆರಂಭಿಸಿದ್ದರಿಂದ ಆಯತೊಲ್ಲಾ ಅಲಿ ಖಮೇನಿ ಹತ್ಯೆಯ ಮೂಲಕ ಪ್ರತೀಕಾರ ತೆಗೆದುಕೊಳ್ಳಲಾಗಿದೆ' ಎಂದು ಹೆಗ್ಸೆತ್ ವಿವರಿಸಿದ್ದಾರೆ.

ಸಂಘರ್ಷವು ತೀವ್ರಸ್ವರೂಪದ ಯುದ್ಧಕ್ಕೆ ತಿರುಗಿದ ಬೆನ್ನಲ್ಲೇ ಈ ಸುದ್ದಿಗೋಷ್ಠಿ ನಡೆಸಲಾಗಿದೆ. ಇರಾನ್ ಹಾಗೂ ಇತರೆ ಮಿತ್ರರಾಷ್ಟ್ರಗಳು ಇಸ್ರೇಲ್, ಅರಬ್ ರಾಷ್ಟ್ರಗಳಲ್ಲಿರುವ ಅಮೆರಿಕ ಸೇನಾ ನೆಲೆಗಳನ್ನು ಗುರಿಯಾಗಿರಿಸಿಕೊಂಡು ಮೇಲೆ ಕ್ಷಿಪಣಿ ದಾಳಿ ಮುಂದುವರಿಸಿವೆ.

ಇದುವರೆಗೆ ಅಮೆರಿಕದ ನಾಲ್ವರು ಯೋಧರು ಮೃತಪಟ್ಟಿದ್ದಾರೆ. ಸಾವಿನ ಸಂಖ್ಯೆ ಇನ್ನಷ್ಟು ಏರಿಕೆಯಾಗುವ ಸಾಧ್ಯತೆಯಿದೆ ಎಂದು ಟ್ರಂಪ್ ಈಗಾಗಲೇ ಹೇಳಿದ್ದಾರೆ.

'ಅಮೆರಿಕವು ಹೆಚ್ಚುವರಿ ನಷ್ಟವನ್ನು ನಿರೀಕ್ಷಿಸುತ್ತಿದೆ' ಎಂದು ಕೇನ್ ಕೂಡ ಹೇಳಿಕೆ ನೀಡಿದ್ದಾರೆ. ಆ ಮೂಲಕ ಯುದ್ಧದ ಭೀಕರತೆಯನ್ನು ಅಂದಾಜಿಸಿದ್ದಾರೆ.

'ನಾವು ನಿಮ್ಮೊಂದಿಗೆ ದುಃಖಿಸು ತ್ತೇವೆ. ನಾವು ಎಂದೆಂದಿಗೂ ನಿಮ್ಮನ್ನು ಮರೆಯುವುದಿಲ್ಲ' ಎಂದು ಯುದ್ಧದಲ್ಲಿ ಮಡಿದ ಯೋಧರ ಕುಟುಂಬದ ಸದಸ್ಯರಿಗೆ ಸಾಂತ್ವನ ಹೇಳಿದ್ದಾರೆ.

ಪೈಲಟ್‌ಗಳು ಸುರಕ್ಷಿತ: 'ಅಮೆರಿಕದ ಮಿತ್ರರಾಷ್ಟ್ರ ಕುವೈತ್ ತಪ್ಪಾಗಿ ಹಾರಿಸಿದ ಕ್ಷಿಪಣಿಯಿಂದ ಪತನಗೊಂಡ 'ಎಫ್–15' ಯುದ್ಧ ವಿಮಾನದಿಂದ ಆರು ಪೈಲಟ್‌ಗಳು ಸುರಕ್ಷಿತವಾಗಿ ಪಾರಾಗಿದ್ದು, ಅವರ ಆರೋಗ್ಯ ಸ್ಥಿತಿ ಸ್ಥಿರವಾಗಿದೆ' ಎಂದು ಅಮೆರಿಕದ ಸೆಂಟ್ರಲ್ ಕಮಾಂಡ್ ತಿಳಿಸಿದೆ.

24 ವಿಮಾನ ಹಾರಾಟ ರದ್ದು

ದೇವನಹಳ್ಳಿ: ಇರಾನ್–ಇಸ್ರೇಲ್ ಸಂಘರ್ಷ ಹಿನ್ನಲೆಯಲ್ಲಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ವಿಮಾನಗಳ ಸಂಚಾರ ಸೋಮವಾರವೂ ವ್ಯತ್ಯಯವಾಗಿದ್ದು, 24 ವಿಮಾನಗಳ ಹಾರಾಟ ರದ್ದಾಗಿದೆ.

ವಾಯುಪ್ರದೇಶ ನಿರ್ಬಂಧದಿಂದ ವಿವಿಧೆಡೆಯಿಂದ ಬೆಂಗಳೂರಿಗೆ ಬರಬೇಕಿದ್ದ 15, ಇಲ್ಲಿಂದ ತೆರಳಬೇಕಿದ್ದ 9 ವಿಮಾನಗಳ ಹಾರಾಟ ರದ್ದುಗೊಂಡಿದೆ ಎಂದು ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಲಿಮಿಟೆಡ್ (ಬಿಐಎಎಲ್) ವಕ್ತಾರರು ತಿಳಿಸಿದ್ದಾರೆ.

ಅಬುಧಾಬಿ, ರಿಯಾದ್, ದಮಾಮ್, ದುಬೈ ಮತ್ತು ದೋಹಾ ನಗರ ಸೇರಿದಂತೆ ಹಲವೆಡೆಗೆ ವಿಮಾನಯಾನ ಸ್ಥಗಿತಗೊಂಡಿದೆ.

ಪರಿಸ್ಥಿತಿ ತಿಳಿಯಾಗುವವರೆಗೆ ವಿಮಾನ ವೇಳಾಪಟ್ಟಿಯಲ್ಲಿ ಬದಲಾವಣೆ ಇರಲಿದೆ. ಪ್ರಯಾಣಿಕರು ಸಂಬಂಧಿತ ವಿಮಾನಯಾನ ಸೇವಾ ಸಂಸ್ಥೆಗಳೊಂದಿಗೆ ಸಂಪರ್ಕದಲ್ಲಿರಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಇರಾನ್ ಜೊತೆ ಕ್ಷಿಪಣಿ ಮಾರಾಟ ಒಪ್ಪಂದ ನಡೆದಿಲ್ಲ'

ಬೀಜಿಂಗ್ (ಪಿಟಿಐ): ಅಮೆರಿಕ–ಇಸ್ರೇಲ್ ದಾಳಿ ನಡೆಸುವ ಮೊದಲು ಇರಾನ್ ಜೊತೆ ಸಿ.ಎಂ–302 ಸೂಪರ್‌ಸಾನಿಕ್ ನೌಕಾ ನಿಗ್ರಹ ಕ್ಷಿಪಣಿಗಳ ಮಾರಾಟ ಒಪ್ಪಂದವನ್ನು ಅಂತಿಮಗೊಳಿಸಲಾಗಿತ್ತು ಎಂಬ ವರದಿಗಳನ್ನು ಚೀನಾ ಸೋಮವಾರ ನಿರಾಕರಿಸಿದೆ.

'ಈ ಕುರಿತ ವರದಿಗಳು ಸತ್ಯಾಂಶವನ್ನು ಹೊಂದಿಲ್ಲ. ಜವಾಬ್ದಾರಿಯುತ ದೇಶವಾದ ಚೀನಾ ಯಾವಾಗಲೂ ಅಂತರರಾಷ್ಟ್ರೀಯ ಬಾಧ್ಯತೆಗಳನ್ನು ಪಾಲಿಸುತ್ತದೆ. ದುರುದ್ದೇಶಪೂರಿತ ಸಹಭಾಗಿತ್ವ ಮತ್ತು ತಪ್ಪು ಮಾಹಿತಿ ಹಂಚಿಕೆಯನ್ನು ಚೀನಾ ವಿರೋಧಿಸುತ್ತದೆ. ಇದು ಸುಳ್ಳು ಮಾಹಿತಿಯನ್ನು ಹರಡುವ ಅಭಿಯಾನದ ಭಾಗವಾಗಿದೆ' ಎಂದು ಚೀನಾದ ವಿದೇಶಾಂಗ ಸಚಿವಾಲಯದ ವಕ್ತಾರ ಮಾವ್ ನಿಂಗ್ ಅವರು ತಿಳಿಸಿದ್ದಾರೆ.

'ಉದ್ವಿಗ್ನತೆಯನ್ನು ಶಮನಗೊಳಿಸಲು ಸಂಬಂಧಿಸಿದ ದೇಶಗಳು ಸೂಕ್ತ ನಿರ್ಧಾರ ಕೈಗೊಳ್ಳುವ ಭರವಸೆ ಇದೆ' ಎಂದು ಅವರು ಹೇಳಿದ್ದಾರೆ.

ಒಪ್ಪಂದದ ಕುರಿತ ಮಾಧ್ಯಮ ವರದಿಗಳು ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನತೆ ಉಂಟಾಗಿರುವ ಕಾರಣಕ್ಕೆ ಮಹತ್ವ ಪಡೆದಿವೆ.

ಇರಾನ್ ಚೀನಾಕ್ಕೆ ಅತೀ ದೊಡ್ಡ ತೈಲ ಪೂರೈಕೆ ದೇಶವಾಗಿದೆ ಮತ್ತು ಚೀನಾದೊಂದಿಗೆ ರಕ್ಷಣಾ ಹಾಗೂ ಇತರ ವಲಯದ ಪಾಲುದಾರಿಕೆಯನ್ನು ಹೊಂದಿದೆ.

ಕೆಲ ಕಾಲ ಶಾಂತ, ಆಗಾಗ ಬಾಂಬ್ ಶಬ್ದ

ಮೈಸೂರು: 'ಕೆಲವು ಗಂಟೆ ಎಲ್ಲ ಶಾಂತಸ್ಥಿತಿ ಇರುತ್ತದೆ. ಯಾವಾಗ ಬಾಂಬ್ ಸ್ಫೋಟವಾಗುತ್ತದೆ, ಸೈರನ್ ಮೊಳಗುತ್ತದೆ. ಯಾವ ಕ್ಷಣದಲ್ಲಿ ಏನಾಗುತ್ತದೆಯೋ ಎಂಬ ಭೀತಿ ಇದೆ...'



ಲಿಂಗರಾಜು ಕೆ.

– ಸದ್ಯ ಬಹರೇನ್‌ನಲ್ಲಿರುವ ಮೈಸೂರಿನ ಇಟ್ಟಿಗೆಗೂಡು ನಿವಾಸಿ ಲಿಂಗರಾಜು ಕೆ. ಅವರ ಆತಂಕದ ಮಾತುಗಳಿವು.

ಇಸ್ರೇಲ್–ಇರಾನ್ ನಡುವಿನ ಯುದ್ಧದಿಂದಾಗಿ ನಲುಗಿರುವ ಬಹರೇನ್‌ನಲ್ಲಿರುವ ಅವರು ಅಲ್ಲಿನ ಪರಿಸ್ಥಿತಿಯನ್ನು ಬಿಚ್ಚಿಟ್ಟರು. 'ಭಾರತ ಸರ್ಕಾರ ಬಹರೇನ್‌ನಲ್ಲಿರುವ ನಮ್ಮಂತಹ ಭಾರತೀಯ ಮೂಲದವರನ್ನು ಸುರಕ್ಷಿತವಾಗಿ ವಾಪಸ್ ಕರೆಸಿಕೊಳ್ಳಬೇಕು' ಎಂದು ಕೋರಿದರು.

ಅವರು, 2024ರ ಅಕ್ಟೋಬರ್.ನಿಂದ ಮನಾಮದಲ್ಲಿ 'ಪ್ಯಾಪಿಲೋನ್' ಎಂಬ ಹೆಸರಿನ ಬಾರ್ ಅಂಡ್ ರೆಸ್ಟೋರೆಂಟ್ ನಡೆಸುತ್ತಿದ್ದಾರೆ. ಯುದ್ಧ ಪರಿಸ್ಥಿತಿಯಿಂದಾಗಿ ಕಾರಣದಿಂದಾಗಿ ರೆಸ್ಟೋರೆಂಟ್ ಮುಚ್ಚಿದ್ದಾರೆ.

'ವಾರದ ಹಿಂದೆಯಷ್ಟೇ ಮೈಸೂರಿಗೆ ಬಂದು ವಾಪಸಾಗಿದ್ದೆ. ನನ್ನೊಂದಿಗೆ ಬಂದಿದ್ದ ಕುಟುಂಬದವರು ಮೈಸೂರಿನಲ್ಲೇ ಉಳಿದಿದ್ದಾರೆ. ಅವರೆಲ್ಲರಿಗೂ ನಮ್ಮ ಸುರಕ್ಷತೆಯ ಬಗ್ಗೆ ಆತಂಕ ಉಂಟಾಗಿದೆ. ಸರ್ಕಾರಗಳು ನಮ್ಮ ನೆರವಿಗೆ ಬರಬೇಕು' ಎಂದು ಕೋರಿದರು.

ಇರಾನ್‌ನ ಅನೇಕರಲ್ಲಿ ಮನೆಮಾಡಿದ ಭಯ, ಅನಿಶ್ಚಿತತೆ

ಖಮೇನಿ ಸಾವು: ಕೆಲವರ ಸಂಭ್ರಮಾಚರಣೆ

ಕೈರೊ (ಎಪಿ): ಇರಾನ್ ನಾಯಕ ಆಯತೊಲ್ಲಾ ಅಲಿ ಖಮೇನಿ ಹತ್ಯೆ ಬಳಿಕ ಕೆಲವರು ಸಂಭ್ರಮಾಚರಣೆ ಮಾಡಿದ್ದಾರೆ.

ರಸ್ತೆಗಳಲ್ಲಿ ಕೆಲವರು ನೃತ್ಯ ಮಾಡಿದರೆ, ಮತ್ತೆ ಕೆಲವರು ಕಾರುಗಳ ಹಾರ್ನ್ ಮಾಡಿ, ಮನೆಯ ಕಿಟಕಿ ಹಾಗೂ ಚಾವಣಿಗಳಲ್ಲಿ ಕಿರುಚುವ ಮೂಲಕ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ಆದರೆ, ಎರಡನೇ ದಿನವಾದ ಭಾನುವಾರವೂ ಅಮೆರಿಕ ಮತ್ತು ಇಸ್ರೇಲ್‌ನಿಂದ ವೈಮಾನಿಕ ದಾಳಿಗಳು ಮುಂದುವರಿದಿದ್ದರಿಂದ, ಇರಾನ್‌ನ ಅನೇಕರಲ್ಲಿ ಭಯ, ಆತಂಕ ಮತ್ತು ಅನಿಶ್ಚಿತತೆ ಮೂಡಿದೆ. ಸುಮಾರು ನಾಲ್ಕು ದಶಕಗಳ ಕಾಲ ಇರಾನ್‌ನ ಅಧಿಕಾರದ ಶಿಖರದಲ್ಲಿ ನಿಂತಿದ್ದ ಖಮೇನಿ ಮತ್ತು ಸೇನೆಯ ಉನ್ನತ ಅಧಿಕಾರಿಗಳ ಸಾವು ಇರಾನಿಯನ್ನರನ್ನು ದಿಗ್ಭ್ರಮೆಗೊಳಿಸಿದೆ.

ಖಮೇನಿ ಅವರ ಸಾವಿನ ಬಗ್ಗೆ ಸಂತೋಷ ವ್ಯಕ್ತಪಡಿಸಿರುವ ಉತ್ತರ ಟೆಹರಾನ್‌ನ ವ್ಯಕ್ತಿಯೊಬ್ಬರು, 'ಮನಸ್ಸಿನೊಳಗೆ ನಾವು ಸಂಭ್ರಮ ಪಡುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

'ರಕ್ಷಣೆ ಸಿಗುವವರೆಗೆ ಜನರು ಬಹಿರಂಗವಾಗಿ ಸಂಭ್ರಮಿಸುತ್ತಿಲ್ಲ. ಏಕೆಂದರೆ, ಖಮೇನಿ ಬೆಂಬಲಿಗರು ಕ್ರೂರಿಗಳು ಮತ್ತು ಸೇಡು ತೀರಿಸಿಕೊಳ್ಳುವ ಸ್ವಭಾವದವರು' ಎಂದು ಹೇಳಿದ್ದಾರೆ.

ಖಮೇನಿ ಅವರಿಗೆ ಸಾರ್ವಜನಿಕರ ಬೆಂಬಲ ಇರುವುದನ್ನು ತೋರಿಸಲು ಅಧಿಕಾರಿಗಳು ಪ್ರಯತ್ನಿಸುತ್ತಿದ್ದಾರೆ. ಅವರ ಸ್ಮರಣಾರ್ಥ ಅನೇಕ ನಗರಗಳಲ್ಲಿ ಭಾರಿ ಜನಸಮೂಹವನ್ನು ಒಗ್ಗೂಡಿಸುತ್ತಿದ್ದಾರೆ.

ಇರಾನ್‌ನ ಧ್ವಜಗಳನ್ನು ಬೀಸುತ್ತಾ, 'ಅಮೆರಿಕಕ್ಕೆ ಸಾವು' ಎಂದು ಘೋಷಣೆ ಗಳನ್ನು ಕೂಗುತ್ತಾ, ಇಸ್ಫಹಾನ್ ಮತ್ತು ಯಜ್ದ್ ನಗರಗಳ ಮುಖ್ಯ ಚೌಕಗಳಲ್ಲಿ ಸಾವಿರಾರು ಮಂದಿ ಜಮಾಯಿಸಿರುವ ವಿಡಿಯೊವನ್ನು ಸರ್ಕಾರಿ ಸ್ವಾಮ್ಯದ ವಾಹಿನಿ ಪ್ರಸಾರ ಮಾಡಿದೆ.

ಮೆರವಣಿಗೆಗೆ ಅವಕಾಶ ಬೇಡ: ಆರ್. ಅಶೋಕ

ಬೆಂಗಳೂರು: 'ಸರ್ವಾಧಿಕಾರಿಯಾಗಿದ್ದ ಆಯತೊಲ್ಲಾ ಅಲಿ ಖಮೇನಿ ಪರ ಮೆರವಣಿಗೆಗೆ ಅವಕಾಶ ನೀಡಬಾರದು. ಈ ನೆಪದಲ್ಲಿ ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಬೇಕು' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಒತ್ತಾಯಿಸಿದರು.

'ಇರಾನ್- ಇಸ್ರೇಲ್ ಯುದ್ಧದಲ್ಲಿ ಖಮೇನಿ ಹತನಾಗಿದ್ದು, ಆತನ ಪರವಾಗಿ ಇಲ್ಲಿ ಪ್ರತಿಭಟನೆ ನಡೆಸಿ ಸಾರ್ವಜನಿಕ ಆಸ್ತಿಪಾಸ್ತಿಗೆ ಹಾನಿ ಮಾಡಲು ಅವಕಾಶ ನೀಡಬಾರದು' ಎಂದು ಅವರು ಆಗ್ರಹಿಸಿದರು.

'ಖಮೇನಿ ವಿರುದ್ಧ ಅವರ ದೇಶದಲ್ಲೇ ಆಂತರಿಕ ದಂಗೆ ನಡೆದಿತ್ತು. ಅಲ್ಲಿ ಮಹಿಳೆಯರ ಮೇಲೆ ದೌರ್ಜನ್ಯ ನಡೆದಿತ್ತು. ಸಾವಿರಾರು ಜನರನ್ನು ಗುಂಡಿಟ್ಟು ಕೊಲ್ಲಲಾಗಿತ್ತು. ಆದರೆ, ಬೆಂಗಳೂರು ಸೇರಿ ಭಾರತದ ಅನೇಕ ಕಡೆ ಖಮೇನಿ ಪರವಾಗಿ ಮುಸ್ಲಿಮರು ಪ್ರತಿಭಟನೆ ಮಾಡಿದ್ದಾರೆ' ಎಂದು ಹೇಳಿದರು.

'ಯುದ್ಧ ಪೀಡಿತ ದೇಶಗಳಲ್ಲಿ ಸಿಲುಕಿರುವ ಕನ್ನಡಿಗರು ಸೇರಿ ಎಲ್ಲ ಭಾರತೀಯರನ್ನು ಮರಳಿ ಕರೆ ತರಲು ಪ್ರಧಾನಿ ಮೋದಿ ನೇತೃತ್ವದ ಸರ್ಕಾರ ಕಾರ್ಯೋನ್ಮುಖವಾಗಿದೆ. ಎಲ್ಲರನ್ನೂ ಸುರಕ್ಷಿತವಾಗಿ ಕರೆ ತರಲಾಗುತ್ತದೆ' ಎಂದರು.

'ಭಾರತ ಮತ್ತು ಇಸ್ರೇಲ್ ನಡುವಿನ ಸಂಬಂಧ ಉತ್ತಮವಾಗಿದೆ. ಭಾರತ ಯಾವುದೇ ದೇಶಗಳ ವಿರೋಧಿ ಅಲ್ಲ. ಯುದ್ಧ ನಡೆಯಬಾರದು ಎಂಬುದು ನನ್ನ ಅಭಿಪ್ರಾಯ. ಕೇಂದ್ರ ಸರ್ಕಾರ ಎಂದೂ ಯುದ್ಧಕ್ಕೆ ಬೆಂಬಲ ಕೊಟ್ಟಿಲ್ಲ. ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಕೇಂದ್ರ ಸಚಿವರನ್ನು ಭೇಟಿ ಮಾಡಿ ಕನ್ನಡಿಗರ ರಕ್ಷಣೆಗಾಗಿ ಕೆಲಸ ಮಾಡಲಿ' ಎಂದು ಒತ್ತಾಯಿಸಿದರು.

ಉತ್ತರಾಧಿಕಾರಿ ಸ್ಪರ್ಧೆಯಲ್ಲಿ ಯಾರ್‍ಯಾರು?

ಟೆಹರಾನ್ (ಎಪಿ): 37 ವರ್ಷ ದೇಶವನ್ನು ಆಳಿದ್ದ ಪರಮೋಚ್ಚ ನಾಯಕ ಆಯತೊಲ್ಲಾ ಅಲಿ ಖಮೇನಿ ಅವರ ಹತ್ಯೆ ಬಳಿಕ ಅವರ ಉತ್ತರಾಧಿಕಾರಿಯ ಆಯ್ಕೆಗಾಗಿ ಹುಡುಕಾಟ ಆರಂಭವಾಗಿದೆ.

ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್, ನ್ಯಾಯಾಂಗ ಇಲಾಖೆಯ ಮುಖ್ಯಸ್ಥ ಗೊಲಮ್ ಹೊಸೈನ್ ಮೊಹ್‌ಸೆನಿ ಎಜೆಹೈ ಹಾಗೂ ಆಯತೊಲ್ಲಾ ಅಲಿ ರೆಜಾ ಅರಾಫಿ ಅವರನ್ನು ಒಳಗೊಂಡ ಮಂಡಳಿಯು ಬಿಕ್ಕಟ್ಟಿನ ಸಂದರ್ಭದಲ್ಲಿ ದೇಶವನ್ನು ಮುನ್ನಡೆಸುತ್ತಿದೆ. ಈ ಮಧ್ಯೆ 'ಇರಾನ್‌ನ ಪರಮೋಚ್ಚ ನಾಯಕನನ್ನು ಈ ವಾರ ಆಯ್ಕೆ ಮಾಡಲಾಗುವುದು' ಎಂದು ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ತಿಳಿಸಿದ್ದಾರೆ. 88 ಸದಸ್ಯರನ್ನು ಒಳಗೊಂಡ ತಜ್ಞರ ಸಮಿತಿಯು ಪರಮೋಚ್ಚ ನಾಯಕನನ್ನು ಆಯ್ಕೆ ಮಾಡಲಿದೆ.

ಸ್ಪರ್ಧೆಯಲ್ಲಿರುವ ಪ್ರಮುಖರು



ಮೊಜತಬಾ ಖಮೇನಿ



ಹಸನ್ ರೌಹಾನಿ

ಮೊಜತಬಾ ಖಮೇನಿ: ಆಯತೊಲ್ಲಾ ಅಲಿ ಖಮೇನಿ ಅವರ ಪುತ್ರ. ಇವರೇ ಸಮರ್ಥವಾದ ಉತ್ತರಾಧಿಕಾರಿ ಎಂಬ ಅಭಿಪ್ರಾಯವಿದೆ. ಆದರೆ ಇಸ್ಲಾಮಿಕ್ ರಿಪಬ್ಲಿಕ್ ಮೊದಲಿನಿಂದಲೂ ವಂಶಾಡಳಿತಕ್ಕೆ ವಿರೋಧ ವ್ಯಕ್ತಪಡಿಸುತ್ತಿದೆ.

ಆಯತೊಲ್ಲಾ ಅಲಿ ರೆಜಾ ಅರಾಫಿ: ಹಂಗಾಮಿ ಮಂಡಳಿಯ ಸದಸ್ಯರಲ್ಲಿ ಒಬ್ಬರು. 2019ರಲ್ಲಿ ಖಮೇನಿ ಅವರು ಗಾರ್ಡಿಯನ್ ಮಂಡಳಿಯ ಸದಸ್ಯರಾಗಿ ಇವರನ್ನು ಆಯ್ಕೆ ಮಾಡಿದ್ದರು. ಬಳಿಕ ತಜ್ಞರ ಸಮಿತಿಗೂ ಚುನಾಯಿತರಾಗಿದ್ದರು.

ಹಸನ್ ರೌಹಾನಿ: 2013–21ರವರೆಗೆ ಇರಾನ್‌ನ ಅಧ್ಯಕ್ಷರಾಗಿದ್ದರು. ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ ಅವರೊಂದಿಗೆ ಪರಮಾಣು ಒಪ್ಪಂದ ಮಾಡಿಕೊಂಡಿದ್ದರು. ನಂತರ ಅಧಿಕಾರಕ್ಕೆ ಬಂದ ಟ್ರಂಪ್ ಅವರು ಒಪ್ಪಂದವನ್ನು ರದ್ದುಮಾಡಿದರು.

ಹಸನ್ ಖಮೇನಿ: ಇಸ್ಲಾಮಿಕ್ ರಿಪಬ್ಲಿಕ್ ಸಂಸ್ಥಾಪಕ ಆಯತೊಲ್ಲಾ ರುಹೊಲ್ಲಾಹ್ ಖೊಮೇನಿ ಅವರ ಮೊಮ್ಮಗ.

ಆಯತೊಲ್ಲಾ ಮೊಹಮ್ಮದ್ ಮೆಹ್ದಿ ಮೀರ್‌ಬಘೇರಿ: ಹಿರಿಯ ಧಾರ್ಮಿಕ ನಾಯಕ ಮತ್ತು ತಜ್ಞರ ಸಮಿತಿಯ ಸದಸ್ಯ.

ಪಶ್ಚಿಮ ಏಷ್ಯಾ: ನೆತನ್ಯಾಹು ಜತೆ ಮಾತುಕತೆ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದ ಸದ್ಯದ ಪರಿಸ್ಥಿತಿಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರೊಂದಿಗೆ ದೂರವಾಣಿಯಲ್ಲಿ ಸಂಭಾಷಣೆ ನಡೆಸಿದ್ದಾರೆ.


ಈ ಬಗ್ಗೆ 'ಎಕ್ಸ್' ಖಾತೆಯಲ್ಲಿ ಮೋದಿ ಪೋಸ್ಟ್ ಮಾಡಿದ್ದಾರೆ. 'ಇತ್ತೀಚಿನ ಬೆಳವಣಿಗೆಗಳ ಕುರಿತು ಭಾರತದ ಕಳವಳವನ್ನು ತಿಳಿಸಿದೆ. ನಾಗರಿಕರ ಸುರಕ್ಷತೆಯೇ ಆದ್ಯತೆ ಎಂಬುದನ್ನು ಒತ್ತಿ ಹೇಳಿದ್ದೇನೆ. ಸಂಘರ್ಷವನ್ನು ಶೀಘ್ರವಾಗಿ ಶಮನಗೊಳಿಸಬೇಕು ಎಂದು ಭಾರತವು ಪುನರುಚ್ಚರಿಸುತ್ತೆ ಎಂದು ತಿಳಿಸಿದ್ದೇನೆ' ಎಂದು ಹೇಳಿದ್ದಾರೆ.

'ಸುರಕ್ಷಿತ ನೆಲೆ ಒದಗಿಸಲು ಭಾರತೀಯ ರಾಯಭಾರ ಕಚೇರಿಗಳು ಕ್ರಮ ಕೈಗೊಳ್ಳಲಿ'

ಕನ್ನಡಿಗರ ರಕ್ಷಣೆ: ಮೋದಿಗೆ ಸಿ.ಎಂ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯುದ್ಧ ಪೀಡಿತ ಕೊಲ್ಲಿ ರಾಷ್ಟ್ರಗಳಲ್ಲಿ ಸಿಕ್ಕಿಹಾಕಿಕೊಂಡಿರುವ ಕನ್ನಡಿಗರು ಮತ್ತು ಇತರ ಭಾರತೀಯರಿಗೆ ಸೂಕ್ತ ರಕ್ಷಣೆ ಮತ್ತು ಸುರಕ್ಷಿತ ನೆಲೆ ಒದಗಿಸಲು ಆಯಾ ದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮನವಿ ಮಾಡಿದ್ದಾರೆ.



ಸಿದ್ದರಾಮಯ್ಯ

ಈ ಸಂಬಂಧ ಸಿದ್ದರಾಮಯ್ಯ ಅವರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರಿಗೆ ಪತ್ರವನ್ನು ಬರೆದಿದ್ದಾರೆ.

ಆ ದೇಶಗಳಲ್ಲಿರುವ ಕನ್ನಡಿಗರು ಮತ್ತು ಇತರ ಭಾರತೀಯರನ್ನು ಸುರಕ್ಷಿತವಾಗಿ ವಾಪಸ್ ಕರೆತರಲು ಕ್ರಮ ತೆಗೆದುಕೊಳ್ಳಬೇಕು ಎಂದೂ ಒತ್ತಾಯಿಸಿದ್ದಾರೆ.

ಸಿ.ಎಂ ಸಲಹೆಗಳು

- ಯುದ್ಧ ಪೀಡಿತ ದೇಶಗಳಲ್ಲಿರುವ ಭಾರತೀಯ ರಾಯಭಾರ ಕಚೇರಿಗಳು ಅಲ್ಲಿರುವ ಕನ್ನಡಿಗರು ಮತ್ತು ಇತರ ಭಾರತೀಯ ನಾಗರಿಕರ ಜತೆ ನಿರಂತರ ಸಂಪರ್ಕದಲ್ಲಿದ್ದು, ಅವರ ಯೋಗ ಕ್ಷೇಮ ಕುರಿತು ನಿಗಾವಹಿಸಬೇಕು. ಸಕಾಲದಲ್ಲಿ ಅಗತ್ಯ ಮಾರ್ಗದರ್ಶನ ನೀಡಬೇಕು.
- ಭಾರತೀಯ ನಾಗರಿಕರನ್ನು ವಿಶೇಷ ವಿಮಾನಗಳ ಮೂಲಕ ಸುರಕ್ಷಿತವಾಗಿ ವಾಪಸ್ ಕರೆತರಲು ಅಥವಾ ಸ್ಥಳಾಂತರಿಸಲು ಸನ್ನದ್ಧ ಸ್ಥಿತಿಯಲ್ಲಿರಬೇಕು. ವಿದೇಶಾಂಗ, ನಾಗರಿಕ ವಿಮಾನಯಾನ ಸಚಿವಾಲಯ, ರಾಜ್ಯ ಸರ್ಕಾರಗಳು ಮತ್ತು ವಿಮಾನ ಯಾನ ಸಂಸ್ಥೆಗಳ ಮಧ್ಯೆ ಸಮನ್ವಯಕ್ಕೆ ರಾಷ್ಟ್ರೀಯ ಮಟ್ಟದ ಸಮನ್ವಯ ವ್ಯವಸ್ಥೆಯೊಂದನ್ನು ರೂಪಿಸಬೇಕು.
- ಕನ್ನಡಿಗರು ಮತ್ತು ಇತರ ಭಾರತೀಯರ ಕುಟುಂಬಗಳಿಗೆ ಕಾಲ ಕಾಲಕ್ಕೆ ಮಾಹಿತಿ ನೀಡಲು, ಕೇಂದ್ರೀಕೃತ ಡಿಜಿಟಲ್ ವ್ಯವಸ್ಥೆ ರೂಪಿಸಬೇಕು. ನೋಂದಣಿ, ಟ್ರ್ಯಾಕಿಂಗ್, ನೈಜ ಸಮಯದಲ್ಲಿ ಮಾಹಿತಿ ರವಾನೆ ಮಾಡಬೇಕು.
- ವಿಮಾನಗಳ ಹಾರಾಟದ ಸಮಯದ ಬಗ್ಗೆ ವಿಮಾನಯಾನ ಸಂಸ್ಥೆಗಳು ಹೊಂದಾಣಿಕೆ ಮಾಡಿಕೊಳ್ಳಬೇಕು. ಅನಗತ್ಯವಾಗಿ ಹೆಚ್ಚುವರಿ ದರ ವಿಧಿಸಬಾರದು, ಅಗತ್ಯ ಸಂದರ್ಭಗಳಲ್ಲಿ ಮಾನವೀಯ ನೆರವು ನೀಡಬೇಕು ಎಂಬ ನಿರ್ದೇಶವನ್ನು ನೀಡಬೇಕು.
- ಪಶ್ಚಿಮ ಏಷ್ಯಾದಲ್ಲಿ ಭಾರತೀಯರು ಅಪಾರ ಸಂಖ್ಯೆಯಲ್ಲಿದ್ದಾರೆ. ರಾಷ್ಟ್ರದ ಆರ್ಥಿಕ ಬೆಳವಣಿಗೆಗೆ ಇವರ ಕೊಡುಗೆ ಅಪಾರ ಮತ್ತು ಜಾಗತಿಕವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಇಂತಹ ಸಂಕಷ್ಟದ ಸಂದರ್ಭದಲ್ಲಿ ತ್ವರಿತ, ಸಮನ್ವಯ ಮತ್ತು ಸಹಾನುಭೂತಿಯಿಂದ ಕೂಡಿದ ರಾಷ್ಟ್ರೀಯ ಸ್ಪಂದನೆಯ ಅಗತ್ಯವಿದೆ.

109 ಕನ್ನಡಿಗರ ಕರೆತರಲು ಪ್ರಯತ್ನ: ಸಚಿವ

ವಿದೇಶಾಂಗ ಸಚಿವಾಲಯದ ಜೊತೆ ಸಂಪರ್ಕದಲ್ಲಿದ್ದೇವೆ: ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಶ್ಚಿಮ ಏಷ್ಯಾದ ಯುದ್ಧಪೀಡಿತ ದೇಶಗಳಲ್ಲಿ ಸುಮಾರು 109 ಕನ್ನಡಿಗರು ಸಿಲುಕಿದ್ದು, ಅವರ ರಕ್ಷಣೆಗಾಗಿ ವಿದೇಶಾಂಗ ಸಚಿವಾಲಯದ ಜೊತೆ ಸಂಪರ್ಕದಲ್ಲಿದ್ದೇವೆ. ಶನಿವಾರ ರಾತ್ರಿಯಿಂದಲೇ ಸಹಾಯವಾಣಿ ಆರಂಭಿಸಲಾಗಿದೆ' ಎಂದು ಕಂದಾಯ ಸಚಿವ ಕೃಷ್ಣಬೈರೇಗೌಡ ತಿಳಿಸಿದರು.

ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, 'ಯುದ್ಧಪೀಡಿತ ದೇಶಗಳಲ್ಲಿ ಸಿಲುಕಿರುವ ಕನ್ನಡಿಗರ ರಕ್ಷಣೆಗೆ ನಮ್ಮ ವಿಪತ್ತು ನಿರ್ವಹಣೆ ವಿಭಾಗ ಕಾರ್ಯಪ್ರವೃತ್ತವಾಗಿದೆ. 100 ಜನರು ದುಬೈನಲ್ಲಿ, 9 ಮಂದಿ ಬಹರೇನ್ ನಲ್ಲಿದ್ದಾರೆ. ಇನ್ನೂ ಯಾರಾದರೂ ಇದ್ದರೆ ಕರೆ ಮಾಡಿ ಮಾಹಿತಿ ಕೊಡಬೇಕು' ಎಂದು ಹೇಳಿದರು.

'ಕನ್ನಡಿಗರನ್ನು ರಕ್ಷಣೆ ಮಾಡಲು ಕೇಂದ್ರ ಸರ್ಕಾರದ ಜೊತೆ ನಾವು ಮಾತುಕತೆ ನಡೆಸುತ್ತಿದ್ದೇವೆ. ವಿಮಾನ ಹಾರಾಟ ರದ್ದುಗೊಂಡಿರುವುದರಿಂದ ವಿಶೇಷ ವಿಮಾನ ಕಳುಹಿಸಲು ಸಾಧ್ಯ ಇಲ್ಲ. ನಿಷೇಧ ತೆರವುಗೊಂಡ ನಂತರ ಅಲ್ಲಿಗೆ ವಿಮಾನ ಕಳುಹಿಸಬಹುದು. ಕದನ ವಿರಾಮ ಘೋಷಣೆ ಆಗುವವರೆಗೆ ವಿಮಾನ ಹಾರಾಟ ಇರುವುದಿಲ್ಲ. ಹೀಗಾಗಿ, ಎಲ್ಲರೂ ಶಾಂತರಾಗಿ ಇರ ಬೇಕು' ಎಂದು ಸಚಿವರು ಮನವಿ ಮಾಡಿದರು.

'ದುಬೈ, ಬಹರೇನ್ ವಿಮಾನ ನಿಲ್ದಾಣಗಳಲ್ಲಿ ಕನ್ನಡಿಗರು ಸಿಲುಕಿದ್ದಾರೆ. ಅಲ್ಲಿ ಸೌಲಭ್ಯಗಳಿಲ್ಲ, ಹೊರಗೆ ಹೋಗಲು ವೀಸಾ ಇಲ್ಲ ಎಂದೂ ಹೇಳುತ್ತಿದ್ದಾರೆ. ಹೀಗಾಗಿ, ನಾವು ಅವರ ಮಾಹಿತಿಯನ್ನು ವಿದೇಶಾಂಗ ಇಲಾಖೆಗೆ ಕೊಡುತ್ತಿದ್ದೇವೆ. ಇಲಾಖೆಯವರು ಸ್ಥಳೀಯ ರಾಯಭಾರಿ ಕಚೇರಿಗೆ ತಿಳಿಸುತ್ತಿದ್ದು, ಅಲ್ಲಿನವರು ನೆರವು ನೀಡಲಿದ್ದಾರೆ' ಎಂದರು.

'ಕೊಲ್ಲಿ ರಾಷ್ಟ್ರಗಳ ಸಹಾಯವಾಣಿ ಸಂಖ್ಯೆಯನ್ನು ಕೊಟ್ಟಿದ್ದೇವೆ. ಯಾರಾದರೂ ಸಿಲುಕಿದ್ದರೆ, ಅಲ್ಲಿನ ರಾಯಭಾರಿ ಕಚೇರಿಯನ್ನು ಸಂಪರ್ಕಿಸಿ ಸಹಾಯ ಯಾಚಿಸಬಹುದು. ಆಗ ಅಲ್ಲಿರುವವರಿಗೆ ವೀಸಾ ನೀಡುವ ಪ್ರಯತ್ನ ಆಗಲಿದೆ. ಅಂಥವರು ಹೋಟೆಲ್‌ಗಳಲ್ಲಿ ತಂಗಬಹುದು. ಹೋಟೆಲ್ ವಾಸ್ತವ್ಯಕ್ಕೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರದಿಂದ ನೇರವಾಗಿ ಭರಿಸಲು ಅವಕಾಶ ಇಲ್ಲ. ಕೇಂದ್ರ ಸರ್ಕಾರ ಭರಿಸಿದರೆ, ಅದು ಎಷ್ಟೇ ಹಣವಾದರೂ ರಾಜ್ಯ ಸರ್ಕಾರ ನೀಡಲಿದೆ' ಎಂದೂ ಹೇಳಿದರು.

'ಯುದ್ಧಪೀಡಿತ ಪ್ರದೇಶಗಳಲ್ಲಿರು ವವರು ಸ್ಥಳೀಯ ಸರ್ಕಾರ ನೀಡುವ ಸಲಹೆ, ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು. ಇನ್ನೂ ಎರಡು ವಾರ ಯುದ್ಧ ನಡೆಯುವ ಸಾಧ್ಯತೆ ಇದೆ' ಎಂದರು.

ದುಬೈ: ಜಿಲ್ಲಾವಾರು ಮಾಹಿತಿ

ಬಳ್ಳಾರಿ -32, ಬೆಂಗಳೂರು -25, ಚಿಕ್ಕಮಗಳೂರು -5, ಚಿಕ್ಕಬಳ್ಳಾಪುರ-2, ದಕ್ಷಿಣ ಕನ್ನಡ - 3, ಚಿತ್ರದುರ್ಗ - 2, ದಾವಣಗೆರೆ - 9, ಕೊಡಗು - 4, ವಿಜಯಪುರ - 4, ರಾಯಚೂರು - 3, ಶಿವಮೊಗ್ಗ - 3, ಉಡುಪಿ - 2, ಕಲಬುರಗಿ - 2, ಇತರೆ ಜಿಲ್ಲೆಗಳ 4 ಮಂದಿ ಕನ್ನಡಿಗರು ದುಬೈನಲ್ಲಿ ಸಿಲುಕಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಬಾಳು ಇರುವುದು ಬದುಕುವುದಕ್ಕಾಗಿ; ಬದುಕಿನಿಂದ ಬೆಳೆಯುವುದಕ್ಕಾಗಿ.

–ಶಿವರಾಮ ಕಾರಂತ

ಸಂಪಾದಕೀಯ

ದೇಶಿ ಕ್ರಿಕೆಟ್‌ಗೆ ಹೊಸ ಮುಕುಟ ಇದು ಕ್ರೀಡಾಪ್ರೇಮದ ಕಾಶ್ಮೀರ!

ದೇಶಿ ಕ್ರಿಕೆಟ್‌ನ ಅತ್ಯಂತ ಬಲಾಢ್ಯ ತಂಡಗಳಲ್ಲಿ ಒಂದಾಗಿರುವ ಕರ್ನಾಟಕದ ಸವಾಲನ್ನು ಅತ್ಯಂತ ಸುಲಭವಾಗಿ ಮೆಟ್ಟಿ ನಿಂತ ಜಮ್ಮು ಮತ್ತು ಕಾಶ್ಮೀರ ತಂಡವು ರಣಜಿ ಟ್ರೋಫಿಯನ್ನು ಎತ್ತಿ ಹಿಡಿಯುವ ಮೂಲಕ ಹೊಸ 'ರಾಜ'ನಾಗಿ ಹೊರಹೊಮ್ಮಿದೆ. ಭಯೋತ್ಪಾದನೆಯ ಅಟ್ಟಹಾಸ ಮತ್ತು ಅದನ್ನು ಹಿಮ್ಮೆಟ್ಟಿಸಲು ನಡೆದ ಸೈನ್ಯದ ಬಲಪ್ರಯೋಗದಿಂದ ನಲುಗಿ ಹೋಗಿರುವ, ಮಾನಸಿಕವಾಗಿ ಜರ್ಜರಿತವಾಗಿರುವ ಕಾಶ್ಮೀರ ಕಣಿವೆಯ ಪಾಲಿಗೆ ಜೀವನೋತ್ಸಾಹಕ್ಕೆ ಕಾರಣವಾಗುವಂತಹ ಚಾರಿತ್ರಿಕ ಸಾಧನೆ ಇದು. ಹೊಳೆಯುವ ಟ್ರೋಫಿಯನ್ನು ಹೊತ್ತೊಯ್ದಿರುವ ಕಾಶ್ಮೀರವನ್ನು ದೇಶ ಭಿನ್ನ ದೃಷ್ಟಿಕೋನದಿಂದ ನೋಡಲು ರಣಜಿಯ ಗೆಲುವು ಪ್ರೇರಣೆ ಆಗುವಂತಿದೆ. ರಾಜಕೀಯವಾಗಿ ರಾಜ್ಯದ ಸ್ಥಾನಮಾನವನ್ನೇ ಕಳೆದುಕೊಂಡು ಕೇಂದ್ರಾಡಳಿತ ಪ್ರದೇಶವಾಗಿರುವ ಜಮ್ಮು ಮತ್ತು ಕಾಶ್ಮೀರವು, ತಾನೀಗ ಕ್ರಿಕೆಟ್‌ನ ಅಂಬೆಗಾಲು ಇಡುತ್ತಿರುವ ಕೂಸಲ್ಲ, ಬದಲಾಗಿ ದೇಶಿ ಕ್ರಿಕೆಟ್ ಸಾಮ್ರಾಟ ಎಂದು ಸಾರಿ ಹೇಳಿದೆ. ಕಳೆದ ನಾಲ್ಕು ದಶಕಗಳಿಂದ ಎಲ್ಲಿ ಗನ್‌ಗಳು, ಬಾಂಬ್‌ಗಳೇ ಹೆಚ್ಚಾಗಿ ಮಾತನಾಡುತ್ತಿದ್ದವೋ, ಎಲ್ಲಿ ಶಾಲಾ–ಕಾಲೇಜುಗಳು ಹೆಚ್ಚಿನ ಅವಧಿಗೆ ಮುಚ್ಚಿರುತ್ತಿದ್ದವೋ, ಎಲ್ಲಿ ಅರಳಬೇಕಿದ್ದ ಪ್ರತಿಭೆಗಳು ಆಘಾತಕ್ಕೆ ಒಳಗಾಗಿದ್ದವೋ ಅಲ್ಲಿನ ನೆಲದಲ್ಲಿ ಬರೆಯಲಾದ ಯಶೋಗಾಥೆಗೆ ದೊಡ್ಡ ಕಿಮ್ಮತ್ತಿದೆ. ಇನ್ನೇನು ಶತಮಾನೋತ್ಸವ ಆಚರಿಸಿಕೊಳ್ಳಲು ಸಜ್ಜಾಗುತ್ತಿರುವ ರಣಜಿ ಕ್ರಿಕೆಟ್ ಟೂರ್ನಿಗೆ (ಎಂಟು ವರ್ಷಗಳಷ್ಟೇ ಬಾಕಿ), 67 ವರ್ಷಗಳ ಹಿಂದೆ ಪ್ರವೇಶ ಪಡೆದಿದ್ದ ಜಮ್ಮು ಮತ್ತು ಕಾಶ್ಮೀರ ತಂಡವು ಇದೇ ಮೊದಲ ಬಾರಿಗೆ ಫೈನಲ್ ಪ್ರವೇಶಿಸಿತ್ತು. ಮೊದಲ ಯತ್ನದಲ್ಲೇ ದೇಶ ತನ್ನತ್ತ ಬೆರಗಿನಿಂದ ನೋಡುವಂತೆ ಮಾಡಿತು. ಎಂಟು ಸಲದ ಚಾಂಪಿಯನ್ ಕರ್ನಾಟಕ ತಂಡವನ್ನು ಫೈನಲ್‌ನಲ್ಲಿ ಸೋಲಿಸಿದ ಆ ತಂಡ, ಫೈನಲ್‌ವರೆಗಿನ ಹಾದಿಯಲ್ಲಿ ಮಾಜಿ ಚಾಂಪಿಯನ್‌ಗಳಾದ ಐದು ತಂಡಗಳನ್ನು –ದೆಹಲಿ, ಹೈದರಾಬಾದ್, ರಾಜಸ್ಥಾನ, ಮಧ್ಯಪ್ರದೇಶ ಮತ್ತು ಪಶ್ಚಿಮ ಬಂಗಾಳ– ಪರಾಭವಗೊಳಿಸಿದೆ. ಈ ದಾಖಲೆಯೇ ಆ ತಂಡದ ಯಶಸ್ಸಿನ ಹಿರಿಮೆ ಏನೆಂಬುದನ್ನು ಢಾಳಾಗಿ ಹೇಳುತ್ತದೆ.



ಜಮ್ಮು ಮತ್ತು ಕಾಶ್ಮೀರ ತಂಡ 'ರಣಜಿ ಚಾಂಪಿಯನ್' ಆಗಿ ಹೊರಹೊಮ್ಮಿರುವುದು ಕ್ರೀಡಾಸಾಧನೆ ಮಾತ್ರವಾಗಿರದೆ, ಸಂಘರ್ಷದ ನೆಲದಲ್ಲಿ ಮೂಡಿರುವ ಸೌಹಾರ್ದದ ಚಿಗುರೂ ಆಗಿದೆ.

ಭಾರತೀಯ ಕ್ರಿಕೆಟ್‌ನ ಮುಕುಟ ಮಣಿಯಾಗಿ ಹೊಳೆಯುತ್ತಿರುವ ಜಮ್ಮು ಮತ್ತು ಕಾಶ್ಮೀರ ತಂಡದ ಸಾಧನೆಯ ಕಡೆಗೆ ಹೊರಳುನೋಟ ಬೀರಿದರೆ ತಂಡದ ಸಾಂಘಿಕ ಯತ್ನ ಎದ್ದು ಕಾಣುತ್ತದೆ. ಅಕೀಬ್ ನಬಿ ದಾರ್ ಎಂಬ ತಾರೆಯ ಮಿಂಚೂ ಅಲ್ಲಿ ಹರಿಯುತ್ತದೆ. ಹತ್ತು ಪಂದ್ಯಗಳಿಂದ 60 ವಿಕೆಟ್ ಪಡೆದ ಈ ವೇಗಿ, ನಿಸ್ಸಂಶಯವಾಗಿ ಪ್ರಸಕ್ತ ರಣಜಿ ಋತು ಕಂಡ ಅದ್ಭುತ ಪ್ರತಿಭೆ. ಸರಾಸರಿ 12.56 ರನ್‌ಗಳಿಗೆ ಒಂದರಂತೆ ವಿಕೆಟ್ ಕಿತ್ತಿರುವ, ಓವರ್‌ಗೆ 2.65 ರನ್ ಮಾತ್ರ ನೀಡಿರುವ ಈ ಬೌಲರ್, ತಂಡಕ್ಕೆ ಅಗತ್ಯವಾದಾಗ ಬ್ಯಾಟ್‌ನಿಂದಲೂ ಕಾಣಿಕೆ ನೀಡಿದ್ದಾರೆ. ಪಂದ್ಯದ ದಿಕ್ಕನ್ನೇ ತಿರುಗಿಸಬಲ್ಲ ಅಕೀಬ್ ಅವರಂತಹ ಆಟಗಾರ ಯಾವುದೇ ತಂಡಕ್ಕೂ ದೊಡ್ಡ ಆಸ್ತಿ. ಅಕೀಬ್ ಅವರಿಗೆ ಈಗ 29 ವರ್ಷ. ಬೇರೆ ರಾಜ್ಯದ ಹುಡುಗನಾಗಿದ್ದರೆ ಈ ವೇಳೆಗೆ ಅವರು ಸ್ಟಾರ್‌ಗಿರಿಯಲ್ಲಿ ಮಿಂದೇಳುತ್ತಿದ್ದರು. ಕಾಶ್ಮೀರದ ಕಣಿವೆಯಿಂದ ಕ್ರಿಕೆಟ್ ಕ್ಷಿತಿಜದಲ್ಲಿ ಕಾಣಿಸಿಕೊಳ್ಳಲೇ ಈ ಅದ್ಭುತ ಬೌಲರ್‌ನಿಗೆ ಇಷ್ಟು ವರ್ಷಗಳು ಬೇಕಾದವು. ಬ್ಯಾಟಿಂಗ್‌ನಲ್ಲಿ ಅಬ್ದುಲ್ ಸಮದ್ ಸ್ಥಿರವಾದ ಪ್ರದರ್ಶನ ನೀಡುವ ಮೂಲಕ ತಂಡಕ್ಕೆ ಬೆನ್ನೆಲುಬಾಗಿ ನಿಂತರು. ಪಾರಸ್ ಡೋಗ್ರಾ ತಂಡಕ್ಕೆ ಅತ್ಯುತ್ತಮ ನಾಯಕತ್ವ ಸಿಗುವಂತೆ ಮಾಡುವ ಜತೆಗೆ ಬ್ಯಾಟಿಂಗ್‌ನಲ್ಲೂ ಮಿಂಚಿದರು. ಕಮ್ರಾನ್ ಇಕ್ಬಾಲ್ ಮತ್ತು ಶುಭಂ ಪುಂಡೀರ್ ಅವರು ತಂಡಕ್ಕೆ ಅಗತ್ಯವಾದಾಗಲೆಲ್ಲ ನೆರವಿಗೆ ಧಾವಿಸಿದರು. ಕೆ. ವಾಧ್ವಾನ್, ಅಬಿದ್ ಮುಷ್ತಾಕ್, ಎಸ್.ಪಿ. ಖಜುರಿಯಾ ಮತ್ತು ಸಾಹಿಲ್ ಲೂತ್ರಾ ಅವರ ಸಾಧನೆ ಕೂಡ ಗಮನಾರ್ಹ. ಹೀಗೆ ಜಮ್ಮು ಮತ್ತು ಕಾಶ್ಮೀರ ಒಂದು ಪರಿಪೂರ್ಣ ತಂಡವಾಗಿ ಆಡಿತು.

ಪ್ರಸಕ್ತ ಕ್ರಿಕೆಟ್ ಋತುವಿನ ಉದ್ದಕ್ಕೂ ಅಮೋಘವಾಗಿ ಆಡಿದ್ದ ಕರ್ನಾಟಕ ತಂಡಕ್ಕೆ ಫೈನಲ್ ಸೋಲು ದೊಡ್ಡ ಪಾಠ. ಟೆಸ್ಟ್ ಪಂದ್ಯಗಳಲ್ಲಿ ಆಡಿದ ಐವರು ಅನುಭವಿಗಳನ್ನು ಹೊಂದಿದ್ದರೂ ಜಮ್ಮು ಮತ್ತು ಕಾಶ್ಮೀರದ ಸವಾಲಿಗೆ ಕರ್ನಾಟಕ ತಂಡದಲ್ಲಿ ಉತ್ತರವಿರಲಿಲ್ಲ. ಬೌಲಿಂಗ್ ದಾಳಿ ಮೊನಚು ಕಳೆದುಕೊಂಡರೆ, ಅನುಭವಿ ಬ್ಯಾಟರ್‌ಗಳು ಅತಿಯಾದ ಆತ್ಮವಿಶ್ವಾಸಕ್ಕಾಗಿ ಬೆಲೆ ತೆರಬೇಕಾಯಿತು. ಆದರೆ, ಆರ್. ಸ್ಮರಣ್ (950 ರನ್), ಶ್ರೇಯಸ್ ಗೋಪಾಲ್ (48 ವಿಕೆಟ್) ಟೂರ್ನಿಯುದ್ದಕ್ಕೂ ಸ್ಥಿರವಾದ ಪ್ರದರ್ಶನ ನೀಡಿ ಗಮನ ಸೆಳೆದರು. ಸೋಲಿನಲ್ಲಿಯೂ ಸಮಾಧಾನ ಮೂಡಿಸುವ ಇಂತಹ ಸಂಗತಿಗಳು ಕರ್ನಾಟಕ ತಂಡಕ್ಕಿವೆ. ಇಡೀ ದೇಶಕ್ಕೆ ಬ್ಯಾಟ್‌ಗಳನ್ನು ಕೊಡುತ್ತಿದ್ದ ಕಾಶ್ಮೀರ ಇನ್ನು ಮುಂದೆ ಭಾರತ ತಂಡಕ್ಕೆ ಬ್ಯಾಟರ್‌ಗಳನ್ನೂ ಬೌಲರ್‌ಗಳನ್ನೂ ಕಳುಹಿಸುತ್ತದೆಂದು ನಿರೀಕ್ಷಿಸಬಹುದಾಗಿದೆ. ಅಕೀಬ್, ಅಬ್ದುಲ್, ಡೋಗ್ರಾ ಅವರಂತಹ ಆಟಗಾರರು ಭಾರತ ತಂಡಕ್ಕೆ ಸೇರ್ಪಡೆಯಾಗಲಿ; ಕ್ರೀಡಾ ಯಶೋಗಾಥೆಯ ಮುಲಾಮು ಕಣಿವೆ ನಾಡಿನ ಗಾಯಗಳನ್ನು ವಾಸಿ ಮಾಡಲಿ.

ಜಾಲಡಬ್ಬಿ

ಮತ್ತೆ ಮತ್ತೆ ಗಾಂಧಿ



ಜಗತ್ತಿಗೆ ಗಾಂಧೀಜಿಯ ಅಹಿಂಸೆಯ ತತ್ತ್ವದ ಅವಶ್ಯಕತೆ ಎಷ್ಟಿದೆ ಎನ್ನುವುದನ್ನು, ಪ್ರತಿ ಯುದ್ಧದಲ್ಲಿ ಜೀವ ಕಳೆದುಕೊಳ್ಳುವ ಅಮಾಯಕ ಜನರ ಸಾವುಗಳು ಮತ್ತೆ ಮತ್ತೆ ಪ್ರತಿಪಾದಿಸುತ್ತವೆ.

ಮಂಸೋರೆ, ನಿರ್ದೇಶಕ, 'ಫೇಸ್‌ಬುಕ್'ನಿಂದ

ಕಿಡಿನುಡಿ



ಕೆಲವರು ಫೋನ್ ಕದ್ದಾಲಿಕೆ ಮಾಡಿಯೂ ಪತಿವ್ರತೆಯರಂತೆ ನಡೆದುಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ, ನಾನು ಸತ್ಯವನ್ನೇ ಹೇಳುತ್ತಿದ್ದೇನೆ. ಕದ್ದಾಲಿಕೆ ಆಗಲೂ ಇತ್ತು; ಈಗಲೂ ಇದೆ.

ಎಚ್.ಡಿ. ಕುಮಾರಸ್ವಾಮಿ, ಕೇಂದ್ರ ಬೃಹತ್ ಕೈಗಾರಿಕಾ ಸಚಿವ

25 ವರ್ಷಗಳ ಹಿಂದೆ

ಶನಿವಾರ, 3-3-2001

• ನಟ ಸಾಕ್ಷಿ ಶಿವಾನಂದ 'ದ್ವಿಪಾತ್ರ' ರಹಸ್ಯ ಬಯಲು

ಕುಂದಾಪುರ, ಮಾ. 2– ಕಳೆದ ವರ್ಷದ ಯಶಸ್ವಿ ಚಿತ್ರ 'ಗಲಾಟೆ ಅಳಿಯಂದ್ರು' ಸೇರಿದಂತೆ ಕನ್ನಡ ಮತ್ತು ವಿವಿಧ ಭಾಷೆಗಳ ಸುಮಾರು 20 ಚಿತ್ರಗಳಲ್ಲಿ ನಟಿಸಿರುವ ಸಾಕ್ಷಿ ಶಿವಾನಂದ ಎಂಬ ನಟ ತನ್ನಂತೆಯೇ ಇರುವ ಅವಳಿ ಸೋದರಿಯನ್ನು ತನ್ನ ಬದಲಿಗೆ ಚಿತ್ರೀಕರಣಕ್ಕೆ ಬಳಸಿಕೊಳ್ಳುತ್ತಿದ್ದ ಕುತೂಹಲಕರ ಪ್ರಕರಣ ಬಯಲಿಗೆ ಬಂದಿದೆ.

ಸಾಕ್ಷಿಯ ಮೂಲ ಹೆಸರು ಶಿಬಾ. ಆಕೆಯಂತೆಯೇ ಕಾಣುವ ಅವಳಿ ಸೋದರಿ ಶಿಖಾ. ಈ ಶಿಬಾ–ಶಿಖಾ ಸೋದರಿಯರು 'ಸಾಕ್ಷಿ ಶಿವಾನಂದ' ಹೆಸರಿನಲ್ಲಿ ಕಳೆದ ಹತ್ತು ವರ್ಷಗಳಿಂದ ಚಿತ್ರರಂಗಕ್ಕೆ ಗೊತ್ತಾಗದಂತೆ ಏಕಪಾತ್ರದ ಅಭಿನಯದಲ್ಲಿ ಮೆರೆದಿದ್ದಾರೆ.

ಕಳೆದ ಹತ್ತು ವರ್ಷಗಳಿಂದ ರಹಸ್ಯವಾಗಿದ್ದ ಸೋದರಿಯರ 'ಅಭಿನಯ' ಶಾಸಕ ಯೋಗೀಶ್ವರ್ ನಿರ್ಮಾಣದ 'ಸೈನಿಕ' ಚಿತ್ರದ ಚಿತ್ರೀಕರಣ ಇಲ್ಲಿಗೆ ಸಮೀಪದ ಕೋಣಿ ಗ್ರಾಮದಲ್ಲಿ ಕೆ.ಎಲ್. ಮಧ್ಯಸ್ಥ ಅವರ ಮನೆಯಲ್ಲಿ ನಡೆಯುತ್ತಿರುವ ವೇಳೆ ಬಯಲಿಗೆ ಬಂದಿದೆ.

• ಬುದ್ಧನ ಶಿಲಾ ಪ್ರತಿಮೆ ಮೇಲೆ ರಾಕೆಟ್, ಗುಂಡಿನ ದಾಳಿ

ಕಾಬೂಲ್, ಮಾ.2 (ರಾಯಿಟರ್ಸ್)– ವಿಶ್ವ ಸಮುದಾಯದ ತೀವ್ರ ಪ್ರತಿಭಟನೆ ನಡುವೆಯೂ ಬಮಿಯನ್‌ನಲ್ಲಿನ ವಿಶ್ವ ವಿಖ್ಯಾತ ಬುದ್ಧನ ಶಿಲಾಪ್ರತಿಮೆಗಳ ಮೇಲೆ ಇಂದು ರಾಕೆಟ್ ದಾಳಿಯನ್ನು ನಡೆಸಿ ಗುಂಡಿನ ಮಳೆ ಸುರಿಸಲಾಯಿತು ಎಂದು ಅಧಿಕೃತ ಮೂಲಗಳು ತಿಳಿಸಿವೆ.

75 ವರ್ಷಗಳ ಹಿಂದೆ

ಶನಿವಾರ, 3-3-1951

• ಕಾಶ್ಮೀರ ಸಮಸ್ಯೆ ಎಂದಿಗೂ ಹಿಂದೂ–ಮುಸ್ಲಿಂ ಪ್ರಶ್ನೆಯಲ್ಲ

ಲೇಕ್‌ಸಕ್ಸಸ್, ಮಾ. 2– ವಿಶ್ವ ಭದ್ರತಾ ಸಮಿತಿಯ ಮುಂದೆ ಅಮೆರಿಕಾ ಮತ್ತು ಬ್ರಿಟನ್ ಮಂಡಿಸಿರುವ ಕಾಶ್ಮೀರ ಸಮಸ್ಯಾ ಪರಿಹಾರಾರ್ಥ ನಿರ್ಣಯವನ್ನು ತಿರಸ್ಕರಿಸುತ್ತ ಭಾರತದ ಪ್ರತಿನಿಧಿ ಸರ್ ಬೆನಗಲ್ ನರಸಿಂಗರಾಯರು ಮಾತನಾಡುತ್ತಾ, ಕಾಶ್ಮೀರ ಸಮಸ್ಯೆಯು ಹಿಂದೂ, ಮುಸ್ಲಿಂ ಪ್ರಶ್ನೆಯೆಂದಿಗೂ ಅಲ್ಲವೆಂದು ದೃಢಪಡಿಸಿ ನುಡಿದರು.

ಭಾರತದಲ್ಲಿರುವ ಅಲ್ಪಸಂಖ್ಯಾತರು ಯಾವ ಜನಾಂಗದವರೇ ಆಗಲಿ ಅವರ ಹಿತರಕ್ಷಣೆಯು ಈಗ ಜಾರಿಯಲ್ಲಿರುವ ಭಾರತ ರಾಜ್ಯಾಂಗದಲ್ಲಿ ನಮೂದಿಸಲ್ಪಟ್ಟಿದೆ. ಭಾರತ ಸರ್ಕಾರದ ರಚನೆಯು ಈ ವಿಚಾರದ ಬಗ್ಗೆ ಪರಿಶೀಲನಾರ್ಹ.

ಸ್ನೇಹಿತ ಸೈತಾನ ಆಗಿದ್ದು ಏಕೆ?

ಸೀಮೋಲ್ಲಂಘನ



ಸುಧೀಂದ್ರ ಬುಧ್ಯ

ಇಸ್ರೇಲ್ ಹಾಗೂ ಅಮೆರಿಕ ಜಂಟಿಯಾಗಿ ಇರಾನ್ ಮೇಲೆ ಮುಗಿಬಿದ್ದಿವೆ. ಇರಾನ್ ಮೇಲೆ ದಾಳಿ ನಡೆಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳುತ್ತಲೇ ಬಂದಿದ್ದರು. ಇದೀಗ ಅವರ ಮಾತು ಕಾರ್ಯರೂಪಕ್ಕೆ ಬಂದಿದೆ. ಇರಾನ್ ವಿರುದ್ಧ ಇಸ್ರೇಲ್ ಹಾಗೂ ಅಮೆರಿಕ ಆರಂಭಿಸಿರುವ ಯುದ್ಧ ತನ್ನ ಗುರಿಯನ್ನು ಮೊದಲ ದಿನವೇ ಸಾಧಿಸಿದೆ. ಇರಾನ್‌ನ ಪರಮೋಚ್ಚ ನಾಯಕ ಅಯಾತೊಲ್ಲಾ ಖಮೇನಿ ಹತ್ಯೆಯಾಗಿದ್ದಾರೆ.

ಇರಾನ್ ಮೇಲಿನ ದಾಳಿ ಹಾಗೂ ಖಮೇನಿ ಹತ್ಯೆಯನ್ನು ಸಮರ್ಥಿಸಿಕೊಂಡಿರುವ ಅಮೆರಿಕ ಮತ್ತು ಇಸ್ರೇಲ್, ತಮ್ಮ ಸಮರ್ಥನೆಗೆ ಎರಡು ಕಾರಣಗಳನ್ನು ನೀಡುತ್ತಿವೆ. ಇರಾನ್ ಪರಮಾಣು ಅಸ್ತ್ರ ಹೊಂದುವ ಅಂತಿಮ ಹಂತದಲ್ಲಿದೆ, ಖಮೇನಿ ಪರಮಾಣು ಒಪ್ಪಂದಕ್ಕೆ ಅಡ್ಡಿಯಾಗಿದ್ದರು ಎಂಬುದು ಮೊದಲ ಕಾರಣ. ಇಸ್ರೇಲ್ ಈ ಕುರಿತು ಹಲವು ವರ್ಷಗಳಿಂದ ಜಾಗತಿಕ ವೇದಿಕೆಗಳಲ್ಲಿ ಮಾತನಾಡುತ್ತಾ ಬಂದಿದೆ. ಕಳೆದ ವರ್ಷ ಜೂನ್‌ನಲ್ಲಿ ಇರಾನ್ ಮೇಲೆ ದಾಳಿ ನಡೆಸಿದ್ದ ಇಸ್ರೇಲ್, ಅದರ ಪರಮಾಣು ಕಾರ್ಯಕ್ರಮದ ಕೆಲವು ತಾಣಗಳನ್ನು ಹಾಗೂ ಕ್ಷಿಪಣಿ ಉತ್ಪಾದನಾ ಘಟಕಗಳನ್ನು ನಾಶಪಡಿಸಿತ್ತು. ಪ್ರಮುಖ ಮಿಲಿಟರಿ ಕಮಾಂಡರ್‌ಗಳನ್ನು ಕೊಂದಿತ್ತು. ಈ ಹಿಂದೆಯೂ ಇಸ್ರೇಲ್, ಇರಾನ್ ಮೇಲೆ ದಾಳಿ ನಡೆಸಿ ಪರಮಾಣು ಯೋಜನೆಯ ನೇತೃತ್ವವಹಿಸಿದ್ದ ಪರಮಾಣು ತಜ್ಞರನ್ನು, ವಿಜ್ಞಾನಿಗಳನ್ನು ಹತ್ಯೆ ಮಾಡಿತ್ತು. ಇರಾನ್ ಅಣ್ವಸ್ತ್ರ ಹೊಂದುವುದು ತನ್ನ ಅಸ್ತಿತ್ವಕ್ಕೆ ಮಾರಕ ಎನ್ನುವುದು ಇಸ್ರೇಲ್ ವಾದ. ಅಣ್ವಸ್ತ್ರ ತನ್ನ ಇರುವಿಕೆಗೆ ಅನಿವಾರ್ಯ ಎನ್ನುವುದು ಇರಾನಿನ ವಾದ. ಆರ್ಥಿಕ ನಿರ್ಬಂಧ, ಇಸ್ರೇಲಿನ ದಾಳಿ, ಅಮೆರಿಕದ ಬೆದರಿಕೆ, ತನ್ನದೇ ಆರ್ಥಿಕ ಸಂಕಷ್ಟ, ಎಲ್ಲವನ್ನೂ ಮೀರಿ ಅಣ್ವಸ್ತ್ರ ಹೊಂದುವ ನಿಟ್ಟಿನಲ್ಲಿ ಇರಾನ್ ಮುಂದಡಿ ಇಡುತ್ತಿದೆ.

ಇರಾನಿನ ಆರ್ಥಿಕ ಕುಸಿತಕ್ಕೆ ಮತ್ತು ಅಲ್ಲಿನ ಜನರ ದುಃಸ್ಥಿತಿಗೆ ಖಮೇನಿ ಅವರ ದಮನಕಾರಿ ಆಡಳಿತ ನೀತಿ ಕಾರಣ, ತಾನು ಇರಾನ್ ಜನರನ್ನು ದುರಾಡಳಿತದಿಂದ ರಕ್ಷಿಸುವ ಕೆಲಸ ಮಾಡಿದ್ದೇನೆ ಎಂದು ಅಮೆರಿಕ ಹೇಳಿಕೊಳ್ಳುತ್ತಿದೆ. ಹಾಗಾಗಿಯೇ, ಖಮೇನಿ ಹತ್ಯೆಯನ್ನು ಘೋಷಿಸುವ ಜೊತೆಗೆ, ಆಡಳಿತದ ಬದಲಾವಣೆಗೆ ಇದು ಸಕಾಲ ಎಂದು ಇರಾನ್ ಜನತೆಗೆ ಟ್ರಂಪ್ ಕರೆ ನೀಡಿದ್ದಾರೆ. ಹಾಗಾದರೆ, ಇರಾನ್ ಮೇಲಿನ ದಾಳಿಗೆ ಮತ್ತು ಖಮೇನಿ ಹತ್ಯೆಗೆ ಇದಿಷ್ಟೇ ಕಾರಣವೇ? ಇತಿಹಾಸದ ಪುಟಗಳನ್ನು ತಿರುವಿದರೆ ಇತರ ಆಯಾಮಗಳು ಕಾಣುತ್ತವೆ.

19ನೆಯ ಶತಮಾನದ ಅಂತ್ಯದ ವೇಳೆಗೆ ಬ್ರಿಟಿಷರು ಖುಜೆಸ್ತಾನ್‌ನಲ್ಲಿ ಪೆಟ್ರೋಲಿಯಂ ಕಂಡುಕೊಂಡ ನಂತರ, ಪರ್ಷಿಯಾದಲ್ಲಿ ತೀವ್ರವಾದ ಆಸಕ್ತಿ ಬೆಳೆಸಿಕೊಂಡರು. ಸೋವಿಯತ್ ರಷ್ಯಾ ಕೂಡ ಪಶ್ಚಿಮ ಏಷ್ಯಾದಲ್ಲಿ ಹಿಡಿತ ಕಾಯ್ದುಕೊಂಡಿತು. ಎಷ್ಟರ ಮಟ್ಟಿಗೆ ಎಂದರೆ, ಇರಾನ್‌ನ ಆಡಳಿತದ ಮುಖ್ಯ ನೇಮಕಾತಿಗಳಿಗೆ ಆಂಗ್ಲೊ–ರಷ್ಯನ್ ಅನುಮೋದನೆ ಅನಿವಾರ್ಯವಾಗಿತ್ತು. 1925ರಲ್ಲಿ ಖಜರ್ ರಾಜವಂಶವನ್ನು ಪದಚ್ಯುತಗೊಳಿಸಿ ಆಡಳಿತದ ಚುಕ್ಕಾಣಿ ಹಿಡಿದ ರೆಜಾ ಖಾನ್, ಪಹ್ಲವಿ ರಾಜವಂಶವನ್ನು ಸ್ಥಾಪಿಸಿ ಮೊದಲ ಷಾ ಆದರು. ರೆಜಾ ಷಾ 16 ವರ್ಷಗಳ ಆಳ್ವಿಕೆ ನಡೆಸಿದರು. ರೆಜಾ ಷಾ ಅನೇಕ ಸಾಮಾಜಿಕ–ಆರ್ಥಿಕ ಸುಧಾರಣೆ ತಂದರು. ಅವರ ಬಳಿಕ ಆತನ ಮಗ ಮೊಹಮ್ಮದ್ ರೆಜಾ ಪಹ್ಲವಿ ಇರಾನಿನ ಸಾರಥ್ಯ ವಹಿಸಿಕೊಂಡರು.

ಮೊಹಮ್ಮದ್ ರೆಜಾ ಷಾ ಪಹ್ಲವಿ 'ಶ್ವೇತ ಕ್ರಾಂತಿ' ಸುಧಾರಣೆಗಳನ್ನು ಮುಂದುವರಿಸಿದರು. ಆದರೆ, ಆಡಳಿತದ ದಮನಕಾರಿ ನೀತಿ ಕಪ್ಪುಚುಕ್ಕೆಯಾಗಿತ್ತು. ತನ್ನ ಹಿತಾಸಕ್ತಿಗಳಿಗೆ ಪೂರಕವಾಗಿದ್ದ ಕಾರಣ ಷಾ ಬೆಂಬಲಕ್ಕೆ ಅಮೆರಿಕ ನಿಂತಿತು. ಸ್ನೇಹ ಒಪ್ಪಂದಕ್ಕೆ ಸಹಿ ಹಾಕಿತು ಮತ್ತು ಪರಮಾಣು ಸಾಮರ್ಥ್ಯ ವೃದ್ಧಿಸಿಕೊಳ್ಳಲು ಸಹಾಯ ಮಾಡಿತು. ಇರಾನಿಗೆ ಪರಮಾಣು ಅಸ್ತ್ರ ಹೊಂದುವ ಕನಸು ತುಂಬಿದ್ದೇ ಅಮೆರಿಕ. ಇದು ಪಶ್ಚಿಮ ಏಷ್ಯಾದಲ್ಲಿ ಸೋವಿಯತ್ ಪ್ರಭಾವ ಕುಗ್ಗಿಸುವ ಅಮೆರಿಕದ ತಂತ್ರವಾಗಿತ್ತು.

> ಇರಾನ್ ಮೇಲೆ ಮುಗಿಬಿದ್ದಿರುವ ಅಮೆರಿಕ ಮತ್ತು ಇಸ್ರೇಲ್ ತಮ್ಮ ದಾಳಿಗೆ ನೀಡಿರುವ ಪ್ರಮುಖ ಕಾರಣ, ಅಣ್ವಸ್ತ್ರ ಹೊಂದದಂತೆ ಇರಾನ್ ಅನ್ನು ತಡೆಯುವುದು. ಆದರೆ, ಇರಾನ್‌ನ ಅಣ್ವಸ್ತ್ರದ ಕನಸಿಗೆ ಮೊದಲು ನೀರೆರೆದಿದ್ದೇ ಅಮೆರಿಕ! ಈಗ, ತನ್ನ ಆರ್ಥಿಕ ವರ್ಚಸ್ಸು ಹೆಚ್ಚಿಸಿಕೊಳ್ಳಲು ತೈಲ ಸಂಪನ್ಮೂಲಗಳನ್ನು ಹೊಂದಿರುವ ದೇಶಗಳನ್ನು ಅಂಕೆಯಲ್ಲಿ ಇಟ್ಟುಕೊಳ್ಳಲು ಮುಂದಾಗಿದೆ.

1951ರಲ್ಲಿ ಇರಾನ್ ಪ್ರಧಾನಿ ಮೊಸಡೆಗ್ ತೈಲ ಉದ್ಯಮವನ್ನು ರಾಷ್ಟ್ರೀಕರಣಗೊಳಿಸುವ ಮಹತ್ವದ ಕೆಲಸ ಮಾಡಿದರು. ವಿದೇಶಿ ಶೋಷಣೆ ತಡೆಯುವ ಮತ್ತು ಇರಾನಿನ ನೈಸರ್ಗಿಕ ಸಂಪನ್ಮೂಲಗಳ ಮೇಲೆ ಸಾರ್ವಭೌಮತ್ವ ಸಾಧಿಸುವ ಕ್ರಮ ಅದಾಗಿತ್ತು. ಅದರಿಂದ ಬ್ರಿಟನ್ ಮೂಲದ ತೈಲ ಕಂಪನಿಗಳಿಗೆ ಹೊಡೆತ ಬಿತ್ತು. ಬ್ರಿಟನ್ ಮತ್ತು ಅಮೆರಿಕ ಇರಾನ್‌ನಲ್ಲಿ ದಂಗೆಯನ್ನು ಪ್ರಾಯೋಜಿಸಿ, ಪ್ರಧಾನಿ ಮೊಸಡೆಗ್ ಅವರನ್ನು ಪದಚ್ಯುತಗೊಳಿಸಿದವು. ಇದರಿಂದಾಗಿ ಇರಾನ್‌ನಲ್ಲಿ ಅಮೆರಿಕ ಕುರಿತು ಅಪನಂಬಿಕೆ ಮೊಳೆಯಿತು. ಷಾ ಆಡಳಿತ ರಾಷ್ಟ್ರದ ಹಿತಾಸಕ್ತಿಯನ್ನು ಬದಿಗೊತ್ತಿ ಅಮೆರಿಕದ ತಾಳಕ್ಕೆ ಕುಣಿಯುತ್ತಿದೆ ಎಂಬ ಅಭಿಪ್ರಾಯ ಮೂಡಿತು. 1979ರ ಇಸ್ಲಾಮಿಕ್ ಕ್ರಾಂತಿಗೆ ಭೂಮಿಕೆ ಸಿದ್ಧವಾಯಿತು. ಇಸ್ಲಾಮಿಕ್ ಕ್ರಾಂತಿಯಿಂದಾಗಿ ಮೊಹಮ್ಮದ್ ರೆಜಾ ಪಹ್ಲವಿ ದೇಶ ತೊರೆಯಬೇಕಾಯಿತು. ಮತೀಯ ಗುರು ಅಯಾತೊಲ್ಲಾ ರುಹೊಲ್ಲಾ ಖಮೇನಿ ಇರಾನಿನ ಪರಮೋಚ್ಚ ನಾಯಕರಾದರು. ಖಮೇನಿ ಪ್ರಭುತ್ವ ಅಮೆರಿಕವನ್ನು 'ಮಹಾ ಸೈತಾನ' ಎಂದು ಕರೆಯಿತು.

1979ರಲ್ಲಿ ಇರಾನಿನ ವಿದ್ಯಾರ್ಥಿಗಳು ಅಮೆರಿಕದ ರಾಯಭಾರ ಕಚೇರಿಯನ್ನು ವಶಪಡಿಸಿಕೊಂಡು ರಾಜತಾಂತ್ರಿಕರನ್ನು 444 ದಿನಗಳ ಕಾಲ ಒತ್ತೆಯಾಳಾಗಿ ಇರಿಸಿಕೊಂಡರು. ಅಲ್ಲಿಂದ ಇರಾನ್ ಮತ್ತು ಅಮೆರಿಕದ ನಡುವೆ ವೈರತ್ವ ಹೆಚ್ಚಾಯಿತು. 1980ರ ದಶಕದ ಇರಾನ್–ಇರಾಕ್ ಯುದ್ಧದ ಸಮಯದಲ್ಲಿ, ಅಮೆರಿಕ ಇರಾಕ್ ಅನ್ನು ಬೆಂಬಲಿಸಿತು. ಇರಾನ್ ಅನ್ನು ಭಯೋತ್ಪಾದನೆಯ ಪ್ರಾಯೋಜಕ ರಾಷ್ಟ್ರ ಎಂದು ಘೋಷಿಸಿತು. ಆರ್ಥಿಕ ದಿಗ್ಬಂಧನ ಹೇರಿತು. ತೈಲ ಸಂಪನ್ಮೂಲದ ರಕ್ಷಣೆಗೆ, ಅಮೆರಿಕ, ಇಸ್ರೇಲ್, ಸೌದಿ, ಜೋರ್ಡಾನ್ ಹಾಗೂ ಯುಎಇ ಜೊತೆಗಿನ ವೈರತ್ವವನ್ನು ನಿಭಾಯಿಸಲು ಅಣ್ವಸ್ತ್ರ ಅಗತ್ಯ ಎಂದು ಪರಮಾಣು ಯೋಜನೆಯನ್ನು ಇರಾನ್ ಮುಂದುವರಿಸಿತು. 2014ರ ಹೊತ್ತಿಗೆ ಇರಾನ್‌ನ ಅಣ್ವಸ್ತ್ರ ಯೋಜನೆ ಕೊನೆಯ ಹಂತ ತಲಪಿತ್ತು. ಆಗ ಇಸ್ರೇಲ್ ಮತ್ತು ಅಮೆರಿಕ ಎಚ್ಚರಗೊಂಡವು. ಇರಾನ್‌ನ ಆರ್ಥಿಕ ದುಃಸ್ಥಿತಿಯನ್ನು ಮುಂದುಮಾಡಿಕೊಂಡು ಇರಾನ್ ಜೊತೆಗೆ ಅಮೆರಿಕ ಮಾತುಕತೆ ನಡೆಸಿತು.


ಒಬಾಮ ಅವರ ಅವಧಿಯಲ್ಲಿ ಪರಮಾಣು ಒಪ್ಪಂದಕ್ಕೆ ಇರಾನ್ ಸಹಿ ಹಾಕಿತು. ಆದರೆ, ಟ್ರಂಪ್ ಅವರ ಮೊದಲ ಅಧ್ಯಕ್ಷೀಯ ಅವಧಿಯಲ್ಲಿ ಇರಾನ್ ಜೊತೆಗಿನ ಒಪ್ಪಂದವನ್ನು ಅಮೆರಿಕ ಅನೂರ್ಜಿತಗೊಳಿಸಿತು. ಅದಕ್ಕೆ ಪ್ರಮುಖ ಕಾರಣ, ಅಮೆರಿಕದಲ್ಲಿ ಪ್ರಭಾವ ಹೊಂದಿರುವ ಇಸ್ರೇಲ್ ಪರ ಲಾಬಿ ಮತ್ತು ಇರಾನ್ ತೆರೆಮರೆಯಲ್ಲಿ ನಡೆಸಿದ್ದ ಅಣ್ವಸ್ತ್ರ ಹೊಂದುವ ಪ್ರಯತ್ನ. ಬೈಡನ್ ಅವರ ಅವಧಿಯಲ್ಲಿ ಮಾತುಕತೆಯ ಮೂಲಕ ಪರಮಾಣು ಕಾರ್ಯಕ್ರಮವನ್ನು ನಿಲ್ಲಿಸುವಂತೆ ಇರಾನ್ ಮನವೊಲಿಸುವ ಪ್ರಯತ್ನ ಆಯಿತಾದರೂ, ಅದು ಯಶಸ್ಸು ಕಾಣಲಿಲ್ಲ. ಚೀನಾಕ್ಕೆ ಹೆಚ್ಚಿನ ತೈಲ ಪೂರೈಸುತ್ತಾ, ಚೀನಾದ ಜೊತೆಗೆ ಸಂಬಂಧ ಬಲಪಡಿಸಿಕೊಂಡ ಇರಾನ್, ಪರಮಾಣು ಕಾರ್ಯಕ್ರಮದ ರಭಸ ಹೆಚ್ಚಿಸಿತು. ಅಮೆರಿಕದ ಆರ್ಥಿಕ ದಿಗ್ಬಂಧನವನ್ನು ಉಪೇಕ್ಷಿಸಿತು.

ಇರಾನ್ ಅಣ್ವಸ್ತ್ರ ಹೊಂದುವುದನ್ನು ತಡೆಯಲು ಇದ್ದ ಮಾರ್ಗಗಳು ಎರಡು. ಒಂದು, ನೇರವಾಗಿ ದಾಳಿ ನಡೆಸುವುದು. ಇದನ್ನು ಇಸ್ರೇಲ್ ಆಯ್ದುಕೊಂಡಿತು. ಮತ್ತೊಂದು, ಖಮೇನಿ ಆಡಳಿತವನ್ನು ಕೊನೆಗೊಳಿಸುವುದು ಮತ್ತು ಮಾತುಕತೆಯ ಮೇಜಿಗೆ ಇರಾನನ್ನು ಎಳೆಯುವುದು. ಅಮೆರಿಕ ಎರಡನೆಯ ಮಾರ್ಗಕ್ಕೆ ಒತ್ತು ನೀಡಿತು. ಕಳೆದ ಹಲವು ತಿಂಗಳಿನಿಂದ ಇರಾನಿನಲ್ಲಿ ನಡೆದ ನಾಗರಿಕರ ಹರತಾಳಕ್ಕೆ ಅಮೆರಿಕದ ಪ್ರಚೋದನೆ ಇತ್ತು. ಖಮೇನಿ ಆಡಳಿತ ಆ ಪ್ರತಿಭಟನೆಗಳನ್ನು ನಿಗ್ರಹಿಸಿತು. ಅಮೆರಿಕ ಹಿಂಬಾಗಿಲಿನ ಮೂಲಕ ಮಾತುಕತೆಯ ಪ್ರಯತ್ನ ನಡೆಸಿತಾದರೂ, ಖಮೇನಿ ಆಡಳಿತ ಮಾತುಕತೆಯಲ್ಲಿ ತೊಡಗಿಯೂ ಸಮರಕ್ಕೆ ಸಿದ್ಧಗೊಳ್ಳತೊಡಗಿತು ಮತ್ತು ಪರಮಾಣು ಕಾರ್ಯಕ್ರಮವನ್ನು ಮುಂದುವರಿಸಿತು. ಹಾಗಾಗಿ ಖಮೇನಿ ಅವರ ನಿವಾಸ ಅಮೆರಿಕದ ಗುರಿಯಾಯಿತು. ಈಗ ಖಮೇನಿ ಹತ್ಯೆ ನಡೆದಿದೆ. ಮುಂದೇನು?

ಅಮೆರಿಕಕ್ಕೆ ಇರಾನ್‌ನಲ್ಲಿ ತನ್ನ ಹಿತಾಸಕ್ತಿಗೆ ಪೂರಕವಾಗಿ ಕೆಲಸ ಮಾಡುವ ಸರ್ಕಾರ ಬೇಕಿದೆ. ಅಂತಹ ಸರ್ಕಾರವನ್ನು ಅಸ್ತಿತ್ವಕ್ಕೆ ತರುವ ನಿಟ್ಟಿನಲ್ಲಿ ಅಮೆರಿಕ ಕೆಲಸ ಮಾಡುತ್ತದೆ. ಪರಮಾಣು ಕಾರ್ಯಕ್ರಮಕ್ಕೆ ತಡೆಯಾದರೆ ಅಷ್ಟರ ಮಟ್ಟಿಗೆ ಇಸ್ರೇಲ್ ನಿರಾಳ. ಇರಾನ್ ಜನತೆ ತಮಗೆ ಯಾವ ಬಗೆಯ ಆಡಳಿತ ಬೇಕು ಎಂದು ನಿರ್ಧರಿಸಬೇಕಿದೆ. ಅದು ಎಷ್ಟರಮಟ್ಟಿಗೆ ಸಾಧ್ಯವಾಗುತ್ತದೆ ಎಂಬುದನ್ನು ಕಾದು ನೋಡಬೇಕು.

ಒಂದಂತೂ ನಿಜ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ 'ಮೇಕ್ ಅಮೆರಿಕ ಗ್ರೇಟ್ ಎಗೈನ್' ನೀತಿಯ ಪ್ರಮುಖ ಆಶಯ, ಜಾಗತಿಕವಾಗಿ ಅಮೆರಿಕದ ಹಿಡಿತವನ್ನು ಪುನರ್ ಸ್ಥಾಪಿಸುವುದು. ಆ ಆಶಯ ಸಾಧ್ಯವಾಗಬೇಕಾದರೆ, ತೈಲ ಸಂಪನ್ಮೂಲಗಳ ಮೇಲೆ ಅಮೆರಿಕ ತನ್ನ ಹಿಡಿತವನ್ನು ಪುನಃ ಸಾಧಿಸಬೇಕು ಮತ್ತು ಅಮೆರಿಕದ ಡಾಲರ್ ಮೇಲಿನ ಅವಲಂಬನೆ ಜಾಗತಿಕವಾಗಿ ಹೆಚ್ಚಬೇಕು. ಆ ನಿಟ್ಟಿನಲ್ಲಿಯೇ ಈಗ ಅಮೆರಿಕ ಮುಂದಡಿ ಇಡುತ್ತಿದೆ. ಅಮೆರಿಕದ ಲೆಕ್ಕಾಚಾರದಂತೆಯೇ ವೆನೆಜುವೆಲಾ ಬಳಿಕ ಇರಾನ್‌ನಲ್ಲಿ ಈ ಬೆಳವಣಿಗೆಗಳು ನಡೆದಿವೆ.

ತೈಲ ಸಂಪದ್ಭರಿತ ರಾಷ್ಟ್ರಗಳ ಆಡಳಿತವನ್ನು ಬುಡಮೇಲು ಮಾಡುವ, ಅಲ್ಲಿನ ಪರಮೋಚ್ಚ ನಾಯಕರನ್ನು ಕೊಲ್ಲುವ ಅಮೆರಿಕದ ತಂತ್ರ ಬಹಳ ಹಳೆಯದು. ಕುಗ್ಗುತ್ತಿರುವ ಅಮೆರಿಕದ ಪ್ರತಿಷ್ಠೆಯನ್ನು ಎತ್ತಿ ಹಿಡಿಯಲು ಆ ತಂತ್ರವನ್ನೇ ಟ್ರಂಪ್ ಬಳಸುತ್ತಿದ್ದಾರೆ.



ವಾಚಕರ ವಾಣಿ

ಲೋಕದಿಂದ ಯುದ್ಧೋನ್ಮಾದ ತೊಲಗಲಿ

ಬಣ್ಣಗಳ ಹಬ್ಬ ಹೋಳಿ ಮತ್ತು ರಣದಾಹಿ ನಾಯಕರ ರಕ್ತದೋಕುಳಿ – ಎರಡೂ ದೃಶ್ಯಗಳನ್ನು ಒಂದೇ ಸಮಯದಲ್ಲಿ ಕಣ್ತುಂಬಿಕೊಳ್ಳುವಂತಾಗಿದೆ. ನಾವೆಲ್ಲರೂ ಭೂಮಿಯ ಸಮಸ್ಯೆಗಳಿಗೆ ತಂತ್ರಜ್ಞಾನ ಪರಿಹಾರವೆಂದು ನಂಬಿದ್ದೇವೆ; ಅದರ ಕೊಂಡಿಯಾಗಿ ದುಡಿಯುತ್ತಿದ್ದೇವೆ. ಇದಕ್ಕೆ ವ್ಯತಿರಿಕ್ತವಾಗಿ ತಂತ್ರಜ್ಞಾನ ಸುಧಾರಿಸಿದಂತೆ ಜಾಗತಿಕ ಹಿಂಸೆ, ಯುದ್ಧ, ಲೂಟಿಕೋರತನ ಹೆಚ್ಚುತ್ತಿದೆ.

ಯಾವುದೋ ದೇಶದ ಮೂಲೆಯಲ್ಲಿ ಸಿಡಿದ ಪರಮಾಣು ಸಿಡಿತಲೆ, ನಮ್ಮೂರಿನ ಕೆರೆ ತುಂಬ ಬೇಕೋ ಬೇಡವೋ ಎಂಬುದನ್ನು ನಿರ್ಧರಿಸುತ್ತದೆ. ಮಳೆ, ಚಳಿ, ಬಿಸಿಲು ವಾತಾವರಣದ ವ್ಯತ್ಯಯದಿಂದಲೇ ಸಂಭವಿಸುವುದರಿಂದ ಎಲ್ಲಿಯೋ ಯುದ್ಧದ ಮಾಲಿನ್ಯ ನಮ್ಮ ಭವಿಷ್ಯ ನಿರ್ಧರಿಸುತ್ತದೆ. ಮನುಷ್ಯತ್ವದ ಪರ ಎನ್ನುವ ವ್ಯಕ್ತಿ–ಗಡಿಗಳು ಒಟ್ಟಾಗಿ ಯುದ್ಧವನ್ನು ವಿರೋಧಿಸದಿದ್ದರೆ, ಮುಂದೊಂದು ದಿನ ವಿರೋಧಿಸುವವರೇ ಇಲ್ಲವಾಗಿ ಎಲ್ಲಾ ಗಡಿಗಳೂ ಯುದ್ಧಗಳಿಗೆ ಮುಕ್ತವಾಗಿರುತ್ತವೆ. ಕೊನೆಗೆ ಉಳಿಯುವವರಿಬ್ಬರೇ: ಯುದ್ಧಪೀಡಕ ಮತ್ತು ಯುದ್ಧಪೀಡಿತ.

ಶಾಂತರಾಜು ಎಸ್., ಬೆಂಗಳೂರು

ಕಾಯಕಲ್ಪ ನಿರೀಕ್ಷೆಯಲ್ಲಿ ಗ್ರಂಥಾಲಯಗಳು

ರಾಜ್ಯ ಸರ್ಕಾರದ ನಿರ್ಲಕ್ಷ್ಯದಿಂದ ಗ್ರಂಥಾಲಯ ಇಲಾಖೆಯ ನಿರ್ವಹಣೆ ಮತ್ತು ಪುಸ್ತಕಗಳ ಖರೀದಿ ಪ್ರಕ್ರಿಯೆ ಸೊರಗುತ್ತಿದೆ. ಜಿಲ್ಲೆ, ತಾಲ್ಲೂಕು ಮತ್ತು ಗ್ರಾಮ ಪಂಚಾಯಿತಿಮಟ್ಟದ ಗ್ರಂಥಾಲಯಗಳ ಸ್ಥಿತಿ ಹೇಳತೀರದು. ತಮಗೆ ಹೆಚ್ಚು ಓಟು ಬಾರದಿರುವ ಗ್ರಾಮಗಳ ಬಗ್ಗೆ ಜನಪ್ರತಿನಿಧಿಗಳಿಗೆ ತಾತ್ಸಾರ. ಊರನ್ನೇ ನಿರ್ಲಕ್ಷಿಸುವವರಿಗೆ ಅಲ್ಲಿನ ಗ್ರಂಥಾಲಯದ ಅಭಿವೃದ್ಧಿ ಮುಖ್ಯವಾದೀತೆ? ಇದಕ್ಕೆ ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡ ಕೇಂದ್ರ ಗ್ರಂಥಾಲಯ ನಿದರ್ಶನದಂತಿದೆ. ರಾಜ್ಯದ ಇತರೆ ಗ್ರಂಥಾಲಯಗಳ ಸ್ಥಿತಿಯೂ ಇದಕ್ಕಿಂತ ಭಿನ್ನವಾಗಿಲ್ಲ. ಇದು ವಿದ್ಯಾರ್ಥಿಗಳ ವ್ಯಕ್ತಿತ್ವ ವಿಕಸನದ ಮೇಲೆ ಗಂಭೀರ ಪರಿಣಾಮ ಬೀರಲಿದೆ.

ಸಂಜೀವ ಅಲದಿ, ಗುಳೇದಗುಡ್ಡ

ಕುರ್ಚಿ ಕಲಹ: ರಾಜ್ಯದ ಪ್ರಗತಿ ಮರೀಚಿಕೆ

'**ಕಥೆ** ಅದೇ, ನಟರಷ್ಟೇ ಬೇರೆ' ಲೇಖನವು (ಲೇ: ವೈ.ಎಸ್.ವಿ. ದತ್ತ, ಪ್ರ.ವಾ., ಮಾ. 2) ಸಕಾಲಿಕವಾಗಿದೆ. ರಾಜ್ಯದಲ್ಲಿ ಅಧಿಕಾರಕ್ಕಾಗಿ ಕಿತ್ತಾಟ ನಡೆಸುತ್ತಿರುವುದು ಮುಗಿಯದ ಅಧ್ಯಾಯ ಎಂಬಂತೆ ಗೋಚರವಾಗುತ್ತಿದೆ. ಕಾಂಗ್ರೆಸ್ ನಾಯಕರ ಕುರ್ಚಿ ಕಿತ್ತಾಟದಿಂದ ಸಮಯ ವ್ಯರ್ಥವೇ ಹೊರತು, ರಾಜ್ಯಕ್ಕೇನೂ ಉಪಯೋಗವಿಲ್ಲ. ಅಧಿಕಾರ ಶಾಶ್ವತವಲ್ಲ. ಮೈಮರೆತರೆ ಚುನಾವಣೆಯಲ್ಲಿ ಮತದಾರ ಪಾಠ ಕಲಿಸದೆ ಬಿಡುವುದಿಲ್ಲ. ಹಾಗಾಗಿ, ಕಾಂಗ್ರೆಸ್ ಧುರೀಣರು ಇತಿಹಾಸದಿಂದ ಪಾಠ ಕಲಿಯಬೇಕಾದದ್ದು ಬಹಳಷ್ಟಿದೆ.

ಹಕೀಮ್, ತೀರ್ಥಹಳ್ಳಿ

ಅಸ್ಪೃಶ್ಯತೆ: ಕ್ರಮ ಬೇಕು, ಪರ್ಯಾಯವಲ್ಲ

ಗದಗ ಜಿಲ್ಲೆಯ ಸಿಂಗಟಾಲೂರಿನಲ್ಲಿ ದಲಿತರಿಗೆ ಕ್ಷೌರ ಮಾಡಲು ನಿರಾಕರಿಸಲಾಗಿದೆ. ಕ್ಷೌರದಂಗಡಿಯವರ ಮೇಲೆ ಕ್ರಮಕೈಗೊಳ್ಳುವುದು ಸರ್ಕಾರದ ಜವಾಬ್ದಾರಿ. ಆದರೆ, ಸ್ಥಳೀಯ ಗ್ರಾಮ ಪಂಚಾಯಿತಿ, ಕಂದಾಯ ಇಲಾಖೆ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಪ್ರತ್ಯೇಕ ಕ್ಷೌರದಂಗಡಿ ತೆರೆದು ಬೇರೆ ಗ್ರಾಮದ ಕ್ಷೌರಿಕನನ್ನು ನಿಯುಕ್ತಿ ಮಾಡಿರುವುದು ಸಂವಿಧಾನಕ್ಕೆ ಮಾಡಿದ ಅಪಮಾನ. ಅಧಿಕಾರಿಗಳು ಜಾತಿ ತಾರತಮ್ಯ ಮಾಡುವವರ ಮೇಲೆ ಕ್ರಮಕೈಗೊಂಡು ಸಂವಿಧಾನದ ಘನತೆ ಎತ್ತಿ ಹಿಡಿಯುವ ಕೆಲಸ ಮಾಡಬೇಕು. ದಲಿತರಿಗೆ ಮಂದಿರ ಪ್ರವೇಶ ನಿರಾಕರಿಸಿದರೆ ಮತ್ತೊಂದು ಮಂದಿರ ಕಟ್ಟುವುದು, ನೀರು ತುಂಬಲು ಬಿಡದಿದ್ದರೆ ಮತ್ತೊಂದು ಕೆರೆ, ಬಾವಿ ತೋಡುವುದು ಸರಿಯಲ್ಲ. ಅಸ್ಪೃಶ್ಯತೆ ನಿವಾರಣೆಯ ಬದಲಾಗಿ ಅದನ್ನು ಸರ್ಕಾರವೇ ಪೋಷಿಸಿದಂತಾಗುತ್ತದೆ.

ಮಲ್ಲಿಕಾರ್ಜುನ ಹೆಗ್ಗಳಗಿ, ಮುಧೋಳ

ನಿರುದ್ಯೋಗ ಹೆಚ್ಚಳ: ಯುವಜನ ಹೈರಾಣು

ದೇಶ ಮತ್ತು ರಾಜ್ಯದಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಆದರೆ, ಸರ್ಕಾರಗಳಿಂದ ಹೊಸ ಉದ್ಯೋಗಗಳನ್ನು ಸೃಷ್ಟಿಸುವ ಕೆಲಸವಾಗುತ್ತಿಲ್ಲ. ಚುನಾವಣೆ ಸಂದರ್ಭದಲ್ಲಿ ರಾಜಕೀಯ ಪಕ್ಷಗಳು ಕೋಟಿ ಕೋಟಿ ಉದ್ಯೋಗಗಳನ್ನು ಸೃಷ್ಟಿಸುವುದಾಗಿ ಆಶ್ವಾಸನೆ ನೀಡುತ್ತವೆ. ಮತ ಪಡೆದು ಅಧಿಕಾರಕ್ಕೆ ಬಂದ ನಂತರ ಉದ್ಯೋಗ ಸೃಷ್ಟಿ ಮಾಡುವುದಿಲ್ಲ. ಇದರಿಂದ ನಿರುದ್ಯೋಗ ಸಮಸ್ಯೆ ತಾಂಡವವಾಡುತ್ತಿದೆ. ಶ್ರೀಮಂತರು ಮತ್ತು ರಾಜಕಾರಣಿಗಳ ಮಕ್ಕಳು ವಿದೇಶಗಳಲ್ಲಿ ವಿದ್ಯಾಭ್ಯಾಸ ಮಾಡಿ ಅಲ್ಲಿಯೇ ಉದ್ಯೋಗ ಗಿಟ್ಟಿಸಿಕೊಂಡು ಐಷಾರಾಮಿ ಜೀವನ ನಡೆಸುತ್ತಿದ್ದಾರೆ. ಬಡವರ ಮಕ್ಕಳು ಉನ್ನತ ಶಿಕ್ಷಣ ಅಥವಾ ವೃತ್ತಿಪರ ಶಿಕ್ಷಣ ಪಡೆದರೂ ಅರ್ಹತೆಗೆ ತಕ್ಕಂತೆ ಉದ್ಯೋಗವಿಲ್ಲದೆ ಅತಂತ್ರ ಸ್ಥಿತಿಯಲ್ಲಿದ್ದಾರೆ. ಅವರ ಕುಟುಂಬಗಳಿಗೆ ಆಸರೆ ಇಲ್ಲದಂತಾಗಿದೆ. ಯುವಜನತೆ ಘನತೆಯ ಬದುಕು ನಡೆಸಲು ಉದ್ಯೋಗದ ಹಕ್ಕು ನೀಡುವುದು ಸರ್ಕಾರಗಳ ಜವಾಬ್ದಾರಿ. ಕೇಂದ್ರ ಮತ್ತು ರಾಜ್ಯ ಸರ್ಕಾರವು ಖಾಲಿ ಇರುವ ಉದ್ಯೋಗಗಳ ಭರ್ತಿಗೆ ಮುಂದಾಗಲಿ.

ಮಹೇಶ್ ಕೂದುವಳ್ಳಿ, ಚಿಕ್ಕಮಗಳೂರು

'ಬಾಲ್ಯದ ನಂದನ' ಕಮರಿಸುವ ವಿವಾಹ

ಸಮಾಜ ಮುಂದುವರಿದಿದೆ ಎಂದು ಬೀಗಿದರೂ ಬಾಲ್ಯವಿವಾಹದ ಕಪಿಮುಷ್ಟಿ ಇಂದಿಗೂ ಸಡಿಲಗೊಂಡಿಲ್ಲ. ಮೈಸೂರಿನಂತಹ ಸಾಂಸ್ಕೃತಿಕ ಜಿಲ್ಲೆಯಲ್ಲೇ ಒಂದೂ ಗ್ರಾಮ ಪಂಚಾಯಿತಿ 'ಬಾಲ್ಯವಿವಾಹ ಮುಕ್ತ'ವೆಂದು (ಪ್ರ.ವಾ., ಮಾ. 2) ಘೋಷಿಸಿಕೊಳ್ಳಲು ಸಾಧ್ಯವಾಗಿಲ್ಲವೆಂದರೆ ನಾವು ಸೋತಿರುವುದಾದರೂ ಎಲ್ಲಿ? ಆಟ ಆಡುವ ವಯಸ್ಸಿನಲ್ಲಿ ಹಸೆಮಣೆ ಏರಿಸುವುದು ಹೆಣ್ಣುಮಕ್ಕಳ ಕನಸುಗಳಿಗೆ ಕೊಳ್ಳಿ ಇಟ್ಟಂತೆ. ಶಿಕ್ಷಣದಿಂದ ವಂಚಿತರಾಗುವ ಈ ಹೆಣ್ಣುಮಕ್ಕಳ ಮೌನರೋದನಕ್ಕೆ ಸಮಾಜವೇ ಉತ್ತರಿಸಬೇಕಿದೆ. ಬದಲಾವಣೆ ಬರೀ ಕಡತಗಳಲ್ಲಿದ್ದರೆ ಸಾಲದು; ಪ್ರತಿಯೊಬ್ಬರ ಮನಃಸ್ಥಿತಿಯೂ ಬದಲಾಗಬೇಕಿದೆ.

ಗೌರಿ ತ್ರಿವೇಣಿ, ಹೊಸಪೇಟೆ

ಚುರುಮುರಿ



ಬಜೆಟ್ ಭಾಗ್ಯ

• ಡಿ.ಎಸ್. ಲಿಂಗರಾಜು

'**ಗೌರವಾನ್ವಿತ** ಸಭಾಧ್ಯಕ್ಷರೇ, 2026–27ನೇ ಸಾಲಿನ ಬಜೆಟ್ಟನ್ನು ಹಣಕಾಸು ಸಚಿವನಾದ ನಾನು ಸದನದ ಮುಂದಿಡುತ್ತಿದ್ದೇನೆ.

'ಬೆಳಕಿನಿಂದ ಕತ್ತಲೆಯೆಡೆಗೆ ಪಯಣ ನಮ್ಮ ಗುರಿ. ಇದೇ ಮಾದರಿಯಲ್ಲಿ ರಾಜ್ಯದ ಗ್ಯಾರಂಟಿಗಳ ಪರಿಣಾಮದ ವಿತ್ತೀಯ ಕೊರತೆಯನ್ನು ಗಮನಿಸಿ ಎಲ್ಲಾ ಉಚಿತ ಕೊಡುಗೆಗಳನ್ನು ರಾಜಕೀಯ ಪಕ್ಷಗಳ ನಿಧಿಯಿಂದಲೇ ಭರಿಸಬೇಕೆಂಬ ಭ್ರಾಂತಿಕಾರಕ ಆದೇಶವನ್ನು ಹೊರಡಿಸುತ್ತಿದ್ದೇನೆ. ರಾಜ್ಯದ ಖರ್ಚು–ವೆಚ್ಚಗಳನ್ನು ಸರಿದೂಗಿಸಲು ವರ್ಷವಿಡಿ ಸಾರ್ವಜನಿಕ ಸಾಲ ಎತ್ತಲಿದ್ದೇವೆ.

'ಬಡಿಯುವ ಕೈಗೆ ಕೆಲಸ ಕೊಡುತ್ತಾ ಶಾಸಕರು ಮತ್ತು ಅಧಿಕಾರಿಗಳು ನಿರಂತರವಾಗಿ ಲಂಚ ಮತ್ತು ಕಮಿಶನ್ನಿಗೆ ಬಲಿಯಾಗಿ ಜೈಲು ಸೇರುತ್ತಿದ್ದಾರೆ. ಇವರು ಗಳಿಸಿದ ಕಾಳಧನವನ್ನು ಸೂಕ್ತ ಪ್ರಮಾಣಿತ ಕಾರ್ಯಾಚರಣೆ ವಿಧಾನದ ಮೂಲಕ ಹಿಂದಿರುಗಿಸಲಾಗುವುದು.

'ರಾಜಕಾರಣಿಗಳು ಜನ ಹಿತಕ್ಕಾಗಿ ಆಗಾಗ ಪಕ್ಷಾಂತರದ ಆಪರೇಶನ್ನಿಗೆ ಒಳಗಾಗುತ್ತಿರುತ್ತಾರೆ. ಇವರಿಗೆ ಉಚಿತ ರಾಜಕೀಯ ವಿಮೆ ಮತ್ತು ಮಂತ್ರಿಗಿರಿ ಗ್ಯಾರಂಟಿ ಹಾಗೂ ವಿದೇಶ ಪ್ರವಾಸಕ್ಕಾಗಿ ಪಕ್ಷಾಂತರ ನಿಧಿ ಸ್ಥಾಪಿಸಲಾಗುವುದು. ಶಾಸಕರ ವೇತನ, ಭತ್ಯೆಗಳನ್ನು ಪ್ರತಿ ಆರು ತಿಂಗಳಿಗೊಮ್ಮೆ ಸ್ವಯಂಚಾಲಿತವಾಗಿ ಏರಿಸಲಿದ್ದೇನೆ. ಹಣಕಾಸಿನ ಕೊರತೆಯಿಂದಾಗಿ ಅಧಿಕಾರಿ, ನೌಕರರ ವೇತನ, ಭತ್ಯೆಗಳನ್ನು ಶೇ 50ಕ್ಕೆ ಇಳಿಸಲಾಗುವುದು. ನೇಮಕಾತಿ ಗಳನ್ನು ಗುತ್ತಿಗೆ ಆಧಾರದ ಮೇಲೆ ಮಾತ್ರ ಮಾಡಲು ತೀರ್ಮಾನಿಸಲಾಗಿದೆ.

'ರಾಜ್ಯದ ಆದಾಯಕ್ಕೆ ದೊಡ್ಡ ಕೊಡುಗೆ ನೀಡುತ್ತಿರುವ ಪಾನೀಕರಿಗಾಗಿ ಹೊಸ ಎಸ್ಕೋಬಾರುಗಳನ್ನು ತೆರೆಯಲಾಗುವುದು. ಕುಡಿದು ಸತ್ತ ಮದ್ಯಪಾನಿಗಳ ಜ್ಞಾಪಕಾರ್ಥ 'ಕುಡಿ ನಮನ' ಕಾರ್ಯಕ್ರಮದಲ್ಲಿ ಮರಣೋತ್ತರವಾಗಿ ಬಿರುದು ನೀಡಲಾಗುವುದು.

'ವಾಟ್ಸ್‌ಆ್ಯಪ್ ಯೂನಿವರ್ಸಿಟಿಗಳ ಮೂಲಕ ಅತಿಹೆಚ್ಚು ಗಾಳಿಸುದ್ದಿಗಳನ್ನು ಹಂಚಲು ನಿರುದ್ಯೋಗಿಗಳಿಗೆ ಮತ್ತು ಯುವಕರಿಗಾಗಿ ಉಚಿತ ಡೇಟಾನಿಧಿ ಆರಂಭಿಸಲು ನನ್ನ ಸರ್ಕಾರ ಉದ್ದೇಶಿಸಿದೆ.

'ಜನತೆಯ ಮತ್ತು ರೈತರ ಅನನುಕೂಲಕ್ಕಾಗಿ ಜಿಲ್ಲೆಗಳಲ್ಲಿ ಕಿರುಕುಳ ಕೇಂದ್ರ ತೆರೆಯಲಾಗುವುದು. ಅತೀ ಹೆಚ್ಚು ಪ್ರಾಣಹಾನಿ ಸಂಭವಿಸುವ ರಸ್ತೆಗುಂಡಿಗಳನ್ನು ಮುಕ್ತಿತಾಣ ಎಂದು ಘೋಷಿಸಲಾಗುವುದು. ಸದನವು ಪೂರ್ಣ ಆಯವ್ಯಯವನ್ನು ಭಂಗೀಕರಿಸಲು ಕೋರುತ್ತೇನೆ.'

ಸಂಗತ

ಜೀವವೈವಿಧ್ಯದ ಸಂರಕ್ಷಣೆ, ನಮ್ಮೆಲ್ಲರ ಹೊಣೆ


ಪರಿಸರನಾಶ ಹಾಗೂ ಜೀವಿನಾಶಗಳ ಆತಂಕದ ಸುದ್ದಿ ನಡುವೆಯೂ, ಜೀವವೈವಿಧ್ಯ ಸಂರಕ್ಷಣೆಗೆ ಸಂಬಂಧಿಸಿದ ಆಶಾದಾಯಕ ಚಟುವಟಿಕೆಗಳು ಸಾಕಷ್ಟು ನಡೆಯುತ್ತಿವೆ.

• ಶ್ರೀಗುರು

ಜಗತ್ತು ಆರನೇ 'ಮಹಾ ಅಳಿವು' ಎದುರಿಸುತ್ತಿದೆ ಎಂದು ವಿಜ್ಞಾನಿಗಳು ಎಚ್ಚರಿಸುತ್ತಿದ್ದಾರೆ. ಹವಾಮಾನ ಬದಲಾವಣೆ, ಅರಣ್ಯ ನಾಶ ಮತ್ತು ಅಕ್ರಮ ಬೇಟೆಯಿಂದಾಗಿ ಲಕ್ಷಾಂತರ ಜೀವ ಪ್ರಭೇದಗಳು ಅಳಿವಿನ ಭೀತಿಯಲ್ಲಿವೆ. ಏರುತ್ತಿರುವ ತಾಪಮಾನದಿಂದಾಗಿ ಆರ್ಕ್ಟಿಕ್‌ನ ಹಿಮಕರಡಿಗಳಿಂದ ಹಿಡಿದು ಸಮುದ್ರದ ಹವಳದ ದಿಬ್ಬಗಳವರೆಗೆ ಎಲ್ಲವೂ ಸಂಕಷ್ಟದಲ್ಲಿವೆ.

'ಐಯುಸಿಎನ್' ಪ್ರಕಟಿಸಿರುವ ಕೆಂಪುಪಟ್ಟಿ ಪ್ರಕಾರ ಜಗತ್ತಿನ 44,000ಕ್ಕೂ ಹೆಚ್ಚು ಪ್ರಭೇದಗಳು ಅಳಿವಿನ ಭೀತಿ ಎದುರಿಸುತ್ತಿವೆ. ಅದರಲ್ಲಿ ಶೇ 41ರಷ್ಟು ಉಭಯಚರಗಳು ಮತ್ತು ಶೇ 25ರಷ್ಟು ಸಸ್ತನಿಗಳು ಸೇರಿವೆ. ಪ್ರತಿವರ್ಷ ಜಗತ್ತು ಸುಮಾರು 10 ದಶಲಕ್ಷ ಹೆಕ್ಟೇರ್ ಅರಣ್ಯವನ್ನು ಕಳೆದುಕೊಳ್ಳುತ್ತಿದೆ. ಇದು ಜೀವವೈವಿಧ್ಯದ ಆವಾಸಸ್ಥಾನದ ಮೇಲೆ ನೇರ ಪರಿಣಾಮ ಬೀರುತ್ತಿದೆ. ಸಮುದ್ರದ ತಾಪಮಾನ ಏರಿಕೆಯಿಂದಾಗಿ ಜಗತ್ತಿನ ಶೇ 50ರಷ್ಟು ಹವಳದ ದಿಬ್ಬಗಳು ಈಗಾಗಲೇ ನಾಶವಾಗಿವೆ.

ಭಾರತವು ವಿಶ್ವದ ಒಟ್ಟು ಭೂಭಾಗದಲ್ಲಿ ಶೇ 2.4ರಷ್ಟಿದ್ದರೂ, ಜಗತ್ತಿನ ಶೇ 7–8ರಷ್ಟು ಜೀವವೈವಿಧ್ಯದ ಆವಾಸವಾಗಿದೆ. ನಮ್ಮ ವನ್ಯಜೀವಿ ಸಂರಕ್ಷಣಾ ಪ್ರಯತ್ನ ಮತ್ತು ಅದರ ಫಲಗಳು ಆಶಾದಾಯಕವಾಗಿವೆ. ಆದರೆ, ಸವಾಲುಗಳಿಂದ ಮುಕ್ತವಾಗಿಲ್ಲ. ಭಾರತದಂತಹ ಜನ ಬಾಹುಳ್ಯವಿರುವ ದೇಶದಲ್ಲಿ ಕಾಡುಗಳ ಒತ್ತುವರಿಯಿಂದಾಗಿ ವನ್ಯಮೃಗ–ಮಾನವ ಸಂಘರ್ಷ ಹೆಚ್ಚುತ್ತಲೇ ಇದೆ. ಇದು ರೈತರ ಬೆಳೆ ಹಾನಿ ಮತ್ತು ಪ್ರಾಣಿಗಳ ಜೀವಹಾನಿಗೆ ಕಾರಣವಾಗುತ್ತಿದೆ.



'ಪ್ರಾಜೆಕ್ಟ್ ಟೈಗರ್' ಮತ್ತು 'ಪ್ರಾಜೆಕ್ಟ್ ಎಲಿಫೆಂಟ್' ಮೂಲಕ ಹುಲಿ ಮತ್ತು ಆನೆಗಳ ಸಂಖ್ಯೆಯು ಗಣನೀಯವಾಗಿ ಹೆಚ್ಚಿದೆ. 2022ರ ಗಣತಿಯ ಪ್ರಕಾರ, ಭಾರತದಲ್ಲಿ ಹುಲಿಗಳ ಸಂಖ್ಯೆಯು 3,682ಕ್ಕೆ ಏರಿಕೆಯಾಗಿದೆ. ಇದು ವಿಶ್ವದ ಒಟ್ಟು ಹುಲಿ ಸಂಖ್ಯೆಯ ಶೇ 75ರಷ್ಟಿದೆ. ಭಾರತದಲ್ಲಿ ಸುಮಾರು 22–27 ಸಾವಿರ ಏಷ್ಯನ್ ಆನೆಗಳಿವೆ. ಕರ್ನಾಟಕವು ದೇಶದಲ್ಲೇ ಅತಿ ಹೆಚ್ಚು ಆನೆಗಳನ್ನು ಹೊಂದಿರುವ ರಾಜ್ಯವಾಗಿದೆ. ಅಂತರ ರಾಷ್ಟ್ರೀಯ ಸಹಭಾಗಿತ್ವದ ಅಡಿಯಲ್ಲಿ 'ಪ್ರಾಜೆಕ್ಟ್ ಚೀತಾ' ಪ್ರಾರಂಭಿಸಿ 70 ವರ್ಷಗಳ ಹಿಂದೆ ಭಾರತದಲ್ಲಿ ಅಳಿದು ಹೋಗಿದ್ದ ಚೀತಾಗಳನ್ನು ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾದಿಂದ ತಂದು ಮಧ್ಯಪ್ರದೇಶದ ಕುನೊ ರಾಷ್ಟ್ರೀಯ ಉದ್ಯಾನದಲ್ಲಿ ಮರುಪರಿಚಯಿಸಲಾಗಿದೆ. ಇದು ಜಗತ್ತಿನ ಮೊದಲ ಖಂಡಾಂತರ ಮಾಂಸಾಹಾರಿ ಪ್ರಾಣಿ ವರ್ಗಾವಣೆ ಯೋಜನೆಯಾಗಿದೆ.

ವಿಶ್ವದ ಏಳು ಪ್ರಮುಖ ಬೆಕ್ಕಿನ ತಳಿಗಳಾದ ಹುಲಿ, ಸಿಂಹ, ಚಿರತೆ, ಹಿಮಚಿರತೆ, ಚೀತಾ, ಜಾಗ್ವಾರ್ ಮತ್ತು ಪೂಮಾಗಳನ್ನು ರಕ್ಷಿಸಲು ಇರುವ ಇಂಟರ್ ನ್ಯಾಷನಲ್ ಬಿಗ್ ಕ್ಯಾಟ್ ಅಲಯನ್ಸ್ ಎಂಬ ಜಾಗತಿಕ ಒಕ್ಕೂಟವನ್ನು ಭಾರತವೇ ಮುನ್ನಡೆಸುತ್ತಿದೆ.

ಭಾರತದಲ್ಲಿ ರಾಷ್ಟ್ರೀಯ ಉದ್ಯಾನಗಳು, ವನ್ಯಜೀವಿಧಾಮಗಳು ಮತ್ತು ಸಂರಕ್ಷಣಾ ಮೀಸಲು ಪ್ರದೇಶಗಳು ಸೇರಿದಂತೆ ಪ್ರಸ್ತುತ 1,000ಕ್ಕೂ ಹೆಚ್ಚು ರಕ್ಷಿತ ಪ್ರದೇಶಗಳಿವೆ. ಇಲ್ಲಿನ ಜೀವವೈವಿಧ್ಯ ಕಾಪಾಡಲು ವಿಶೇಷ ಪ್ರಯತ್ನಗಳು ನಡೆದಿವೆ. ಹುಲಿ ಸಂರಕ್ಷಿತ ಪ್ರದೇಶಗಳಲ್ಲಿ ಗಸ್ತು ತಿರುಗಲು ಮತ್ತು ಪರಿಸರ ಮೇಲ್ವಿಚಾರಣೆ ಮಾಡಲು ಎಂ–ಸ್ಟ್ರೈಪ್ಸ್ ಎಂಬ ಡಿಜಿಟಲ್ ಅಪ್ಲಿಕೇಶನ್ ಬಳಸುತ್ತಿದ್ದೇವೆ. ಅಳಿವಿನ ಅಂಚಿನಲ್ಲಿರುವ ಜೀವಸಂಕುಲದ ರಕ್ಷಣೆಗೆ ಆಧುನಿಕ ತಂತ್ರಜ್ಞಾನದ ಬಳಕೆಯಾಗುತ್ತಿದೆ. ಕಾಜಿರಂಗ ಮತ್ತು ಜಿಮ್ ಕಾರ್ಬೆಟ್‌ನಂತಹ ರಾಷ್ಟ್ರೀಯ ಉದ್ಯಾನಗಳಲ್ಲಿ ಅಕ್ರಮ ಬೇಟೆಗಾರರನ್ನು ಪತ್ತೆಹಚ್ಚಲು ಮತ್ತು ಪ್ರಾಣಿಗಳ ಚಲನವಲನ ಗಮನಿಸಲು ಡ್ರೋನ್ ಕಣ್ಗಾವಲು ಪಡೆಗಳು ನಿಯುಕ್ತಿಗೊಂಡಿವೆ.

ಅಪರೂಪದ ಸಸ್ಯ ಪ್ರಭೇದಗಳನ್ನು ಉಳಿಸಲು ದೇಶದಾದ್ಯಂತ ಸ್ಥಾಪಿಸಲಾಗಿರುವ ಬೀಜ ಬ್ಯಾಂಕುಗಳು ದೇಶದ ಕೃಷಿ ಜೀವವೈವಿಧ್ಯ ಕಾಪಾಡುತ್ತಿವೆ. ರಸ್ತೆ ಮತ್ತು ರೈಲ್ವೆ ಹಳಿಗಳ ಮೇಲೆ ಪ್ರಾಣಿಗಳು ಅಪಘಾತಕ್ಕೀಡಾಗುವುದನ್ನು ತಪ್ಪಿಸಲು 'ಎಕೋ ಬ್ರಿಡ್ಜ್' ಮತ್ತು ಅಂಡರ್‌ಪಾಸ್ ನಿರ್ಮಿಸಲಾಗುತ್ತಿದೆ. ಉದಾಹರಣೆಗೆ, ನಾಗಪುರ–ಜಬಲ್ಪುರ ಹೆದ್ದಾರಿಯಲ್ಲಿ ಪ್ರಾಣಿಗಳಿಗಾಗಿಯೇ ವಿಶೇಷ ಮೇಲ್ಸೇತುವೆಗಳನ್ನು ನಿರ್ಮಿಸಲಾಗಿದೆ.

ಪ್ರತಿ ವರ್ಷ ಮಾರ್ಚ್ 3ರಂದು ವಿಶ್ವದಾದ್ಯಂತ 'ವಿಶ್ವ ವನ್ಯಜೀವಿ ದಿನ'ವನ್ನು ಆಚರಿಸಲಾಗುತ್ತದೆ. 1973ರ ಮಾರ್ಚ್ 3ರಂದು 'ಅಳಿವಿನಂಚಿನಲ್ಲಿರುವ ವನ್ಯಜೀವಿ ಮತ್ತು ಸಸ್ಯವರ್ಗದ ಅಂತರರಾಷ್ಟ್ರೀಯ ವ್ಯಾಪಾರ ಸಮಾವೇಶ' ಅಂಗೀಕಾರಗೊಂಡ ನೆನಪಿಗಾಗಿ ವಿಶ್ವಸಂಸ್ಥೆಯು ಈ ದಿನವನ್ನು ಮೀಸಲಿಟ್ಟಿದೆ. ಭೂಮಿಯ ಮೇಲಿನ ವೈವಿಧ್ಯಮಯ ಪ್ರಾಣಿ ಮತ್ತು ಸಸ್ಯ ಸಂಕುಲಗಳ ಬಗ್ಗೆ ಜಾಗೃತಿ ಮೂಡಿಸುವುದು ಮತ್ತು ಅವುಗಳ ರಕ್ಷಣೆಗೆ ಒತ್ತು ನೀಡುವುದು ಈ ದಿನದ ಮುಖ್ಯ ಉದ್ದೇಶವಾಗಿದೆ.

ಜೀವವೈವಿಧ್ಯ ಎನ್ನುವುದು ಬರೀ ಕಾಡಿನ ಪ್ರಾಣಿಗಳಿಗೆ ಸಂಬಂಧಿಸಿದ್ದಲ್ಲ. ಅದು ಮನುಕುಲದ ಅಸ್ತಿತ್ವದ ಪ್ರಶ್ನೆಯೂ ಆಗಿದೆ. ಶುದ್ಧ ಗಾಳಿ, ನೀರು ಮತ್ತು ಆಹಾರಕ್ಕಾಗಿ ನಾವು ಈ ಸಮತೋಲನದ ಮೇಲೆ ಅವಲಂಬಿತರಾಗಿದ್ದೇವೆ. ಪ್ಲಾಸ್ಟಿಕ್ ಮುಕ್ತ ಪರಿಸರ ನಮ್ಮದಾಗಬೇಕು. ಕಾಡು ಮತ್ತು ಸಮುದ್ರ ಸೇರುತ್ತಿರುವ ಪ್ಲಾಸ್ಟಿಕ್ ಅನ್ನು ತಡೆಗಟ್ಟಬೇಕು. ಶಾಲಾ–ಕಾಲೇಜುಗಳಲ್ಲಿ ವನ್ಯಜೀವಿಗಳ ಮಹತ್ವದ ಬಗ್ಗೆ ಜಾಗೃತಿ ಮೂಡಿಸುವ ಶಿಕ್ಷಣ ನೀಡಬೇಕು. ಸ್ಥಳೀಯ ಉತ್ಪನ್ನಗಳಿಗೆ ಆದ್ಯತೆ ನೀಡಬೇಕು. ವನ್ಯಜೀವಿಗಳ ಉತ್ಪನ್ನಗಳಿಂದ ತಯಾರಿಸಿದ ವಸ್ತುಗಳನ್ನು ಬಹಿಷ್ಕರಿಸಬೇಕು.


ಬರೀ ಕಾನೂನುಗಳಿಂದ ಜೀವವೈವಿಧ್ಯ ಉಳಿಸಲು ಸಾಧ್ಯವಿಲ್ಲ. ವಿಜ್ಞಾನ, ತಂತ್ರಜ್ಞಾನ ಮತ್ತು ಸಾಮಾನ್ಯ ಜನರ ಸಹಭಾಗಿತ್ವ ಸೇರಿದಾಗ ಮಾತ್ರ ನಾವು ಭೂಮಿಯನ್ನು ಮುಂದಿನ ಪೀಳಿಗೆಗೆ ಉಳಿಸಿ ಕೊಡಬಹುದು.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಮೈಸೂರು ರೇಷ್ಮೆ ಮುಸುಕಾಗಲಿದೆಯೇ ಹೊಳಪು?

ಕ್ರೀಡಾಂಗಣ ನಿರ್ಮಾಣಕ್ಕೆ ತಿ.ನರಸೀಪುರ ಕೆಎಸ್‌ಐಸಿ ನೂಲು ತೆಗೆಯುವ ಕಾರ್ಖಾನೆ ಜಾಗ



• ಮೋಹನ್ ಕುಮಾರ ಸಿ.


ಹೂವಿನಂತೆ ಕೋಮಲ, ಧರಿಸಲು ಹಗುರವಾದ ಗುಣದಿಂದ ಮೈಸೂರು ರೇಷ್ಮೆ ಸೀರೆ ಅಂತರರಾಷ್ಟ್ರೀಯ ಖ್ಯಾತಿ ಪಡೆದಿದೆ. ಪಾರಂಪರಿಕ ಹಿರಿಮೆಯ ಜೊತೆಗೆ ಶ್ರೀಮಂತಿಕೆಯ ಗರಿಮೆ ಹೊಂದಿರುವ ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ (ಕೆಎಸ್‌ಐಸಿ) ರೇಷ್ಮೆ ನೂಲು ತೆಗೆಯುವ ಘಟಕ ಮೈಸೂರು ಜಿಲ್ಲೆಯ ತಿ.ನರಸೀಪುರದ ಕಬಿನಿ ನದಿಯ ದಂಡೆಯಲ್ಲಿದೆ. ಕ್ರೀಡಾಂಗಣ ನಿರ್ಮಾಣದ ಉದ್ದೇಶಕ್ಕಾಗಿ ಅದರ ಆವರಣದ ಅರ್ಧದಷ್ಟು ಭಾಗವನ್ನು ಜಿಲ್ಲಾಡಳಿತವು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಗೆ ವರ್ಗಾಯಿಸಿದೆ. ಸರ್ಕಾರದ ಈ ಕ್ರಮದಿಂದ ಐತಿಹಾಸಿಕ ಕಾರ್ಖಾನೆ ಮುಚ್ಚುವ ಆತಂಕ ಎದುರಾಗಿದೆ. ಇದು ರೇಷ್ಮೆ ಸೀರೆ ತಯಾರಿಕೆಯ ಮೇಲೆ ಪರಿಣಾಮ ಬೀರಲಿದೆ ಎಂದು ಹೇಳಲಾಗುತ್ತಿದ್ದು, 'ಮೈಸೂರು ರೇಷ್ಮೆ ಸೀರೆ' ಎಂಬ ಬ್ರ್ಯಾಂಡ್‌ನ ಹೊಳಪು ಮಾಸುವ ಕಳವಳ ವ್ಯಕ್ತವಾಗಿದೆ.

ಶುದ್ಧವಾದ ನೀರಿನ (ನದಿಯ) ಕೊರತೆ ಮತ್ತು ಕೊಳವೆಬಾವಿ ನೀರಿನ ಬಳಕೆ ಕಾರಣ ಚಾಮರಾಜನಗರ, ಕೊಳ್ಳೇಗಾಲ ಮತ್ತು ದಾವಣಗೆರೆಯಲ್ಲಿದ್ದ ನಿಗಮದ ರೇಷ್ಮೆ ನೂಲು ತೆಗೆಯುವ ಕಾರ್ಖಾನೆಗಳು ಮುಚ್ಚಿದ್ದು, ಈಗ ಉಳಿದಿರುವುದು 1912ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ ತಿ.ನರಸೀಪುರ ಪಟ್ಟಣದ ಬೈರಾಪುರದಲ್ಲಿರುವ ರೇಷ್ಮೆ ನೂಲು ತೆಗೆಯುವ ಕಾರ್ಖಾನೆ ಮಾತ್ರ. ಇದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ವರುಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿದೆ. ಇದೂ ಮುಚ್ಚಿದರೆ ಮೈಸೂರು ಮತ್ತು ಚನ್ನಪಟ್ಟಣದಲ್ಲಿರುವ ಕೆಎಸ್‌ಐಸಿ ನೇಯ್ಗೆ ಕಾರ್ಖಾನೆಗಳು ಖಾಸಗಿ ನೂಲು ತೆಗೆಯುವ ಕಾರ್ಖಾನೆಗಳನ್ನು ಅವಲಂಬಿಸಬೇಕು. ಅದರಿಂದ ನಿಗಮಕ್ಕೆ ಹೊರೆಯಾಗುವುದು ಖಚಿತ ಎನ್ನುತ್ತಾರೆ ಇಲ್ಲಿನ ಕಾರ್ಮಿಕ ಮುಖಂಡರು.

ಕನಸಾದ ಮೇಲ್ದರ್ಜೆ: ತಿ.ನರಸೀಪುರ ಕಾರ್ಖಾನೆಯನ್ನು ಮೇಲ್ದರ್ಜೆಗೇರಿಸಲು ನಿಗಮವು ಎಲ್ಲ ಸಿದ್ಧತೆ ಮಾಡಿತ್ತು. ಇದೀಗ ಕ್ರೀಡಾಂಗಣಕ್ಕಾಗಿ ಇಡೀ ಆವರಣವನ್ನು ಎರಡು ಹೋಳು ಮಾಡಲಾಗಿದೆ. ನೀರು ಸಂಸ್ಕರಣಾ ಘಟಕ, ಬೂದಿ ನಿರ್ವಹಣೆ, ಕ್ಯಾಂಟೀನ್, ನೂಲು ಸಂಗ್ರಹ ಉಗ್ರಾಣ ಸ್ಥಾಪಿಸಲು ನೀಲನಕ್ಷೆಯನ್ನು ತಯಾರಿಸಿದ್ದ ನಿಗಮವು, ಚೀನಾದಿಂದ ಮತ್ತೆರಡು 400 ಎಂಡ್ ಆಟೊಮ್ಯಾಟಿಕ್ ರೀಲಿಂಗ್ ಮಷೀನ್ ಖರೀದಿಗೆ ಯೋಜನೆ ಹಾಕಿಕೊಂಡಿತ್ತು.



ತಿ.ನರಸೀಪುರದ ಕೆಎಸ್‌ಐಸಿ ನೂಲು ತೆಗೆಯುವ ಕಾರ್ಖಾನೆಯ ಒಂದು ನೋಟ ಪ್ರಜಾವಾಣಿ ಚಿತ್ರ/ಅನೂಪ್ ರಾಘ. ಟಿ.



ಸರ್ಕಾರದ ನಿರ್ದೇಶನದಂತೆ ಕಂದಾಯ ಇಲಾಖೆಯು ನಿಗಮದಿಂದ ಕ್ರೀಡಾ ಇಲಾಖೆಗೆ 5 ಎಕರೆ 8 ಗುಂಟೆ ಜಾಗವನ್ನು ವರ್ಗಾಯಿಸಿದೆ. ಇದೀಗ ಕಾರ್ಖಾನೆಯನ್ನು ಮೇಲ್ದರ್ಜೆಗೇರಿಸುವ ಈ ಎಲ್ಲ ಯೋಜನೆಗಳು ತಲೆಕೆಳಕಾಗಿವೆ.

'192 ಕಾರ್ಮಿಕರಿದ್ದು, ಹೊಸ ಎರಡು ಯಂತ್ರಗಳು ಬಂದರೆ 35 ಕಾರ್ಮಿಕರ ನೇಮಕ ಆಗಲಿದೆ. ಎಆರ್‌ಎಂ ಯಂತ್ರಗಳು ಬಂದರೆ ಮತ್ತೆ 80 ಕಾರ್ಮಿಕರಿಗೆ ಕೆಲಸ ನೀಡಬಹುದು. ಸದ್ಯ 400 ಎಂಡ್‌ನ 2 ಯಂತ್ರಗಳಿದ್ದು, ಮತ್ತೆರಡು ಬಂದರೆ ಕಾರ್ಮಿಕರ ಸಂಖ್ಯೆ 350ಕ್ಕೆ ಹೆಚ್ಚಲಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದರು.

'ರೇಷ್ಮೆಗೂಡುಗಳ ತ್ಯಾಜ್ಯದಿಂದ ಹಾರ, ಆಲಂಕಾರಿಕ ವಸ್ತುಗಳನ್ನು ತಯಾರಿಸುವ ಘಟಕಗಳನ್ನು ಆರಂಭಿಸುವ ಆಲೋಚನೆ ನಿಗಮಕ್ಕಿದೆ. ಸರ್ಕಾರ ಅವಕಾಶ ಕೊಟ್ಟರೆ ಮತ್ತಷ್ಟು ಉದ್ಯೋಗಾವಕಾಶ ಸೃಷ್ಟಿಸಲಿದೆ' ಎಂದರು.

552 ಮರ ಹನನ: ಕ್ರೀಡಾಂಗಣಕ್ಕೆ ನೀಡಲಾದ ಜಾಗದಲ್ಲಿ 552 ಮರಗಳಿದ್ದು, ಕಾರ್ಖಾನೆಯನ್ನು ತಂಪಾಗಿರಿಸಿದ್ದಲ್ಲದೇ ಬಾಯ್ಲರ್ ಹಾಗೂ ಪೈಪ್‌ಗಳಿಂದ ಆಗುವ ತಾಪವನ್ನು ಶಮನ ಮಾಡುತ್ತಿದ್ದವು. ಕಾರ್ಖಾನೆಯ ಮಾಲಿನ್ಯವನ್ನೂ ತಗ್ಗಿಸುತ್ತಿದ್ದವು. ಈ ಎಲ್ಲ ಮರಗಳು ಹನನವಾದರೆ ಇಡೀ ವಾತಾವರಣ ಬಿಸಿಯಾಗಲಿದೆ. ಕಾರ್ಮಿಕರ ಆರೋಗ್ಯದ ಮೇಲೂ ಗಂಭೀರ ಪರಿಣಾಮ ಉಂಟಾಗಲಿದೆ.

'ನೂಲು ತೆಗೆಯುವ ಘಟಕವಾದ್ದರಿಂದ ಸೂಕ್ಷ್ಮ ರೇಷ್ಮೆ ಕಣಗಳು ಶ್ವಾಸಕೋಶಕ್ಕೆ ಪ್ರವೇಶಿಸುತ್ತವೆ. ಈಗಾಗಲೇ ಎಷ್ಟೋ ಮಂದಿ ಅಸ್ತಮಾ ತೊಂದರೆ ಅನುಭವಿಸುತ್ತಿದ್ದಾರೆ. ಮರಗಳ ಹನನ ನಡೆದರೆ ಶುದ್ಧಗಾಳಿಯೂ ಸಿಗುವುದಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಬಯಸದ, ಪ್ರತಿಭಟನೆನಿರತ ಕಾರ್ಮಿಕರೊಬ್ಬರು ಅಳಲು ತೋಡಿಕೊಂಡರು.

ಕಲ್ಲಿದ್ದಲು ಸಾಗಾಟಕ್ಕೆ ತೊಂದರೆ: ಬಾಯ್ಲರ್ ಘಟಕವು ಕಾರ್ಖಾನೆಯ ಹಿಂಭಾಗದಲ್ಲಿದ್ದು, ಅಲ್ಲಿಗೆ ಲಾರಿಗಳು ಪ್ರವೇಶಿಸಲು ಜಾಗವಿಲ್ಲದಂತಾಗುತ್ತದೆ. ಕಾರ್ಖಾನೆಗೆ ನಿತ್ಯ 4.5 ಟನ್ ಕಲ್ಲಿದ್ದಲು ಬೇಕು. ಅದನ್ನು ಅರ್ಧ ಎಕರೆ ಜಾಗದಲ್ಲಿ ಸಂಗ್ರಹಿಸಲಾಗುತ್ತಿದ್ದು, ಬಳಸಿದ ಕಲ್ಲಿದ್ದಲಿನ ಬಿಸಿ ಬೂದಿಯನ್ನೂ ಅಲ್ಲಿಯೇ ಹಾಕಲಾಗುತ್ತಿದೆ. ಅದರ ಹರಾಜು ವರ್ಷಕ್ಕೊಮ್ಮೆ ನಡೆಯುತ್ತಿದೆ. ಹೀಗಾಗಿ ಹೆಚ್ಚು ಜಾಗವು ಬೇಕಾಗಿದೆ.

ನೀಲನಕ್ಷೆ ಇಲ್ಲ: ಕಾರ್ಖಾನೆಗೆ ಕಬಿನಿ ನದಿಯಿಂದ ನೀರು ಸರಬರಾಜು ಮಾಡುವ ಪೈಪ್‌ಲೈನ್ ಕ್ರೀಡಾಂಗಣ ನಿರ್ಮಿಸಲು ಉದ್ದೇಶಿಸಿರುವ ಜಾಗದ ಮಧ್ಯಭಾಗದಲ್ಲಿಯೇ ಹಾದುಹೋಗಿರುವ ಅನುಮಾನವಿದೆ. 1912ರ ನೀಲನಕ್ಷೆ ಪ್ರಸ್ತುತ ಲಭ್ಯವಿಲ್ಲ. ಕಾಮಗಾರಿ ಆರಂಭಿಸಿದರೆ ಜೆಸಿಬಿಯಿಂದ ಸ್ವಲ್ಪವೇ ಹಾನಿಯಾದರೂ ನೀರಿನ ಅಭಾವದಿಂದ ಕಾರ್ಖಾನೆ ನಿಲ್ಲಿಸಬೇಕಾಗುತ್ತದೆ. ಕೊಳವೆಬಾವಿ ನೀರನ್ನು ಬಳಸಿದರೆ ಯಂತ್ರಗಳು ಹಾಳಾಗಲಿವೆ. ನೂಲು ಗಟ್ಟಿಯಾಗಿ ಹಾಗೂ ಹಗುರವಾಗಿ ಬರುವುದಿಲ್ಲ ಎನ್ನುತ್ತಾರೆ ಇಲ್ಲಿನ ಅಧಿಕಾರಿಗಳು.

'ವಾತಾವರಣ ಕಲುಷಿತವಾಗಿದ್ದು, ಹೆಚ್ಚು ಮರಗಳನ್ನು ನೆಡಬೇಕು. ನೀರು ಪುನರ್ಬಳಕೆ ಘಟಕ ಆರಂಭಿಸಬೇಕೆಂದು ಕಾರ್ಖಾನೆಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ನೋಟಿಸ್ ನೀಡಿದೆ' ಎಂದರು.

'2025ರ ಫೆಬ್ರುವರಿಯಿಂದಲೇ ಕ್ರೀಡಾಂಗಣಕ್ಕೆ ಜಾಗ ವರ್ಗಾಯಿಸುವ ಪ್ರಕ್ರಿಯೆ ನಡೆದಿದೆ. ಸರ್ವೆಯನ್ನು ಈಚೆಗೆ ಮುಗಿಸಿದ್ದಾರೆ. ಆಳೆತ್ತರದ ಗೋಡೆ ನಿರ್ಮಾಣ ಮಾಡುತ್ತೇವೆ ಎಂದಿದ್ದಾರೆ. ಪಕ್ಕದಲ್ಲೇ ಬಾಯ್ಲರ್‌ಗಳಿವೆ. ಅಪಘಾತವಾದರೆ ಯಾರು ಹೊಣೆ? ಯಾರ ಬಳಿ ಮನವಿ ಮಾಡುವುದೆಂದು ತಿಳಿಯುತ್ತಿಲ್ಲ. ಒಮ್ಮೆ ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ ಜಾಗ ನೋಡಿಕೊಂಡು ಹೋದರು. ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರು ಕ್ರೀಡಾಂಗಣ ಮಾಡಬಹುದೆಂದು ವರದಿ ಕೊಟ್ಟಿದ್ದಾರಂತೆ. ಕಾರ್ಮಿಕರ ಮನವಿಯನ್ನು ಆಲಿಸುತ್ತಿಲ್ಲ' ಎನ್ನುವುದು ಕಾರ್ಮಿಕರ ದೂರು.

'ಕಾರ್ಖಾನೆ ಸ್ಥಾಪನೆಯಾದಾಗ ಯಾವ ವಸತಿ ಪ್ರದೇಶವೂ ಸುತ್ತ ಇರಲಿಲ್ಲ. ನಗರಸಭೆ ಮತ್ತು ತಾಲ್ಲೂಕು ಆಡಳಿತವು ವಸತಿ ಬಡಾವಣೆಗಳಿಗೆ ಅನುಮತಿ ಹಾಗೂ ಮಂಜೂರಾತಿ ನೀಡಿದ್ದೇಕೆ? 15–20 ವರ್ಷಗಳಿಂದ ಈಚೆಗೆ ಅಕ್ರಮವಾಗಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಅವರನ್ನೇ ಬೇರೆಡೆಗೆ ಸ್ಥಳಾಂತರಿಸಲಿ' ಎಂದರು.

ಸಂಸದ ಮನವಿ: ಕ್ರೀಡಾಂಗಣ ನಿರ್ಮಾಣಕ್ಕೆ ಕೆಎಸ್‌ಐಸಿ ಜಾಗ ನೀಡಿರುವ ಸರ್ಕಾರದ ತೀರ್ಮಾನ ಮರುಪರಿಶೀಲಿಸುವಂತೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಮನವಿ ಸಲ್ಲಿಸಿದ್ದಾರೆ.

ಕೆಎಸ್‌ಐಸಿ ವಾರ್ಷಿಕ ವಹಿವಾಟು

(ಕೋಟಿಗಳಲ್ಲಿ)

ವರ್ಷ	ವಹಿವಾಟು	ತೆರಿಗೆ ನಂತರದ ಲಾಭ
2020-21	₹126	₹28
2021-22	₹165	₹32
2022-23	₹206	₹47
2023-24	₹248	₹73
2024-25	₹296	₹101

ಕಾರ್ಖಾನೆ ಸ್ಥಗಿತಗೊಳ್ಳುವ ಆತಂಕ

ಅವೈಜ್ಞಾನಿಕ ಕ್ರೀಡಾಂಗಣ ನಿರ್ಮಾಣದಿಂದ ಭವಿಷ್ಯದಲ್ಲಿ ಕಾರ್ಖಾನೆ ಮುಚ್ಚುವ ಆತಂಕದಲ್ಲಿರುವ ಕಾರ್ಮಿಕರು ರೈತ, ಕಾರ್ಮಿಕ ಸಂಘಟನೆಗಳ ಬೆಂಬಲದೊಂದಿಗೆ ಮುಷ್ಕರ ಆರಂಭಿಸಿದ್ದು, 12ನೇ ದಿನಕ್ಕೆ ಕಾಲಿಟ್ಟಿದೆ. ನೂಲು ತೆಗೆಯದೇ ಇರುವುದರಿಂದ ಸೀರೆಗಳ ತಯಾರಿಕೆಯ ಮೇಲೆ ಪರಿಣಾಮ ಬೀರಿದ್ದು, ಮಳಿಗೆಗಳಿಗೆ ಅಗತ್ಯ ಪ್ರಮಾಣದಲ್ಲಿ ಸೀರೆಗಳ ಪೂರೈಕೆ ಆಗುತ್ತಿಲ್ಲ. ಮೈಸೂರು ಮತ್ತು ಚನ್ನಪಟ್ಟಣದಲ್ಲಿನ ಮೀಸಲು ನೂಲು ದಾಸ್ತಾನು 15 ದಿನಕ್ಕೆ ಸಾಕಾಗುತ್ತದೆ. ನೂಲು ತೆಗೆಯುವ ಈ ಕಾರ್ಖಾನೆ ಮುಷ್ಕರದಿಂದ ಕೆಲವೇ ದಿನಗಳಲ್ಲಿ ಇಡೀ ನಿಗಮದ ಕಾರ್ಖಾನೆಗಳು ಸ್ಥಗಿತಗೊಳ್ಳಲಿವೆ. ವಾರ್ಷಿಕ ₹100 ಕೋಟಿಯಷ್ಟು ಲಾಭದಲ್ಲಿರುವ ಕೆಎಸ್‌ಐಸಿ ನಷ್ಟದ ಹಾದಿಗೆ ಹೊರಳಲಿದೆ. ಅಲ್ಲದೇ, 'ಜಿಐ ಟ್ಯಾಗ್' (ಭೌಗೋಳಿಕ ಸೂಚ್ಯಂಕ) ಶ್ರೇಯದ ಗರಿಮೆ ಕಮರಲಿದೆ ಎಂಬ ಆತಂಕವೂ ಕಾಡುತ್ತಿದೆ.



ಕ್ರೀಡಾಂಗಣಕ್ಕೆ ನೀಡಿರುವ ಜಾಗದ ಗಡಿ ಗುರುತು

'ಬುದ್ಧಿಗೇಡಿ ಕೆಲಸ ಬೇಡ'

ಕ್ರೀಡಾಂಗಣಕ್ಕೆ ನೀಡಲು ಬೇರೆ ಜಾಗ ಹುಡುಕಿ, ಪಾರಂಪರಿಕ ಕಾರ್ಖಾನೆಯ ಜಾಗವೇ ಏಕೆ ಬೇಕು. ಜೀವವೈವಿಧ್ಯದ ಸ್ಥಳದಲ್ಲಿ ಮರಗಳನ್ನು ಕಡಿದರೆ ಅಲ್ಲಿನ ಜೀವಜಾಲವನ್ನು ನಾಶ ಮಾಡಿದಂತಾಗುತ್ತದೆ. ಇಲ್ಲಿ ಕ್ರೀಡಾಂಗಣ ಕಟ್ಟುವುದು ಅತ್ಯಂತ ಬುದ್ಧಿಗೇಡಿ ಕೆಲಸ' ಎನ್ನುತ್ತಾರೆ ಕಾರ್ಮಿಕರ ಜೊತೆಗೂಡಿ ಪ್ರತಿಭಟನೆ ಮುನ್ನಡೆಸುತ್ತಿರುವ 'ಪರಿಸರಕ್ಕಾಗಿ ನಾವು' ಸಂಘಟನೆಯ ಪರಶುರಾಮೇಗೌಡ.

'ಕ್ರೀಡಾಂಗಣ ನಿರ್ಮಾಣ ಮಾಡಿದರೆ ಕಾರ್ಖಾನೆ ಕಿಷ್ಕಿಂಧೆಯಾಗುತ್ತದೆ. ಈ ಕಾರ್ಖಾನೆಯಲ್ಲಿ ಉತ್ಪಾದನೆ ಆಗುವ ರೇಷ್ಮೆ ನೂಲು ಗುಣಮಟ್ಟದ್ದಾಗಿದ್ದು, ಇದೇ ನೂಲನ್ನು ಬಳಸಿ ವಿಶ್ವ ವಿಖ್ಯಾತ ರೇಷ್ಮೆ ಸೀರೆಗಳನ್ನು ತಯಾರಿಸುತ್ತಾರೆ. ಕಾರ್ಖಾನೆ ಮುಚ್ಚಿದರೆ ರೇಷ್ಮೆ ಸೀರೆ ತಯಾರಿಕೆಗೂ ತೊಂದರೆ ಆಗುತ್ತದೆ. ಸಿಬ್ಬಂದಿ ಮತ್ತು ಕಾರ್ಮಿಕರೂ ಕೆಲಸ ಕಳೆದುಕೊಳ್ಳುತ್ತಾರೆ' ಎಂದರು.



ಕ್ರೀಡಾಂಗಣಕ್ಕೆ ಹೊಂದಿಕೊಂಡಿರುವ ಜಾಗದಲ್ಲಿ ಸಂಗ್ರಹಿಸಿರುವ ಕಲ್ಲಿದ್ದಲು

ಜೀವವೈವಿಧ್ಯದ ತಾಣ

13 ಎಕರೆ ವಿಸ್ತೀರ್ಣದ ಕೆಎಸ್‌ಐಸಿ ನೂಲು ತೆಗೆಯುವ ಕಾರ್ಖಾನೆ ಆವರಣದಲ್ಲಿ ಕ್ರೀಡಾ ಇಲಾಖೆಗೆ ನೀಡಿರುವ 5 ಎಕರೆ 8 ಗುಂಟೆ ಪ್ರದೇಶದಲ್ಲಿ 80 ವರ್ಷಕ್ಕೂ ಹಳೆಯ 552 ಮರಗಳಿವೆ.

'ಜೀವವೈವಿಧ್ಯ' ಸಮೀಕ್ಷೆ ನಡೆಸಿರುವ ಪರಿಸರವಾದಿಗಳು 50ಕ್ಕೂ ಹೆಚ್ಚು ಪ್ರಭೇದದ ಪಕ್ಷಿ ಹಾಗೂ ಪತಂಗಗಳನ್ನು ಗುರುತಿಸಿದ್ದಾರೆ. ಪಕ್ಷಿ ವೀಕ್ಷಕರಾದ ಸಂಜಯ್ ದತ್ತಾತ್ರಿ, ಸಹನಾ, ಕಶ್ಯಪ್ ಅವರು ಸಮೀಕ್ಷೆ ನಡೆಸಿ ಸದರಿ ಈ ಜಾಗವನ್ನು ಆವಾಸಸ್ಥಾನವಾಗಿ ಮಾಡಿಕೊಂಡಿರುವ 39 ಪಕ್ಷಿಗಳು ಹಾಗೂ 10ಕ್ಕೂ ಜಾತಿಯ ಚಿಟ್ಟೆಗಳನ್ನು ಗುರುತಿಸಿದ್ದಾರೆ.

'ಯಾವುದೇ ತೊಂದರೆ ಇಲ್ಲ'

'ಕ್ರೀಡಾಂಗಣದಿಂದ ನೂಲು ತಯಾರಿಕಾ ಕೈಗಾರಿಕೆಗೆ ಯಾವುದೇ ತೊಂದರೆ ಇರುವುದಿಲ್ಲ. ಹಲವು ವರ್ಷಗಳಿಂದ ತಾಲ್ಲೂಕು ಕ್ರೀಡಾಂಗಣಕ್ಕೆ ಬೇಡಿಕೆ ಇತ್ತು. ಕಳೆದ ಬಜೆಟ್‌ನಲ್ಲಿ ₹6 ಕೋಟಿ ಬಿಡುಗಡೆಯಾಗಿದೆ. ತಿ.ನರಸೀಪುರ ತಾಲ್ಲೂಕಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಕೊಕ್ಕೊ, ಅಥ್ಲೆಟಿಕ್ಸ್, ಕಬಡ್ಡಿ ಕ್ರೀಡಾಪಟುಗಳಿದ್ದಾರೆ. ಕ್ರೀಡಾ ಸಂಸ್ಕೃತಿ ಬೆಳೆಯುತ್ತಿದೆ. ಈ ಕಾರಣವೇ ಸರ್ಕಾರವು ಭೂಮಿ ಗುರುತಿಸಿ ಇಲಾಖೆಗೆ ಹಸ್ತಾಂತರಿಸಿದೆ. ಕ್ರೀಡಾಂಗಣದಿಂದ ಕೆಎಸ್‌ಐಸಿಗೆ ಯಾವುದೇ ಅನನುಕೂಲವಾಗದು. ನಮ್ಮ ಇಲಾಖೆ ಪರಿಸರ ಸ್ನೇಹಿ' ಎಂದು ಹೇಳುತ್ತಾರೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕ ಭಾಸ್ಕರ್ ನಾಯ್ಕ್.

'ಕಾರ್ಖಾನೆ ಮುಚ್ಚುವುದೆಂಬ ಗೊಂದಲ ಸೃಷ್ಟಿಯಾಗಿದೆ. ಕಾರ್ಖಾನೆಗೆ 7 ಎಕರೆ ಈಗಾಗಲೇ ಇದೆ. ಇನ್ನೂ ನೂರು ವರ್ಷದ ಹಿಂದಿನ ತಂತ್ರಜ್ಞಾನದಲ್ಲಿಯೇ ಕಾರ್ಖಾನೆಯಿದೆ. ಹೊಸ ಯಂತ್ರಗಳನ್ನು ಖರೀದಿಸಿ ಕಾರ್ಖಾನೆಯ ಅಭಿವೃದ್ಧಿ ಮಾಡಿಕೊಳ್ಳಲಿ' ಎಂಬುದು ಅವರ ಮಾತು.

'ಕಾರ್ಖಾನೆ ಮುಚ್ಚುವುದಿಲ್ಲ'



ಮೈಸೂರು: 'ತಿ.ನರಸೀಪುರದಲ್ಲಿ ಇರುವ 'ಮೈಸೂರು ರೇಷ್ಮೆ ಕಾರ್ಖಾನೆ'ಯನ್ನು ಮುಚ್ಚುವ ಪ್ರಶ್ನೆಯೇ ಇಲ್ಲ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಸಿ. ಮಹದೇವಪ್ಪ ಸೋಮವಾರ ಇಲ್ಲಿ ಹೇಳಿದರು.


ಪತ್ರಕರ್ತರೊಂದಿಗೆ ಮಾತನಾಡಿದ ಅವರು, 'ರೇಷ್ಮೆ ಮಾರುಕಟ್ಟೆಗೆ ಮೀಸಲಿಟ್ಟಿದ್ದ ಹಾಗೂ ಬಳಸದಿದ್ದ ಒಂದೂವರೆ ಎಕರೆ ಜಾಗವನ್ನು ಕ್ರೀಡಾಂಗಣಕ್ಕೆ ಬಳಸಲು ತೀರ್ಮಾನಿಸಿದ್ದೇವೆ. ಈಗ, ಆ ಆದೇಶವನ್ನೂ ಮರು ಪರಿಶೀಲಿಸುತ್ತೇವೆ' ಎಂದು ತಿಳಿಸಿದರು.

'ಕಾರ್ಖಾನೆಗೆ ತೊಂದರೆ ಆದಲ್ಲಿ ಕ್ರೀಡಾಂಗಣ ನಿರ್ಮಿಸುವುದಿಲ್ಲ. ನಮಗೆ ರೇಷ್ಮೆ ಕಾರ್ಖಾನೆ ಮುಖ್ಯ. ಸರ್ಕಾರಕ್ಕೆ ಈ ವಿಚಾರದಲ್ಲಿ ಪ್ರತಿಷ್ಠೆ ಇಲ್ಲ. ಕಾರ್ಖಾನೆಯ ಕಾರ್ಮಿಕರು ಹಾಗೂ ಸಾರ್ವಜನಿಕರಿಗೆ ಆತಂಕ ಬೇಡ' ಎಂದರು.

'ಕಾರ್ಖಾನೆ ಪ್ರಗತಿಗೆ ಸರ್ಕಾರ ಒತ್ತುಕೊಟ್ಟಿದೆ. ರೇಷ್ಮೆ ಕಾರ್ಖಾನೆಗೆ ಧಕ್ಕೆ ಆಗದಂತೆ ರಕ್ಷಿಸುವುದು ನಮ್ಮ ಹೊಣೆ. ಇದರಲ್ಲಿ ಅನುಮಾನ ಬೇಡ. ಬಿಜೆಪಿಯವರು ರಾಜಕೀಯಕ್ಕಾಗಿ ಗೊಂದಲ ಸೃಷ್ಟಿಸಿದ್ದಾರೆ' ಎಂದು ಹೇಳಿದರು.

ಪಿವಿ ಫ್ಯಾಕ್ಟ್ ಚೆಕ್

ಅಮೆರಿಕ–ಇಸ್ರೇಲ್ ಸೇನಾ ಪಡೆಗಳು ಮತ್ತು ಇರಾನ್ ಸೇನೆಯ ನಡುವಿನ ಸಂಘರ್ಷ ತೀವ್ರವಾಗುತ್ತಿರುವ ನಡುವೆಯೇ, ಥ್ರೆಡ್ಸ್ ಸಾಮಾಜಿಕ ಜಾಲತಾಣದಲ್ಲಿ @ಅಬ್ಬಾಸ್‌ಕಾಶ್ಮೀರಿ99 ಎಂಬ ಖಾತೆದಾರ ವಿಡಿಯೊವೊಂದನ್ನು ಪೋಸ್ಟ್ ಮಾಡಿದ್ದು, 'ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಬಿ2ಬಿ ಬಾಂಬರ್ ಏನು ಮಾಡುತ್ತಿದೆ? ಪ್ರದರ್ಶನಕ್ಕಾಗಿ ಇರಿಸಲಾಗಿದೆಯೇ ಅಥವಾ ಯುದ್ಧಕ್ಕಾಗಿ ಅಮೆರಿಕವು ಅದನ್ನು ಸನ್ನದ್ಧ ಸ್ಥಿತಿಯಲ್ಲಿ ಇರಿಸಿದೆಯೇ? ಅಧಿಕೃತ ಮಾಹಿತಿ ಇನ್ನಷ್ಟೇ ಬರಬೇಕಿದೆ' ಎಂದು ಹೇಳಿದ್ದಾರೆ. ಎರಡು ವಿಡಿಯೊ ತುಣುಕುಗಳನ್ನು ಜೋಡಿಸಿ ಈ ವಿಡಿಯೊ ಮಾಡಲಾಗಿದೆ. ಆದರೆ, ಅವೆರಡೂ ಈಗಿನದ್ದಲ್ಲ.



ವಿಡಿಯೊದ ಸ್ಕ್ರೀನ್‌ಶಾಟ್ ಅನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ 2025ರ ನ.12, 13ರಂದು ಹಲವು ಇನ್‌ಸ್ಟಾಗ್ರಾಂ ಖಾತೆಗಳಲ್ಲಿ ಇದೇ ವಿಡಿಯೊದ ಅರ್ಧ ಭಾಗವನ್ನು ಅಪ್‌ಲೋಡ್ ಮಾಡಿರುವುದು ಸಿಕ್ಕಿತು. ಅಮೆರಿಕದ ಬಿ1–ಬಿ ಲ್ಯಾನ್ಸರ್ ಯುದ್ಧವಿಮಾನವು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ನಿಂತಿದ್ದ ಬಗ್ಗೆ ಹಲವು ಮಾಧ್ಯಮಗಳು ವರದಿ ಮಾಡಿದ್ದವು. ಭಾರತ ಮತ್ತು ಅಮೆರಿಕದ ವಾಯುಪಡೆಗಳು 2025ರ ನ. 10ರಿಂದ 13ರವರೆಗೆ ನಾಲ್ಕು ದಿನ ನಡೆಸಿದ್ದ ಜಂಟಿ ಸಮರಾಭ್ಯಾಸದಲ್ಲಿ ಈ ಯುದ್ಧವಿಮಾನ ಪಾಲ್ಗೊಂಡಿತ್ತು. ಆ ಸಂದರ್ಭದಲ್ಲಿ ಅದನ್ನು ಬೆಂಗಳೂರು ವಿಮಾನ ನಿಲ್ದಾಣದಲ್ಲಿ ಇಳಿಸಲಾಗಿತ್ತು. ಈ ಸಮರಾಭ್ಯಾಸದ ಕುರಿತಾಗಿ ಭಾರತೀಯ ವಾಯುಪಡೆ ನ. 13ರಂದು ಫೇಸ್‌ಬುಕ್‌ನಲ್ಲಿ ಪೋಸ್ಟ್ ಕೂಡ ಮಾಡಿತ್ತು. ಈಗ ಹಂಚಿಕೊಳ್ಳಲಾಗುತ್ತಿರುವ ವಿಡಿಯೊದಲ್ಲಿ ವಿಮಾನದ ಇನ್ನೊಂದು ದೃಶ್ಯ ಇದೆ. ಅದು 2025ರ ಫೆಬ್ರುವರಿಯಲ್ಲಿ ಬೆಂಗಳೂರಿನಲ್ಲಿ ನಡೆದಿದ್ದ ಏರೋ ಇಂಡಿಯಾದಲ್ಲಿ ಬಿ1–ಬಿ–ಲ್ಯಾನ್ಸರ್ ಭಾಗವಹಿಸಿದ್ದಾಗಿನದ್ದು. ಚೆನ್ನೈನ ಅಮೆರಿಕದ ಕಾನ್ಸುಲೇಟ್ ಜನರಲ್ ಕಚೇರಿಯ ಫೇಸ್‌ಬುಕ್ ಪುಟದಲ್ಲಿ ಆ ವಿಡಿಯೊವನ್ನು 2025ರ ಫೆ.13ರಂದೇ ಪೋಸ್ಟ್ ಮಾಡಲಾಗಿದೆ. ಹಳೆಯ ಎರಡು ವಿಡಿಯೊಗಳನ್ನು ಜೋಡಿಸಿ, ಅಮೆರಿಕದ ಯುದ್ಧವಿಮಾನವನ್ನು ಈಗ ಬೆಂಗಳೂರು ನಿಲ್ದಾಣದಲ್ಲಿ ನಿಲ್ಲಿಸಲಾಗಿದೆ ಎಂಬರ್ಥದ ಪೋಸ್ಟ್ ಮಾಡಲಾಗುತ್ತಿದೆ ಎಂಬುದು 'ಪ್ರಜಾವಾಣಿ' ಫ್ಯಾಕ್ಟ್‌ಚೆಕ್ ಮಾಡಿದಾಗ ತಿಳಿದು ಬಂದಿದೆ.

ಪದಬಂಧ 6332


ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈ ಪ್ರಕಾರ ಕಟ್ಟಿರುವ ಗೋಡೆ (3)
3.ಕುದುರೆಯ ಮೇಲೆ ಕುಳಿತಿರುವವನು (4)
5.ತಿರುಗಿಸಿದರೂ ಇದು ಹೊಸದು (3)
7.ಉತ್ತೇಜನ ಕೊಡುವವನು (4)
9.ಹಾರ ಧರಿಸಿ ಮಾಡಿದ ವ್ಯಾಪಾರ (4)
12.ತಲೆಕೂದಲು ಬುಡದಲ್ಲಿ ಉಂಟಾಗುವ ಹೊಟ್ಟು (3)
14.ಹೆಣ್ಣು ತನ್ನ ಗಂಡನ್ನು ತಾನೇ ಆರಿಸಿಕೊಳ್ಳುವುದು (4)
15.ಹೀಗೆ ಕೋಪಗೊಳ್ಳು (3)

ಮೇಲಿಂದ ಕೆಳಕ್ಕೆ

1.ಹಿಂದಿನ ಕಾಲದ್ದು (3)
2.ದ್ರವ ಒಸರುವ ಜಿಹ್ವೆ (3)
3.ಭಗವಂತನ ಸಾಕ್ಷಾತ್ಕಾರ ಮಾಡುವುದು (4)
4.ಚಾಡಿಕೋರ ಇಲ್ಲಿದ್ದಾನೆ (3)
6.ಶೌರ್ಯಸಾಹಸಗಳನ್ನು ವರ್ಣಿಸುವ ಕಾವ್ಯ (4)
7.ಹರನಿದ್ದರೂ ಬಿದ್ದಿರುವ ಹೊಡೆತ! (3)
8.ವಾಡಿಕೆಯಂತೆ ಬಂದಿರುವ ಗೊಲ್ಲ (4)
10.ಹಾರದಲ್ಲಿ ಕಾಣಿಸಿದ ಗೋಳಾಟ (4)
11.ಸ್ವಂತ ಮನೆ ಉಲ್ಟಾ ಆಗಿದೆ (3)
12.ಯಜ್ಞದಲ್ಲಿ ಅಗ್ನಿಗೆ ಆಹುತಿ ಕೊಡುವವನು (3)
13.ತಲೆಗೆ ಸುತ್ತಿಕೊಳ್ಳುವ ಬಟ್ಟೆ (3)



6331ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಅಭಿಷೇಕ 3.ಅಸ್ತಿಭಾರ 5.ದಿವಾನ 8.ಕಾನನ 9.ಮಯೂರ 10.ಕಾತರ 11.ಅಂತಕ 15.ಸಮತಲ 16.ತಾರುಮಾರು

ಮೇಲಿಂದ ಕೆಳಕ್ಕೆ: 1.ಅನಾದಿ 2.ಕಣ 3.ಅಸಹಕಾರ 4.ರಟ್ಟು 6.ವಾಗ್ಗೇಯಕಾರ 7.ಜನಜನಿತ 9.ಮರಣಕಾಲ 12.ಕರಾರು 13.ಕಂಸ 14.ತಾತಾ

ಸುಡೊಕು 6716

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1	5			2			8	
		7			9		5	2
	8			4				
2							6	
		4		3				1
5								3
		5		9			7	6
7			2		6	8		
9	4			7				5

6715 ಸುಡೊಕು

9	4	1	5	6	7	2	3	8
6	7	8	2	3	9	1	4	5
5	3	2	4	1	8	9	6	7
2	8	5	1	9	6	4	7	3
1	6	4	7	5	3	8	2	9
3	9	7	8	2	4	6	5	1
4	1	3	9	7	2	5	8	6
8	5	6	3	4	1	7	9	2
7	2	9	6	8	5	3	1	4

ಬಾಗುವುದೆಂದರೆ ಶರಣಾಗತಿಯಲ್ಲ



ಪಶ್ಚಿಮ ಘಟ್ಟಗಳ ಹಸಿರು ಒಡಲಿನಲ್ಲಿ ನದಿಯೊಂದು ಹುಟ್ಟಿ ಹರಿಯುತ್ತಿತ್ತು. ಹುಟ್ಟಿದಾಗಿನಿಂದಲೇ ಕೊಂಚ ರಭಸವಾಗಿ ಯಾವುದನ್ನೂ ಲೆಕ್ಕಿಸದೇ ಹರಿಯುತ್ತಿದ್ದ ನದಿಯದು. ತಿಳಿನೀರಿನ ಚುರುಕು ನದಿ ಬೆಟ್ಟದಿಂದ ರಭಸವಾಗಿ ಇಳಿದು ತನ್ನದೇ ಆದ ಜುಳುಜುಳು ನಿನಾದದೊಂದಿಗೆ ಸಾಗುತ್ತಿತ್ತು. ತಾನು ಬಲಶಾಲಿ, ತಾನು ಅತ್ಯಂತ ವೇಗದ ನದಿ, ಯಾರೂ ತನ್ನ ದಾರಿಗೆ ಅಡ್ಡ ಬರಲು ಸಾಧ್ಯವಿಲ್ಲ ಎಂದು ತನಗೆ ತಾನೇ ಹೇಳಿಕೊಂಡು ಹರಿಯುತ್ತಿತ್ತು. ಒಂದು ದಿನ ನದಿ ಹರಿಯುವಾಗ ಒಂದು ದೊಡ್ಡ ಬಂಡೆ ದಾರಿಗೆ ಅಡ್ಡವಾಗಿ ಬಿದ್ದಿತ್ತು. ಆ ಬಂಡೆ ಅಲ್ಲಿದ್ದು ಶತಮಾನಗಳೇ ಕಳೆದಿದ್ದವು. ಯಾವ ಮಳೆ, ಗಾಳಿ, ಸಮಯ ಅದನ್ನು ಏನೂ ಮಾಡಲು ಸಾಧ್ಯವಾಗಿರಲಿಲ್ಲ. ನದಿಗೋ ತನ್ನ ದಾರಿಗೆ ಅಡ್ಡಲಾಗುವ ಧೈರ್ಯ ಈ ಬಂಡೆಗೆಂಬ ಸಿಟ್ಟು. ದಾರಿ ಬಿಡು ಎಂದಿತು ನದಿ. ಬಂಡೆ ಅಲುಗಾಡಲಿಲ್ಲ. ಆದಷ್ಟೂ ಜೋರಾಗಿ ಬಂಡೆಗೆ ಅಪ್ಪಳಿಸಿತು ನದಿ. ಉಹೂಂ. ಬಂಡೆ ಜರುಗಲಿಲ್ಲ. ಮತ್ತೆ ಮತ್ತೆ ಅಪ್ಪಳಿಸಿದರೂ ಏನೂ ಪ್ರಯೋಜನವಾಗಲಿಲ್ಲ. ಇಡೀ ಕಣಿವೆ ಅಲ್ಲಾಡಿದರೂ ಬಂಡೆ ಒಂದಿಂಚೂ ಜರುಗಲಿಲ್ಲ. ನದಿಯ ನೀರು ಕೆಂಪಾಯಿತು. ನದಿ ದಣಿಯಿತು. ತಾನು ಯಾವ ಕಾರಣಕ್ಕೂ ಬಾಗುವುದಿಲ್ಲ ಎಂದು ನದಿ ತೀರ್ಮಾನಿಸಿಕೊಂಡಿತ್ತಲ್ಲ, ಹಾಗಾಗಿ ಅದು ಮತ್ತೆ ಮತ್ತೆ ಬಂಡೆಗೆ ಢಿಕ್ಕಿ ಹೊಡೆಯುತ್ತಲೇ ಇತ್ತು. ನದಿಯ ತಿಳಿನೀರನ್ನು ಕುಡಿಯುತ್ತಿದ್ದ ಪ್ರಾಣಿಗಳು ಬಾಯಾರಿದವು.

ಒಂದು ಸಂಜೆ ನದಿಯೊಳಗಿನ ಪುಟ್ಟ ಮೀನೊಂದು ಮಾತಾಡಿತು. 'ನೀನು ಬಹಳ ಗಟ್ಟಿಗಿತ್ತಿಯೇ. ಆದರೆ ಸಾಮರ್ಥ್ಯವೆಂದರೆ ಶಕ್ತಿ ಪ್ರದರ್ಶನ ಮಾತ್ರ ಎಂದು ನಿನಗೆ ಹೇಳಿದವರಾದರೂ ಯಾರು?' ಎಂದು ಕೇಳಿತದು. ನದಿ ಕೊಂಚ ತಡೆದು ಯೋಚಿಸಿತು. ಬಂಡೆಯನ್ನು ಎಚ್ಚರಿಕೆಯಿಂದ ನೋಡಿತು. ಅದೆಷ್ಟೋ ಕಾಲದಿಂದ ನೆಲಕ್ಕಂಟಿದ್ದ ಬಂಡೆಯದು. ಯಾವ ಕಾರಣಕ್ಕೂ ಅದನ್ನು ಅಲ್ಲಿಂದ ಕೀಳಲು ಸಾಧ್ಯವಿಲ್ಲವೆಂಬ ಸತ್ಯ ನದಿಗೆ ಹೊಳೆಯಿತು. ಸಣ್ಣ ನಿಟ್ಟುಸಿರಿಟ್ಟು ಮೀನಿಗೊಂದು ಧನ್ಯವಾದ ಹೇಳಿದ ನದಿ ಮೆಲ್ಲನೆ ಬಂಡೆಯನ್ನು ಎರಡೂ ತೋಳುಗಳಂತಹ ಅಲೆಗಳಿಂದ ಬಳಸಿತು. ಭೋರ್ಗರೆಯುತ್ತಿದ್ದ ನದಿ ಮೆಲ್ಲಗೆ ಹರಿಯತೊಡಗಿತು.

ಕೆಲವೇ ವಾರಗಳಲ್ಲಿ ವಾತಾವರಣ ತಿಳಿಯಾಯಿತು. ಸುತ್ತಲಿನ ಪ್ರಕೃತಿ ಹಸಿರು ಮುಕ್ಕಳಿಸಲಾರಂಭಿಸಿತು. ಪ್ರಾಣಿಗಳು ನೀರು ಕುಡಿದು ಚಿನ್ನಾಟವಾಡತೊಡಗಿದವು. ಹೊಸ ದಾರಿಯುದ್ದಕ್ಕೂ ಪುಟ್ಟ ಹಸಿರು ಹುಲ್ಲು ಚಿಗುರಿ ಬಣ್ಣ ಬಣ್ಣದ ಹೂಗಳು ಅರಳಿ ಪಾತರಗಿತ್ತಿಗಳು ವಾತಾವರಣವನ್ನು ಕಳೆಗಟ್ಟಿಸಿದವು. ಕಾಲಕಳೆದಂತೆ ನದಿಗೆ ಒಂದು ವಿಷಯ ಅರ್ಥವಾಯಿತು. ಬಂಡೆಗಲ್ಲನ್ನು ಬಳಸಿ ಮುಂದೆ ಬಂದಿದ್ದರಿಂದ ತಾನು ದುರ್ಬಲವಾಗಲಿಲ್ಲ, ಬದಲಾಗಿ ಮತ್ತಷ್ಟು ಬಲಶಾಲಿಯಾದೆ ಎಂಬುದು ಅದಕ್ಕೆ ಅರ್ಥವಾಯಿತು. ಎಲ್ಲ ಅಡೆತಡೆಗಳೂ ಸೋಲಿಸಲು ಇರುವುದಲ್ಲ, ಕೆಲವೊಂದು ನಮ್ಮನ್ನು ರೂಪುಗೊಳಿಸುತ್ತವೆ ಎಂದು ಸುತ್ತಲಿನ ಬೆಟ್ಟಗಳ ಹತ್ತಿರದ ಸಂಜೆಯ ಹರಟೆಯಲ್ಲಿ ನದಿ ಹೇಳಲಾರಂಭಿಸಿತು. ತನ್ನ ಕಣ್ಣು ತೆರೆಸಿದ ಪುಟಾಣಿ ಮೀನಿನ ಸಲಹೆಗೆ ಅದು ಯಾವಾಗಲೂ ಕೃತಜ್ಞವಾಗಿತ್ತು.

ಅಹಂಕಾರದಿಂದ ಯಾವ ಪ್ರಯೋಜನವೂ ಇಲ್ಲ, ಬದಲಾಗಿ ಕೆಲವೊಮ್ಮೆ ಪರಿಸ್ಥಿತಿಗೆ ತಕ್ಕನಾಗಿ ಹೊಂದಿಕೊಳ್ಳುವುದರಿಂದ ಅನಾಹುತಗಳನ್ನು ತಪ್ಪಿಸಬಹುದು. ಸಮಸ್ಯೆಗಳನ್ನು ಶಕ್ತಿಯಿಂದ ಅಲ್ಲ, ವಿವೇಚನೆಯಿಂದಲೂ ಪರಿಹರಿಸಬಹುದು. ಹೊಂದಿಕೊಳ್ಳುವುದು ನಮ್ಮ ಬಲಹೀನತೆಯಲ್ಲ, ಅದೇ ಕೆಲವೊಮ್ಮೆ ಸಾಮರ್ಥ್ಯವೂ ಹೌದು. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

03 ಮಾರ್ಚ್ 2026 ಮಂಗಳವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಶುಕ್ಲ ಪೂರ್ಣಿಮಾ ಗಂ. 17-08 ನಕ್ಷತ್ರ: ಮಘ ಗಂ. 7-32 ಯೋಗ: ಸುಕರ್ಮ ಗಂ. 10-25 ಕರಣ: ಬವ ಗಂ 17-08 ಕುಂಭ ಮಾಸದ 18 ನೇ ದಿನ. ಮಳೆ ನಕ್ಷತ್ರ : ಶತಭಿಷ 4 ನೇ ಪಾದ. ರಾಹುಕಾಲ : ಮಧ್ಯಾಹ್ನ 03-00 - 04-30 , ಸೂರ್ಯೋದಯ : 06-49 ಸೂರ್ಯಾಸ್ತ : 06-36, ಮುಸ್ಲಿಂ ದಿನಾಂಕ : 13 ರಂಜಾನ್, ದಿನ ವಿಶೇಷ : ಹೋಲಿಕಾ ದಹನ, ಕೇತುಗ್ರಸ್ತ ಚಂದ್ರಗ್ರಹಣ, ಅದೃಷ್ಟ ಸಂಖ್ಯೆ : 8, 11

ಮೇಷ: ಭಾವನೆಗಳನ್ನು ಹಂಚಿಕೊಂಡು ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲ ವ್ಯಕ್ತಿಗಳ ಪರಿಚಯ, ಸ್ನೇಹವು ಆಗಲಿದೆ. ಬಂಗಾರದ ಮೇಲೆ ಬಂಡವಾಳ ಹಾಕಲು ದಿನ ಉತ್ತಮ. ಪೊಲೀಸ್ ಹುದ್ದೆಯಲ್ಲಿರುವವರಿಗೆ ಮುಂಬಡ್ತಿ.

ವೃಷಭ: ಸಹಾಯ ಅಪೇಕ್ಷಿಗಳಿಗೆ ಸಹಾಯ ಹಸ್ತ ತೋರುವುದು ದೇವರು ಮೆಚ್ಚುವ ಕೆಲಸವೆಂದು ತಿಳಿದುಬರಲಿದೆ. ನೆಂಟಸ್ತಿಕೆಯಲ್ಲಿಯೇ ಉತ್ತಮ ಸಂಬಂಧ ಕೂಡಿ ಬರುವುದು.

ಮಿಥುನ: ಸುಖಕ್ಕಿಂತ ಹೆಚ್ಚಾಗಿ ಭವಿಷ್ಯದ ಕುರಿತು ಗಂಭೀರ ಆಲೋಚನೆ ಮಾಡಿ. ವಕೀಲರಿಗೆ ಹೆಚ್ಚಿನ ಆದಾಯ ಗಳಿಕೆಯಾದರೂ ಆತ್ಮಸಾಕ್ಷಿ ಒಪ್ಪಿಕೊಳ್ಳಲಾಗದ ಘಟನೆ ನಡೆಯಬಹುದು.

ಕರ್ಕಾಟಕ: ಆತ್ಮಸ್ಥೈರ್ಯ ಹಾಗೂ ದೇವರ ಮೇಲಿರುವ ನಂಬಿಕೆಯಿಂದಾಗಿ ಸಮಸ್ಯೆಗಳನ್ನು ಧೈರ್ಯವಾಗಿ ಎದುರಿಸಿ ಪರಿಹರಿಸಿಕೊಳ್ಳುವಿರಿ. ಹೊಸ ಯೋಜನೆಗಳ ತಯಾರಿಗೆ ಉತ್ತಮ ಸಮಯ.

ಸಿಂಹ: ಬದುಕಿನ ಕವಲುದಾರಿಯಲ್ಲಿರುವ ನಿಮಗೆ ದೇವತಾನುಗ್ರಹದಿಂದ ಸರಿಯಾದ ಮಾರ್ಗದರ್ಶನ ಸಿಗುವುದು. ಸಮಾಜ ಸೇವೆಯನ್ನು ಹವ್ಯಾಸವನ್ನಾಗಿ ಬೆಳೆಸಿಕೊಂಡಿರುವವರಿಗೆ ಪ್ರಚಾರ ಸಿಗುವುದು.

ಕನ್ಯಾ: ಆದಾಯಕ್ಕಿಂತ ಜಾಸ್ತಿ ಅನಿವಾರ್ಯತೆಯ ಖರ್ಚುಗಳು ಎದುರಾಗಲಿವೆ. ಹಣಕಾಸಿನ ವಿಚಾರದಲ್ಲಿ ಜಾಗ್ರತೆ ವಹಿಸಿ. ವೃಥಾ ತಿರುಗಾಟದಿಂದ ಧನ ಹಾನಿಯಾದರೂ, ಸಂಭ್ರಮ ಇರಲಿದೆ.

ತುಲಾ: ವ್ಯವಹಾರದಲ್ಲೂ, ಸಂಬಂಧದಲ್ಲೂ ಧನಾತ್ಮಕ ಮನೋಭಾವವೇ ಸೋಲುಗಳಿಗೆ ಕಾರಣವೆಂಬುವುದನ್ನು ಮರೆಯದಿರಿ. ಮುಂದಿನ ಯೋಜನೆಗಳ ಕುರಿತು ತಜ್ಞರೊಂದಿಗೆ ಚರ್ಚೆ ನಡೆಸಿ.

ವೃಶ್ಚಿಕ: ಗುರಿಯನ್ನು ತಲುಪಲು ಪರಿಶ್ರಮ ಪಡಬೇಕಾದೀತು. ಮನಃಶಾಸ್ತ್ರ ವಿಚಾರದ ಅಧ್ಯಯನ ನಿರತರಿಗೆ ಅನುಕೂಲಕರ ದಿನ. ಯೋಗ, ಧ್ಯಾನಕ್ಕಾಗಿ ಅಲ್ಪ ಸಮಯವನ್ನು ಮೀಸಲಿಡಿ.

ಧನು: ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸುವ ಮೂಲಕ ಉದ್ಯೋಗವನ್ನು ದೊರಕಿಸಿಕೊಳ್ಳಬಹುದು. ಪಿತೃ ವರ್ಗದ ಆಶೀರ್ವಾದವಿದೆ. ವಾಹನ ಚಾಲನೆಯಂಥ ಕಾರ್ಯದಲ್ಲಿ ಆತುರವು ಒಳ್ಳೆಯದಲ್ಲ.

ಮಕರ: ಹಣಕಾಸು ನಿರ್ವಹಣೆಯ ವಿಚಾರದಲ್ಲಿ ಹೆಂಡತಿಯ ಕುಶಲಮತಿಯು ಉಪಯೋಗಕ್ಕೆ ಬರಲಿದೆ. ಬುದ್ಧಿವಂತಿಕೆ ಹಾಗೂ ಯೋಜನೆಗಳು ಸಂವಹನವನ್ನು ಸುಲಭಗೊಳಿಸುತ್ತವೆ. ಏಕಾಗ್ರತೆ ನಿಮಗೆ ಜಯ ತರಲಿದೆ.


ಕುಂಭ: ಪ್ರೀತಿ, ವಾತ್ಸಲ್ಯ ತೋರುವ ಜನರು ಇದ್ದಾರೆಂಬುದು ಆತ್ಮವಿಶ್ವಾಸ ಹೆಚ್ಚಲು ಕಾರಣ. ನೀವಾಡುವ ಮಾತುಗಳಿಂದ ಗೌರವವು ದೊರಕುವುದು. ಆಂಜನೇಯನನ್ನು ಆರಾಧಿಸಿ.

ಮೀನ: ರಾಜಕೀಯದಲ್ಲಿ ಪ್ರವರ್ಧಮಾನಕ್ಕೆ ಬರುತ್ತಿರುವ ನಿಮಗೆ ಸದ್ಯದ ಪರಿಸ್ಥಿತಿ ಅನುಕೂಲಕರವಾಗಿದೆ. ಸಂಸಾರದ ಹೊಣೆಗಾರಿಕೆಯ ಕಾರಣದಿಂದಾಗಿ ಆದಾಯ ವೆಚ್ಚಗಳು ಸರಿ ಸಮವಾಗಿರುವುದು.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,178
ಇಂದಿನ ಅಂತ್ಯ:	24,865
ದಿನದ ಕನಿಷ್ಠ:	24,603
	312

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು	
100ಕ್ಕೆ	₹510
12ಕ್ಕೆ	₹72
ಮೈಸೂರು: 100ಕ್ಕೆ	₹510

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹215
ಆರ್‌ಎಸ್‌ಎಸ್-5	₹209
ಗುಡ್ ಲಾಟ್	₹196

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹576-777
ದ್ವಿತಳಿ (ಬಿ.ವಿ)	₹400-888

ಮುದ್ರಮನೆ ಕಾಫಿ

ಎಪಿ	₹22500
ಎಸಿ	₹12500
ಆರ್‌ಪಿ	₹18000
ಆರ್‌ಸಿ	₹9280

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1710 (1690)
ಸೋಯಾ (ರಿಫೈನ್ಡ್)	₹1380 (1360)
ಸೂರ್ಯಕಾಂತಿ (ರಿಫೈನ್ಡ್)	₹1610 (1585)
ಪಾಮೋಲಿನ್	₹1320 (1285)

ಪಿ.ಎಫ್: ಶೇ 8.25ರಷ್ಟು ಬಡ್ಡಿ

ಹಣಕಾಸು ವರ್ಷ	ಬಡ್ಡಿ ದರ (%)
2024-25	8.25
2023-24	8.25
2022-23	8.15
2021-22	8.10
2020-21	8.50

ನವದೆಹಲಿ (ಪಿಟಿಐ): ನೌಕರರ ಭವಿಷ್ಯನಿಧಿ ಸಂಘಟನೆಯು (ಇಪಿಎಫ್‌ಒ) ಭವಿಷ್ಯ ನಿಧಿ ಠೇವಣಿಗಳಿಗೆ 2025–26ನೇ ಸಾಲಿಗೆ ಶೇಕಡ 8.25ರಷ್ಟು ಬಡ್ಡಿ ನೀಡಲು ಸೋಮವಾರ ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.

ಸಂಘಟನೆಯು ಹಿಂದಿನ ಎರಡು ಆರ್ಥಿಕ ವರ್ಷದಲ್ಲಿಯೂ ಇದೇ ಪ್ರಮಾಣದ ಬಡ್ಡಿ ನೀಡಿತ್ತು.

ಸೋಮವಾರ ನಡೆದ ಇಪಿಎಫ್‌ಒ ಕೇಂದ್ರೀಯ ಧರ್ಮದರ್ಶಿಗಳ ಸಭೆಯಲ್ಲಿ (ಸಿಬಿಟಿ) ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ವಿವರಿಸಿವೆ.

ಸಿಬಿಟಿ ತೀರ್ಮಾನವನ್ನು ಕೇಂದ್ರ ಹಣಕಾಸು ಸಚಿವಾಲಯಕ್ಕೆ ಅನುಮೋದನೆಗಾಗಿ ರವಾನಿಸಲಾಗುತ್ತದೆ. ಸರ್ಕಾರವು ಈ ತೀರ್ಮಾನಕ್ಕೆ ಒಪ್ಪಿಗೆ ನೀಡಿದ ನಂತರದಲ್ಲಿ, ಈ ಬಡ್ಡಿ ದರಕ್ಕೆ ಅನುಗುಣವಾಗಿ ಮೊತ್ತವನ್ನು ಪಿ.ಎಫ್ ಖಾತೆಗಳಿಗೆ ಜಮಾ ಮಾಡಲಾಗುತ್ತದೆ.

ಅಡಿಕೆ ಧಾರಣೆ

ಮಾರುಕಟ್ಟೆ	ವಿಧ	ಧಾರಣೆ
ಕುಮಟಾ	ಚಾಲಿ	46899-50609
	ಚಿಪ್ಪು	31809-39099
	ಕೋಕ	15019-34019
	ಫ್ಯಾಕ್ಟರಿ	9569-28349
	ಹೊಸಚಾಲಿ	41829-47699
ಪುತ್ತೂರು	ಕೋಕ	20000-37500
	ಹೊಸತು	26000-47500
ಸಾಗರ	ಬಿಳಿಗೋಟು	11009-35666
	ಚಾಲಿ	23229-44527
	ಕೋಕ	15299-36229
	ಕೆಂಪುಗೋಟು	25786-40199
	ರಾಶಿ	39569-56599
	ಸಿಪ್ಪೆಗೋಟು	10599-24389
ಶಿವಮೊಗ್ಗ	ಬೆಟ್ಟೆ	52000-63589
	ಗೊರಬಲು	19129-40009
	ರಾಶಿ	40009-58600
	ಸರಕು	57299-81299
ಸಿದ್ದಾಪುರ	ಕೆಂಪುಗೋಟು	31399-35799
	ರಾಶಿ	49099-56099
	ತಟ್ಟಿಬೆಟ್ಟೆ	36899-46219
	ಬಿಳಿಗೋಟು	27109-39239
	ಚಾಲಿ	40099-48599
	ಕೋಕ	22699-34219
	ಹಳೆಚಾಲಿ	49099-49299
ಶಿರಸಿ	ಬೆಟ್ಟೆ	41390-52409
	ಬಿಳಿಗೋಟು	31890-43618
	ಚಾಲಿ	44108-48511
	ಕೆಂಪುಗೋಟು	26609-38658
	ರಾಶಿ	48769-54499
ಯಲ್ಲಾಪುರ	ಕೋಕ	13900-34969
	ಹಳೆಚಾಲಿ	40189-49819
	ಹೊಸಚಾಲಿ	38099-49489
	ಕೆಂಪುಗೋಟು	18099-42899
	ರಾಶಿ	50119-59299
	ತಟ್ಟಿಬೆಟ್ಟೆ	39399-51619
	ಆಪಿ	61899-65099
	ಬಿಳಿಗೋಟು	18611-41969

ಅಡುಗೆ ಎಣ್ಣೆ ಆಮದಿಗೆ ತೊಂದರೆ?

ರಸಗೊಬ್ಬರ ತಯಾರಿಕೆಯಲ್ಲಿ ಬಳಸುವ ಅಗತ್ಯ ವಸ್ತುಗಳ ಆಮದಿಗೆ ಸಮಸ್ಯೆ



ಮುಖ್ಯಾಂಶಗಳು

- ಸರಕು ಸಾಗಣೆ ಕಂಪನಿಗಳಿಂದ ತುರ್ತು ಬಿಕ್ಕಟ್ಟು ಶುಲ್ಕ ವಸೂಲಿ
- ವಿಮಾ ಶುಲ್ಕ ಹೆಚ್ಚಳದಿಂದ ಆಮದು ವೆಚ್ಚ ಹೆಚ್ಚಳ ಸಾಧ್ಯತೆ
- ಭಾರತದಿಂದ ಪ್ರತಿ ವರ್ಷ 1.6 ಕೋಟಿ ಟನ್ ಅಡುಗೆ ಎಣ್ಣೆ ಆಮದು

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಯುದ್ಧದ ಕಾರಣದಿಂದಾಗಿ ಭಾರತಕ್ಕೆ ಸೂರ್ಯಕಾಂತಿ ಎಣ್ಣೆ ಹಾಗೂ ರಸಗೊಬ್ಬರ ತಯಾರಿಕೆಯಲ್ಲಿ ಬಳಸುವ ಅಗತ್ಯ ವಸ್ತುಗಳನ್ನು ಆಮದು ಮಾಡಿಕೊಳ್ಳುವಲ್ಲಿ ಸಮಸ್ಯೆ ಸೃಷ್ಟಿ ಆಗಬಹುದು ಎಂದು ಉದ್ಯಮಗಳು ಆತಂಕ ವ್ಯಕ್ತಪಡಿಸಿವೆ.

ಅಲ್ಲದೆ, ಕೃಷಿ ಉತ್ಪನ್ನಗಳನ್ನು ಯುರೋಪ್ ಹಾಗೂ ಪಶ್ಚಿಮ ಏಷ್ಯಾದ ದೇಶಗಳಿಗೆ ರಫ್ತು ಮಾಡುವವರಿಗೆ ಕೂಡ ತೊಂದರೆ ಆಗುತ್ತದೆ ಎಂದು ಅವು ಹೇಳಿವೆ.

ಪಶ್ಚಿಮ ಏಷ್ಯಾ ಮೂಲಕ ಸಾಗುವ ಹಡಗುಗಳಲ್ಲಿ ಸರಕು ರವಾನೆ ಮಾಡುವವರಿಂದ ತುರ್ತು ಬಿಕ್ಕಟ್ಟು ಶುಲ್ಕವನ್ನು ಸಂಗ್ರಹಿಸಲು ಸರಕು ಸಾಗಣೆ ಕಂಪನಿಗಳು ಶುರುಮಾಡಿವೆ. ಇದರಿಂದಾಗಿ ಆಮದು ವೆಚ್ಚ ಹೆಚ್ಚಾಗಿದೆ.

'ಈಗ ಪಶ್ಚಿಮ ಏಷ್ಯಾ ಭಾಗಕ್ಕೆ ರಫ್ತು ಕೂಡ ಅಮಾನತಿನಲ್ಲಿ ಇದೆ. ಸಂಘರ್ಷ ಮುಂದುವರಿದಿರುವ ಕಾರಣದಿಂದಾಗಿ ಸಮಸ್ಯೆ ಇದೆ. ಸರಕು ಸಾಗಣೆ ಕಂಪನಿಗಳು ಹೆಚ್ಚುವರಿ ವಿಮಾ ಶುಲ್ಕ ವಿಧಿಸಬಹುದು, ಇದರಿಂದಾಗಿ ಆಮದು ವೆಚ್ಚ ಕೂಡ ಜಾಸ್ತಿ ಆಗಬಹುದು' ಎಂದು ರಸಗೊಬ್ಬರ ಉದ್ಯಮ ಸಂಘಟನೆಯೊಂದರ (ಎಸ್‌ಎಫ್‌ಐಎ) ಅಧ್ಯಕ್ಷ ರಾಜೀವ್ ಚಕ್ರವರ್ತಿ ಹೇಳಿದ್ದಾರೆ.

ಡಿಎಪಿ ಹಾಗೂ ಎಸ್‌ಎಸ್‌ಪಿ ರಸಗೊಬ್ಬರ ತಯಾರಿಕೆಯಲ್ಲಿ ಬಳಕೆಯಾಗುವ ಗಂಧಕ ಮತ್ತು ಗಂಧಕಾಮ್ಲ ಆಮದಿನ ವಿಚಾರವಾಗಿ ಚಕ್ರವರ್ತಿ ಕಳವಳ ವ್ಯಕ್ತಪಡಿಸಿದ್ದಾರೆ. ಜೂನ್‌ನಲ್ಲಿ ಆರಂಭವಾಗುವ ಮುಂಗಾರು ಬಿತ್ತನೆ ಸಂದರ್ಭದಲ್ಲಿ ಈ ರಸಗೊಬ್ಬರಗಳ ಅಗತ್ಯ ಇರುತ್ತದೆ. ಭಾರತ ಆಮದು ಮಾಡಿಕೊಳ್ಳುವ ಗಂಧಕದಲ್ಲಿ ಶೇ 76ರಷ್ಟು ಕತಾರ್, ಯುಎಇ ಮತ್ತು ಒಮಾನ್‌ನಿಂದ ಬರುತ್ತದೆ.

ಅಡುಗೆ ಎಣ್ಣೆಗೆ ಸಮಸ್ಯೆ: ಭಾರತವು ಪ್ರತಿವರ್ಷ ಅಂದಾಜು 1.6 ಕೋಟಿ ಟನ್ ಅಡುಗೆ ಎಣ್ಣೆಯನ್ನು ಆಮದು ಮಾಡಿಕೊಳ್ಳುತ್ತದೆ. ಇದರಲ್ಲಿ ಸೂರ್ಯಕಾಂತಿ ಎಣ್ಣೆಯ ಪಾಲು ಸರಿಸುಮಾರು ಶೇ 20ರಷ್ಟಿದೆ. ಇದನ್ನು ಮುಖ್ಯವಾಗಿ ರಷ್ಯಾ, ಉಕ್ರೇನ್ ಮತ್ತು ಅರ್ಜೆಂಟಿನಾದಿಂದ ತರಿಸಲಾಗುತ್ತದೆ. ಹಡಗುಗಳು ಕೆಂಪು ಸಮುದ್ರದ ಮೂಲಕ ಬರಲು ಅವಕಾಶ ಆಗದೆ ಇದ್ದಲ್ಲಿ, ಸಾಗಣೆ ವಿಳಂಬವಾಗುತ್ತದೆ.

'ಇದುವರೆಗೆ ಸಮಸ್ಯೆ ಆಗಿಲ್ಲ. ಆದರೆ ಬಿಕ್ಕಟ್ಟು ಮುಂದುವರಿದರೆ ಸೂರ್ಯಕಾಂತಿ ಎಣ್ಣೆಯ ಪೂರೈಕೆಗೆ ಅಡಚಣೆ ಎದುರಾಗಬಹುದು. ಏಕೆಂದರೆ ಹಡಗುಗಳು ಸುತ್ತುಬಳಸಿನ ಮಾರ್ಗವನ್ನು ಹಿಡಿಯಬೇಕಾಗುತ್ತದೆ' ಎಂದು ಭಾರತೀಯ ಎಣ್ಣೆ ಗಿರಣಿಗಳ ಮಾಲೀಕರ ಸಂಘದ ಕಾರ್ಯನಿರ್ವಾಹಕ ನಿರ್ದೇಶಕ ಬಿ.ವಿ. ಮೆಹ್ತಾ ಹೇಳಿದ್ದಾರೆ.

ಭಾರತದಿಂದ ರಫ್ತಾಗುವ ಖಾದ್ಯ ತೈಲದಲ್ಲಿ ಶೇ 20ರಷ್ಟು ಪಶ್ಚಿಮ ಏಷ್ಯಾ ದೇಶಗಳಿಗೆ ಹಾಗೂ ಶೇ 15ರಷ್ಟು ಪಾಲು ಯುರೋಪಿನ ದೇಶಗಳಿಗೆ ತಲುಪುತ್ತದೆ. ಖಾದ್ಯ ತೈಲ, ಕೃಷಿ ಉತ್ಪನ್ನ, ತೋಟಗಾರಿಕಾ ಬೆಳೆಗಳು ಹಾಗೂ ಪುಷ್ಪಕೃಷಿ ಉತ್ಪನ್ನಗಳ ರಫ್ತಿನ ಮೇಲೆಯೂ ಈ ಸಮರದಿಂದಾಗಿ ದುಷ್ಪರಿಣಾಮ ಆಗಬಹುದು ಎಂದು ಅಧಿಕಾರಿಗಳು ಅಂದಾಜು ಮಾಡಿದ್ದಾರೆ.

ಸುದ್ದಿ 2 ನಿಮಿಷ

ಚಾಲ್ತಿ ಖಾತೆ ಕೊರತೆ ಏರಿಕೆ

ಮುಂಬೈ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ದೇಶದ ಚಾಲ್ತಿ ಖಾತೆ ಕೊರತೆ (ಸಿಎಡಿ) ₹1.21 ಲಕ್ಷ ಕೋಟಿ ಅಥವಾ ಜಿಡಿಪಿಯ ಶೇ 1.3ರಷ್ಟು ಆಗಿದೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಸೋಮವಾರ ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಇದೇ ತ್ರೈಮಾಸಿಕದಲ್ಲಿ ಇದು ₹1 ಲಕ್ಷ ಕೋಟಿಯಷ್ಟಾಗಿತ್ತು. ವ್ಯಾಪಾರ ಕೊರತೆ ಹೆಚ್ಚಳವೇ ಚಾಲ್ತಿ ಖಾತೆ ಕೊರತೆ ಏರಿಕೆಗೆ ಕಾರಣ ಎಂದು ತಿಳಿಸಿದೆ.

ಆದರೆ, 2024–25ರ ಏಪ್ರಿಲ್‌ನಿಂದ ಡಿಸೆಂಬರ್‌ವರೆಗಿನ ಅವಧಿಯಲ್ಲಿ ದೇಶದ ಚಾಲ್ತಿ ಖಾತೆ ಕೊರತೆ ₹3.35 ಲಕ್ಷ ಕೋಟಿಯಷ್ಟಿತ್ತು. ಇದು ಪ್ರಸಕ್ತ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹2.76 ಲಕ್ಷ ಕೋಟಿಗೆ ಇಳಿದಿದೆ.

ಸರಕುಗಳ ವ್ಯಾಪಾರ ಕೊರತೆ ₹8.58 ಲಕ್ಷ ಕೋಟಿಯಷ್ಟಿದ್ದರೆ, ಸೇವೆಗಳ ನಿವ್ವಳ ಸ್ವೀಕೃತಿ ₹5.2 ಲಕ್ಷ ಕೋಟಿಯಷ್ಟಿದೆ ಎಂದು ತಿಳಿಸಿದೆ.

ವಿದೇಶದಲ್ಲಿ ಉದ್ಯೋಗ ಮಾಡುತ್ತಿರುವ ಭಾರತೀಯರು ತಾಯ್ನಾಡಿಗೆ ₹3.38 ಲಕ್ಷ ಕೋಟಿ ರವಾನಿಸಿದ್ದಾರೆ. ವಿದೇಶಿ ನೇರ ಹೂಡಿಕೆಯ ಹರಿವು ₹33,917 ಕೋಟಿಯಾಗಿದೆ ಎಂದು ಆರ್‌ಬಿಐ ಹೇಳಿದೆ.

ಮೀಸಲು ಸಂಗ್ರಹ ಏರಿಕೆ: ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಡಿಸೆಂಬರ್‌ವರೆಗೆ ದೇಶದ ವಿದೇಶಿ ವಿನಿಮಯ ಮೀಸಲು ಸಂಗ್ರಹವು ₹1.77 ಲಕ್ಷ ಕೋಟಿಯಷ್ಟಾಗಿದೆ ಎಂದು ಆರ್‌ಬಿಐ ತಿಳಿಸಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹98,068 ಕೋಟಿಯಷ್ಟಿತ್ತು.

ವಾಣಿಜ್ಯ ವಿಮಾನಗಳಿಗೆ ಪಾಕ್ ವಾಯುಮಾರ್ಗ ನಿರ್ಬಂಧ

ಲಾಹೋರ್ (ಪಿಟಿಐ): ಕರಾಚಿ ಹಾಗೂ ಲಾಹೋರ್‌ನ ವಾಯುಮಾರ್ಗ ಮಾಹಿತಿ ವಲಯದ (ಎಫ್‌ಐಆರ್) ಕೆಲವು ಮಾರ್ಗಗಳಲ್ಲಿ ವಾಣಿಜ್ಯ ವಿಮಾನಗಳ ಕಾರ್ಯಾಚರಣೆಯನ್ನು ನಿರ್ದಿಷ್ಟ ಅವಧಿಯವರೆಗೆ ನಿರ್ಬಂಧಿಸಲಾಗಿದೆ.

ಪ್ರಾದೇಶಿಕ ಪರಿಸ್ಥಿತಿಯಲ್ಲಿನ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಪಾಕಿಸ್ತಾನವು ಸೇನಾ ಸಮರಾಭ್ಯಾಸ ನಡೆಸಲು ಮುಂದಾಗಿದೆ. ಸಮರಾಭ್ಯಾಸದಲ್ಲಿ ಪಾಕ್ ವಾಯುಪಡೆಯ ಯುದ್ಧ ವಿಮಾನಗಳು ಭಾಗಿಯಾಗಲಿರುವ ಕಾರಣ ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಪಾಕಿಸ್ತಾನ ವಿಮಾನ ನಿಲ್ದಾಣಗಳ ಪ್ರಾಧಿಕಾರದ ವಕ್ತಾರ ತಿಳಿಸಿದ್ದಾರೆ.

ಮಾರ್ಚ್ 3ರಿಂದ ಮಾರ್ಚ್ 13ರವರೆಗೆ ಬೆಳಿಗ್ಗೆ 9ರಿಂದ ಮಧ್ಯಾಹ್ನ 3ರವರೆಗೆ ಈ ಮಾರ್ಗಗಳಲ್ಲಿ ವಾಣಿಜ್ಯ ವಿಮಾನಗಳ ಕಾರ್ಯಾಚರಣೆಗೆ ಅನುಮತಿ ಇರುವುದಿಲ್ಲ. ಈ ಅವಧಿಯಲ್ಲಿ ಪಾಕ್ ವಾಯುಪಡೆಯ ಯುದ್ಧ ವಿಮಾನಗಳ ಸಮರಾಭ್ಯಾಸ ನಡೆಯಲಿದೆ ಎಂದೂ ವಕ್ತಾರ ತಿಳಿಸಿದ್ದಾರೆ.

ಪಾಕಿಸ್ತಾನ– ಅಫ್ಗಾನಿಸ್ತಾನ ಪಡೆಗಳ ನಡುವೆ ಗಡಿಯಲ್ಲಿ ಸಂಘರ್ಷ ನಡೆಯುತ್ತಿರುವಂತೆಯೇ ಪಾಕ್ ತೆಗದುಕೊಂಡಿರುವ ಈ ಕ್ರಮ ಮಹತ್ವ ಪಡೆದಿದೆ.

ಯುದ್ಧದ ಪರಿಣಾಮಕ್ಕೆ ಕುಸಿದ ಪೇಟೆ

ದಿನದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹6.59 ಲಕ್ಷ ಕೋಟಿ ಇಳಿಕೆ



ಮುಂಬೈ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಸಮರವು ತೀವ್ರ ಸ್ವರೂಪ ಪಡೆದುಕೊಂಡಿರುವುದು ಹಾಗೂ ಕಚ್ಚಾ ತೈಲದ ಬೆಲೆಯು ಭಾರಿ ಏರಿಕೆ ಕಂಡಿರುವ ಕಾರಣದಿಂದಾಗಿ ಹೂಡಿಕೆದಾರರು ಷೇರುಗಳ ಖರೀದಿಗೆ ಹಿಂದೇಟು ಹಾಕಿದರು. ಷೇರುಗಳ ಮಾರಾಟಕ್ಕೆ ಹೆಚ್ಚು ಒತ್ತು ನೀಡಿದರು. ಇದರಿಂದಾಗಿ ಸೋಮವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇ 1ಕ್ಕಿಂತ ಹೆಚ್ಚು ಕುಸಿದವು.

ಜಾಗತಿಕ ಷೇರುಪೇಟೆಗಳಲ್ಲಿನ ನಿರಾಶಾದಾಯಕ ವಹಿವಾಟು ಹಾಗೂ ವಿದೇಶಿ ಹೂಡಿಕೆಯ ಹೊರಹರಿವು ಕೂಡ ಹೂಡಿಕೆದಾರರ ಮೇಲೆ ಪರಿಣಾಮ ಬೀರಿದವು ಎಂದು ವರ್ತಕರು ತಿಳಿಸಿದ್ದಾರೆ.

ಷೇರುಪೇಟೆ ಸೂಚ್ಯಂಕಗಳ ಕುಸಿತದ ಪರಿಣಾಮವಾಗಿ ಹೂಡಿಕೆದಾರರ ಸಂಪತ್ತು ಒಂದು ದಿನದಲ್ಲಿ ₹6.59 ಲಕ್ಷ ಕೋಟಿಯಷ್ಟು ಕಡಿಮೆ ಆಗಿದೆ. ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬ್ರೆಂಟ್ ಕಚ್ಚಾ ತೈಲದ ಬೆಲೆಯು ಶೇ 7.29ರಷ್ಟು ಹೆಚ್ಚಾಗಿ ಪ್ರತಿ ಬ್ಯಾರೆಲ್‌ಗೆ 77.85 ಡಾಲರ್‌ಗೆ ತಲುಪಿದೆ.

ಚಿನ್ನದ ಧಾರಣೆ ₹8,100, ಬೆಳ್ಳಿ ₹32 ಸಾವಿರ ಜಿಗಿತ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಸೋಮವಾರ ನಡೆದ ವಹಿವಾಟಿನಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಏರಿಕೆ ಕಂಡಿದೆ.

10 ಗ್ರಾಂ ಚಿನ್ನದ (ಶೇ 99.9ರಷ್ಟು ಪರಿಶುದ್ಧತೆ) ದರವು ₹8,100 ಹೆಚ್ಚಳವಾಗಿ (ಶೇ 4.92), ₹1,72,800ರಂತೆ ಮಾರಾಟವಾಗಿದೆ. ಬೆಳ್ಳಿ ದರವು ಕೆ.ಜಿಗೆ ₹32 ಸಾವಿರ (ಶೇ 11.94) ಏರಿಕೆಯಾಗಿ, ₹3 ಲಕ್ಷಕ್ಕೆ ತಲುಪಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪಶ್ಚಿಮ ಏಷ್ಯಾದಲ್ಲಿ ಉಂಟಾಗಿರುವ ಬಿಕ್ಕಟ್ಟಿನಿಂದ ಹೂಡಿಕೆದಾರರು ಸುರಕ್ಷಿತ ಹೂಡಿಕೆಯಾದ ಚಿನ್ನ ಮತ್ತು ಬೆಳ್ಳಿ ಖರೀದಿಗೆ ಮುಂದಾಗಿದ್ದಾರೆ. ಇದರಿಂದಾಗಿ ಜಾಗತಿಕ ಮಾರುಕಟ್ಟೆಯಲ್ಲಿ ಈ ಲೋಹಗಳ ಬೆಲೆಯು ಏರಿಕೆಯಾಗಿದ್ದು, ಬೆಲೆ ಹೆಚ್ಚಳದ ಪರಿಣಾಮ ದೇಶದ ಮಾರುಕಟ್ಟೆಯ ಮೇಲೆಯೂ ಆಗಿದೆ ಎಂದು ತಿಳಿಸಿದೆ.

ಸೋಮವಾರದ ವಹಿವಾಟಿನ ಆರಂಭದಲ್ಲಿ ಮುಂಬೈ ಷೇರುಪೇಟೆ (ಬಿಎಸ್‌ಇ) ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 2,743 ಅಂಶದವರೆಗೆ ಕುಸಿದಿತ್ತು. ನಂತರ, 1,048 ಅಂಶ ಕುಸಿತದೊಂದಿಗೆ ವಹಿವಾಟನ್ನು ಕೊನೆಗೊಳಿಸಿತು.

ರಾಷ್ಟ್ರೀಯ ಷೇರುಪೇಟೆಯ (ಎನ್‌ಎಸ್‌ಇ) ಸಂವೇದಿ ಸೂಚ್ಯಂಕ ನಿಫ್ಟಿ ಕೂಡ 312 ಅಂಶ ಕುಸಿತದೊಂದಿಗೆ ವಹಿವಾಟು ಕೊನೆಗೊಳಿಸಿತು. ವಹಿವಾಟಿನ ನಡುವಿನಲ್ಲಿ ಇದು 575 ಅಂಶದವರೆಗೆ ಕುಸಿದಿತ್ತು.

ಸೇವಾ ವಲಯ, ಗ್ರಾಹಕ ಬಳಕೆಯ ವಿವಿಧ ಉಪಕರಣಗಳ ವಲಯ, ವಾಹನ, ತೈಲ ಮತ್ತು ಅನಿಲ, ಕೈಗಾರಿಕೆಗಳು, ಇಂಧನ ವಲಯದ ಷೇರಿನ ಮೌಲ್ಯ ಕುಸಿದಿದೆ.

'ಪಶ್ಚಿಮ ಏಷ್ಯಾದ ಬಿಕ್ಕಟ್ಟು ಜಾಗತಿಕ ಬಂಡವಾಳ ಮಾರುಕಟ್ಟೆಗಳಲ್ಲಿ ಅಸ್ಥಿರತೆ ಮೂಡಿಸಿದೆ' ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ವಿಭಾಗದ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

ಕೈಗಾರಿಕಾ ಉತ್ಪಾದನೆ ಇಳಿಕೆ



ನವದೆಹಲಿ (ಪಿಟಿಐ): ದೇಶದ ಕೈಗಾರಿಕಾ ಉತ್ಪಾದನೆಯ ಬೆಳವಣಿಗೆ (ಐಐಪಿ) ಪ್ರಮಾಣವು ಜನವರಿಯಲ್ಲಿ ಮೂರು ತಿಂಗಳ ಕನಿಷ್ಠ ಮಟ್ಟಕ್ಕೆ ಇಳಿಕೆ ಆಗಿದ್ದು, ಶೇ 4.8ರಷ್ಟು ದಾಖಲಾಗಿದೆ. 2025ರ ಜನವರಿಯಲ್ಲಿ ಇದು ಶೇ 5.2ರಷ್ಟಿತ್ತು.

ಗಣಿಗಾರಿಕೆ ಮತ್ತು ತಯಾರಿಕಾ ವಲಯಗಳಲ್ಲಿನ ಉತ್ಪಾದನೆ ಇಳಿಕೆ ಆಗಿರುವುದೇ ಐಐಪಿ ಬೆಳವಣಿಗೆ ನಿಧಾನವಾಗಲು ಕಾರಣ ಎಂದು ರಾಷ್ಟ್ರೀಯ ಸಾಂಖ್ಯಿಕ ಕಚೇರಿ (ಎನ್‌ಎಸ್‌ಒ) ಸೋಮವಾರ ತಿಳಿಸಿದೆ.

ಕಳೆದ ವರ್ಷದ ಜನವರಿಯಲ್ಲಿ ತಯಾರಿಕಾ ವಲಯದ ಉತ್ಪಾದನೆಯು ಶೇ 5.8ರಷ್ಟಿತ್ತು. ಇದು ಈ ಜನವರಿಯಲ್ಲಿ ಶೇ 4.8ಕ್ಕೆ ಇಳಿದಿದೆ. ಗಣಿಗಾರಿಕೆ ವಲಯದಲ್ಲಿನ ಉತ್ಪಾದನೆಯು ಶೇ 4.4ರಿಂದ ಶೇ 4.3ಕ್ಕೆ ಇಳಿದಿದೆ. ವಿದ್ಯುತ್ ವಲಯದ ಬೆಳವಣಿಗೆ ಶೇ 2.4ರಿಂದ ಶೇ 5.1ಕ್ಕೆ ಹೆಚ್ಚಳವಾಗಿದೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ದೇಶದ ಕೈಗಾರಿಕಾ ವಲಯದ ಉತ್ಪಾದನೆ ಶೇ 4ಕ್ಕೆ ಇಳಿದಿದೆ. ಕಳೆದ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ಇದು ಶೇ 4.2ರಷ್ಟಿತ್ತು ಎಂದು ತಿಳಿಸಿದೆ.

ತಯಾರಿಕಾ ವಲಯ ಚಟುವಟಿಕೆ ಏರಿಕೆ: ದೇಶದ ತಯಾರಿಕಾ ವಲಯದ ಚಟುವಟಿಕೆ ಫೆಬ್ರುವರಿ ತಿಂಗಳಿನಲ್ಲಿ ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿಕೆಯಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯ ಮಾಸಿಕ ಸಮೀಕ್ಷಾ ವರದಿ ಸೋಮವಾರ ತಿಳಿಸಿದೆ.

ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆಯು ನಿರ್ವಹಿಸುವ 'ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕ'ವು (ಪಿಎಂಐ) ಜನವರಿಯಲ್ಲಿ 55.4ರಷ್ಟಿತ್ತು. ಫೆಬ್ರುವರಿಯಲ್ಲಿ ಅದು 56.9ಕ್ಕೆ ಏರಿಕೆ ಆಗಿದೆ ಎಂದು ಹೇಳಿದೆ.

ಈ ಸೂಚ್ಯಂಕವು 50ರ ಮೇಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಅರ್ಥೈಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಅದನ್ನು ಕುಸಿತವೆಂದು ಕಾಣಲಾಗುತ್ತದೆ.

'ದೇಶೀಯವಾಗಿ ಸರಕುಗಳಿಗೆ ಬೇಡಿಕೆ ಹೆಚ್ಚಳವಾಗಿದೆ. ಇದು ತಯಾರಿಕಾ ವಲಯದ ಚಟುವಟಿಕೆ ಹೆಚ್ಚಳಕ್ಕೆ ಕಾರಣವಾಗಿದೆ' ಎಂದು ಎಚ್‌ಎಸ್‌ಬಿಸಿ ಇಂಡಿಯಾದ ಮುಖ್ಯ ಅರ್ಥಶಾಸ್ತ್ರಜ್ಞೆ ಪ್ರಾಂಜುಲ್ ಭಂಡಾರಿ ಹೇಳಿದ್ದಾರೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹30000-30000
ಬೆಳ್ತಂಗಡಿ	₹9000-20000
ತಿಪಟೂರು	₹28000-29166
ತುರುವೇಕೆರೆ	₹28000-29100

ಈರುಳ್ಳಿ ಧಾರಣೆ ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1000-1500
ಮಧ್ಯಮ	₹600-1000
ಸಣ್ಣ	₹300-600

'ಪೆಟ್ರೋಲ್, ಡೀಸೆಲ್ ದರ ಏರಿಕೆ ಇಲ್ಲ'

ಒಂದನೇ ಪುಟದಿಂದ...

ಕಚ್ಚಾ ತೈಲದ ಬೆಲೆ ಏರಿಕೆಗೆ ಪ್ರತಿಯಾಗಿ ಜಾಗತಿಕ ಮಟ್ಟದಲ್ಲಿ ಇಂಧನ ಬೆಲೆ ಹೆಚ್ಚಾದ ಸಂದರ್ಭದಲ್ಲಿ ಭಾರತದಲ್ಲಿ ಬೆಲೆ ಜಾಸ್ತಿ ಆಗಿಲ್ಲ, ಜಾಗತಿಕ ಮಟ್ಟದಲ್ಲಿ ಬೆಲೆ ತಗ್ಗಿದಾಗಲೂ ಭಾರತದಲ್ಲಿ ಬೆಲೆ ಇಳಿಕೆ ಆಗಿಲ್ಲ.

ಈಗಿನ ಹಂತದಲ್ಲಿ ಕಚ್ಚಾ ತೈಲದ ಬೆಲೆ ಏರಿಕೆಯ ಹೊರೆಯು ಗ್ರಾಹಕರಿಗೆ ವರ್ಗಾವಣೆ ಆಗದಂತೆ ನೋಡಿಕೊಳ್ಳುವ ಉದ್ದೇಶ ಕೇಂದ್ರ ಸರ್ಕಾರಕ್ಕೆ ಇದೆ ಎಂದು ಅಧಿಕಾರಿಗಳ ಮೂಲವೊಂದು ಹೇಳಿದೆ.

ಪಶ್ಚಿಮ ಬಂಗಾಳ, ತಮಿಳುನಾಡು ಮತ್ತು ಅಸ್ಸಾಂ ರಾಜ್ಯಗಳ ವಿಧಾನಸಭಾ ಚುನಾವಣೆ ಹತ್ತಿರವಾಗಿರುವ ಹೊತ್ತಿನಲ್ಲಿ ವಿರೋಧ ಪಕ್ಷಗಳ ಕೈಗೆ ಹೊಸ ಅಸ್ತ್ರವೊಂದನ್ನು ನೀಡುವ ಕೆಲಸವನ್ನು ಸರ್ಕಾರ ಮಾಡಲಿಕ್ಕಿಲ್ಲ ಎನ್ನಲಾಗಿದೆ.

ಸಚಿವರ ಸಭೆ: ಪಶ್ಚಿಮ ಏಷ್ಯಾದ ಪರಿಸ್ಥಿತಿ ವಿಷಮಗೊಂಡಿರುವ ಕಾರಣ ಕೇಂದ್ರ ಪೆಟ್ರೋಲಿಯಂ ಸಚಿವ ಹರದೀಪ್ ಸಿಂಗ್ ಪುರಿ ಅವರು ಕಚ್ಚಾ ತೈಲ, ಎಲ್‌ಪಿಜಿ ಮತ್ತು ಇತರ ಪೆಟ್ರೋಲಿಯಂ ಉತ್ಪನ್ನಗಳ ಲಭ್ಯತೆ ಕುರಿತು ಸೋಮವಾರ ಪರಿಶೀಲನೆ ನಡೆಸಿದರು. ಸರ್ಕಾರಿ ಸ್ವಾಮ್ಯದ ತೈಲೋತ್ಪನ್ನ ಕಂಪನಿಗಳ ಪ್ರತಿನಿಧಿಗಳು, ಸಚಿವಾಲಯದ ಹಿರಿಯ ಅಧಿಕಾರಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

'ಬದಲಾಗುತ್ತಿರುವ ಪರಿಸ್ಥಿತಿಯನ್ನು ನಾವು ನಿರಂತರವಾಗಿ ಅವಲೋಕಿಸುತ್ತಿದ್ದೇವೆ, ದೇಶದಲ್ಲಿ ಪ್ರಮುಖ ಪೆಟ್ರೋಲಿಯಂ ಉತ್ಪನ್ನಗಳು ಲಭ್ಯವಾಗುವಂತೆ, ಕೈಗೆಟಕುವಂತೆ ಮಾಡಲು ಎಲ್ಲ ಕ್ರಮಗಳನ್ನು ಕೈಗೊಳ್ಳುತ್ತೇವೆ' ಎಂದು ಸಚಿವಾಲಯವು ಎಕ್ಸ್ ಮೂಲಕ ತಿಳಿಸಿದೆ.

'ಈ ಬಾರಿ ಆಗಿರುವಂತಹ ಬೆಲೆ ಏರಿಕೆಯನ್ನು ತಾಳಿಕೊಳ್ಳುವ ಸಾಮರ್ಥ್ಯವು ತೈಲೋತ್ಪನ್ನಗಳ ಮಾರಾಟ ಕಂಪನಿಗಳಿಗೆ ಇದೆ' ಎಂದು ಮೂಲವೊಂದು ಹೇಳಿದೆ. ರಷ್ಯಾ–ಉಕ್ರೇನ್ ಸಮರ ಆರಂಭವಾದ ವೇಳೆ ಬ್ಯಾರೆಲ್ ಕಚ್ಚಾ ತೈಲದ ದರವು 119 ಡಾಲರ್‌ಗೆ ಜಿಗಿದಿತ್ತು.

ಇರಾನ್ ಪರ ಮೂಲಭೂತವಾದಿಗಳ ಮೇಲೆ ನಿಗಾಕ್ಕೆ ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ಇರಾನ್ ಪರ ಪ್ರತಿಭಟನೆಗಳು ಮತ್ತು ಇರಾನ್ ಪರವಾದ ಪ್ರಚೋದನಾಕಾರಿ ಹೇಳಿಕೆ ನೀಡುವ ಮೂಲಭೂತವಾದಿಗಳ ಮೇಲೆ ನಿಗಾ ಇಡಿ. ಅವರ ಹೇಳಿಕೆಯು ದೇಶದಲ್ಲಿ ಹಿಂಸಾಚಾರಕ್ಕೆ ಕಾರಣವಾಗಬಹುದು ಎಂದು ಕೇಂದ್ರ ಗೃಹ ಸಚಿವಾಲಯವು ರಾಜ್ಯಗಳಿಗೆ ತಿಳಿಸಿದೆ.

ಸಚಿವಾಲಯವು ಫೆ.28ರಂದು ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಈ ಸಂಬಂಧ ಪತ್ರ ಬರೆದಿದ್ದು, ಮೂಲಭೂತವಾದಿಗಳು ಮತ್ತು ಜಾಗತಿಕ ಭಯೋತ್ಪಾದಕ ಗುಂಪುಗಳ ಸಾಮಾಜಿಕ ಜಾಲತಾಣ ಚಟುವಟಿಕೆ ಮೇಲೆಯೂ ಕಣ್ಗಾವಲಿಡಲು ತಿಳಿಸಿದೆ.

ಇಸ್ರೇಲ್ ಮತ್ತು ಅಮೆರಿಕದ ಕಾನ್ಸುಲೇಟ್ ಮತ್ತು ರಾಯಭಾರ ಕಚೇರಿ ಹಾಗೂ ರಾಜತಾಂತ್ರಿಕ ಕಚೇರಿಗಳಿಗೆ ಹೆಚ್ಚಿನ ಭದ್ರತೆ ನೀಡುವಂತೆಯೂ ಸೂಚಿಸಿದೆ.

ದೇಶದ ಪರಮೋಚ್ಚ ನಾಯಕ ಆಯಾತೊಲ್ಲಾ ಅಲಿ ಖಮೇನಿ ಹತ್ಯೆಯನ್ನು ಖಂಡಿಸಿ ಭಾರತದ ಹಲವೆಡೆ ಶೋಕಾಚರಣೆ ಮಾಡಲಾಗುತ್ತಿದೆ.

'ವೆನಿಜುವೆಲಾಕ್ಕೆ ಮರಳಲಿದ್ದೇನೆ'

ಕರಾಕಸ್ (ಎಪಿ): ವೆನಿಜುವೆಲಾದ ವಿರೋಧ ಪಕ್ಷದ ನಾಯಕಿ, ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತೆ ಮಾರಿಯಾ ಕೊರಿನಾ ಮಚಾದೊ ಅವರು ವೆನಿಜುವೆಲಾಕ್ಕೆ ಮರಳುವುದಾಗಿ ಶನಿವಾರ ಹೇಳಿದ್ದಾರೆ. ಜತೆಗೆ ದೇಶದಲ್ಲಿ ಶೀಘ್ರವೇ ಚುನಾವಣೆಗಳು ನಡೆಯಲಿವೆ ಎಂಬ ಸುಳಿವನ್ನೂ ನೀಡಿದ್ದಾರೆ.



ಮಾರಿಯಾ ಕೊರಿನಾ ಮಚಾದೊ

ಸಾಮಾಜಿಕ ಜಾಲತಾಣದಲ್ಲಿ ಈ ಬಗ್ಗೆ ಮಾಹಿತಿ ಹಂಚಿಕೊಂಡಿರುವ ಮಚಾದೊ, 'ಇನ್ನು ಕೆಲವೇ ವಾರಗಳಲ್ಲಿ ಮರಳಿ ಬರಲಿದ್ದೇನೆ. ಬಹುದೊಡ್ಡ ಚುನಾವಣಾ ಗೆಲುವಿಗೆ ಸಿದ್ಧತೆ ನಡೆಸಿ' ಎಂದು ತಮ್ಮ ಬೆಂಬಲಿಗರಿಗೆ ಕರೆ ನೀಡಿದ್ದಾರೆ. ಆದರೆ, ನಿಖರವಾಗಿ ಯಾವಾಗ ಬರಲಿದ್ದಾರೆ ಎಂದು ತಿಳಿಸಿಲ್ಲ.

ಅಮೆರಿಕದ ಪಡೆಗಳು ಜನವರಿಯಲ್ಲಿ ವೆನಿಜುವೆಲಾದ ಮೇಲೆ ಕಾರ್ಯಾಚರಣೆ ನಡೆಸಿ, ಅಧ್ಯಕ್ಷ ನಿಕೊಲಸ್ ಮಡೂರೊ ಮತ್ತು ಅವರ ಪತ್ನಿಯನ್ನು ವಶಕ್ಕೆ ಪಡೆದಿವೆ. ಆ ಬಳಿಕ ವೆನಿಜುವೆಲಾದ ಹಂಗಾಮಿ ಅಧ್ಯಕ್ಷರಾಗಿ ಡೆಲ್ಸಿ ರಾಡ್ರಿಗಸ್ ಅಧಿಕಾರ ವಹಿಸಿಕೊಂಡಿದ್ದಾರೆ.

ವೆನಿಜುವೆಲಾದಲ್ಲಿ ಚುನಾವಣೆ ನಡೆಯುವ ಬಗ್ಗೆ ಅಮೆರಿಕ ಕೂಡ ಯಾವುದೇ ಸುಳಿವು ನೀಡಿಲ್ಲ. ಆದಾಗ್ಯೂ, ಮಚಾದೊ ಚುನಾವಣಾ ಗೆಲುವಿನ ಬಗ್ಗೆ ಮಾತನಾಡಿರುವುದು ಗಮನ ಸೆಳೆದಿದೆ. ಏತನ್ಮಧ್ಯೆ, ಮಚಾದೊ ದೇಶಕ್ಕೆ ವಾಪಸಾದರೆ ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ಹಂಗಾಮಿ ಅಧ್ಯಕ್ಷೆ ಡೆಲ್ಸಿ ರಾಡ್ರಿಗಸ್ ಎಚ್ಚರಿಸಿದ್ದಾರೆ.

ವೆನೆಜುವೆಲಾದ ಜನರ ಪ್ರಜಾಸತ್ತಾತ್ಮಕ ಹಕ್ಕುಗಳಿಗಾಗಿ ಶಾಂತಿಯುತವಾಗಿ ನಡೆಸಿದ ಹೋರಾಟಗಳಿಗಾಗಿ ಮಚಾದೊ ಅವರಿಗೆ ನೊಬೆಲ್ ಶಾಂತಿ ಪ್ರಶಸ್ತಿಯನ್ನು ನೀಡಲಾಗಿತ್ತು. ಆ ಪ್ರಶಸ್ತಿಯನ್ನು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರಿಗೆ ಸಮರ್ಪಿಸುವ ಮೂಲಕ ಮಚಾದೊ ವಿವಾದಕ್ಕೀಡಾಗಿದ್ದರು.

ಸುಡಾನ್: ದಾಳಿ–169 ಮಂದಿ ಸಾವು

ಜುಬಾ (ಎಪಿ): ದಕ್ಷಿಣ ಸುಡಾನ್‌ನ ಗ್ರಾಮವೊಂದರ ಮೇಲೆ ಬಂಡುಕೋರರು ನಡೆಸಿದ ದಾಳಿಯಲ್ಲಿ 169 ಮಂದಿ ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

ಅಬೀಮ್ನಾಮ್ ಕೌಂಟಿ ಮೇಲೆ ಭಾನುವಾರ ನಡೆದ ದಾಳಿಯಲ್ಲಿ ಮೃತಪಟ್ಟವರ ಪೈಕಿ 90 ಮಂದಿ ನಾಗರಿಕರು ಎಂದು ರುವೆಂಗ್‌ನ ಮಾಹಿತಿ ಸಚಿವ ಜೇಮ್ಸ್ ಮೊನ್‌ಯೊಲಾಕ್ ತಿಳಿಸಿದ್ದಾರೆ. ಮೃತರಲ್ಲಿ ಮಹಿಳೆಯರು ಮತ್ತು ಮಕ್ಕಳೂ ಸೇರಿದ್ದಾರೆ ಎಂದು ಅವರು ಹೇಳಿದ್ದಾರೆ.

'ದಾಳಿಯ ಬಳಿಕ 1,000ಕ್ಕೂ ಹೆಚ್ಚು ಜನರು ಆಶ್ರಯವನ್ನು ಕೇಳಿದ್ದಾರೆ' ಎಂದು ದಕ್ಷಿಣ ಸುಡಾನ್‌ನಲ್ಲಿರುವ ವಿಶ್ವಸಂಸ್ಥೆಯ ಶಾಂತಿಪಾಲನಾ ಕಾರ್ಯಾಚರಣೆ ಪಡೆ (ಯುಎನ್‌ಎಂಐಎಸ್‌ಎಸ್) ತಿಳಿಸಿದೆ.

ಅಧ್ಯಕ್ಷ ಸಾಲ್ವಾ ಕೀರ್ ಅವರಿಗೆ ವಿಧೇಯರಾಗಿರುವಂತೆ ಸರ್ಕಾರ ಒತ್ತಡ ಹೇರುತ್ತಿರುವ ಕಾರಣ ದಕ್ಷಿಣ ಸುಡಾನ್‌ನಲ್ಲಿ ಹಿಂಸಾಚಾರ ಹೆಚ್ಚುತ್ತಿದೆ. ಶಸ್ತ್ರಸಜ್ಜಿತ ಯುವಕರ ಗುಂಪು ವಿರೋಧ ಪಕ್ಷದ ನಾಯಕ ರೈಕ್ ಮಚರ್ ಅವರ ಪರವಾಗಿ ದಂಗೆ ಏಳುತ್ತಿದೆ. ಮಚರ್ ಅವರು ಕಳೆದ ಸೆಪ್ಟೆಂಬರ್‌ವರೆಗೂ ದೇಶದ ಉಪಾಧ್ಯಕ್ಷರಾಗಿದ್ದರು. ಕ್ರಿಮಿನಲ್ ಆರೋಪ ಕೇಳಿಬಂದ ಬಳಿಕ ಅವರನ್ನು ವಜಾಗೊಳಿಸಲಾಗಿದೆ. ಸದ್ಯ ಅವರು ಗೃಹಬಂಧನದಲ್ಲಿದ್ದು, ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣೆ ನಡೆಯುತ್ತಿದೆ.

ಮುಂಬೈ ಧಾರಣೆ (ಶೇಂಗಾ)

02-03-2026	
ಜಾವಾ 70/80(ಹೊಸ)	11300-11400
ಜಾವಾ 80/90(ಹೊಸ)	10600-10700
ದಪ್ಪ ಮಧ್ಯಪ್ರದೇಶ (ಹೊಸ)	8300-8400
ದಪ್ಪ ಗುಜರಾತ್ (ಹೊಸ)	9600-9700
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1720 (1700)
ಒಂದು ವಾರದ ಡೆಲಿವರಿ	1715 (1695)
ಪಾಮ್ ವಾರದ ಡೆಲಿವರಿ	1318 (1283)
ಸೂರ್ಯಕಾಂತಿ ಎಣ್ಣೆ ಕಚ್ಚಾ	1520 (1510)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,68,000 (1,69,000)
ಬೆಳ್ಳಿ ಕೆ.ಜಿಗೆ	2,92,000 (2,95,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪರಮಾಣು ಸಿಡಿತಲೆಗಳನ್ನು ಹೆಚ್ಚಿಸುತ್ತೇವೆ: ಫ್ರಾನ್ಸ್

ಲೈಲೆ ಲಾಂಜ್ (ಫ್ರಾನ್ಸ್) (ಎಪಿ): ದೇಶವು ಪರಮಾಣು ಸಿಡಿತಲೆಗಳ ಸಂಖ್ಯೆಯನ್ನು 300ರಿಂದ ಹೆಚ್ಚಿಸಲಿದೆ ಎಂದು ಫ್ರಾನ್ಸ್ ಅಧ್ಯಕ್ಷ ಇಮ್ಯಾನುವೆಲ್ ಮ್ಯಾಕ್ರನ್ ಸೋಮವಾರ ಹೇಳಿದ್ದಾರೆ.




ಇಮ್ಯಾನುವೆಲ್ ಮ್ಯಾಕ್ರನ್

ದೇಶದ ಗುರಿ ನಿರ್ದೇಶಿತ ಕ್ಷಿಪಣಿ ಜಲಾಂತರ್ಗಾಮಿಯನ್ನು ಹೊಂದಿರುವ ವಾಯುವ್ಯ ಫ್ರಾನ್ಸ್‌ನ ಲೈಲೆ ಲಾಂಜ್‌ನ ಸೇನಾ ನೆಲೆಯಲ್ಲಿ ಮಾತನಾಡಿದ ಅವರು, 'ನಮ್ಮ ಶಸ್ತ್ರಾಗಾರದ ಸಿಡಿತಲೆಗಳನ್ನು ಹೆಚ್ಚಿಸಲು ನಾನು ತೀರ್ಮಾನಿಸಿದ್ದೇನೆ' ಎಂದು ಅವರು ಹೇಳಿದ್ದಾರೆ. ಅದಾಗ್ಯೂ, ಎಷ್ಟು ಹೆಚ್ಚಳವಾಗಲಿದೆ ಎಂಬ ಅಂಕಿ ಅಂಶವನ್ನು ಅವರು ನೀಡಲಿಲ್ಲ. 1992ರ ನಂತರ ಫ್ರಾನ್ಸ್ ತನ್ನ ಪರಮಾಣು ಶಸ್ತ್ರಾಗಾರವನ್ನು ಹೆಚ್ಚಿಸಿರಲಿಲ್ಲ.

ಬಿಜೆಪಿ ಅನುಕೂಲಕ್ಕಾಗಿಯೇ ಎಸ್‌ಐಆರ್: ಮಮತಾ

ಕೋಲ್ಕತ್ತ (ಪಿಟಿಐ): ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಗೆ ಅನುಕೂಲ ಕಲ್ಪಿಸಲು ರಾಜ್ಯದ ಮತದಾರರ ಪಟ್ಟಿಯಿಂದ 63.66 ಲಕ್ಷ ಮತದಾರರನ್ನು ಕೈಬಿಡಲಾಗಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ದೂರಿದ್ದಾರೆ.



ಮಮತಾ ಬ್ಯಾನರ್ಜಿ

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಹೆಸರಿನಲ್ಲಿ ಮತದಾರರನ್ನು ಕೈಬಿಡುತ್ತಿರುವುದರ ಹಿಂದೆ ಚುನಾವಣಾ ಆಯೋಗ– ಬಿಜೆಪಿಯ ಹುನ್ನಾರ ಇದೆ ಎಂದು ಸೋಮವಾರ ಇಲ್ಲಿ ಆರೋಪಿಸಿದರು.

ರಾಜ್ಯದಲ್ಲಿ ಎಸ್‌ಐಆರ್ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಫೆ. 28ರಂದು ಆಯೋಗವು ಅಂತಿಮ ಮತದಾರರ ಪಟ್ಟಿ ಪ್ರಕಟಿಸಿದ್ದು, 'ಪಟ್ಟಿಯಿಂದ ಮತದಾರರ ಹೆಸರನ್ನು ಕೈಬಿಟ್ಟಿರುವುದು ಉದ್ದೇಶಪೂರ್ವಕ ಹಾಗೂ ಅಮಾನವೀಯ ಕೃತ್ಯ' ಎಂದು ವಾಗ್ದಾಳಿ ನಡೆಸಿದ್ದಾರೆ.

'ಅರ್ಹತೆಯಿಂದ ಚುನಾವಣೆ ಗೆಲ್ಲಲು ಬಿಜೆಪಿಗೆ ಸಾಧ್ಯವಿಲ್ಲ ಎಂಬ ಕಾರಣದಿಂದ ಟಿಎಂಸಿ ಬೆಂಬಲಿಗರನ್ನು ಮತದಾರರನ್ನು ಪಟ್ಟಿಯಿಂದ ತೆಗೆದು ಹಾಕಲಾಗಿದೆ. ತಾವು ಸ್ಪರ್ಧಿಸಲಿರುವ ಭವಾನಿಪುರ ವಿಧಾನಸಭಾ ಕ್ಷೇತ್ರದಲ್ಲಿ ಈ ಬಾರಿ ಕಮಲ ಪಾಳಯದ ಅಭ್ಯರ್ಥಿ ಗೆಲುವು ಸಾಧಿಸಲಿದ್ದಾರೆ' ಎಂದೂ ಅವರು ಹೇಳಿದರು.

ಎಸ್‌ಐಆರ್‌ನಿಂದ ಮಮತಾಗೆ ಆತಂಕ: ಅಮಿತ್ ಶಾ

ಮಥುರಾಪುರ: 'ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದರೆ ಒಳನುಸುಳುಕೋರರನ್ನು ಹೊರಹಾಕುತ್ತೇವೆ' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಇಲ್ಲಿ ಹೇಳಿದರು.

'ಎಸ್‌ಐಆರ್ ಪ್ರಕ್ರಿಯೆ ಮೂಲಕ ಈಗಾಗಲೇ ಮತದಾರರ ಪಟ್ಟಿಯಿಂದ ಒಳನುಸುಳುಕೋರರನ್ನು ಹೊರಹಾಕಲಾಗಿದೆ. ಇದು ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಲ್ಲಿ ಆತಂಕ ಸೃಷ್ಟಿಸಿದೆ' ಎಂದರು.

'ಆಡಳಿತಾರೂಢ ಟಿಎಂಸಿಯು ಪಶ್ಚಿಮ ಬಂಗಾಳವನ್ನು ಒಳನುಸುಳುಕೋರರ ಪಾಲಿನ ಸ್ವರ್ಗವನ್ನಾಗಿ ಮಾಡಿದೆ' ಎಂದು ದೂರಿದ ಕೇಂದ್ರ ಗೃಹ ಸಚಿವರು, 'ಗಡಿ ರಾಜ್ಯಕ್ಕೆ ಬಿಜೆಪಿ ಮಾತ್ರ ಭದ್ರತೆ ಒದಗಿಸಬಲ್ಲದು' ಎಂದು ಹೇಳಿದರು.

'ಬದಲಾವಣೆ ಎಂದರೆ... ಗಡಿಯ ಭದ್ರಪಡಿಸುವಿಕೆ, ನೇಮಕಾತಿಯಲ್ಲಿನ ಭ್ರಷ್ಟಾಚಾರ ನಿರ್ಮೂಲನೆಗೊಳಿಸುವುದು, ಮಹಿಳೆಯರ ಸುರಕ್ಷತೆ' ಎಂದು ಶಾ ತಿಳಿಸಿದರು.

ತಂಬಾಕು ಮಂಡಳಿ, ಖರೀದಿದಾರರ ಸಭೆ ನಡೆಸಿದ ಎಚ್‌ಡಿಕೆ ಸೂಚನೆ

'ತಂಬಾಕು: ಸರಾಸರಿ ಬೆಲೆಗೆ ಖರೀದಿಸಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ರಾಜ್ಯದ ತಂಬಾಕು ಮಾರುಕಟ್ಟೆಗಳಲ್ಲಿ ರೈತರಿಂದ ಹಿಂದಿನ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಉತ್ಪನ್ನ ಖರೀದಿಸಬೇಕು. ತಂಬಾಕು ಮಂಡಳಿಯು ಹರಾಜು ಪ್ರಕ್ರಿಯೆ ಮೇಲೆ ನಿಗಾ ವಹಿಸಬೇಕು' ಎಂದು ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಎಚ್.ಡಿ. ಕುಮಾರಸ್ವಾಮಿ ಸೂಚಿಸಿದರು.

ತಂಬಾಕು ಮಂಡಳಿಯು ಸೋಮವಾರ ಇಲ್ಲಿ ಆಯೋಜಿಸಿದ್ದ ಜನಪ್ರತಿನಿಧಿಗಳು ಹಾಗೂ ಪ್ರಮುಖ ವರ್ತಕರೊಂದಿಗಿನ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ತಂಬಾಕು ಉತ್ಪನ್ನಗಳಿಗೆ ವಿಧಿಸುವ ತೆರಿಗೆ ಕುರಿತು ದೂರುಗಳಿದ್ದಲ್ಲಿ ಲಿಖಿತವಾಗಿ ಸಲ್ಲಿಸಿದರೆ ಕೇಂದ್ರ ಹಣಕಾಸು ಸಚಿವರ ಗಮನಕ್ಕೆ ತರಬಹುದು. ಆದರೆ ತೆರಿಗೆ ನೆಪದಲ್ಲಿ ರೈತರಿಗೆ ಅನ್ಯಾಯ ಆಗದಂತೆ ನೋಡಿಕೊಳ್ಳಬೇಕು' ಎಂದು ಸೂಚಿಸಿದರು.

ಐಟಿಸಿ ಕಂಪನಿಯ ಹಿರಿಯ ಅಧಿಕಾರಿ ರವಿ, 'ತಂಬಾಕು ಉತ್ಪನ್ನಗಳಿಗೆ ವಿಧಿಸುತ್ತಿದ್ದ ಜಿಎಸ್‌ಟಿಯನ್ನು ಕೇಂದ್ರವು ಶೇ 18ರಿಂದ ಶೇ 40ಕ್ಕೆ ಏರಿಸಿದೆ. ಸಿಗರೇಟ್‌ಗಳ ಮೇಲಿನ ತೆರಿಗೆ ದುಪ್ಪಟ್ಟಾಗಿದೆ. ಇದರಿಂದ ಉತ್ಪನ್ನಗಳಿಗೆ ಬೇಡಿಕೆ ಕುಸಿಯುತ್ತಿದ್ದು, ನಾವು ಕಡಿಮೆ ತಂಬಾಕು ಖರೀದಿಸುವುದು ಅನಿವಾರ್ಯವಾಗಿದೆ. ಆದರೆ ಬೆಲೆಯಲ್ಲಿ ಯಾವುದೇ ವ್ಯತ್ಯಾಸ ಮಾಡಿಲ್ಲ' ಎಂದು ಹೇಳಿದರು.



ಮೈಸೂರಿನಲ್ಲಿ ಜನಪ್ರತಿನಿಧಿಗಳು ಹಾಗೂ ತಂಬಾಕು ವರ್ತಕರೊಂದಿಗಿನ ಸಭೆಯಲ್ಲಿ ಕೇಂದ್ರ ಸಚಿವ ಎಚ್‌ಡಿ. ಕುಮಾರಸ್ವಾಮಿ ಮಾತನಾಡಿದರು. ಸಚಿವ ಕೆ.ವೆಂಕಟೇಶ್, ಶಾಸಕ ಎ.ಮಂಜು, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಜೊತೆಗಿದ್ದರು

ತಂಬಾಕನ್ನು ಬೆಳೆ ವಿಮೆ ವ್ಯಾಪ್ತಿಗೆ ಸೇರಿಸಲು ಕೇಂದ್ರ ಸರ್ಕಾರವು ಸಮ್ಮತಿಸಿದ್ದು, ಕರ್ನಾಟಕವೂ ಇದನ್ನು ಹವಾಮಾನ ಆಧಾರಿತ ಬೆಳೆ ವಿಮೆ ಪಟ್ಟಿಗೆ ಸೇರಿಸಬೇಕು ತಂಬಾಕು ಮಂಡಳಿಯ ಅಧ್ಯಕ್ಷ ಯಶವಂತ ಕುಮಾರ್ ಅವರು ಸಭೆಯಲ್ಲಿ ಅಭಿಪ್ರಾಯಪಟ್ಟರು.

ಖರೀದಿಸಲು ಸೂಚನೆ: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, 'ರಾಜ್ಯದಲ್ಲಿ ಈ ವರ್ಷ 8.5 ಕೋಟಿ ಕೆ.ಜಿ. ತಂಬಾಕು ಬೆಳೆದಿದ್ದು, 4 ಕೋಟಿ ಕೆ.ಜಿ. ಈಗಾಗಲೇ ಕಡಿಮೆ ಬೆಲೆಗೆ ಹರಾಜಾಗಿದೆ. ಉಳಿದುದನ್ನು ದಿನದ ಸರಾಸರಿ ಅಥವಾ ಅದಕ್ಕಿಂತ ಹೆಚ್ಚು ಬೆಲೆಗೆ ಖರೀದಿಸಬೇಕು' ಎಂದು ಐಟಿಸಿ ಕಂಪನಿ ಪ್ರತಿನಿಧಿಗಳಿಗೆ ನಿರ್ದೇಶನ ನೀಡಿದರು.

ಎಫ್‌ಡಿಐಗೆ ಒಲವು: 'ಐಟಿಸಿ ಕಂಪನಿಯು ಏಕಸ್ವಾಮ್ಯದಿಂದ ರೈತರಿಗೆ ನ್ಯಾಯಯುತ ಬೆಲೆ ಸಿಗುತ್ತಿಲ್ಲ. ತಂಬಾಕಿಗೆ ಸ್ಪರ್ಧಾತ್ಮಕ ದರ ಒದಗಿಸುವ ಸಲುವಾಗಿ ಎಫ್‌ಡಿಐ ಮೂಲಕ ವಿದೇಶಿ ಕಂಪನಿಗಳೂ ಹರಾಜು ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸಬೇಕು' ಎಂದು ರೇಷ್ಮೆ ಮತ್ತು ಪಶುಸಂಗೋಪನೆ ಸಚಿವ ಕೆ. ವೆಂಕಟೇಶ್ ಒತ್ತಾಯಿಸಿದರು.

ಈ ಬಗ್ಗೆ ಪರಿಶೀಲಿಸಿ ಕೇಂದ್ರಕ್ಕೆ ಪ್ರಸ್ತಾವ ಸಲ್ಲಿಸುವುದಾಗಿ ತಂಬಾಕು ಮಂಡಳಿ ಕಾರ್ಯನಿರ್ವಾಹಕ ನಿರ್ದೇಶಕಿ ಬಿ. ವಿಶ್ವಶ್ರೀ ಹಾಗೂ ತಂಬಾಕು ಮಂಡಳಿ ಅಧ್ಯಕ್ಷ ಯಶವಂತ ಕುಮಾರ್ ತಿಳಿಸಿದರು.

‘ಪೇ ಪರ್ ವ್ಯೂನಲ್ಲಿ ಸಿಗೋದು ಕೇವಲ ₹10’!



‘ನಿಮ್ಮೆಲ್ಲರಲ್ಲೂ ಒಂದು ವಿನಂತಿ. ನಮ್ಮ ‘ತೀರ್ಥರೂಪ ತಂದೆಯವರಿಗೆ’ ಚಿತ್ರ ಅಮೆಜಾನ್ ಪ್ರೈಮ್‌ನಲ್ಲಿ ಬಿಡುಗಡೆಯಾಗಿದೆ. ತಾವೆಲ್ಲರೂ ಚಿತ್ರದ ಪೈರೇಟೆಡ್ ಕಾಪಿ ನೋಡಬೇಡಿ ಹಾಗೂ ಅದರ ಲಿಂಕ್ ಅನ್ನು ಯಾರಿಗೂ ಕಳುಹಿಸಬೇಡಿ. ನೀವು ಪ್ರೈಮ್‌ನಲ್ಲಿ ನಮ್ಮ ಚಿತ್ರವನ್ನು ಸಂಪೂರ್ಣವಾಗಿ ನೋಡಿದರೆ ನಮಗೆ ₹10 ಬರುತ್ತದೆ..’

ಇದು ಕಳೆದ ಜ.1ರಂದು ಚಿತ್ರಮಂದಿರಗಳಲ್ಲಿ ತೆರೆಕಂಡು, ಸದ್ಯ ಅಮೆಜಾನ್ ಪ್ರೈಮ್‌ನಲ್ಲಿ ಸ್ಟ್ರೀಮ್ ಆಗುತ್ತಿರುವ ‘ತೀರ್ಥರೂಪ ತಂದೆಯವರಿಗೆ’ ಸಿನಿಮಾದ ನಿರ್ದೇಶಕ ರಾಮೇನಹಳ್ಳಿ ಜಗನ್ನಾಥ್ ‘ಎಕ್ಸ್’ ಮೂಲಕ ಮಾಡಿರುವ ಮನವಿ. ಈ ಮನವಿ ಒಟಿಟಿ ವೇದಿಕೆಗಳಲ್ಲಿ ಕನ್ನಡ ಚಿತ್ರರಂಗ ಎದುರಿಸುತ್ತಿರುವ ಸಮಸ್ಯೆಯನ್ನು ಬಹಿರಂಗವಾಗಿ ಹೇಳಿದೆ.

ಈ ಹಿಂದೆ ಶೂಟಿಂಗ್ ಹಂತದಲ್ಲಿರುವಾಗಲೇ ಒಟಿಟಿ ವೇದಿಕೆಗಳು ಸ್ಟಾರ್ ನಟರ ಸಿನಿಮಾಗಳನ್ನು ಖರೀದಿಸುತ್ತಿದ್ದವು. ನಟ ರಿಷಬ್ ಶೆಟ್ಟಿ ಅವರು ನಟಿಸಿ ನಿರ್ದೇಶಿಸಿದ್ದ ‘ಕಾಂತಾರ’ ಪ್ರೀಕ್ವೆಲ್ ಇದೇ ರೀತಿ ದೊಡ್ಡ ಮೊತ್ತಕ್ಕೆ ಖರೀದಿಯಾಗಿತ್ತು. ಇತ್ತೀಚೆಗೆ ಒಟಿಟಿ ವೇದಿಕೆಗಳು ಸಿನಿಮಾ ಖರೀದಿಯನ್ನು ನಿಲ್ಲಿಸಿವೆ. ಹೆಚ್ಚಿನ ಸಿನಿಮಾಗಳನ್ನು ‘ಪೇ ಪರ್ ವ್ಯೂ’ ಆಧಾರದಲ್ಲೇ ಪಡೆಯುತ್ತಿವೆ. ಚಿತ್ರಮಂದಿರಗಳಲ್ಲಿ ಸದ್ದು ಮಾಡಿದ, ಉತ್ತಮ ವಿಮರ್ಶೆಗಳನ್ನು ಪಡೆದ ಸಿನಿಮಾಗಳನ್ನಷ್ಟೇ ಈ ಆಧಾರದಲ್ಲಿ ಒಟಿಟಿ ಸಂಸ್ಥೆಗಳು ಪಡೆಯುತ್ತಿವೆ. ಹೀಗಿದ್ದರೂ ಇನ್ನೂ ನೂರಾರು ಕನ್ನಡ ಸಿನಿಮಾಗಳು ‘ಪೇ ಪರ್ ವ್ಯೂ’ ಆಧಾರದಲ್ಲೂ ಖರೀದಿಯಾಗಿಲ್ಲ.

‘ಜನರು ನಮ್ಮ ಸಿನಿಮಾವನ್ನು ಪ್ರೈಮ್‌ನಲ್ಲಿ ನೋಡಿದರೆ ನಮಗೆ ಗಂಟೆಗೆ ₹4 ದೊರೆಯುತ್ತದೆ. ಓರ್ವ ಪ್ರೇಕ್ಷಕ ಸಂಪೂರ್ಣವಾಗಿ ನಮ್ಮ ಸಿನಿಮಾ ನೋಡಿದರೆ ₹10 ದೊರೆಯುತ್ತದೆ. ಇದುವೇ ನಮ್ಮ ಮುಖ್ಯ ಆದಾಯ ಮೂಲ. ಹೆಚ್ಚಿನವರು ಒಟಿಟಿ ವೇದಿಕೆಗಳು ಸಿನಿಮಾವನ್ನು ಖರೀದಿಸಿವೆ ಎಂದು ಭಾವಿಸುತ್ತಾರೆ. ಆದರೆ ಇವು ಪೇ ಪರ್ ವ್ಯೂ ಆಧಾರದಲ್ಲೇ ಇರುತ್ತವೆ’ ಎಂದಿದ್ದಾರೆ ರಾಮೇನಹಳ್ಳಿ ಜಗನ್ನಾಥ್.

‘ಹೊಂದಿಸಿ ಬರೆಯಿರಿ’ ಸಿನಿಮಾ ಮೂಲಕ ನಿರ್ದೇಶನಕ್ಕೆ ಇಳಿದ ರಾಮೇನಹಳ್ಳಿ ಜಗನ್ನಾಥ್, ಸದ್ಯ ಗಣೇಶ್ ಮುಖ್ಯಭೂಮಿಕೆಯಲ್ಲಿರುವ ‘ತಮ್ಮ ಸುಖಾಗಮನ ಬಯಸುವ’ ಸಿನಿಮಾ ನಿರ್ದೇಶಿಸುತ್ತಿದ್ದಾರೆ. ❖

‘ಸೆಲೆಬ್ರಿಟಿ’ಗೆ ಸುದೀಪ್ ಸಾಥ್





ಸುದೀಪ್

ಗೌರಿ ಆರ್ಟ್ಸ್ ಪ್ರೊಡಕ್ಷನ್‌ನ ಚೊಚ್ಚಲ ಸಿನಿಮಾದ ಶೀರ್ಷಿಕೆಯನ್ನು ನಟ ಸುದೀಪ್ ಇತ್ತೀಚೆಗೆ ಅನಾವರಣಗೊಳಿಸಿದರು. ಅಶ್ವಿನ್ ನಾಯಕನಾಗಿ ನಟಿಸುತ್ತಿರುವ ಈ ಸಿನಿಮಾಗೆ ‘ಸೆಲೆಬ್ರಿಟಿ’ ಎಂಬ ಹೆಸರು ಇಡಲಾಗಿದ್ದು, ಸಾ.ರಾ ಮಹೇಶ್ ಹಾಗೂ ಸುಷ್ಮಾ ಅಶ್ವಿನ್ ಇದನ್ನು ನಿರ್ಮಾಣ ಮಾಡುತ್ತಿದ್ದಾರೆ.

ಕಿರಣ್ ವಿಶ್ವನಾಥ್ ನಿರ್ದೇಶನದ ಈ ಸಿನಿಮಾದಲ್ಲಿ ನಾಯಕಿಯಾಗಿ ‘ಏಳುಮಲೆ’ ಖ್ಯಾತಿಯ ನಟಿ ಪ್ರಿಯಾಂಕಾ ಆಚಾರ್ ಅಭಿನಯಿಸುತ್ತಿದ್ದಾರೆ. ಶೀರ್ಷಿಕೆ ಬಿಡುಗಡೆಗೊಳಿಸಿ ಮಾತನಾಡಿದ ಸುದೀಪ್, ‘ಟೀಸರ್ ತಾಂತ್ರಿಕವಾಗಿ ಸುಂದರವಾಗಿದೆ. ವಿಜಯ್ ಸಂಗೀತ ಚೆನ್ನಾಗಿದೆ. ನಾಯಕ ಅಶ್ವಿನ್ ನೃತ್ಯ ಗಮನಸೆಳೆಯುವಂತಿದೆ. ಒಂದು ಸಿನಿಮಾ ಮಾಡುವುದು ಬಹಳ ಸುಲಭವಾದ ಕೆಲಸವಾದರೆ, ಅದು ಬೆಳೆಯಬೇಕು ಎಂದರೆ ಅದಕ್ಕೆ ಜನರ ಸಹಕಾರ ಬೇಕು’ ಎಂದರು.

ಚಿತ್ರಕ್ಕೆ ಗುಮ್ಮಿನೇನಿ ವಿಜಯ್ ಸಂಗೀತ ನಿರ್ದೇಶನ ಮಾಡುತ್ತಿದ್ದು, ರವಿವರ್ಮಾ ಸಾಹಸ ನಿರ್ದೇಶನ, ಗುಣ ಕಲಾ ನಿರ್ದೇಶನವಿದೆ. ಅನಿರುದ್ಧ ಶಾಸ್ತ್ರೀ ಸಾಹಿತ್ಯ ಹಾಡುಗಳಿಗಿವೆ. ಜಾನಿ ಮಾಸ್ಟರ್ ನೃತ್ಯ ಸಂಯೋಜನೆ ಮಾಡಿದ್ದಾರೆ. ❖

ಉದಯ ಟಿವಿಯಲ್ಲಿ ಕೃಷ್ಣವಂಶಿ



ರೋಹನ್ ಎ., ಶಾರದಾ

ನಾಚಿಕೆ ಸ್ವಭಾವದ ಹುಡುಗ ‘ಕೃಷ್ಣ’ ಹಾಗೂ ವಾಚಾಳಿ ಹುಡುಗಿ ‘ವಂಶಿ’ಯ ಮಧ್ಯೆ ಅರಳುವ ಪ್ರೇಮಕಥೆಯ ‘ಕೃಷ್ಣವಂಶಿ’ ಎಂಬ ಧಾರಾವಾಹಿ ಉದಯ ಟಿವಿಯಲ್ಲಿ ಸೋಮವಾರದಿಂದ(ಏ.2) ಆರಂಭವಾಗಿದೆ.

ಧಾರಾವಾಹಿಯಲ್ಲಿ ನಾಯಕ ‘ಕೃಷ್ಣ’ನಾಗಿ ರೋಹನ್ ಎ. ಹಾಗೂ ನಾಯಕಿ ‘ವಂಶಿ’ಯಾಗಿ ಶಾರದಾ ಪುಂಡಿ ಅಭಿನಯಿಸಿದ್ದು, ಗಿರಿಜಾ ಲೋಕೇಶ್, ಹನುಮಂತೇಗೌಡ, ಹಂಸ, ವಿಜಯ್, ರಜಿನಿ ಟಿ.ಡಿ., ಸುಕೃತಾ ನಾಗ್ ಮುಂತಾದವರು ತಾರಾಬಳಗದಲ್ಲಿದ್ದಾರೆ. ಪರಿಣಿತ ಪ್ರೊಡಕ್ಷನ್ ಬ್ಯಾನರ್‌ನಡಿ ತೇಜಸ್ವಿನಿ ಭಾಸ್ಕರ್ ಮಂಗಾಡಹಳ್ಳಿ ನಿರ್ಮಾಣ ಮಾಡಿರುವ ಈ ಧಾರಾವಾಹಿಯನ್ನು ಸುಬ್ರಹ್ಮಣ್ಯ ಪ್ರಸಾದ್ ನಿರ್ದೇಶಿಸುತ್ತಿದ್ದಾರೆ. ಸೋಮವಾರದಿಂದ ಶನಿವಾರ ಪ್ರತಿ ರಾತ್ರಿ 9.30ಕ್ಕೆ ಧಾರಾವಾಹಿ ಪ್ರಸಾರವಾಗಲಿದೆ. ❖

ಸೆಟ್ಟೇರಿತು ದೇವಿ ಮಹಾತ್ಮೆ



‘ಮರ್ಯಾದೆ ಪ್ರಶ್ನೆ’ ಸಿನಿಮಾ ನಿರ್ದೇಶಿಸಿದ್ದ ನಾಗರಾಜ್ ಸೋಮಯಾಜಿ ಹೊಸ ಪ್ರಾಜೆಕ್ಟ್ ಕೈಗೆತ್ತಿಕೊಂಡಿದ್ದಾರೆ. ಅವರ ನಿರ್ದೇಶನದ ಹೊಸ ಸಿನಿಮಾ ‘ದೇವಿ ಮಹಾತ್ಮೆ’ಯ ಮುಹೂರ್ತ ಇತ್ತೀಚೆಗೆ ಉಡುಪಿ ಜಿಲ್ಲೆಯ ಕಮಲಶಿಲೆಯ ಶ್ರೀ ಬ್ರಾಹ್ಮಿ ದುರ್ಗಾಪರಮೇಶ್ವರಿ ದೇವಸ್ಥಾನದಲ್ಲಿ ನಡೆಯಿತು.

‘ದೇವಿ ಮಹಾತ್ಮೆ’ ಚಿತ್ರಕ್ಕೆ ನಾಗರಾಜ ಸೋಮಯಾಜಿ ಅವರೇ ಕಥೆ ಬರೆದಿದ್ದಾರೆ. ಬರವಣಿಗೆಯಲ್ಲಿ ಅರವಿಂದ್ ಕುಪ್ಲೀಕರ್, ಭಾಸ್ಕರ್ ಬಂಗೇರ ಹಾಗೂ ಗುರು ಆರ್ಯ ಹಾಗೂ ವಾದಿರಾಜ ಶೆಟ್ಟಿ ಜೊತೆಯಾಗಿದ್ದಾರೆ. ಚಿತ್ರಕ್ಕೆ ಎಸ್.ಕೆ. ರಾವ್ ಛಾಯಾಚಿತ್ರಗ್ರಹಣವಿದ್ದು, ಪ್ರಸಾದ್ ಕೆ.ಶೆಟ್ಟಿ ಸಂಗೀತ ನಿರ್ದೇಶನ ಮಾಡುತ್ತಿದ್ದಾರೆ.

ಕಾಮಿಡಿ ಥ್ರಿಲ್ಲರ್ ಅಂಶಗಳನ್ನು ಹೊಂದಿರುವ ಈ ಸಿನಿಮಾದ ಶೂಟಿಂಗ್ ಆರಂಭವಾಗಿದ್ದು, ಕುಂದಾಪುರದ ಸುತ್ತಮುತ್ತ ಚಿತ್ರೀಕರಣ ನಡೆಯುತ್ತಿದೆ. ಮುಹೂರ್ತ ಕಾರ್ಯಕ್ರಮದಲ್ಲಿ ಚಿತ್ರದ ನಿರ್ಮಾಪಕ ಗಾಂಧಿರಾಜನ್ ಉಪಸ್ಥಿತರಿದ್ದರು. ❖

ಭಾರತ– ಕೆನಡಾ: ಯುರೇನಿಯಂ ಒಪ್ಪಂದ

ಮೋದಿ– ಕಾರ್ನಿ ಮಾತುಕತೆ: ₹4.58 ಲಕ್ಷ ಕೋಟಿ ವ್ಯಾಪಾರದ ಗುರಿ ನಿಗದಿ

ನವದೆಹಲಿ (ಪಿಟಿಐ): ಯುರೇನಿಯಂ ಮತ್ತು ನಿರ್ಣಾಯಕ ಖನಿಜಗಳ ಪೂರೈಕೆಗೆ ಸಂಬಂಧಿಸಿದಂತೆ ಭಾರತ ಮತ್ತು ಕೆನಡಾ ಮಹತ್ವದ ಒಪ್ಪಂದಗಳಿಗೆ ಸೋಮವಾರ ಸಹಿ ಮಾಡಿವೆ. ಇದಲ್ಲದೆ ಉಭಯ ದೇಶಗಳು ಶೀಘ್ರದಲ್ಲಿಯೇ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಅಂತಿಮಗೊಳಿಸುವುದಾಗಿ ತಿಳಿಸಿವೆ.

ಭಾರತ ಪ್ರವಾಸದಲ್ಲಿರುವ ಕೆನಡಾದ ಪ್ರಧಾನಿ ಮಾರ್ಕ್ ಕಾರ್ನಿ ಜತೆಗೆ ಪ್ರಧಾನಿ ನರೇಂದ್ರ ಮೋದಿ ಅವರು ಮಾತುಕತೆ ನಡೆಸಿದ ಬಳಿಕ ಈ ಮಹತ್ವದ ಒಪ್ಪಂದಗಳಿಗೆ ಬರಲಾಗಿದೆ.

ದ್ವಿಪಕ್ಷೀಯ ವಾರ್ಷಿಕ ವ್ಯಾಪಾರವನ್ನು 2030ರ ವೇಳೆಗೆ ₹4.58 ಲಕ್ಷ ಕೋಟಿಯಷ್ಟು (50 ಶತಕೋಟಿ ಡಾಲರ್) ವಿಸ್ತರಿಸುವ ಗುರಿ ಸೇರಿದಂತೆ ಎರಡೂ ದೇಶಗಳ ನಡುವಿನ ಸಂಬಂಧಗಳನ್ನು ಮತ್ತಷ್ಟು ಬಲಪಡಿಸಲು ಉಭಯ ನಾಯಕರು ಹೊಸ ಚೌಕಟ್ಟನ್ನು ಶೀಘ್ರದಲ್ಲಿಯೇ ಅಂತಿಮಗೊಳಿಸಿದ್ದಾರೆ.

ರಕ್ಷಣಾ, ನಿರ್ಣಾಯಕ ತಂತ್ರಜ್ಞಾನ, ಪರಮಾಣು ಸ್ಥಾವರಗಳು, ಶಿಕ್ಷಣ, ನವೀಕರಿಸಬಹುದಾದ ಇಂಧನ ಕ್ಷೇತ್ರಗಳಲ್ಲಿ ಸಹಕಾರ ವೃದ್ಧಿಸಲು ಇಬ್ಬರೂ ನಾಯಕರು ಬದ್ಧತೆ ವ್ಯಕ್ತಪಡಿಸಿದರು. ಯುರೇನಿಯಂ ಪೂರೈಕೆ ಒಪ್ಪಂದದ ಅಡಿಯಲ್ಲಿ ಭಾರತದ ನಾಗರಿಕ ಪರಮಾಣು ಇಂಧನ ವಲಯವನ್ನು ಕೆನಡಾ ಬೆಂಬಲಿಸಿದೆ.

‘ನಾಗರಿಕ ಪರಮಾಣು ಇಂಧನ ಕ್ಷೇತ್ರದಲ್ಲಿ ನಾವು ದೀರ್ಘಾವಧಿಯ ಯುರೇನಿಯಂ ಪೂರೈಕೆಗಾಗಿ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದ್ದೇವೆ. ಸಣ್ಣ ಮತ್ತು ಸುಧಾರಿತ ರಿಯಾಕ್ಟರ್‌ಗಳ ಮೇಲೂ ನಾವು ಒಟ್ಟಿಗೆ ದುಡಿಯಲಿದ್ದೇವೆ’ ಎಂದು ಪ್ರಧಾನಿ ನರೇಂದ್ರ ಮೋದಿ ತಿಳಿಸಿದರು.

‘ಭಾರತ– ಕೆನಡಾ ನಡುವಿನ ಈ ಎಲ್ಲ ಒಪ್ಪಂದಗಳು ಹೊಸ, ಸಮೃದ್ಧ ಸಂಬಂಧದ ಆರಂಭವನ್ನು ತೋರಿಸುತ್ತವೆ. ಇದು ಎರಡೂ ದೇಶಗಳ ನಡುವೆ ಭವಿಷ್ಯದಲ್ಲೂ ವ್ಯವಹಾರ ವೃದ್ಧಿ ಮತ್ತು ಕಾರ್ಮಿಕರಿಗೆ ಅವಕಾಶಗಳನ್ನು ಒದಗಿಸುತ್ತದೆ’ ಎಂದು ಕೆನಡಾದ ಪ್ರಧಾನಿ ಕಾರ್ನಿ ಪ್ರತಿಕ್ರಿಯಿಸಿದರು.

‘ಪರಸ್ಪರ ನಂಬಿಕೆ, ಹೊಸ ಶಕ್ತಿ’: ‘ಈ ಒಪ್ಪಂದಗಳು ಮತ್ತು ಬದ್ಧತೆಗಳ ಮೂಲಕ ಉಭಯ ದೇಶಗಳ ನಡುವಿನ ಸಂಬಂಧಗಳು ಪರಸ್ಪರ ನಂಬಿಕೆ, ಹೊಸ ಶಕ್ತಿ ಮತ್ತು ಸಕಾರಾತ್ಮಕತೆಯಿಂದ ತುಂಬಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದರು.

‘ಭಯೋತ್ಪಾದನೆ, ತೀವ್ರವಾದ, ಮೂಲಭೂತವಾದಗಳು ಭಾರತ ಮತ್ತು ಕೆನಡಾ ದೇಶಗಳಿಗೆ ಮಾತ್ರವಲ್ಲದೆ, ಮಾನವೀಯತೆಗೆ ಗಂಭೀರ ಸವಾಲುಗಳಾಗಿವೆ ಎಂಬುದನ್ನು ಎರಡೂ ಕಡೆಯವರು ಒಪ್ಪಿಕೊಂಡಿದ್ದೇವೆ. ಜಾಗತಿಕ ಶಾಂತಿ ಮತ್ತು ಸ್ಥಿರತೆಗಾಗಿ ಎರಡೂ ದೇಶಗಳು ನಿಕಟ ಸಹಕಾರದಿಂದ ಕಾರ್ಯ ನಿರ್ವಹಿಸಲು ಸಹಮತ ವ್ಯಕ್ತಪಡಿಸಿವೆ’ ಎಂದು ಮೋದಿ ಹೇಳಿದರು.



ಕೆನಡಾ ಪ್ರಧಾನಿ ಮಾರ್ಕ್‌ಕಾರ್ನಿ ಜತೆಗೆ ಪ್ರಧಾನಿ ನರೇಂದ್ರ ಮೋದಿ ‘ಹೈದರಾ ಬಾದ್ ಹೌಸ್’ನಲ್ಲಿ ಸೋಮವಾರ ಮಾತುಕತೆ ನಡೆಸಿದರು –ಪಿಟಿಐ ಚಿತ್ರ

ಉಭಯ ದೇಶಗಳು 2030ರ ವೇಳೆಗೆ 50 ಶತಕೋಟಿ ಡಾಲರ್ ವ್ಯಾಪಾರ ತಲುಪುವ ಗುರಿ ಹೊಂದಿವೆ. ಇದಕ್ಕಾಗಿ ಆರ್ಥಿಕ ಸಹಕಾರ ವೃದ್ಧಿಸಲು ಆದ್ಯತೆ ನೀಡಿದ್ದೇವೆ. ಶೀಘ್ರದಲ್ಲಿಯೇ ಸಮಗ್ರ ಆರ್ಥಿಕ ಪಾಲುದಾರಿಕೆ ಒಪ್ಪಂದವನ್ನು ಅಂತಿಮಗೊಳಿಸಲು ನಿರ್ಧರಿಸಿದ್ದೇವೆ ಎಂದು ಮೋದಿ ತಿಳಿಸಿದರು. ಇದರಿಂದ ಎರಡೂ ದೇಶಗಳಲ್ಲಿ ಹೊಸ ಹೂಡಿಕೆ, ಉದ್ಯೋಗಾವಕಾಶಗಳು ಸೃಷ್ಟಿಯಾಗಲಿವೆ ಎಂದರು.

ಇಂಧನ ವಲಯದಲ್ಲಿ ಮಹತ್ವದ ನಡೆ: ‘ಇಂಧನ ಕ್ಷೇತ್ರದಲ್ಲಿ ಮುಂದಿನ ಪೀಳಿಗೆಗೂ ಪಾಲುದಾರಿಕೆಯನ್ನು ನಿರ್ಮಿಸುತ್ತಿದ್ದೇವೆ. ಹೈಡ್ರೋ ಕಾರ್ಬನ್‌ಗಳು ಮತ್ತು ನವೀಕರಿಸಬಹುದಾದ ಇಂಧನ, ಹಸಿರು ಹೈಡ್ರೋಜನ್ ಮತ್ತು ಇಂಧನ ಸಂಗ್ರಹಣೆ ಮೇಲೆ ಕೇಂದ್ರೀಕರಿಸಿದ್ದೇವೆ’ ಎಂದು ಮೋದಿ ವಿವರಿಸಿದರು.

ಶಿಕ್ಷಣ ಕ್ಷೇತ್ರದಲ್ಲೂ ಸಂಬಂಧಗಳ ವಿಸ್ತರಣೆಗೆ ಕ್ರಮ ತೆಗೆದುಕೊಳ್ಳಲಾಗಿದೆ. ಕೃತಕ ಬುದ್ಧಿಮತ್ತೆ, ಆರೋಗ್ಯ, ರಕ್ಷಣೆ, ಕೃಷಿ, ನಾವೀನ್ಯತೆಯಲ್ಲಿ ಹಲವು ವಿಶ್ವವಿದ್ಯಾಲಯಗಳ ಜತೆಗೆ ಹೊಸ ಪಾಲುದಾರಿಕೆ ಹೊಂದಲಿದ್ದೇವೆ. ಕೆನಡಾದ ವಿಶ್ವವಿದ್ಯಾಲಯಗಳು ಭಾರತದಲ್ಲಿ ಕ್ಯಾಂಪಸ್‌ಗಳನ್ನು ತೆರೆಯಲೂ ಒಪ್ಪಿಕೊಂಡಿದ್ದೇವೆ ಎಂದು ಅವರು ಮಾಹಿತಿ ನೀಡಿದರು.

ಕೆನಡಾದಲ್ಲಿ 2023ರಲ್ಲಿ ಖಾಲಿಸ್ತಾನ ಪ್ರತ್ಯೇಕತವಾದಿಯ ಹತ್ಯೆ ಬಳಿಕ ಉಭಯ ದೇಶಗಳ ನಡುವಿನ ಸಂಬಂಧ ಹಳಿತಪ್ಪಿತ್ತು. ಅದನ್ನು ಪುನಃ ಸ್ಥಾಪಿಸಲು ನಡೆದ ನಿರಂತರ ಪ್ರಯತ್ನಗಳ ಭಾಗವಾಗಿ ಈ ಹೊಸ ಕ್ರಮಗಳು ನಡೆದಿವೆ. ಇನ್ನೊಂದೆಡೆ, ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ಜತೆಗೆ ಕೆನಡಾದ ಆರ್ಥಿಕ ಸಂಬಂಧಗಳು ಹದಗೆಡುತ್ತಿವೆ. ಕೆನಡಾವು ಭಾರತ ಜತೆಗೆ ಮಾತುಕತೆ ಮೂಲಕ ವ್ಯಾಪಾರ ಸಂಬಂಧ ವಿಸ್ತರಿಸಲು ಈ ಮೂಲಕ ಯೋಜಿಸಿದೆ.

ಪಶ್ಚಿಮ ಏಷ್ಯಾ ಸ್ಥಿತಿ ಕುರಿತು ಚರ್ಚೆ

ಪಶ್ಚಿಮ ಏಷ್ಯಾದಲ್ಲಿನ ಅನಿಶ್ಚಿತ ಭದ್ರತಾ ಪರಿಸ್ಥಿತಿ ಬಗ್ಗೆಯೂ ಪ್ರಧಾನಿ ನರೇಂದ್ರ ಮೋದಿ ಮತ್ತು ಕೆನಡಾ ಪ್ರಧಾನಿ ಮಾರ್ಕ್ ಕಾರ್ನಿ ಚರ್ಚೆ ನಡೆಸಿದರು. ಪಶ್ಚಿಮ ಏಷ್ಯಾದಲ್ಲಿನ ಈಗಿನ ಪರಿಸ್ಥಿತಿ ಬಗ್ಗೆ ಇಬ್ಬರೂ ನಾಯಕರು ತೀವ್ರ ಕಳವಳ ವ್ಯಕ್ತಪಡಿಸಿದರು.

‘ಭಾರತವು ಸಂವಾದ ಮತ್ತು ರಾಜತಾಂತ್ರಿಕತೆಯ ಮೂಲಕ ಎಲ್ಲ ಸಂಘರ್ಷ, ವಿವಾದಗಳಿಗೆ ಪರಿಹಾರ ಕಂಡುಕೊಳ್ಳುವುದನ್ನು ಬೆಂಬಲಿಸುತ್ತದೆ’ ಎಂದು ಪ್ರಧಾನಿ ಮೋದಿ ಪ್ರತಿಪಾದಿಸಿದರು.

‘ಸಂಘರ್ಷ ಪೀಡಿತ ಪ್ರದೇಶದಲ್ಲಿ ಸಿಲುಕಿರುವ ಭಾರತೀಯ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಎಲ್ಲ ದೇಶಗಳ ಜತೆ ಕೆಲಸ ಮಾಡುವುದನ್ನು ಮುಂದುವರಿಸುತ್ತೇವೆ’ ಎಂದು ಮೋದಿ ಮಾಧ್ಯಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸ್ಫೋಟಕ ತಯಾರಿಕಾ ಕಾರ್ಖಾನೆಯಲ್ಲಿ ಅವಘಡ

ಎಸ್‌ಬಿಎಲ್‌ನ 9 ನಿರ್ದೇಶಕರ ಬಂಧನ

ನಾಗ್ಪುರ (ಪಿಟಿಐ): ಇಲ್ಲಿನ ಸ್ಫೋಟಕಗಳ ತಯಾರಿಕಾ ಕಾರ್ಖಾನೆಯಲ್ಲಿ ಸಂಭವಿಸಿದ ಅವಘಡಕ್ಕೆ ಸಂಬಂಧಿಸಿದಂತೆ ಎಸ್‌ಬಿಎಲ್ ಎನರ್ಜಿ ಲಿಮಿಟೆಡ್‌ನ ಒಂಬತ್ತು ಮಂದಿ ನಿರ್ದೇಶಕರನ್ನು ಬಂಧಿಸಲಾಗಿದೆ.

ಸಂಸ್ಥೆಯ 21 ಮಂದಿ ನಿರ್ದೇಶಕರು ಹಾಗೂ ಪಾಲುದಾರರ ವಿರುದ್ಧ ಬಿಎನ್‌ಎಸ್ ಸೆಕ್ಷನ್ 105ರ ಅಡಿಯಲ್ಲಿ ಪ್ರಕರಣ ದಾಖಲಿಸಿರುವುದಾಗಿಯೂ ಪೊಲೀಸರು ಹೇಳಿದ್ದಾರೆ.

ಗಣಿಗಾರಿಕೆ ಹಾಗೂ ಕೈಗಾರಿಕಾ ಸ್ಫೋಟಕ ತಯಾರಿಸುವ ಕಾರ್ಖಾನೆಯ ಪ್ಯಾಕಿಂಗ್ ಘಟಕದಲ್ಲಿ ಭಾನುವಾರ ಸ್ಫೋಟ ಸಂಭವಿಸಿತ್ತು. ದುರಂತದಲ್ಲಿ ಭಾನುವಾರ 18 ಮಂದಿ ಕಾರ್ಮಿಕರು ಸಾವಿಗೀಡಾಗಿದ್ದರು ಮತ್ತು 24 ಮಂದಿ ಗಾಯಗೊಂಡಿದ್ದರು.

ಸ್ಫೋಟ ಸಂಭವಿಸಿದ ಸಂಸ್ಥೆಯಲ್ಲಿ ಹಲವು ಸುರಕ್ಷತಾ ಲೋಪಗಳು ಇದ್ದವು ಎಂದು ಪೆಟ್ರೋಲಿಯಂ ಮತ್ತು ಸ್ಫೋಟಕ ಸುರಕ್ಷತಾ ಸಂಸ್ಥೆ (ಪಿಇಎಸ್‌ಒ) ಹಾಗೂ ಕೈಗಾರಿಕಾ ಸುರಕ್ಷತಾ ಮತ್ತು ಆರೋಗ್ಯ ನಿರ್ದೇಶನಾಲಯ ನೀಡಿರುವ ಪ್ರಾಥಮಿಕ ವರದಿಗಳಿಂದ ತಿಳಿದುಬಂದಿದೆ.

ಈ ವರದಿಯನ್ನು ಆಧರಿಸಿ ಸಂಸ್ಥೆಯ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಪೊಲೀಸ್ ವರಿಷ್ಠಾಧಿಕಾರಿ ಹರ್ಷ್ ಪೋದಾರ್ ಹೇಳಿದ್ದಾರೆ. ಬಂಧಿತರನ್ನು ವಿಚಾರಣೆ ನಡೆಸಲಾಗುತ್ತಿದ್ದು, ಉಳಿದ ಆರೋಪಿಗಳನ್ನು ಬಂಧಿಸುವ ಪ್ರಯತ್ನ ನಡೆಯುತ್ತಿದೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

‘ಸುರಕ್ಷತಾ ಸಂಸ್ಥೆಗಳೂ ಹೊಣೆ’

ಸ್ಫೋಟಕ ತಯಾರಿಕಾ ಕಾರ್ಖಾನೆಯಲ್ಲಿ ಸುರಕ್ಷತಾ ಕ್ರಮಗಳನ್ನು ನಿರ್ಲಕ್ಷ್ಯಿಸಿರುವುದೇ ಸ್ಫೋಟಕ್ಕೆ ಕಾರಣ ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ಇದಕ್ಕೆ ಸುರಕ್ಷತಾ ಸಂಸ್ಥೆಗಳು ಕೂಡ ಹೊಣೆ ಎಂದು ಮಹಾರಾಷ್ಟ್ರ ಉಸ್ತುವಾರಿ ಸಚಿವ ಚಂದ್ರಶೇಖರ ಬವಂಕುಲೆ ಹೇಳಿದ್ದಾರೆ.

ಸಾವು: 19ಕ್ಕೆ ಏರಿಕೆ

ಸ್ಫೋಟದಲ್ಲಿ ಗಾಯಗೊಂಡಿದ್ದ 24 ಮಂದಿಯ ಪೈಕಿ ಒಬ್ಬ ಕಾರ್ಮಿಕ ಸೋಮವಾರ ಮೃತಪಟ್ಟಿದ್ದಾರೆ. ಇದರೊಂದಿಗೆ ಮೃತರ ಸಂಖ್ಯೆ 19ಕ್ಕೆ ಏರಿಕೆಯಾಗಿದೆ. ಉಳಿದ 23 ಮಂದಿ ಚಿಕಿತ್ಸೆ ಪಡೆಯುತ್ತಿದ್ದು, ಅವರಲ್ಲಿ 13 ಮಂದಿಯ ಆರೋಗ್ಯ ಸ್ಥಿತಿ ಗಂಭೀರವಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಮುಸ್ಲಿಂ ಸಮುದಾಯದವರು ಪುಲ್ವಾಮದಲ್ಲಿ ಪ್ರತಿಭಟನಾ ಮೆರವಣಿಗೆ ನಡೆಸಿದರು – ಪಿಟಿಐ ಚಿತ್ರ

ಮಹಿಳೆಯರ ದೇಗುಲ ಪ್ರವೇಶ: ಟಿಡಿಬಿ ವಿರೋಧ

ಒಂದನೇ ಪುಟದಿಂದ...

ಈ ತೀರ್ಪಿಗೆ ಸಂಬಂಧಿಸಿದ ಮರುಪರಿಶೀಲನಾ ಅರ್ಜಿಗಳು ಪ್ರಸ್ತುತ ಸುಪ್ರೀಂ ಕೋರ್ಟ್‌ನ ಪರಿಗಣನೆಯಲ್ಲಿದ್ದು, ಮಾರ್ಚ್ 14ರ ಮೊದಲು ನಿಲುವು ತಿಳಿಸುವಂತೆ ರಾಜ್ಯ ಸರ್ಕಾರ ಸೇರಿದಂತೆ ಸಂಬಂಧಿಸಿದವರಿಗೆ ನ್ಯಾಯಾಲಯವು ಸೂಚಿಸಿತ್ತು.

ಸುಪ್ರೀಂ ಕೋರ್ಟ್‌ನ ತೀರ್ಪನ್ನು ಜಾರಿಗೊಳಿಸುವುದಾಗಿ ಆಡಳಿತಾರೂಢ ಎಲ್‌ಡಿಎಫ್ ಸರ್ಕಾರ ಹಾಗೂ ಟಿಡಿಬಿ ತಿಳಿಸಿದ್ದವು. ಈ ನಿರ್ಧಾರವು ಬಿಜೆಪಿ ಮತ್ತು ಸಂಘ ಪರಿವಾರದ ಸಂಘಟನೆಗಳ ಹಿಂಸಾತ್ಮಕ ಪ್ರತಿಭಟನೆಗೂ ಕಾರಣವಾಗಿತ್ತು.

> ದೇವಸ್ವಂನ ನಿಲುವು ಒಂದೇ. ಸಂಪ್ರದಾಯ ರಕ್ಷಿಸಬೇಕು ಮತ್ತು ಅನುಸರಿಸಬೇಕು
> **ಕೆ. ಜಯಕುಮಾರ್,** ಟಿಡಿಬಿ ಅಧ್ಯಕ್ಷ

ಇದೀಗ, ಟಿಡಿಬಿ ತನ್ನ ನಿಲುವು ಬದಲಿಸಿದೆ. ಆಡಳಿತಾರೂಢ ಸಿಪಿಎಂ ನೇತೃತ್ವದ ಎಲ್‌ಡಿಎಫ್ ಒಕ್ಕೂಟ ಸರ್ಕಾರವು ತನ್ನ ನಿಲುವನ್ನು ಇನ್ನೂ ಸ್ಪಷ್ಟಪಡಿಸಿಲ್ಲ. ಬಿಂದು ಅಮ್ಮಿನಿ, ಕನಕದುರ್ಗ ಎಂಬ ಇಬ್ಬರು ಮಹಿಳೆಯರು 2019ರ ಜನವರಿ 2ರಂದು ಪೊಲೀಸ್ ರಕ್ಷಣೆಯೊಂದಿಗೆ ದೇಗುಲ ಪ್ರವೇಶಿಸಿದ್ದರು.

ಕೇರಳದಲ್ಲಿ ಶೀಘ್ರದಲ್ಲೇ ವಿಧಾನ ಸಭಾ ಚುನಾವಣೆ ನಡೆಯಲಿದ್ದು, ಆಡಳಿತಾರೂಢ ಎಲ್‌ಡಿಎಫ್ ಸಹ ತನ್ನ ನಿಲುವಿನಲ್ಲಿ ಬದಲಾವಣೆ ಮಾಡಿಕೊಳ್ಳಬಹುದು ಎನ್ನಲಾಗುತ್ತಿದೆ. ‘ಭಕ್ತರ ನಂಬಿಕೆಯನ್ನು ರಕ್ಷಿಸಲು ಸರ್ಕಾರ ಬದ್ಧ’ ಎಂದು ಕಾನೂನು ಸಚಿವ ಪಿ. ರಾಜೀವ್ ಈಚೆಗೆ ಪ್ರತಿಕ್ರಿಯಿಸಿದ್ದರು. ಸಚಿವರ ಈ ಹೇಳಿಕೆಯು, ‘ಪ್ರಗತಿಪರ ನಿಲುವಿನಿಂದ ಹಿಮ್ಮುಖವಾಗುವುದು’ ಎಂದೇ ವ್ಯಾಖ್ಯಾನಿಸಲಾಗಿದೆ.

‘ನಕಲಿ ತೀರ್ಪು ಆಧರಿಸಿ ತೀರ್ಮಾನ ದುರ್ನಡತೆಗೆ ಸಮ’

ಒಂದನೇ ಪುಟದಿಂದ...

‘ಜತೆಗೆ, ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ನಾವು ಈ ವಿಷಯವನ್ನು ಹೆಚ್ಚು ವಿವರವಾಗಿ ಪರಿಶೀಲಿಸುವುದು ಅನಿವಾರ್ಯವಾಗಿದೆ’ ಎಂದು ಅಭಿಪ್ರಾಯಪಟ್ಟಿದೆ.

ಆಂಧ್ರ ಪ್ರದೇಶ ಹೈಕೋರ್ಟ್ ಜನವರಿಯಲ್ಲಿ ನೀಡಿದ್ದ ತಡೆಯಾಜ್ಞೆ ಕುರಿತ ಆದೇಶವನ್ನು ಪ್ರಶ್ನಿಸಿದ್ದ ಅರ್ಜಿಯ ವಿಚಾರಣೆ ವೇಳೆ ಈ ವಿಷಯವು ಸುಪ್ರೀಂ ಕೋರ್ಟ್ ಮುಂದೆ ಬಂದಿದೆ.

ಏನಿದು ಪ್ರಕರಣ?: ಆಸ್ತಿ ವಿವಾದಕ್ಕೆ ಸಂಬಂಧಿಸಿದಂತೆ, ಸ್ಥಳದ ಭೌತಿಕ ಸ್ಥಿತಿಗತಿಗಳನ್ನು ಪರಿಶೀಲಿಸಲು ವಿಚಾರಣಾ ನ್ಯಾಯಾಲಯ ಅಡ್ವೊಕೇಟ್ ಕಮಿಷನರ್ ಅವರನ್ನು ನೇಮಿಸಿತ್ತು.

ಅಡ್ವೊಕೇಟ್ ಕಮಿಷನರ್ ನೀಡಿದ ವರದಿಗೆ ಅರ್ಜಿದಾರರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಕಳೆದ ವರ್ಷ ಆಗಸ್ಟ್‌ನಲ್ಲಿ ವಿಚಾರಣಾ ನ್ಯಾಯಾಲಯ ಈ ಆಕ್ಷೇಪಣೆಗಳನ್ನು ವಜಾಗೊಳಿಸಿತ್ತು. ಈ ವೇಳೆ, ನ್ಯಾಯಾಲಯವು ಕೆಲವು ಹಿಂದಿನ ತೀರ್ಪುಗಳನ್ನು ಉದಾಹರಣೆಯಾಗಿ ನೀಡಿತ್ತು. ಅರ್ಜಿದಾರರು ಈ ತೀರ್ಪುಗಳ ವಿರುದ್ಧ ಮೇಲ್ಮನವಿ ಸಲ್ಲಿಸಿ, ‘ನ್ಯಾಯಾಲಯ ಉಲ್ಲೇಖಿಸಿರುವ ಆ ತೀರ್ಪುಗಳು ಅಸ್ತಿತ್ವದಲ್ಲೇ ಇಲ್ಲ, ಅವು ನಕಲಿ’ ಎಂದು ವಾದಿಸಿದ್ದರು.

ನಂತರ, ಹೈಕೋರ್ಟ್ ಆಕ್ಷೇಪಗಳನ್ನು ಪರಿಶೀಲಿಸಿದಾಗ, ತೀರ್ಪುಗಳು ಎಐ ಸಹಾಯದಿಂದ ಸೃಷ್ಟಿಯಾದವು ಎಂಬುದು ತಿಳಿದುಬಂದಿತ್ತು. ಹೈಕೋರ್ಟ್ ಈ ಬಗ್ಗೆ ಎಚ್ಚರಿಕೆ ನೀಡಿತ್ತಾದರೂ, ಅಂತಿಮವಾಗಿ ವಿಚಾರಣಾ ನ್ಯಾಯಾಲಯದ ನಿರ್ಧಾರವನ್ನೇ ಎತ್ತಿ ಹಿಡಿದಿತ್ತು. ಇದನ್ನು ಪ್ರಶ್ನಿಸಿ ಅರ್ಜಿದಾರರು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದಾರೆ.

‘ಮೇಲ್ಮನವಿ ಅರ್ಜಿಯ ಇತ್ಯರ್ಥಬಾಕಿ ಇರುವವರೆಗೆ ವಿಚಾರಣಾ ನ್ಯಾಯಾಲಯವು ಮುಂದಿನ ಕ್ರಮ ಕೈಗೊಳ್ಳಬಾರದು’ ಎಂದು ಸೂಚಿಸಿದ ನ್ಯಾಯಾಲಯ, ವಿಚಾರಣೆಯನ್ನು ಇದೇ 10ಕ್ಕೆ ಮುಂದೂಡಿದೆ.

ಪಟಾಕಿ ಘಟಕ ಸ್ಫೋಟ: ಸಾವಿನ ಸಂಖ್ಯೆ 22ಕ್ಕೆ ಏರಿಕೆ



ವೆಟ್ಲಪಾಲೆಮ್ (ಪಿಟಿಐ): ಆಂಧ್ರಪ್ರದೇಶದ ಕಾಕಿನಾಡ ಜಿಲ್ಲೆಯ ವೆಟ್ಲಪಾಲೆಂನ ಪಟಾಕಿ ತಯಾರಿಕಾ ಘಟಕದಲ್ಲಿ ಸಂಭವಿಸಿದ್ದ ಸ್ಫೋಟದಲ್ಲಿ ಮೃತಪಟ್ಟವರ ಸಂಖ್ಯೆ ಸೋಮವಾರ 22ಕ್ಕೆ ಏರಿಕೆಯಾಗಿದೆ.

ಫೆಬ್ರುವರಿ 28ರಂದು ಸೂರ್ಯಶ್ರೀ ಫೈರ್ ವರ್ಕ್ಸ್‌ನಲ್ಲಿ ಸ್ಫೋಟ ಸಂಭವಿಸಿ 9 ಮಹಿಳೆಯರು ಸೇರಿ 20 ಮಂದಿ ಮೃತಪಟ್ಟಿದ್ದರು. ಕಾಕಿನಾಡ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದವರಲ್ಲಿ ಮತ್ತೊಬ್ಬರು ಭಾನುವಾರ ರಾತ್ರಿ ಮೃತಪಟ್ಟಿದ್ದಾರೆ ಎಂದು ಜಿಲ್ಲಾ ಆರೋಗ್ಯಾಧಿಕಾರಿ ಜೆ.ನರಸಿಂಹನಾಯಕ್ ತಿಳಿಸಿದ್ದಾರೆ.

‘ಟಿಟಿಡಿ ಅಧ್ಯಕ್ಷ ಬಿ.ಆರ್.ನಾಯ್ಡು ರಾಜೀನಾಮೆ ನೀಡಲಿ’

ಹೈದರಾಬಾದ್: ತಿರುಮಲ ತಿರುಪತಿ ದೇವಸ್ಥಾನ (ಟಿಟಿಡಿ) ಅಧ್ಯಕ್ಷ ಬಿ.ಆರ್.ನಾಯ್ಡು ಅವರು ಮಹಿಳೆಯೊಬ್ಬರನ್ನು ತಬ್ಬಿಕೊಂಡ ದೃಶ್ಯವು ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದ್ದಂತೆಯೇ, ಸಾರ್ವಜನಿಕ ವಲಯದಲ್ಲಿ ಅವರ ವಿರುದ್ಧ ಟೀಕೆಗಳು ವ್ಯಕ್ತವಾಗಿವೆ.

ನಾಯ್ಡು ಅವರು ತೆಲುಗು ಸ್ಯಾಟಲೈಟ್ ಸುದ್ದಿವಾಹಿನಿ ‘ಟಿವಿ–5’ನ ಮಾಲೀಕರಾಗಿದ್ದು, ತಮ್ಮ ಮೇಲಿನ ಆರೋಪವನ್ನು ನಿರಾಕರಿಸಿದ್ದಾರೆ. ‘ಡೀಪ್‌ಫೇಕ್’ ತಂತ್ರಜ್ಞಾನ ಬಳಸಿ, ಈ ದೃಶ್ಯ ನಿರ್ಮಿಸಲಾಗಿದೆ ಎಂದು ತಿಳಿಸಿದ್ದಾರೆ. ನಾಯ್ಡು ಅವರು ನೈತಿಕ ಹೊಣೆ ಹೊತ್ತು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬೇಕು ಎಂದು ವಿರೋಧ ಪಕ್ಷ ವೈಎಸ್‌ಆರ್‌ಸಿಪಿ ಆಗ್ರಹಿಸಿದೆ.



ಬಿ.ಆರ್. ನಾಯ್ಡು

ಮಾಧ್ಯಮಗಳ ಜೊತೆ ಮಾತನಾಡಿದ ಟಿಟಿಡಿ ಮಾಜಿ ಅಧ್ಯಕ್ಷ ಕರುಣಾಕರ್ ರೆಡ್ಡಿ, ‘ಸಾಮಾಜಿಕ ಜಾಲತಾಣದಲ್ಲಿ ಹರಿದಾಡಿದ್ದ ಬಿ.ಆರ್. ನಾಯ್ಡು ಅವರ ವಿಡಿಯೊ ಹಾಗೂ ಫೋಟೊಗಳನ್ನು ಎ.ಐ ಪರಿಶೀಲನೆಗಾಗಿ ಕಳುಹಿಸಿಕೊಡಲಾಗಿತ್ತು. ಅದು ನೈಜವೆಂದು ಕಂಡುಬಂದಿದೆ’ ಎಂದು ಅವರು ಹೇಳಿದರು.

‘ನಾಯ್ಡು ಅವರು ತಿಳಿಸಿದಂತೆ, ತಂತ್ರಜ್ಞಾನ ಬಳಸಿ ನಿರ್ಮಿಸಿಲ್ಲ. ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಟಿಟಿಡಿ ಅಧ್ಯಕ್ಷ ಸ್ಥಾನಕ್ಕೆ ಪ್ರಶ್ನಾರ್ಹ ವ್ಯಕ್ತಿಯನ್ನು ನೇಮಿಸಿದ್ದಾರೆ’ ಎಂದು ಆರೋಪಿಸಿದ್ದಾರೆ.

ಪಾಲ್ಘರ್: ಅನಿಲ ಸೋರಿಕೆ ಸಾವಿರಾರು ಜನರ ಸ್ಥಳಾಂತರ

ಪಾಲ್ಘರ್ (ಪಿಟಿಐ): ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ಕೈಗಾರಿಕಾ ವಲಯದಲ್ಲಿರುವ ರಾಸಾಯನಿಕ ಘಟಕದಲ್ಲಿ ಸೋಮವಾರ ಓಲಿಯಂ ಅನಿಲ (ಸಲ್ಫ್ಯೂರಿಕ್ ಆಮ್ಲ) ಸೋರಿಕೆಯಾಗಿದ್ದು, ಘಟಕ ಮತ್ತು ಸುತ್ತಮುತ್ತಲಿನ ಪ್ರದೇಶಗಳಿಂದ 2,600ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಓಲಿಯಂ ಅನಿಲ ಸೋರಿಕೆಯಿಂದ ಕೆಲವರಿಗೆ ಕಣ್ಣಿನ ಉರಿ ಕಾಣಿಸಿಕೊಂಡಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಭಾಗೇರಿಯಾ ಕೆಮಿಕಲ್ಸ್ ಕಂಪನಿಯ ಘಟಕದಿಂದ ಈ ವಿಷಕಾರಿ ಅನಿಲ ಸೋರಿಕೆಯಾಗಿದ್ದು, ತಕ್ಷಣವೇ ಅಗ್ನಿಶಾಮಕ ದಳ, ಪೊಲೀಸ್ ಸಿಬ್ಬಂದಿ ಮತ್ತು ವಿಪತ್ತು ನಿರ್ವಹಣಾ ಪಡೆ ಸ್ಥಳಕ್ಕೆ ಧಾವಿಸಿ ಪರಿಸ್ಥಿತಿ ನಿಭಾಯಿಸಿವೆ ಎಂದು ಜಿಲ್ಲಾಡಳಿತ ತಿಳಿಸಿದೆ.

‘ಘಟಕ ಹಾಗೂ ಸುತ್ತಮುತ್ತಲ ಪ್ರದೇಶಗಳ 2,600ಕ್ಕೂ ಹೆಚ್ಚು ಜನರನ್ನು ಸ್ಥಳಾಂತರಿಸಲಾಗಿದ್ದು, ಕೆಲವರಿಗೆ ಕಣ್ಣಿನ ಉರಿ ಕಾಣಿಸಿಕೊಂಡಿದೆ. ಮೂವರನ್ನು ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಆರೋಗ್ಯ ಸ್ಥಿರವಾಗಿದೆ ಎಂದು ವೈದ್ಯರು ತಿಳಿಸಿದ್ದಾರೆ’ ಎಂಬುದಾಗಿ ಜಿಲ್ಲಾಡಳಿತದ ಅಧಿಕಾರಿಗಳು ಹೇಳಿದ್ದಾರೆ.

ಕಾಶ್ಮೀರ: ಮುಂದುವರಿದ ಪ್ರತಿಭಟನೆ

ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆ

ಶ್ರೀನಗರ (ಪಿಟಿಐ): ಆಯತೊಲ್ಲಾ ಅಲಿ ಖಮೇನಿ ಹತ್ಯೆ ಖಂಡಿಸಿ ಕಾಶ್ಮೀರದಲ್ಲಿ ಸೋಮವಾರವೂ ಪ್ರತಿಭಟನೆಗಳು ನಡೆದವು.

ಕಣಿವೆ ಪ್ರದೇಶದಲ್ಲಿ ಎರಡನೇ ದಿನವೂ ಪ್ರತಿಭಟನೆಗಳು ನಡೆದ ಕಾರಣ ಪೊಲೀಸರು ತೀವ್ರ ನಿಗಾ ವಹಿಸಿದ್ದರು ಮತ್ತು ಮೊಬೈಲ್ ಇಂಟರ್‌ನೆಟ್ ಸೇವೆಯ ವೇಗವನ್ನು ಕಡಿಮೆಗೊಳಿಸಿದ್ದರು.

ಶಿಯಾ ಸಮುದಾಯದವರು ಬಹುಸಂಖ್ಯೆಯಲ್ಲಿರುವ ಬೆಮಿನ, ಗುಂಡ್ ಹಸ್ಸಿಭತ್ ಮತ್ತು ಜಹಾಂಗೀರ್ ಚೌಕ್ ಮತ್ತು ಪುಲ್ವಾಮದಲ್ಲಿ ಪ್ರತಿಭಟನೆ ತೀವ್ರವಾಗಿತ್ತು. ರಸ್ತೆಗಳಲ್ಲಿ ಮೆರವಣಿಗೆ ನಡೆಸಿ, ಅಮೆರಿಕ ಮತ್ತು ಇಸ್ರೇಲ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಕೆಲ ಪ್ರದೇಶಗಳಲ್ಲಿ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಬಲ ಪ್ರಯೋಗ ಮಾಡಿದರು. ಕೆಲವು ಕಡೆ ಸಂಭವಿಸಿದ ಘರ್ಷಣೆಯಲ್ಲಿ 14 ಮಂದಿ ಗಾಯಗೊಂಡಿದ್ದಾರೆ. ಜನಸಂಚಾರದ ಮೇಲೆಯೂ ನಿರ್ಬಂಧ ಹೇರಲಾಗಿತ್ತು. ಲಾಲ್‌ಚೌಕ್ ನಗರ ಮತ್ತು ಜಿಲ್ಲೆಗಳ ಹಲವು ರಸ್ತೆಗಳಲ್ಲಿ ತಂತಿ ಮತ್ತು ಬ್ಯಾರಿಕೇಡ್‌ಗಳನ್ನು ಅಳವಡಿಸಲಾಗಿತ್ತು.

ಮುತಾಹಿದಾ ಮಜ್ಲಿಸ್ –ಇ–ಉಲಾಮ (ಎಂಎಂಯು) ಅಧ್ಯಕ್ಷ ಮಿರ್‌ವಾಯ್ಜ್ ಉಮರ್ ಫಾರೂಕ್ ಅವರು ಪ್ರತಿಭಟನೆಗೆ ಕರೆ ನೀಡಿದ್ದರು. ಪಿಡಿಪಿ ಸೇರಿದಂತೆ ಹಲವು ರಾಜಕೀಯ ಪಕ್ಷಗಳು ಈ ಪ್ರತಿಭಟನೆಗೆ ಬೆಂಬಲ ನೀಡಿದ್ದವು.

ನವದೆಹಲಿ: ವಿಮಾನ ಸೇವೆಯಲ್ಲಿ ವ್ಯತ್ಯಯ

ನವದೆಹಲಿ (ಪಿಟಿಐ): ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟಿನಿಂದಾಗಿ ಭಾರತ ಸೇರಿದಂತೆ ಹಲವು ರಾಷ್ಟ್ರಗಳ ವಿಮಾನ ಸೇವೆಯಲ್ಲಿ ಸೋಮವಾರವೂ ವ್ಯತ್ಯಯವಾಗಿತ್ತು. ನವದೆಹಲಿ ಸೇರಿ ಹಲವೆಡೆ ಪ್ರಯಾಣಿಕರು ಹೈರಾಣಾದರು.

- ದೆಹಲಿ ವಿಮಾನ ನಿಲ್ದಾಣದಿಂದ ತೆರಳಬೇಕಿದ್ದ ಮತ್ತು ಅಲ್ಲಿಗೆ ಬರಬೇಕಿದ್ದ 87 ಅಂತರರಾಷ್ಟ್ರೀಯ ವಿಮಾನಗಳ ಸಂಚಾರವನ್ನು ರದ್ದುಗೊಳಿಸಲಾಗಿತ್ತು.
- ಕೊಲ್ಕತ್ತ ವಿಮಾನ ನಿಲ್ದಾಣದಲ್ಲಿ 20 ಅಂತರರಾಷ್ಟ್ರೀಯ ವಿಮಾನಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ
- ಭುವನೇಶ್ವರದಿಂದ ದುಬೈಗೆ ತೆರಳಬೇಕಿದ್ದ ಇಂಡಿಗೊ ವಿಮಾನ ಸಂಚಾರವನ್ನು ರದ್ದುಗೊಳಿಸಲಾಯಿತು
- ಭಾರತದ ವಿಮಾನಯಾನ ಸಂಸ್ಥೆಗಳು ಕಳೆದ ಎರಡು ದಿನಗಳಲ್ಲಿ 760 ವಿಮಾನಗಳ ಸಂಚಾರವನ್ನು ರದ್ದುಗೊಳಿಸಿವೆ ಎಂದು ಉನ್ನತ ಮೂಲಗಳು ಮಾಹಿತಿ ನೀಡಿವೆ.



ದೆಹಲಿ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರು ಕಾಯುತ್ತಿದ್ದ ದೃಶ್ಯ – ಪಿಟಿಐ ಚಿತ್ರ

ಒಂದೇ ಇನಿಂಗ್ಸ್‌ನಿಂದ ಹೀರೊ ಪಟ್ಟಕ್ಕೆ...

ಸ್ವಸಾಮರ್ಥ್ಯದ ಮೇಲಿನ ಸಂದೇಹ ತೊಡೆದುಹಾಕಿದರೇ ಸಂಜು ಸ್ಯಾಮ್ಸನ್?

• ಸಿದ್ದಿ ಕಿರಣ್

ಮುಖ್ಯಾಂಶಗಳು

- ವೆಸ್ಟ್ ಇಂಡೀಸ್ ವಿರುದ್ಧ ಅಜೇಯ 97 ರನ್ ಗಳಿಸಿದ ಸಂಜು
- ಸತತ ವೈಫಲ್ಯದ ಬಳಿಕ ಲಯ ಕಂಡುಕೊಂಡ ಕೇರಳದ ಬ್ಯಾಟರ್
- ಹಾಲಿ ವಿಶ್ವಕಪ್‌ನಲ್ಲಿ ಮೂರು ಪಂದ್ಯ ಆಡಿರುವ ಸ್ಯಾಮ್ಸನ್

ಕೋಲ್ಕತ್ತ: ಸಂಜು ಸ್ಯಾಮ್ಸನ್ ಅವರ ಪ್ರತಿಭೆಯ ಬಗ್ಗೆ ಯಾವುದೇ ಅನುಮಾನಗಳಿರಲಿಲ್ಲ. ಕೇರಳ ಕಿರಿಯರ ತಂಡಕ್ಕೆ ಆಡಿದ ದಿನಗಳಿರಲಿ, ರಾಜಸ್ಥಾನ ರಾಯಲ್ಸ್ ತಂಡಕ್ಕೆ ಆಡಿದ ಸಂದರ್ಭವಿರಲಿ ಅಥವಾ ಭಾರತ ತಂಡವನ್ನು ಪ್ರತಿನಿಧಿಸಿದ ಕ್ಷಣಗಳಿರಲಿ... ಅವರ ಪ್ರತಿಭೆ ಏನೆಂಬುದು ಜಾಹೀರಾಗಿದೆ. ಆದರೆ ಸತತ ವೈಫಲ್ಯದಿಂದ ತಮ್ಮ ಆಟದ ಮೇಲೆಯೇ ಅಪನಂಬಿಕೆಯ ಬೀಜಗಳು ಮೊಳೆಯತೊಡಗಿದ್ದು ಅವರನ್ನು ಪೂರ್ಣ ಸಾಮರ್ಥ್ಯಕ್ಕೇರದಂತೆ ಕಟ್ಟಿಹಾಕಿತ್ತು.

ಹಿಂದಿನ ಕೆಲವು ತಿಂಗಳ ಬೆಳವಣಿಯತ್ತ ನೋಟ ಬೀರಿದರೆ, ಅವರು ವಿಫಲರಾಗಲು ಕಾರಣವಾಗಿದ್ದು, ಅವರದ್ದೇ ತಪ್ಪುಗಳ ಜೊತೆಗೆ ತಂಡದ ಆಡಳಿತದ ಅತಾರ್ಕಿಕ ನಿರ್ಧಾರಗಳು. ಇವು ಅವರ ಆಟದ ಮೇಲೆ ಪರಿಣಾಮ ಬೀರಿದವು. ಹೋದ ಸೆಪ್ಟೆಂಬರ್‌ನಲ್ಲಿ ಏಷ್ಯಾಕಪ್ ವೇಳೆ ಆಗಿನ ಉಪನಾಯಕ ಶುಭಮನ್ ಗಿಲ್ ಅವರಿಗೆ ಅವಕಾಶ ಕಲ್ಪಿಸಲು ಸ್ಯಾಮ್ಸನ್ ಅವರ ಬ್ಯಾಟಿಂಗ್ ಕ್ರಮಾಂಕ ಬದಲಾಗುತ್ತಾ ಹೋಯಿತು. ವಿಶ್ವಕಪ್‌ಗೆ ಮೊದಲು, ನ್ಯೂಜಿಲೆಂಡ್ ವಿರುದ್ಧದ ಸರಣಿಯಲ್ಲಿ ಅವರಿಗೆ ಮತ್ತೆ ಅಗ್ರ ಕ್ರಮಾಂಕದಲ್ಲಿ ಆಡುವ ಅವಕಾಶ ದೊರೆಯಿತು.

ವಿಶ್ವಕಪ್ ತಂಡದಿಂದ ಗಿಲ್ ಅವರನ್ನು ಅಚ್ಚರಿಯ ರೀತಿ ಕೈಬಿಡಲಾಯಿತು. ಸ್ಯಾಮ್ಸನ್ ಸ್ಥಾನ ಉಳಿಸಿಕೊಂಡರು. ಗಿಲ್ ಅವರನ್ನು ಕೈಬಿಟ್ಟರೂ, ಆರಂಭ ಆಟಗಾರನ ಜೊತೆ ವಿಕೆಟ್ ಕೀಪರ್ ಸಹ ಆಗಿರುವ ಇಶಾನ್ ಕಿಶನ್ ದಿಢೀರನೇ ಅವಕಾಶ ಪಡೆದರು. ಜಾರ್ಖಂಡ್ ಆಟಗಾರ ದೇಶಿ ಕ್ರಿಕೆಟ್ ಟೂರ್ನಿಗಳಲ್ಲಿ ಸತತವಾಗಿ ಮಿಂಚಿದ್ದರು. ತಂಡದಲ್ಲಿ ಒಂದುಕಡೆ ಗಟ್ಟಿಯಾಗಿದ್ದ ಅಭಿಷೇಕ್ ಶರ್ಮಾ ಜೊತೆ ಇನಿಂಗ್ಸ್ ಆರಂಭಿಸಲು ಅವರಿಗೆ 'ಅಸ್ತಿತ್ವದ ಸವಾಲು' ಎದುರಾಯಿತು.

31 ವರ್ಷ ವಯಸ್ಸಿನ ಆಟಗಾರ ಸಂಜು ಮೇಲೆ ಒತ್ತಡ ಶುರುವಾಯಿತು. ನ್ಯೂಜಿಲೆಂಡ್ ವೇಗಿಗಳ ಎದುರು ಅವರ ತಾಂತ್ರಿಕ ನೈಪುಣ್ಯದ ಕೊರತೆ ಬಯಲಾಯಿತು. 10, 6, 0, 24 ಮತ್ತು 6 ರನ್‌ಗಳು ಅವರ ಗಳಿಕೆ. ತಮ್ಮನ್ನು ಮತ್ತೆ ಮೂಲೆಗುಂಪು ಮಾಡಬಹುದೆಂಬ ಆತಂಕ ಅವರನ್ನು ಕಾಡಿತು. ಅದೇ ಸರಣಿಯ ಮೊದಲ ಮೂರು ಪಂದ್ಯಗಳಲ್ಲಿ ಒಂದು ಶತಕ ಸೇರಿ ಮೂರನೇ ಕ್ರಮಾಂಕದಲ್ಲಿ ಇಶಾನ್ ಕಿಶನ್ 215 ರನ್ ಗಳಿಸಿದ್ದು, ಸಂಜುಗೆ ತಮ್ಮ ಸಾಮರ್ಥ್ಯದ ಮೇಲೆ ಇನ್ನಷ್ಟು ಸಂಶಯ ಮೂಡಿಸಿತು.

ಆಡುವ ತಂಡದಲ್ಲಿ ಅವಕಾಶ ನೀಡದಿದ್ದ ಮೇಲೆ ನೆಟ್ಸ್ ವೇಳೆ ಮೊದಲು ಆಡಲು ಕಳುಹಿಸುವುದೇಕೆ ಎಂದು ಅವರು ಬ್ಯಾಟಿಂಗ್ ಕೋಚ್ ಸಿತಾಂಶು ಕೊಟಕ್ ಅವರನ್ನು ಪ್ರಶ್ನಿಸಿದ್ದೂ ಇದೆ.


ಸಂಜು ಸ್ಯಾಮ್ಸನ್ ಎಎಫ್‌ಪಿ ಚಿತ್ರ

ಕಿಶನ್ ಅವರಿಗೆ ಅದೃಷ್ಟ ಖುಲಾಯಿಸಿದ ರೀತಿ ಸ್ಯಾಮ್ಸನ್ ಅವರಿಗೂ ಇಂಥದ್ದೊಂದು ಅವಕಾಶ ಒದಗಿಬಂತು. ತಂಡದಲ್ಲಿದ್ದ ಸಾಕಷ್ಟು ಎಡಗೈ ಬ್ಯಾಟರ್‌ಗಳು, ಆಫ್ ಸ್ಪಿನ್ನರ್‌ಗಳೆದುರು ಪರದಾಡುತ್ತಿದ್ದರು. ದಕ್ಷಿಣ ಆಫ್ರಿಕಾ ಕೈಲಿ ಭಾರತ ಸೋತು ಸುಣ್ಣವಾದ ನಂತರ ಜಿಂಬಾಬ್ವೆ ವಿರುದ್ಧದ ಪಂದ್ಯದಲ್ಲಿ ಸ್ಯಾಮ್ಸನ್ ಅವರಿಗೆ ಅವಕಾಶ ದೊರೆಯಿತು. ಈ ಅವಕಾಶದಲ್ಲಿ ವಿಫಲವಾಗಿದ್ದರೆ, ಸಂಜು ಅವರಿಗೆ ಕಾಯಂ ಆಗಿ ಬಾಗಿಲು ಮುಚ್ಚುತ್ತಿತ್ತೇನೊ?

ಜಿಂಬಾಬ್ವೆ ವಿರುದ್ಧ ಬಿರುಸಿನ 24 ರನ್ ಗಳಿಸಿದ ಅವರು ಇದಕ್ಕಿಂತ ದೊಡ್ಡ ಆಟಕ್ಕೆ ಕಾಯುತ್ತಿದ್ದರು. ಭಾನುವಾರ ಈಡನ್‌ಗಾರ್ಡನ್‌ನಲ್ಲಿ 'ಅಪಾಯಕಾರಿ' ವೆಸ್ಟ್ ಇಂಡೀಸ್ ವಿರುದ್ಧ ನಿರ್ಣಾಯಕ ಪಂದ್ಯ ಅವರಿಗೆ ಇಂಥ ಒಂದು ಸಂದರ್ಭ ಒದಗಿಸಿತು. ಅವರು 50 ಎಸೆತಗಳಲ್ಲಿ ಅಜೇಯ 97 ರನ್ ಬಾರಿಸಿದರು. ಏಕಾಂಗಿಯಾಗಿ ತಂಡವನ್ನು ಗೆಲ್ಲಿಸುವ ಹಾದಿಯಲ್ಲಿ ಅವರು ಇನಿಂಗ್ಸ್ ಬೆಳೆಸಿದ ರೀತಿ ಎಲ್ಲರ ಮನಗೆದ್ದಿತು.

ಅವರು ಆ ಒಂದು ಇನಿಂಗ್ಸ್ ಮೂಲಕ ಸ್ವಸಾಮರ್ಥ್ಯದ ಮೇಲಿನ ಸಂದೇಹಗಳನ್ನೆಲ್ಲಾ ತೊಡೆದುಹಾಕಿದ್ದಾರೆ. ಜಾಣ್ಮೆಯಿಂದ ಇನಿಂಗ್ಸ್ ಕಟ್ಟಿ 'ಹೈರಿಸ್ಕ್' ಆಟದ ಜೊತೆಗೆ ತಂಡವನ್ನು ಗೆಲುವಿನ ದಡ ಸೇರಿಸಿದರು. ಈ ಒಂದೇ ಇನಿಂಗ್ಸ್‌ನಿಂದ ದಿಢೀರನೆ ಹೀರೊ ಪಟ್ಟಕ್ಕೇರಿದರು. ಗೆಲುವಿನ ಬೌಂಡರಿ ಬಾರಿಸಿದ ನಂತರ ಪಿಚ್‌ನಲ್ಲಿ ಮಂಡಿಯೂರಿ ಆಕಾಶದತ್ತ ದಿಟ್ಟಿಸಿ 'ಸರ್ವಶಕ್ತ'ನಿಗೆ ಕೃತಜ್ಞತೆ ಸಲ್ಲಿಸಿದರು.

'ಆ ಒಂದು ಇನಿಂಗ್ಸ್‌ಗೆ ಕಾಯುತ್ತಿದ್ದೆ. ಸಾಕಷ್ಟು ಏಳುಬೀಳುಗಳನ್ನು ಕಂಡ ನನ್ನ ಪಯಣ ವಿಶೇಷವಾದುದು. ಆದರೆ, ನನ್ನಿಂದ ಸಾಧ್ಯವೇ ಎಂದು ನನ್ನ ಮೇಲೆ ಸಂದೇಹಗಳು ಮೂಡತೊಡಗಿದವು. ನಿಜ, ಇದು ವಿಶೇಷ ಇನಿಂಗ್ಸ್. ನನ್ನ ಬದುಕಿನ ಅತಿದೊಡ್ಡ ದಿನ' ಎಂದು ಪಂದ್ಯದ ಬಳಿಕ ಪ್ರತಿಕ್ರಿಯಿಸಿದರು. ನಿರ್ಣಾಯಕ ಪಂದ್ಯದಲ್ಲಿ ಇದು ಅವರಿಗೆ ಜೀವನರೇಖೆಯಾಯಿತು. ಈಗ ಅವರು ಸ್ಥಿರತೆ ಕಾಪಾಡಿಕೊಂಡು ಇನ್ನಷ್ಟು ಎತ್ತರಕ್ಕೇರಲು ಅವಕಾಶವಿದೆ.



ಕ್ರೀಸ್‌ನಲ್ಲಿ ಸಂಜು ಸ್ಯಾಮ್ಸನ್ ಅವರ ಶಾಂತ ಸ್ವಭಾವದ ಆಟ ನೋಡಲು ಅದ್ಭುತವಾಗಿತ್ತು. ಆ ರೀತಿಯ ಆಟವು ತಂಡವನ್ನು ಮೇಲಕ್ಕೆತ್ತುತ್ತದೆ. ಎಲ್ಲರ ಪ್ರಯತ್ನ ಅದ್ಭುತವಾದುದು
ಸಚಿನ್ ತೆಂಡೂಲ್ಕರ್, ದಿಗ್ಗಜ ಕ್ರಿಕೆಟಿಗ



ಸಂಜು ಎಷ್ಟು ಒಳ್ಳೆಯ ಆಟಗಾರ ಎಂದು ನಮಗೆಲ್ಲರಿಗೂ ತಿಳಿದಿದೆ. ಅವರಿಗೆ ಬೆಂಬಲ ನೀಡುವುದೇ ಮುಖ್ಯವಾಗಿತ್ತು. ಬಹುಶಃ ಅವರು ತಮ್ಮ ನಿಜವಾದ ಸಾಮರ್ಥ್ಯವನ್ನು ತೋರಿಸಿದ್ದಾರೆ
ಗೌತಮ್ ಗಂಭೀರ್, ಮುಖ್ಯಕೋಚ್

ವೇಗವಾಗಿ ಆಡಬೇಕಿತ್ತು: ವಿಂಡೀಸ್ ನಾಯಕ ಹೋಪ್

'ಸೋಲಿನ ಹೊಣೆ ವಹಿಸುವೆ'



ಕೋಲ್ಕತ್ತ (ಪಿಟಿಐ): 'ಮೇಲಿನ ಕ್ರಮಾಂಕದಲ್ಲಿ ನಾನು ಇನ್ನೂ ವೇಗವಾಗಿ ಆಡಿ ಭಾರತ ತಂಡಕ್ಕೆ ಇನ್ನಷ್ಟು ದೊಡ್ಡ ಗುರಿ ಇಡಬೇಕಾಗಿತ್ತು' ಎಂದು ಟಿ20 ವಿಶ್ವಕಪ್‌ನಿಂದ ಹೊರಬಿದ್ದ ವೆಸ್ಟ್ ಇಂಡೀಸ್ ತಂಡದ ನಾಯಕ ಶಾಯ್ ಹೋಪ್ ಅಭಿಪ್ರಾಯಪಟ್ಟಿದ್ದಾರೆ.

ಹಾಲಿ ಚಾಂಪಿಯನ್ ಭಾರತ ತಂಡವು ಭಾನುವಾರ ಈಡನ್ ಗಾರ್ಡನ್‌ನಲ್ಲಿ ನಡೆದ ಸೂಪರ್ ಎಂಟರ ಹಂತದ ನಿರ್ಣಾಯಕ ಪಂದ್ಯದಲ್ಲಿ ಸ್ವಲ್ಪ ಕಠಿಣವಾಗಿದ್ದ 196 ರನ್‌ಗಳ ಗುರಿಯನ್ನು ಐದು ಎಸೆತಗಳಿರುವಂತೆ ಸಾಧಿಸಿತ್ತು.

ಹೋಪ್ 33 ಎಸೆತಗಳಲ್ಲಿ 32 ರನ್ (ಸ್ಟ್ರೈಕ್‌ರೇಟ್ 96) ಗಳಿಸಿದ್ದರು. 17 ಎಸೆತಗಳಲ್ಲಿ ಅವರು ರನ್ ಗಳಿಸಲಾಗಿರಲಿಲ್ಲ.

'ಸೋಲಿಗೆ ನಾನೇ ಹೊಣೆ ಹೊತ್ತುಕೊಳ್ಳುವೆ. ನಾನು ಇನ್ನೂ ತ್ವರಿತ ಗತಿಯಲ್ಲಿ ಬ್ಯಾಟಿಂಗ್ ಮಾಡಬೇಕಾಗಿತ್ತು' ಎಂದು ಪಂದ್ಯಾನಂತರದ ಪತ್ರಿಕಾಗೋಷ್ಠಿಯಲ್ಲಿ ಹೋಪ್ ಒಪ್ಪಿಕೊಂಡರು.

ಅರ್ಷದೀಪ್ ಸಿಂಗ್, ಹಾರ್ದಿಕ್ ಪಾಂಡ್ಯ ಹಾಗೂ ಅಕ್ಷರ್ ಪಟೇಲ್ ಅವರ ಎದುರು ಹೋಪ್ ಪರದಾಡಿದ್ದರು. ಪವರ್‌ಪ್ಲೇ ನಂತರ ವರುಣ್ ಚಕ್ರವರ್ತಿ ಅವರನ್ನು ಬೌಲ್ಡ್ ಮಾಡಿದ್ದರು. 'ನಾವು ಪವರ್‌ಪ್ಲೇಯಲ್ಲಿ 65–70 ರನ್ ಗಳಿಸಲು ಬಯಸಿದ್ದೆವು. ಆದರೆ ನೋಲಾಸ್ 45 ರನ್ ಗಳಿಸಿದೆವು' ಎಂದು ಹೇಳಿದರು.

ಸಂಜು 'ಎ ಪ್ಲಸ್' ಆಟ: ಸಂಜು ಸ್ಯಾಮ್ಸನ್ ಆಟವನ್ನು ಹೋಪ್ ಶ್ಲಾಘಿಸಿದರು. 'ಸಂಜು ತಮಗೆ ದೊರೆತ ಅವಕಾಶವನ್ನು ಬಹುಮುಖ್ಯ ಪಂದ್ಯದಲ್ಲಿ ಚೆನ್ನಾಗಿ ಬಳಸಿಕೊಂಡರು. ಆರಂಭದಿಂದಲೇ ಅವರು ಸರಾಗವಾಗಿ ಆಡಿದರು. ಇನಿಂಗ್ಸ್‌ಗೆ ವೇಗ ನೀಡಿದರು. ಅವರು ಆಡಿದ ರೀತಿಗೆ 'ಎ ಪ್ಲಸ್' ಅಂಕ ಕೊಡಲೇಬೇಕು' ಎಂದರು.

ಭಾರತದಲ್ಲಿ ಆಡಿರುವ ಅನುಭವ ತಂಡಕ್ಕೆ ನೆರವಾಗಲಿದೆ: ಡೇರಿಲ್ ಮಿಚೆಲ್



ಕೋಲ್ಕತ್ತ (ಪಿಟಿಐ): 'ನ್ಯೂಜಿಲೆಂಡ್ ಯಾವುದೇ ವಿಷಯದ ಬಗ್ಗೆ ಹೆಚ್ಚು ತಲೆಕೆಡಿಸಿಕೊಳ್ಳುವುದಿಲ್ಲ. ಭಾರತದಲ್ಲಿ ಹಲವು ದಿನಗಳಿಂದ ಆಡಿ ಗಳಿಸಿರುವ ಅನುಭವವನ್ನೇ ಟಿ20 ವಿಶ್ವಕಪ್ ಸೆಮಿಫೈನಲ್ ಪಂದ್ಯದ ವೇಳೆ ಬಳಸಿಕೊಳ್ಳಲಿದೆ' ಎಂದು ಅನುಭವಿ ಆಟಗಾರ ಡೇರಿಲ್ ಮಿಚೆಲ್ ಹೇಳಿದ್ದಾರೆ.

ನ್ಯೂಜಿಲೆಂಡ್ ತಂಡವು ಬುಧವಾರ ಈಡನ್‌ಗಾರ್ಡನ್‌ನಲ್ಲಿ ನಡೆಯಲಿರುವ ಸೆಮಿಫೈನಲ್‌ನಲ್ಲಿ ಕಳೆದ ಬಾರಿಯ ರನ್ನರ್ ಅಪ್ ದಕ್ಷಿಣ ಆಫ್ರಿಕಾ ತಂಡವನ್ನು ಎದುರಿಸಲಿದೆ. ಯಾವ ರೀತಿ ಯೋಜನೆ ರೂಪಿಸಬೇಕೆಂಬ ಬಗ್ಗೆ ತಂಡವು ಸಂಪೂರ್ಣ ಸ್ಪಷ್ಟತೆ ಹೊಂದಿದೆ ಎಂದು ಮಿಚೆಲ್ ಹೇಳಿದರು.

ನ್ಯೂಜಿಲೆಂಡ್ ತಂಡವು ವರ್ಷದ ಆರಂಭದಲ್ಲೇ ಭಾರತ ಪ್ರವಾಸಕ್ಕೆ ಬಂದಿದ್ದು, ವಿವಿಧ ತಾಣಗಳಲ್ಲಿ ಮೂರು ಏಕದಿನ ಮತ್ತು ಐದು ಟಿ20 ಪಂದ್ಯಗಳ ಸರಣಿ ಆಡಿತ್ತು. 'ಇಲ್ಲಿ ಆಡಿ ಗಳಿಸಿದ ಅನುಭವವನ್ನೇ ಬಳಸಿಕೊಳ್ಳುತ್ತೇವೆ' ಎಂದು ಹೇಳಿದರು.

ಕಿವೀಸ್ ಪಡೆ ವಿಶ್ವಕಪ್‌ನಲ್ಲಿ ಎರಡು ಪಂದ್ಯಗಳನ್ನು ಶ್ರೀಲಂಕಾದಲ್ಲಿ ಆಡಿತ್ತು.

ಪಾಕ್ ಆಟಗಾರರಿಗೆ ದಂಡ: ಚಿಂತನೆ

ಕರಾಚಿ (ಪಿಟಿಐ): ಟಿ20 ವಿಶ್ವಕಪ್ ಟೂರ್ನಿಯಲ್ಲಿ ಪಾಕ್ ತಂಡವು ಸೂಪರ್ ಎಂಟರ ಹಂತದಲ್ಲೇ ಹೊರಬಿದ್ದಿರುವುದಕ್ಕೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ (ಪಿಸಿಬಿ) ಆಕ್ರೋಶಗೊಂಡಿದೆ. ಕಳಪೆ ಪ್ರದರ್ಶನಕ್ಕಾಗಿ ಆಟಗಾರರಿಗೆ ದಂಡ ವಿಧಿಸಲು ಮಂಡಳಿಯು ನಿರ್ಧರಿಸಿದೆ ಎಂದು ಮೂಲಗಳು ತಿಳಿಸಿವೆ.


ಸಲ್ಮಾನ್ ಅಲಿ ಆಘಾ

'ಈ ಟೂರ್ನಿಯಿಂದ ಬೇಗನೆ ನಿರ್ಗಮಿಸಿದ ಕಾರಣ ತಂಡದ ಆಟಗಾರರ ಮೇಲೆ ಸೂಕ್ತ ಕ್ರಮ ಕೈಗೊಳ್ಳುವ ಬಗ್ಗೆ ಪಿಸಿಬಿ ಪರಿಶೀಲನೆ ನಡೆಸುತ್ತಿದೆ' ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ.

'ಈ ಬಗ್ಗೆ ಇನ್ನೂ ಅಂತಿಮ ನಿರ್ಧಾರ ತೆಗೆದುಕೊಂಡಿಲ್ಲ. ಆದರೆ ಆಟಗಾರರಿಗೆ ಆರ್ಥಿಕವಾಗಿ ದಂಡ ವಿಧಿಸುವ ನಿರ್ಧಾರ ಪರಿಶೀಲನೆಯಲ್ಲಿದೆ. ಈ ದಂಡದ ಮೊತ್ತವು ತಲಾ 50 ಲಕ್ಷ (ಪಾಕಿಸ್ತಾನ ರೂಪಾಯಿ) ತಲುಪಬಹುದು' ಎಂದು ಹೇಳಿವೆ.

ಪಾಕಿಸ್ತಾನ ತಂಡದ ಆಟಗಾರರು ಶ್ರೀಲಂಕಾದಿಂದ ಭಾನುವಾರ ರಾತ್ರಿ ಸದ್ದುಗದ್ದಲವಿಲ್ಲದೇ ತವರಿಗೆ ಮರಳಿದ್ದಾರೆ.

ಚಿಟಿಕೆ ಸುದ್ದಿ

ಚೆಸ್: ಗುಕೇಶ್‌ಗೆ ಮತ್ತೆ ಸೋಲು

ಪ್ರಾಗ್ (ಝೆಕ್ ರಿಪಬ್ಲಿಕ್), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರಿಗೆ ಗೆಲುವು ಸತತವಾಗಿ ಕೈಕೊಡುತ್ತಿದೆ. ಪ್ರಾಗ್ ಅಂತರರಾಷ್ಟ್ರೀಯ ಚೆಸ್ ಟೂರ್ನಿಯ ಐದನೇ ಸುತ್ತಿನಲ್ಲಿ ಅವರು ಉಜ್ಬೇಕಿಸ್ತಾನದ ನಾದಿರ್‌ಬೆಕ್ ಅಬ್ದುಸತ್ತಾರೋವ್ ಎದುರು ಅತ್ಯುತ್ತಮ ಸ್ಥಿತಿಯಲ್ಲಿದ್ದರೂ, ಲೋಪವೆಸಗಿ ಸೋಲನುಭವಿಸಿದರು.

ಭಾರತದ ಆಟಗಾರನಿಗೆ ಇದು ಎರಡನೇ ಸೋಲು. ಮೂರು ಪಂದ್ಯಗಳನ್ನು ಡ್ರಾ ಮಾಡಿಕೊಂಡಿದ್ದು 1.5 ಅಂಕ ಸಂಗ್ರಹಿಸಿದ್ದಾರೆ. 10 ಆಟಗಾರರ ಟೂರ್ನಿ 9 ಸುತ್ತುಗಳನ್ನು ಹೊಂದಿದೆ.

ಡಚ್ ಗ್ರ್ಯಾಂಡ್‌ಮಾಸ್ಟರ್ ಜೋರ್ಡನ್ ವಾನ್ ಫಾರಿಸ್ಟ್ (4) ಅವರು ಸತತ ನಾಲ್ಕನೇ ಪಂದ್ಯದಲ್ಲಿ ಜಯಗಳಿಸಿ ಅಗ್ರಸ್ಥಾನದಲ್ಲಿ ಮುಂದುವರಿದಿದ್ದಾರೆ. ಹಾಲಿ ಚಾಂಪಿಯನ್, ಭಾರತದ ಅರವಿಂದ ಚಿದಂಬರಂ (1.5) ಅವರು ಐದು ಪಂದ್ಯಗಳಲ್ಲಿ ಮೂರನೇ ಬಾರಿ ಸೋಲನುಭವಿಸಿದರು.

ಫುಟ್‌ಬಾಲ್ ಲೀಗ್: ವಾಣಿಜ್ಯ ಹಕ್ಕುಗಳಿಗೆ ಬಿಡ್ ಆಹ್ವಾನ

ನವದೆಹಲಿ (ಪಿಟಿಐ): 2026-2027ರ ಋತುವಿನಿಂದ ಕನಿಷ್ಠ 15 ವರ್ಷಗಳ ಅವಧಿಗೆ ಪುರುಷ ಮತ್ತು ಮಹಿಳಾ ಕ್ಲಬ್ ಸ್ಪರ್ಧೆಗಳ ವಾಣಿಜ್ಯ ಹಕ್ಕುಗಳಿಗಾಗಿ ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಸೋಮವಾರ ಬಿಡ್ ಆಹ್ವಾನಿಸಿದೆ.

ಪುರುಷರ ಮತ್ತು ಮಹಿಳೆಯರ ಲೀಗ್ ಸ್ಪರ್ಧೆಗಳಿಗೆ ಸಂಬಂಧಿಸಿದಂತೆ ಎಐಎಫ್‌ಎಫ್ ಬಿಡ್ಡಿಂಗ್‌ನಲ್ಲಿ ಎರಡು ಪ್ಯಾಕೇಜ್‌ಗಳನ್ನು ನೀಡಿದೆ.

'ಎ' ಪ್ಯಾಕೇಜ್‌ನಲ್ಲಿ ಇಂಡಿಯನ್ ಸೂಪರ್ ಲೀಗ್ ಮತ್ತು ಫೆಡರೇಷನ್ ಕಪ್ ಒಳಗೊಂಡಿದೆ. 'ಬಿ' ಪ್ಯಾಕೇಜ್‌ನಲ್ಲಿ ಭಾರತ ಮಹಿಳಾ ಲೀಗ್ (ಐಡಬ್ಲ್ಯುಎಲ್) ಮತ್ತು ಐಡಬ್ಲ್ಯುಎಲ್ 2 ಒಳಗೊಂಡಿದೆ. ಮಹಿಳಾ ಫೆಡರೇಷನ್ ಕಪ್ ಅನ್ನು ಪರಿಚಯಿಸುವ ಸಾಧ್ಯತೆಯಿದೆ.

ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್: ಸಿಂಧುಗೆ ತಪ್ಪಿದ ಅವಕಾಶ

ಲಕ್ಷ್ಯ ಸೇನ್‌ಗೆ ಕಠಿಣ ಸವಾಲು

ಬರ್ಮಿಂಗ್‌ಹ್ಯಾಮ್ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಮಂಗಳವಾರ ಇಲ್ಲಿ ಆರಂಭವಾಗುವ ಆಲ್ ಇಂಗ್ಲೆಂಡ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಾಗುತ್ತಿಲ್ಲ. ಪಶ್ಚಿಮ ಏಷ್ಯಾದಲ್ಲಿನ ಉದ್ವಿಗ್ನ ಕಾರಣ ವಿಮಾನ ಸಂಚಾರದಲ್ಲಿ ವ್ಯತ್ಯಯವಾಗಿದ್ದರಿಂದ ಭಾರತದ ತಾರೆ ದುಬೈನಲ್ಲಿ ಸಿಲುಕಿಕೊಂಡಿದ್ದಾರೆ.

ಸಿಂಧು ಮತ್ತು ಕೋಚ್ ಇರ್ವಾನ್‌ಸ್ಯಾ ಆದಿ ಪ್ರಥಮ ಅವರನ್ನು ಒಳಗೊಂಡ ತಂಡವು ಬೆಂಗಳೂರಿನಿಂದ ಬರ್ಮಿಂಗ್‌ಹ್ಯಾಮ್‌ಗೆ ಹೊರಟಿತ್ತು. ದುಬೈನಿಂದ ವಿಮಾನ ಬದಲಾಯಿಸಬೇಕಿತ್ತು. ಆದರೆ, ವಿಮಾನಗಳ ಹಾರಾಟ ರದ್ದಾದ ಕಾರಣ ಅವರೆಲ್ಲರೂ ದುಬೈನಲ್ಲಿಯೇ ಸಿಲುಕಿಕೊಂಡರು. ಸೂಪರ್ 1000 ಹಂತದ ಟೂರ್ನಿಯ ಮೊದಲ ಸುತ್ತಿನಲ್ಲಿ ಸಿಂಧು ಅವರು ಥಾಯ್ಲೆಂಡ್‌ನ ಸುಪಾನಿಡಾ ಕಟೆಥಾಂಗ್ ಅವರನ್ನು ಎದುರಿಸಬೇಕಿತ್ತು.

ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್ ಕೂಡ ಪರಿಸ್ಥಿತಿಯ ಮೇಲೆ ನಿಗಾ ವಹಿಸಿದ್ದು, ವಿಳಂಬ ಅಥವಾ ಮಾರ್ಗ ಬದಲಾವಣೆಯಿಂದಾಗಿ ಸಮಸ್ಯೆ ಅನುಭವಿಸುತ್ತಿರುವ ತಂಡಗಳಿಗೆ ನೆರವು ನೀಡಲು ಸಿದ್ಧವಿರುವುದಾಗಿ ಹೇಳಿದೆ. ಯಾವುದೇ ಆಟಗಾರರು ವಿಳಂಬವಾಗಿ ಬಂದಲ್ಲಿ ಸ್ಪರ್ಧೆಯ ವೇಳಾಪಟ್ಟಿಯನ್ನು ಪರಿಷ್ಕರಿಸುವುದೂ ಇದರಲ್ಲಿ ಸೇರಿದೆ.

ಕೆಲ ಆಟಗಾರರು ಸಿಂಗಪುರ ಮತ್ತು ಆಫ್ರಿಕಾದ ಪರ್ಯಾಯ ಮಾರ್ಗಗಳ ಮೂಲಕ ಬರ್ಮಿಂಗ್‌ಹ್ಯಾಮ್ ತಲುಪುವಲ್ಲಿ ಯಶಸ್ವಿಯಾಗಿದ್ದಾರೆ.


ಲಕ್ಷ್ಯ ಸೇನ್

ಭಾರತದ ಅಗ್ರಮಾನ್ಯ ಸಿಂಗಲ್ಸ್ ಆಟಗಾರ ಲಕ್ಷ್ಯ ಸೇನ್ ಮತ್ತು ಉದಯೋನ್ಮುಖ ಯುವ ಆಟಗಾರ ಆಯುಷ್ ಶೆಟ್ಟಿ ಅವರು ಯಾವುದೇ ಪ್ರಯಾಣದ ಸಮಸ್ಯೆಗಳನ್ನು ಎದುರಿಸದೇ ಇಲ್ಲಿಗೆ ತಲುಪಿದ್ದಾರೆ. 24 ವರ್ಷದ ಲಕ್ಷ್ಯ ಅವರು ವಿಶ್ವದ ಅಗ್ರಕ್ರಮಾಂಕದ ಆಟಗಾರ ಶಿ ಯು ಕಿ ವಿರುದ್ಧ ಅಭಿಯಾನ ಆರಂಭಿಸಲಿದ್ದಾರೆ. ಕನ್ನಡಿಗ ಆಯುಷ್ ಆರಂಭಿಕ ಸುತ್ತಿನಲ್ಲಿ ಇಂಡೊನೇಷ್ಯಾದ ಅಲ್ವಿ ಫರ್ಹಾನ್ ವಿರುದ್ಧ ಸೆಣಸಲಿದ್ದಾರೆ.

ಮಾಜಿ ರನ್ನರ್ ಅಪ್ ಆಗಿರುವ ಲಕ್ಷ್ಯ ಅವರಿಗೆ ಚೀನಾ ಆಟಗಾರನ ವಿರುದ್ಧ ಕಠಿಣ ಸವಾಲು ಎದುರಾಗಬಹುದು. ಶಿ ವಿರುದ್ಧದ ಈ ಹಿಂದಿನ ಐದು ಮುಖಾಮುಖಿಯಲ್ಲಿ ಭಾರತದ ಆಟಗಾರ ನಾಲ್ಕರಲ್ಲಿ ಸೋತಿದ್ದಾರೆ.

ಮಹಿಳಾ ಸಿಂಗಲ್ಸ್‌ನಲ್ಲಿ ಮಾಳವಿಕಾ ಬನ್ಸೋಡ್ ಅವರಿಗೂ ಕಠಿಣ ಸವಾಲು ಎದುರಾಗಿದೆ. 24 ವರ್ಷದ ಬನ್ಸೋಡ್ ಮೊದಲ ಸುತ್ತಿನಲ್ಲಿ ಟೋಕಿಯೊ ಒಲಿಂಪಿಕ್ಸ್ ಚಾಂಪಿಯನ್ ಚೆನ್ ಯುಫಿ (ಚೀನಾ) ಅವರನ್ನು ಎದುರಿಸುವರು.

ಆಫ್ರಿಕಾ ಮಾರ್ಗವಾಗಿ ಬಂದಿರುವ ಉದಯೋನ್ಮುಖ ಆಟಗಾರ್ತಿ ಉನ್ನತಿ ಹೂಡಾ ತನ್ನ ಮೊದಲ ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಪೊರ್ನ್‌ಪೊವಿ ಚೊಚುವಾಂಗ್ (ಥಾಯ್ಲೆಂಡ್) ಅವರನ್ನು ಎದುರಿಸಲಿದ್ದಾರೆ.

ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಮತ್ತು ಚಿರಾಗ್ ಶೆಟ್ಟಿ ಅವರು ಮಲೇಷ್ಯಾದ ಕಾಂಗ್ ಖೈ ಕ್ಸಿಂಗ್ ಮತ್ತು ಆರನ್ ಟೈ ವಿರುದ್ಧ ಅಭಿಯಾನ ಆರಂಭಿಸುವರು. 2022 ಮತ್ತು 2023ರಲ್ಲಿ ಮಹಿಳೆಯರ ಡಬಲ್ಸ್‌ನಲ್ಲಿ ಸೆಮಿಫೈನಲ್ ತಲುಪಿದ್ದ ಟ್ರೀಸಾ ಜೋಲಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಜಪಾನ್‌ನ ಸಯಾಕಾ ಹಿರೋಟಾ– ಅಯಾಕೊ ಸಕುರಾಮೊಟೊ ಜೋಡಿಯನ್ನು ಎದುರಿಸಲಿದ್ದಾರೆ.

ಪ್ರಕಾಶ್ ಪಡುಕೋಣೆ (1980) ಮತ್ತು ಪುಲ್ಲೇಲ ಗೋಪಿಚಂದ್ (2001) ಹೊರತುಪಡಿಸಿ ಭಾರತದ ಷಟ್ಲರ್‌ಗಳಿಗೆ ಆಲ್ ಇಂಗ್ಲೆಂಡ್ ಪ್ರಶಸ್ತಿ ಒಲಿದಿಲ್ಲ.

ಜೂನ್‌ನಲ್ಲಿ ಅಫ್ಗನ್ ಕ್ರಿಕೆಟ್ ತಂಡ ಭಾರತಕ್ಕೆ

ನವದೆಹಲಿ (ಎಎಫ್‌ಪಿ): ಅಫ್ಗಾನಿಸ್ತಾನ ಕ್ರಿಕೆಟ್ ತಂಡವು ಇದೇ ಜೂನ್‌ನಲ್ಲಿ ಭಾರತ ಪ್ರವಾಸ ಕೈಗೊಳ್ಳಲಿದ್ದು, ಒಂದು ಟೆಸ್ಟ್ ಮತ್ತು ಮೂರು ಏಕದಿನ ಪಂದ್ಯಗಳನ್ನು ಆಡಲಿದೆ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಸೋಮವಾರ ತಿಳಿಸಿದೆ.

ಜೂನ್ 6ರಂದು ಮುಲ್ಲನಪುರದಲ್ಲಿ ಟೆಸ್ಟ್ ಪಂದ್ಯದೊಂದಿಗೆ ಪ್ರವಾಸ ಆರಂಭವಾಗಲಿದೆ. ಆದರೆ, ಈ ಟೆಸ್ಟ್ ಭಾರತದ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್‌ನ ಪಾಯಿಂಟ್ಸ್‌ಗೆ ಸೇರುವುದಿಲ್ಲ ಎಂದು ಬಿಸಿಸಿಐ ಕಾರ್ಯದರ್ಶಿ ದೇವಜಿತ್ ಸೈಕಿಯಾ ತಿಳಿಸಿದ್ದಾರೆ.

ಅಫ್ಗಾನಿಸ್ತಾನ ತಂಡದ ಭಾರತ ಪ್ರವಾಸ

ಟೆಸ್ಟ್	ಏಕದಿನ ಪಂದ್ಯಗಳು: 1ನೇ	2ನೇ	3ನೇ
ಜೂನ್ 6-10	ಜೂನ್ 14	ಜೂನ್ 17	ಜೂನ್ 20
ಮುಲ್ಲನಪುರ	ಧರ್ಮಶಾಲಾ	ಲಖನೌ	ಚೆನ್ನೈ


ಪ್ರಶಸ್ತಿಯೊಂದಿಗೆ ಅತೀಕಾ ಮೀರ್

ಅತೀಕಾ ಮತ್ತೊಂದು ಮೈಲಿಗಲ್ಲು

ವೆಲೆನ್ಸಿಯಾ (ಸ್ಪೇನ್) (ಪಿಟಿಐ): ಭಾರತದ ಉದಯೋನ್ಮುಖ ರೇಸಿಂಗ್ ಪಟು ಅತೀಕಾ ಮೀರ್ ಅವರು ಚಾಂಪಿಯನ್ಸ್ ಆಫ್ ದಿ ಫ್ಯೂಚರ್ ಅಕಾಡೆಮಿ (ಸಿಒಟಿಎಫ್‌ಎ) ಸರಣಿಯ ಯುರೋಪ್ ಲೆಗ್‌ನಲ್ಲಿ ಭಾನುವಾರ ಪ್ರಶಸ್ತಿ ಗೆದ್ದುಕೊಂಡರು. ಈ ಪ್ರತಿಷ್ಠಿತ ರೇಸ್‌ನಲ್ಲಿ ಪ್ರಶಸ್ತಿ ಗೆದ್ದ ಭಾರತದ ಮೊದಲ ರೇಸಿಂಗ್ ಪಟು ಎಂಬ ದಾಖಲೆಯನ್ನೂ ಸ್ಥಾಪಿಸಿದರು.

ಅತೀಕಾ, 15 ಸುತ್ತುಗಳಿದ್ದ ಈ ರೇಸ್‌ನಲ್ಲಿ ಎರಡನೆಯವರಾಗಿ ಸ್ಪರ್ಧೆ ಮುಗಿಸಿದರು. ಆದರೆ, ಸ್ಪರ್ಧಾ ನಂತರ ದಂಡದ ಅಂಕದಿಂದಾಗಿ ತೃತೀಯ ಸ್ಥಾನಕ್ಕೆ ಸರಿಯಬೇಕಾಯಿತು.

11 ವರ್ಷ ವಯಸ್ಸಿನ ಅತೀಕಾ ಅವರು ಮಿನಿ ವಿಭಾಗದಿಂದ 'ಒಕೆಎನ್‌ಜೆ' (ಜೂನಿಯರ್) ವಿಭಾಗ ಪ್ರವೇಶಿಸಿದ ಬಳಿಕ ಮೊದಲ ಸ್ಪರ್ಧೆಯಲ್ಲೇ ಯಶಸ್ಸು ಸಾಧಿಸಿದ್ದಾರೆ. ಶ್ರೀನಗರದ ಬಾಲಕಿ ಎಫ್1 ಅಕಾಡೆಮಿಯ 'ಡಿಸ್ಕವರ್ ಯುವರ್ ಡ್ರೈವ್' ಅಭಿಯಾನದಡಿ ತರಬೇತಿ ಪಡೆಯುತ್ತಿದ್ದಾರೆ.

ಮಹಿಳಾ ದಿನ: 250 ಜಿಲ್ಲೆಗಳಲ್ಲಿ 'ಅಸ್ಮಿತಾ' ಅಥ್ಲೆಟಿಕ್ಸ್

ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಹಿಳಾ ದಿನದ ಪ್ರಯುಕ್ತ ಇದೇ 8 ಮತ್ತು 9ರಂದು ದೇಶದಾದ್ಯಂತ 250 ಜಿಲ್ಲೆಗಳಲ್ಲಿ 'ಅಸ್ಮಿತಾ' ಅಥ್ಲೆಟಿಕ್ಸ್ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು, ಎರಡು ಲಕ್ಷಕ್ಕೂ ಅಧಿಕ ಬಾಲಕಿಯರು ಭಾಗವಹಿಸಲಿದ್ದಾರೆ ಎಂದು ಕೇಂದ್ರ ಕ್ರೀಡಾ ಖಾತೆ ರಾಜ್ಯ ಸಚಿವೆ ರಕ್ಷಾ ಖಡ್ಸೆ ಸೋಮವಾರ ತಿಳಿಸಿದರು.

ಅಹಮದಾಬಾದ್‌ನಲ್ಲಿ ನಡೆಯಲಿರುವ 2030ರ ಕಾಮನ್‌ವೆಲ್ತ್ ಗೇಮ್ಸ್ ಮತ್ತು 2036ರ ಒಲಿಂಪಿಕ್ಸ್ ಕೂಟವನ್ನು ಗಮನದಲ್ಲಿಟ್ಟುಕೊಂಡು ಕ್ರೀಡಾ ಸಚಿವಾಲಯವು ಈ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದರೊಂದಿಗೆ ದೇಶದಾದ್ಯಂತ ಮಹಿಳಾ ತಾಂತ್ರಿಕ ಅಧಿಕಾರಿಗಳ ತಂಡವನ್ನು ರಚಿಸುವ ಪ್ರಕ್ರಿಯೆಗೂ ಚಾಲನೆ ಸಿಗಲಿದೆ.

ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಮಾರ್ಚ್ 8 ರಂದು ಆಚರಿಸಲಾಗುತ್ತದೆ. 'ಅಸ್ಮಿತಾ' ಯೋಜನೆಯು ಮಹಿಳೆಯರನ್ನು ಕ್ರೀಡೆಗಳಲ್ಲಿ ಉತ್ತೇಜಿಸುವ ಗುರಿ ಹೊಂದಿದೆ. ಇದು ಖೇಲೊ ಇಂಡಿಯಾ ಯೋಜನೆಯ ಭಾಗವಾಗಿದ್ದು, 2021ರಲ್ಲಿ ಆರಂಭಿಸಲಾಗಿದೆ.

ದೇಶದಾದ್ಯಂತ 250 ತಾಣಗಳಲ್ಲಿ 100 ಮೀ., 200 ಮೀ. ಮತ್ತು 400 ಮೀ. ಓಟದ ಸ್ಪರ್ಧೆಗಳು ನಡೆಯಲಿವೆ. 13 ವರ್ಷದೊಳಗಿನವರು, 13ರಿಂದ 18 ವರ್ಷ ವಯೋಮಾನ ಮತ್ತು 18 ವರ್ಷ ಮೇಲ್ಪಟ್ಟ ವಿಭಾಗಗಳಲ್ಲಿ ಸ್ಪರ್ಧೆ ನಡೆಯಲಿವೆ. ಪ್ರತಿ ತಾಣದ ನಿರ್ವಹಣೆಗೆ ಐವರು ತಾಂತ್ರಿಕ ಅಧಿಕಾರಿಗಳು, ಹತ್ತು ಸ್ವಯಂಸೇವಕರು, ಒಬ್ಬ ಸ್ಪರ್ಧಾ ವ್ಯವಸ್ಥಾಪಕರು ಮತ್ತು ಜಿಲ್ಲಾ ಯುವಜನ ಅಧಿಕಾರಿಯನ್ನು ನಿಯೋಜಿಸಲಾಗುತ್ತದೆ.

ಹರಭಜನ್ ನೆರವು ಕೋರಿದ ಬಿಸಿಸಿಐ



ಕೋಲ್ಕತ್ತ (ಪಿಟಿಐ): ಬೆಂಗಳೂರಿನ ಬಿಸಿಸಿಐ ಶ್ರೇಷ್ಠತಾ ಕೇಂದ್ರದಲ್ಲಿ 'ಆಯ್ದ ಆಟಗಾರರಿಗೆ' ಶಿಬಿರದಲ್ಲಿ ಮಾರ್ಗದರ್ಶನ ನೀಡಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯು, ದಿಗ್ಗಜ ಸ್ಪಿನ್ನರ್ ಹರಭಜನ್ ಸಿಂಗ್ ಅವರನ್ನು ಸಂಪರ್ಕಿಸಿದೆ.

ಈ ಮೊದಲು ಹಿರಿಯ ಎಡಗೈ ವೇಗದ ಬೌಲರ್ ಜಹೀರ್ ಖಾನ್ ಅವರನ್ನು ವೇಗದ ಬೌಲರ್‌ಗಳಿಗೆ ಹಮ್ಮಿಕೊಂಡಿರುವ ಶಿಬಿರಕ್ಕೆ ಮಾರ್ಗದರ್ಶನ ನೀಡಲು ಆಹ್ವಾನಿಸಲಾಗಿದ್ದು, ಅವರು ಈಗಾಗಲೇ ಈ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ.

ಭಾರತ ಸೀನಿಯರ್ ತಂಡದಲ್ಲಿ ಆಡಬಲ್ಲ ಸಾಮರ್ಥ್ಯ ಹೊಂದಿರುವ ಆಯ್ದ ಆಟಗಾರರ ಪಟ್ಟಿಯನ್ನು ಬಿಸಿಸಿಐ ಸಿದ್ಧಪಡಿಸಿದೆ. ವಯೋವರ್ಗ ಟೂರ್ನಿಗಳಲ್ಲಿ, ಪ್ರಥಮ ದರ್ಜೆ ಪಂದ್ಯಗಳಲ್ಲಿ, ಭಾರತ ಎ ಮತ್ತು ಸೀನಿಯರ್ ತಂಡಕ್ಕೂ ಆಡಿದ ಕೆಲವು ಆಟಗಾರರನ್ನು ಗುರುತಿಸಿ ಶಿಬಿರಕ್ಕೆ ಆಯ್ಕೆ ಮಾಡಲಾಗಿದೆ.

ಇಂಥ ವಿಶೇಷ ಶಿಬಿರಗಳನ್ನು ಹಮ್ಮಿಕೊಳ್ಳುವುದಕ್ಕಾಗಿ ಶ್ರೇಷ್ಠತಾ ಕೇಂದ್ರದ ಮುಖ್ಯಸ್ಥ ವಿ.ವಿ.ಎಸ್. ಲಕ್ಷ್ಮಣ್ ಅವರು ತಮ್ಮ ಜೊತೆ ಆಡಿದ್ದ ಸಹ ಆಟಗಾರರನ್ನು ಸಂಪರ್ಕಿಸಿದ್ದರು.

'ಜಹೀರ್, ಹರಭಜನ್ ಮತ್ತು ಅನಿಲ್ ಕುಂಬ್ಳೆ ಅವರಿಗೆ ವಿಶೇಷ ಶಿಬಿರಗಳನ್ನು ನಡೆಸಲು ಲಕ್ಷ್ಮಣ್ ಸಂಪರ್ಕಿಸಿದ್ದರು. 'ಭಜ್ಜಿ' ಅವರು ಐದು ದಿನಗಳ ಶಿಬಿರಕ್ಕೆ ದಿನಾಂಕ ಹೊಂದಾಣಿಕೆ ಮಾಡಿಕೊಳ್ಳುತ್ತಿದ್ದಾರೆ. ಅವರು ಆಫ್ ಸ್ಪಿನ್ನರ್‌ಗಳಿಗೆ ಮಾರ್ಗದರ್ಶನ ನೀಡುವ ಶಿಬಿರದ ಹೊಣೆ ವಹಿಸಲಿದ್ದಾರೆ' ಎಂದು ಬಿಸಿಸಿಐನ ಮೂಲವೊಂದು ತಿಳಿಸಿದೆ.

ಅನಿಲ್ ಕುಂಬ್ಳೆ ಅವರಿಗೂ 'ರಿಸ್ಟ್ ಸ್ಪಿನ್ನರ್'ಗಳಿಗೆ ಏರ್ಪಡಿಸುವ ಶಿಬಿರಕ್ಕೆ ಮಾರ್ಗದರ್ಶನ ನೀಡಲು ಕೋರಲಾಗಿದೆ.

ವೇಗದ ಬೌಲಿಂಗ್ ಕೋಚ್ ರೇಸ್‌ನಲ್ಲಿ ಎಸ್.ಅರವಿಂದ್

ಭಾರತ ತಂಡದ ಮಾಜಿ ವೇಗದ ಬೌಲರ್‌ಗಳಾದ ವಿ.ಆರ್.ವಿ. ಸಿಂಗ್ ಮತ್ತು ಕನ್ನಡಿಗ ಶ್ರೀನಾಥ್ ಅರವಿಂದ್ ಅವರು ಬಿಸಿಸಿಐನ ಶ್ರೇಷ್ಠತಾ ಕೇಂದ್ರದಲ್ಲಿ ವೇಗದ ಬೌಲಿಂಗ್ ಕೋಚ್ ಹುದ್ದೆಗೆ ಅರ್ಜಿ ಸಲ್ಲಿಸಿರುವವರಲ್ಲಿ ಪ್ರಮುಖರಾಗಿದ್ದಾರೆ.

ಇದು ಖಾಯಂ ಹುದ್ದೆಯಾಗಿದ್ದು, ಅರವಿಂದ್ ಅವರು ಶ್ರೇಷ್ಠತಾ ಕೇಂದ್ರದ ವಿವಿಧ ವಯೋವರ್ಗ ಶಿಬಿರಗಳಲ್ಲಿ ಕಾರ್ಯನಿರ್ವಹಿಸಿದ್ದಾರೆ. ಸಿಂಗ್ ಮತ್ತು ಅರವಿಂದ್ ಇಬ್ಬರೂ ಬಿಸಿಸಿಐ ಲೆವೆಲ್ ಕೋರ್ಸ್ ಮುಗಿಸಿದ್ದಾರೆ.

ಇಂಗ್ಲೆಂಡ್‌ನ ಟ್ರಾಯ್ ಕೂಲಿ ಅವರು 60 ವರ್ಷ ಪೂರೈಸಿದ್ದು, ಹುದ್ದೆಯಿಂದ ನಿರ್ಗಮಿಸಿದ ಕಾರಣ ಶ್ರೇಷ್ಠತಾ ಕೇಂದ್ರದ ವೇಗದ ಬೌಲಿಂಗ್ ಕೋಚ್ ಹುದ್ದೆ ತೆರವಾಗಿದೆ. ಸುನಿಲ್ ಜೋಶಿ ಅವರು ಸ್ಪಿನ್ ಬೌಲಿಂಗ್ ಕೋಚ್ ಆಗಿದ್ದಾರೆ.

ಐಟಿಎಫ್ ಕಲಬುರಗಿ ಓಪನ್ ಮಹಿಳಾ ಟೂರ್ನಿ: ಮುಖ್ಯ ಸುತ್ತಿನ ಪಂದ್ಯಗಳು ಇಂದಿನಿಂದ

ತೊಗರಿ ನಾಡಿನಲ್ಲಿ ಟೆನಿಸ್ ವೈಭವ

• ಬಸವರಾಜ ದಳವಾಯಿ

ಕಲಬುರಗಿ: ತೊಗರಿನಾಡು ಕಲಬುರಗಿಯು ದಶಕದ ನಂತರ ಮತ್ತೊಂದು ಅಂತರರಾಷ್ಟ್ರೀಯ ಮಹಿಳಾ ಟೆನಿಸ್ ಟೂರ್ನಿಯ ಆತಿಥ್ಯಕ್ಕೆ ಸಜ್ಜಾಗಿದೆ. ಐಟಿಎಫ್ ಡಬ್ಲ್ಯು–35 ದರ್ಜೆಯ ಮಹಿಳಾ ವಿಶ್ವ ಟೂರ್ ಟೂರ್ನಿಯ ಮುಖ್ಯಸುತ್ತಿನ ಪಂದ್ಯಗಳು ಮಂಗಳವಾರದಿಂದ ಇಲ್ಲಿನ ಚಂದ್ರಶೇಖರ ಪಾಟೀಲ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆಯಲಿವೆ.

ಭಾರತ ಸೇರಿದಂತೆ 11 ದೇಶಗಳ ಆಟಗಾರ್ತಿಯರು ಅದೃಷ್ಟ ಪರೀಕ್ಷೆಗೆ ಸಜ್ಜಾಗಿದ್ದಾರೆ. 2012 ಮತ್ತು 2015ರಲ್ಲಿ ಇಲ್ಲಿ ಮಹಿಳಾ ಟೆನಿಸ್ ಟೂರ್ನಿಗಳು ನಡೆದಿದ್ದವು.

ಅಂದಾಜು ₹27 ಲಕ್ಷ ಬಹುಮಾನ ಮೊತ್ತದ ಈ ಬಾರಿಯ ಟೂರ್ನಿಯು ಮಾರ್ಚ್ 1ರಿಂದ ನಡೆಯುತ್ತಿದ್ದು, ಅರ್ಹತಾ ಸುತ್ತಿನ ಪಂದ್ಯಗಳು ಮುಗಿದಿವೆ.

ಮಂಗಳವಾರ ನಡೆಯುವ ಪ್ರಧಾನ ಸುತ್ತುಗಳ ಸಿಂಗಲ್ಸ್ ವಿಭಾಗದ ಹಣಾಹಣಿಯಲ್ಲಿ, ಅಗ್ರ ಶ್ರೇಯಾಂಕ ಪಡೆದಿರುವ ನೆದರ್ಲೆಂಡ್ಸ್‌ನ ಯಾಸ್ಮಿನ್ ಜಿಂಬ್ರೆ ಅವರಿಗೆ ಭಾರತದ ಐಶ್ವರ್ಯಾ ಜಾಧವ್ ಸವಾಲೊಡ್ಡುವರು. ಐಶ್ವರ್ಯಾ ಅವರು ಅರ್ಹತಾ ಸುತ್ತನ್ನು ದಾಟಿಬಂದಿದ್ದಾರೆ. ಥಾಯ್ಲೆಂಡ್ ಅಂಚಿಸಾ ಚಂಥಾ ಎರಡನೇ ಶ್ರೇಯಾಂಕ ಪಡೆದಿದ್ದು, ಬ್ರಿಟನ್‌ನ ಅಲೆಗ್ರಾ ಕೊರ್ಪಾನೆಕ್ ಡೇವಿಸ್ ಎದುರು ಸೆಣಸಲಿದ್ದಾರೆ.


ಭಾರತದ ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ

ಭಾರತದ ಪ್ರಮುಖ ಆಟಗಾರ್ತಿಯರಾದ ಅಂಕಿತಾ ರೈನಾ, ಜೀಲ್ ದೇಸಾಯಿ ಅವರೊಂದಿಗೆ ವೈಷ್ಣವಿ ಅಡ್ಕರ್, ಶ್ರೀವಲ್ಲಿ ರಶ್ಮಿಕಾ ಭಮಿಡಿಪಾಟಿ, ಆಕಾಂಕ್ಷಾ ದಿಲೀಪ್ ನಿಟ್ಟೂರೆ, ಎ. ಲಕ್ಷ್ಮಿ ಪ್ರಭಾ ಪ್ರಶಸ್ತಿಗಾಗಿ ಹೋರಾಟ ನಡೆಸುವರು. ಸೋಹಾ ಸಾದಿಕ್, ಅಮೋದಿನಿ ನಾಯಕ್, ಸಮಾ ಚೆವಿಕಾ ರೆಡ್ಡಿ, ಜೆನ್ನಿಫರ್ ಲೂಕಿಮ್ ಅವರು ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದಾರೆ.

ಕರ್ನಾಟಕದ ಸ್ನಿಗ್ಧಾ ಕಾಂತಾ ಹಾಗೂ ಹರ್ಷಿಣಿ ನಾಗರಾಜ್ ಅವರು ಡಬಲ್ಸ್‌ನಲ್ಲಿ ಜೊತೆಯಾಗಿ ಆಡಲಿದ್ದಾರೆ.

ಸಿಂಗಲ್ಸ್ ವಿಭಾಗದಲ್ಲಿ 32 ಮತ್ತು ಡಬಲ್ಸ್‌ನಲ್ಲಿ 16 ಆಟಗಾರ್ತಿಯರು ಕಣದಲ್ಲಿದ್ದಾರೆ. ಮಾರ್ಚ್ 8ರಂದು ಫೈನಲ್ ಪಂದ್ಯ ನಡೆಯಲಿದೆ. ಇಲ್ಲಿ ಪ್ರಶಸ್ತಿ ಜಯಿಸುವವರು 35 ಡಬ್ಲ್ಯುಟಿಎ ರ‍್ಯಾಂಕಿಂಗ್ ಪಾಯಿಂಟ್ಸ್ ಕೂಡ ಪಡೆಯಲಿದ್ದಾರೆ.